ಸಂಶೋಧನಾ ಮಾಲಿಕೆ

ಹೈದರಾಬಾದ ಕರ್ನಾಟಕದ ಜಾತ್ರೆಗಳು
ಒಂದು ಸಾಂಸ್ಕೃತಿಕ ಅಧ್ಯಯನ



ಡಾ. ಜಗನ್ನಾಥ ಹೆಬ್ಬಾಳೆ

ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೧೮.

ಸಂಶೋಧನಾ ಮಾಲಿಕೆ

ಹೈದರಾಬಾದ ಕರ್ನಾಟಕದ ಜಾತ್ರೆಗಳು
ಒಂದು ಸಾಂಸ್ಕೃತಿಕ ಅಧ್ಯಯನ

(ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಡಾ. ಜಗನ್ನಾಥ ಹೆಬ್ಬಾಳೆ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

HYDARABAADA KARNATAKADA JAATREGALU - ONDU SAMSKRUTIKA ADHYAYANA
A Thesis by : **Dr. Jagannath Hebbale**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : vii +168 Price : Rs. **100=00** : **2008**

ಪ್ರಥಮ ಮುದ್ರಣ : ೨೦೦೮
ಪ್ರತಿಗಳು : ೫೦೦
ಬೆಲೆ : ಒಂದು ನೂರು ರೂಪಾಯಿಗಳು

ಪ್ರಕಟಣಾ ಸಮಿತಿ

ಅಧ್ಯಕ್ಷರು
ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ)

ಸಂಚಾಲಕರು
ಶ್ರೀ ಜರಗನಹಳ್ಳಿ ಶಿವಶಂಕರ್

ಸದಸ್ಯರು
ಶ್ರೀ ಮುಂಡಲೀಕ ಹಾಲಂಬಿ
ಡಾ. ಎಚ್. ಜಯಮ್ಮ ಕರಿಯಣ್ಣ
ಶ್ರೀ ವಿಶ್ವನಾಥ ವಂಶಾಕೃತಮಠ
ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ
ಶ್ರೀ ವಿಷ್ಣು ನಾಯ್ಕ
ಪ್ರೊ. ಎಲ್.ಎಸ್. ಶೇಷಗಿರಿರಾವ್

ಸಮ್ಮೇಳನಾಧ್ಯಕ್ಷರು
೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುಖಪುಟ ವಿನ್ಯಾಸ : ಕಮಲಂ ಅರಸು

ಮುದ್ರಣ : ಮೆ|| ಸತ್ಯಶ್ರೀ ಪ್ರಿಂಟರ್ಸ್
ನಂ.೧೬/೧, ೩ನೇ ಕ್ರಾಸ್, ೨ನೇ ಮುಖ್ಯರಸ್ತೆ
ಕಸ್ತೂರಬಾ ನಗರ, ಬೆಂಗಳೂರು - ೫೬೦೦೨೬

ಅಧ್ಯಕ್ಷರ ನುಡಿ

ಕಳೆದ ತೊಂಬತ್ತೂರು ವರ್ಷಗಳಿಂದ ನಾಡು–ನುಡಿ–ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ–ಅಕ್ಷರ–ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ–(ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ. ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ನಮ್ಮ ಅಧಿಕಾರಾವಧಿಯಲ್ಲಿ ಕೈಕೊಳ್ಳಲಾದ ಒಂದು ವಿಶೇಷ ಯೋಜನೆ: ಸಂಶೋಧನಾ ಗ್ರಂಥಮಾಲಿಕೆ. ವಿವಿಧ ವಿಶ್ವವಿದ್ಯಾಲಯಗಳಿಗೆ ಕನ್ನಡ ನಾಡು–ನುಡಿ ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಸಲ್ಲಿಸಲಾದ ಪಿಎಚ್.ಡಿ. ಮಹಾಪ್ರಬಂಧಗಳ ಅಧಿಕೃತ ಮಾಹಿತಿ ಪಡೆದುಕೊಂಡು ನಮ್ಮ 'ಪ್ರಕಟನಾ ಸಮಿತಿ'ಯು ಆಯ್ಕೆ ಮಾಡಿ, ಈ ಥೀಸಿಸ್‌ಗಳನ್ನು ಗರಿಷ್ಠ ೨೫೦ ಪುಟಗಳಿಗೆ ಇಳಿಸಿ ಗ್ರಂಥ ರೂಪದಲ್ಲಿ ಪ್ರಕಟಿಸಲು ತೀರ್ಮಾನಿಸಿತು. ಡಾಕ್ಟರೇಟ್ ಪಡೆದ ತಜ್ಞರು ನಮ್ಮೊಂದಿಗೆ ಸಂಪೂರ್ಣ ಸಹಕರಿಸಿ ನಮ್ಮ ಯೋಜನೆಯ ಅನುಷ್ಠಾನದಲ್ಲಿ ಕೈಗೂಡಿಸಿದ್ದಾರೆ. ಜ್ಞಾನವೆಂಬುದು ಕೇವಲ ಯೂನಿವರ್ಸಿಟಿಗಳಲ್ಲಿ ಶೇಖರಗೊಂಡು ನಿಂತ ನೀರಾಗದೆ ಅದು ಒಂದು ವಾಹಿನಿಯಾಗಿ ಈ ನಾಡಿನ ಪ್ರಜೆಗಳ ಕಡೆಗೆ ನಿರಂತರ ಹರಿದು ಬರುತ್ತಲೇ ಇರಬೇಕು. ಕನ್ನಡ ಬದುಕಿನ ಒಂದು ಅರ್ಥಪೂರ್ಣ ಅಂಗವಾಗುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಹೆಮ್ಮೆಯ ಸಾಧನೆಗಳಲ್ಲಿ ಇದೂ ಒಂದು. ಏಪ್ರಿಲ್ ೨೦೦೮ರ ಅಂತ್ಯದ ವೇಳೆಗೆ ಈ ಪುಸ್ತಕಗಳು ಓದುಗರ ಕೈಸೇರುವ ನಿರೀಕ್ಷೆ ಇದೆ.

ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯದವರಿಗೂ, ಮುಖಪುಟ ವಿನ್ಯಾಸದ ಕಲಾವಿದರಿಗೂ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ಮಾತು

ಜನಪದ ಸಂಸ್ಕೃತಿಯ ಒಂದು ಅಂಗ ಜಾತ್ರೆಗಳು. ಪುರಾತನ ಕಾಲದಿಂದಲೂ ಜಾತ್ರೆಗಳು ಗ್ರಾಮೀಣ ಬದುಕಿನಲ್ಲಿ ಹುಟ್ಟಿ ಬೆಳೆದು ಬಂದವು ಎಂಬುದಕ್ಕೆ ಅನೇಕ ಆಧಾರಗಳಿವೆ. ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಕಲಾತ್ಮಕ ಬದುಕಿನ ಜೀವಸತ್ವ ಅದರಲ್ಲಿ ಸೇರಿಕೊಂಡಿವೆ. ಜನ-ದನ-ವ್ಯಾಪಾರ-ವಹಿವಾಟುಗಳ ಕೇಂದ್ರವಷ್ಟೇ ಅಲ್ಲ; ಅದೊಂದು ಸಾಂಸ್ಕೃತಿಕ, ಧಾರ್ಮಿಕ, ಹಾಗೂ ಭಾವೈಕ್ಯದ ಪ್ರತೀಕ. ಪ್ರತಿಯೊಂದು ಜಾತ್ರೆ ಆಯಾ ದೇವ-ದೇವತೆಯ ಹಿನ್ನೆಲೆಯನ್ನು ಅದರ ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಾಮುಖ್ಯತೆಯನ್ನೂ ಒಳಗೊಂಡು ಸಾಮಾಜಿಕ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಇಂತಹ ಪ್ರಮುಖ ವಿಷಯ ಕುರಿತು ಸಮಗ್ರವಾದ ಅಧ್ಯಯನ ನಡೆದಿಲ್ಲ ಎಂಬ ಅಂಶ ನನ್ನ ಗಮನಕ್ಕೆ ಬಂದಾಗ "ಹೈದ್ರಾಬಾದ ಕರ್ನಾಟಕ ಜಾತ್ರೆಗಳ-ಒಂದು ಸಾಂಸ್ಕೃತಿಕ ಅಧ್ಯಯನ"ವನ್ನು ಸಂಶೋಧನೆಗಾಗಿ ಆಯ್ದುಕೊಳ್ಳಬೇಕಾಯಿತು.

ಈ ನನ್ನ ಸಂಶೋಧನೆಗೆ ಮೊದಲು ಮಾರ್ಗದರ್ಶಕರಾಗಿದ್ದವರು ಪೂಜ್ಯ ಗುರುಗಳಾದ ದಿ. ಡಾ. ಎಂ.ಎಸ್.ಲಠ್ಠೆ ಅವರು. ಕೆಲವು ಅನಿವಾರ್ಯ ಕಾರಣಗಳಿಂದ ನಿಗದಿತ ಅವಧಿಯೊಳಗಾಗಿ ಕಾರ್ಯ ಪೂರ್ತಿಗೊಳಿಸಲಾಗಲಿಲ್ಲವಾದ್ದರಿಂದ ವಿಶ್ವವಿದ್ಯಾಲಯವು ನನ್ನ ನೋಂದಣಿಯನ್ನು ರದ್ದುಪಡಿಸಿ, ಮರುನೋಂದಣಿಗಾಗಿ ಅವಕಾಶ ಮಾಡಿಕೊಟ್ಟಿದ್ದರಿಂದ ಮಾರ್ಗದರ್ಶಕರನ್ನು ಬದಲಾಯಿಸಿಕೊಳ್ಳಬೇಕಾಯಿತು. ಈ ಹಿನ್ನೆಲೆಯಲ್ಲಿ ಪೂಜ್ಯ ಗುರುಗಳೂ, ಜಾನಪದ ವಿದ್ವಾಂಸರೂ ಆಗಿರುವ ಡಾ: ಪಿ.ಕೆ. ಖಂಡೋಬಾ ಅವರನ್ನು ಸಂಪರ್ಕಿಸಿದಾಗ, ನಿಗದಿತ ಅವಧಿಯಲ್ಲಿ ಅಧ್ಯಯನ ಪೂರ್ತಿಗೊಳಿಸುವುದಾದಲ್ಲಿ ಮಾತ್ರ ತಾವು ಮಾರ್ಗದರ್ಶನ ಮಾಡುವುದಾಗಿ ಕರಾರಿನ ಮೇರೆಗೆ ಒಪ್ಪಿಕೊಂಡರು.

ಡಾ: ಪಿ.ಕೆ. ಖಂಡೋಬಾ ಅವರು, ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾಗಿದ್ದರೂ, ಬಿಡುವಿಲ್ಲದ ತಮ್ಮ ಕಾರ್ಯಬಾಹುಳ್ಯದ ನಡುವೆಯೂ ಬೇಸರಗೊಳ್ಳದೆ ನಾನು ಬರೆದುಕೊಟ್ಟಿದ್ದನ್ನು ಓದಿ, ಉಪಯುಕ್ತವಾದ ಮಾರ್ಗದರ್ಶನ ನೀಡಿ ಉಪಕರಿಸಿದ್ದಾರೆ. ಅವರ ಪ್ರೇರಣೆ ಪ್ರೋತ್ಸಾಹ-ಉತ್ಸಾಹಗಳಿಂದಾಗಿ ನನ್ನ ಸಂಶೋಧನ ಕೆಲಸ ಬೇಗ ಮುಗಿಯಲು ಸಾಧ್ಯವಾಯಿತು. ಪ್ರಥಮವಾಗಿ ಪಿ.ಕೆ. ಖಂಡೋಬಾ ಅವರಿಗೆ ನನ್ನ ಗೌರವಪೂರ್ವಕ ನಮನಗಳು ಸಲ್ಲುತ್ತವೆ. ಹಾಗೆಯೇ ದಿ. ಡಾ.ಎಂ.ಎಸ್.ಲಠ್ಠೆ ಅವರಿಗೂ ನನ್ನ ತುಂಬು ಹೃದಯದ ನಮನಗಳು.

ನನ್ನ ಕ್ಷೇತ್ರ ಕಾರ್ಯದ ಸಂದರ್ಭದಲ್ಲಿ ಜಾತ್ರೆಯ ಮಾಹಿತಿಯನ್ನು ಪ್ರೀತಿಯಿಂದ ನೀಡಿ ಸಹಕರಿಸಿದ ಮೂರು ಜಿಲ್ಲೆಯ ಬಂಧುಗಳು, ದೇವಾಲಯದ ಅರ್ಚಕರು, ಪುಸ್ತಕದ ಸಹಾಯ ನೀಡಿದ ಗುಲಬರ್ಗಾ, ಕರ್ನಾಟಕ, ಬೆಂಗಳೂರು, ಮೈಸೂರು ಹಾಗೂ ಹೈದ್ರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯಗಳ ಗ್ರಂಥಾಲಯಾಧಿಕರಿಗಳ ಸಹಕಾರವನ್ನೂ ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಈ ನನ್ನ ಸಂಶೋಧನೆ ಹಾಗೂ ಪ್ರತಿಯೊಂದು ಅಧ್ಯಯನ ಹಾಗೂ ಸಾಹಿತ್ಯಿಕ ಚಟುವಟಿಕೆಗಳಿಗೆ ಸೂಕ್ತ ಸಲಹೆ-ಸೂಚನೆ ನೀಡುತ್ತಿರುವ ನನ್ನ ತಾಯಿ, ನನ್ನಣ್ಣಂದಿರು ಮತ್ತು ನೀಲಗಂಗಾ ಹಾಗೂ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರೂ, ನ್ಯಾಯವಾದಿಗಳೂ ಆದ ಡಾ. ಚನ್ನಬಸಪ್ಪ ಹಾಲಹಳ್ಳಿ ಅವರಿಗೆ ಋಣಿಯಾಗಿದ್ದೇನೆ.

ಮಹಾಪ್ರಬಂಧದ ಹಸ್ತಪ್ರತಿ ತಿದ್ದುವಲ್ಲಿ ಶ್ರೀ ಪಂಚಾಕ್ಷರಿ ಪುಣ್ಯಶೆಟ್ಟಿ ಅವರು ಅತ್ಯಂತ ಪ್ರೀತಿಯಿಂದ ಸಹಕಾರ ನೀಡಿದ್ದಾರೆ. ಅವರಿಗೆ ಇವರೆಲ್ಲರಿಗೂ ನನ್ನ ಆತ್ಮೀಯ ನಮಸ್ಕಾರಗಳು ಸಲ್ಲುತ್ತವೆ.


ಈ ಮಹಾಪ್ರಬಂಧ ಪ್ರಕಟಣೆಗೆ ಕಾರಣೀಭೂತರಾದ ಕಸಾಪ ಅಧ್ಯಕ್ಷರಾದ ಪ್ರೊ. ಚಂಪಾ ಮತ್ತು ಪದಾಧಿಕಾರಿಗಳಿಗೆ ಅನಂತ ಕೃತಜ್ಞತೆಗಳು

ಜಗನ್ನಾಥ ಹೆಬ್ಬಾಳೆ

ವಿಷಯ ಸೂಚಿ

ಕ್ಷೇತ್ರಕಾರ್ಯ ಕೈಗೊಂಡ ಪ್ರಮುಖ ಜಾತ್ರೆಗಳ ನಕ್ಷೆ :

ಕ್ಷೇತ್ರಕಾರ್ಯ ಕೈಗೊಂಡ ಪ್ರಮುಖ ಜಾತ್ರೆಗಳ ನಕ್ಷೆ



ಡಾ. ಜಗನ್ನಾಥ ಹೆಬ್ಬಾಳೆ



ಕಲ್ಯಾಣ ಕರ್ನಾಟಕದ ಹತ್ತಾರು ಯುವ ವಿದ್ವಾಂಸರಲ್ಲಿ ಡಾ. ಜಗನ್ನಾಥ ಹೆಬ್ಬಾಳೆ ಒಬ್ಬರು. ಲೇಖಕ, ಕವಿ ಮತ್ತು ಜಾನಪದ ಸಾಹಿತಿಯಾಗಿ ಮೂವತ್ತಕ್ಕೂ ಹೆಚ್ಚು ವಿವಿಧ ಪ್ರಕಾರದ ಮಹತ್ವದ ಕೃತಿಗಳನ್ನು ಹೊರತಂದಿದ್ದಾರೆ. ಗುಲ್ಬರ್ಗಾ ವಿಶ್ವವಿದ್ಯಾಲಯ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡಶ್ರೀ ಅಲ್ಲದೆ ದತ್ತಿ ಪ್ರಶಸ್ತಿ ಮತ್ತು ಪುಸ್ತಕ ನಗದು ಬಹುಮಾನ, ಬಸವಕೇಂದ್ರದ ಶಿಕ್ಷಕ ರತ್ನ ಪ್ರಶಸ್ತಿ ಮುಂತಾದ ಬಹುಮಾನಗಳಿಂದ ಪುರಸ್ಕೃತರಾಗಿದ್ದಾರೆ.

ಬೀದರ ನಗರದ ನಾವದಗೇರಿಯವರಾದ ಇವರು, ಕರ್ನಾಟಕ ಕಾಲೇಜು ಬೀದರಿನಲ್ಲಿ ಕನ್ನಡ ಉಪನ್ಯಾಸಕ ಹುದ್ದೆಗೆ ಸೇರಿ ಪ್ರವಾಚಕರಾಗಿ, ಅದೇ ಕಾಲೇಜಿನ ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನ ಕೇಂದ್ರದ ನಿರ್ದೇಶಕರಾಗಿ, ಸಂಶೋಧನ ಅಭ್ಯರ್ಥಿಗಳಿಗೆ ಮಾರ್ಗದರ್ಶಕರಾಗಿ ಸೇವೆ ಸಲ್ಲಿಸುತ್ತ ಬರುತ್ತಿದ್ದಾರೆ. ಹೈದ್ರಾಬಾದ ಕರ್ನಾಟಕದ ಜಾತ್ರೆಗಳು ಒಂದು ಸಾಂಸ್ಕೃತಿಕ ಅಧ್ಯಯನ ವಿಷಯದ ಮಹಾಪ್ರಬಂಧಕ್ಕೆ ೧೯೯೬ರಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿರುತ್ತಾರೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಸದಸ್ಯ (೨೦೦೧-೨೦೦೪) ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ (ಮೂರು ಅವಧಿಗೆ) ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕನ್ನಡ ಜಾಗೃತಿ ಸಮಿತಿಯ ಸದಸ್ಯ, ವಿವಿಧ ವಿಶ್ವವಿದ್ಯಾಲಯಗಳ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ ಮತ್ತು ಸಿಲೆಬಸ್ ಸಮಿತಿಯ ಅಧ್ಯಕ್ಷ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಪ್ರತಿಷ್ಠಿತ ಹತ್ತು ಹಲವು ಕನ್ನಡಪರ ಸಂಘ ಸಂಸ್ಥೆಗಳಲ್ಲಿ ಸಕ್ರೀಯ ಪದಾಧಿಕಾರಿಯಾಗಿ ಅವಿಸ್ಮರಣೀಯ ಸೇವೆ ಸಲ್ಲಿಸುತ್ತ ಬಂದಿರುವ ಡಾ. ಹೆಬ್ಬಾಳೆ ನೂರಾರು ಜಿಲ್ಲಾ ಮಟ್ಟದ, ರಾಜ್ಯ ಮತ್ತು ರಾಷ್ಟ್ರಮಟ್ಟದ ಸಾಹಿತ್ಯಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿದ ಶಕ್ತಿ ಇವರದಾಗಿದೆ.

ಎರಡು ದಶಕದಿಂದ ನಾಡು ನುಡಿಯ ಭವ್ಯತೆಗೆ ಸದಾ ದುಡಿಯುತ್ತ ಬಂದಿರುವ ಪ್ರೊ. ಹೆಬ್ಬಾಳೆ ಅವರು ನಾಡಿನಲ್ಲಿ ಯುವ ವಿದ್ವಾಂಸರೆಂದು, ಕ್ರಿಯಾಶೀಲ ಸಂಘಟಿಕರೆಂದು ಹೆಸರು ಮಾಡಿದ್ದಾರೆ.

ಡಾ. ಜಗನ್ನಾಥ ಹೆಬ್ಬಾಳೆ
'ಶಿವರತ್ನ', ಶರಣನಗರ
ಕೆ.ಪಿ.ಟಿ.ಸಿ.ಎಲ್ ರಸ್ತೆ
ನ್ಯಾಷನಲ್ ಕಾಲೇಜು ಹತ್ತಿರ
ಬೀದರ-೫೮೫ ೪೦೧
ದೂ : ೦೮೪೮೨-೨೨೮೯೩೦
೯೪೪೮೫೮೫[illegible]೪೪

ಅಧ್ಯಾಯ-೧

ಪೀಠಿಕೆ : ಅಧ್ಯಯನ ಉದ್ದೇಶ ಮತ್ತು ವ್ಯಾಪ್ತಿ

ಮನಸ್ಸಿನಲ್ಲಿ ಭೇದ ಹುಟ್ಟಿದಾಗ ಮನಸ್ಸು ಸಂಕಲ್ಪಶಕ್ತಿ ಸಮರಸದ ಬಾಳ್ವೆಯ ಕಲ್ಪನೆಗಳು ಕಲುಷಿತವಾಗುತ್ತವೆ. ಎಲ್ಲ ಧರ್ಮಗಳ ಮೂಲೋದ್ದೇಶ ಒಂದೇ ಆದರೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಪ್ರಯತ್ನ ನಡೆಯುತ್ತಲೆ ಇದೆ. ಜಾನಪದೀಯರು ಚಿಂತಾಜನಕರಾಗಿದ್ದಾರೆ. ಧರ್ಮ ಪ್ರತಿಯೊಬ್ಬ ವ್ಯಕ್ತಿಯ ವೈಯಕ್ತಿಕ ಆಚರಣೆಯಾಗಿರಬೇಕು ಎಂದು ಹೇಳುತ್ತಲೇ ಬಂದಿದ್ದಾರೆ. ಆದರೆ ಅದು ಸಾರ್ವಜನಿಕರ ಜೀವನದಲ್ಲಿ ದೋಷಗಳೊಂದಿಗೆ ಕೂಡಿ ಸಾಮಾಜಿಕ ಮೌಲ್ಯಗಳನ್ನು ಅಪವಿತ್ರಗೊಳಿಸುವ ಪ್ರಯತ್ನ ನಡೆಸುತ್ತದೆ.

'ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ ಕೂಡಲ ಸಂಗಮದೇವ ನಿಮ್ಮ ಮನೆಯ ಮಗನೆಂದೆನಿಸಯ್ಯ' ಎನ್ನುವ ಬಸವಣ್ಣನವರ ಆಶಾಭಾವನೆಯನ್ನು ಜೀವಂತವಾಗಿಸುವ ಪ್ರಯತ್ನಗಳು ನಡೆಯಬೇಕಿದೆ. ಮನುಷತ್ವವೇ ನಾಶವಾಗುತ್ತಿರುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಮಾನವನ ಉಳಿವಿಗಾಗಿ ಭ್ರಾತೃತ್ವದ ಭಾವನೆಗಳನ್ನು ಬಲಪಡಿಸುವ ವಾತಾವರಣ ಹುಟ್ಟಿಸಬೇಕಾಗಿದೆ. ನಮ್ಮ ಹೃದಯಬುದ್ಧಿಯನ್ನು ಕಲುಷಿತಗೊಳಿಸುವವರನ್ನು ಮತ್ತು ರಾಕ್ಷಸೀ ಪ್ರವೃತ್ತಿ ಬೆಳೆಸುವವರನ್ನು ಹೊಡೆದೊಡಿಸುವ ಅರಿವು ತಂದುಕೊಳ್ಳಬೇಕಾಗಿದೆ. ಇಂಥ ಪ್ರಯತ್ನಗಳ ಕುರಿತು ವಿಚಾರ ಮಾಡುವಾಗ ಜಾತ್ರೆಗಳು ನೆನಪಿಗೆ ಬರುತ್ತವೆ.

ಜಗತ್ತಿನ ಎಲ್ಲ ಮಾನವ ಸಮಾಜದಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ರೂಢವಾಗಿರುವ ಸಂಗತಿ ಅಂದರೆ ದೇವರಿಂದ ಈ ವಿಶ್ವದ ಎಲ್ಲ ಕಾರ್ಯ ಕಲಾಪಗಳು ನಡೆಯುತ್ತವೆ. ಮಾನವ ಜೀವಿಯೂ ಕೂಡ ದೇವರಿಂದಲೇ, ದೈವ ಪ್ರೇರಣೆಯಂತೆ ನಡೆಯುವಂತಹನಾಗಿದ್ದಾನೆಂದು ನಂಬಿಕೊಂಡು ಜೀವನ ನಡೆಸುತ್ತ ಬಂದಿದ್ದೇವೆ. ಇಂತಹ ನಂಬಿಕೆ ಪ್ರತಿಯೊಂದು ಜನಾಂಗ – ಧರ್ಮದಲ್ಲಿದೆ.

ದೇವನೊಬ್ಬ ನಾಮ ಹಲವು ಎನ್ನುವಂತೆ ವಿವಿಧ ವರ್ಗದ ಜನರು ಬೇರೆ ಬೇರೆ ಹೆಸರಿನಲ್ಲಿ ದೇವರನ್ನು ಒಲಿಸಿಕೊಳ್ಳಲು ಜಪ, ತಪ, ವಂದನೆ, ಪೂಜೆ, ನಮಾಜು, ಅಭಿಷೇಕ ಮುಂತಾಗಿ ಮಾಡುತ್ತಾರೆ. ಇವುಗಳ ಉದ್ದೇಶ ಒಂದೇ ಆಗಿರುತ್ತದೆ. ಆ ದೇವರು ತಂತಮಗೆ ಒಳಿತನ್ನೆ ಮಾಡಲೇಂಬುದೇ ಮೇಲಿನವುಗಳ ಹಿನ್ನೆಲೆ.

ದೇವಸ್ಥಾನಗಳು ಜನರ ಹಿತಕ್ಕಾಗಿಯೇ ಇರುತ್ತವೆ. ಅಲ್ಲಿ ಎಲ್ಲ ವರ್ಗದ ಜನರಿಗೆ ಮುಕ್ತವಾದ ಪ್ರವೇಶವಿರುತ್ತದೆ. (ಕೆಲವು ಕಡೆಗಳಲ್ಲಿ ಇರಲಿಕ್ಕಿಲ್ಲ) ಪಾಠ–ಪ್ರವಚನ ಭಜನೆ ಕೀರ್ತನೆ ಪ್ರಾರ್ಥನೆ ಆರಾಧನೆ ಜರುಗುತ್ತದೆ. ಇವುಗಳೆಲ್ಲ ಸಾಮೂಹಿಕ ಸ್ವರೂಪ ಪಡೆದುಕೊಂಡಾಗ ಜಾತ್ರೆ ಎನಿಸುತ್ತದೆ.

ಹೈದ್ರಾಬಾದ ಕರ್ನಾಟಕದ ಪ್ರತಿಯೊಂದು ಜಾತ್ರೆಗಳು ವಿಶಿಷ್ಟ ಸ್ಥಾನ ಪಡೆದುಕೊಂಡಿವೆ. ಮೇಲು ಕೀಳೆನ್ನದೆ ಸಾಮೂಹಿಕವಾಗಿ ಎಲ್ಲರೂ ಬೆರೆಯುತ್ತಾರೆ. ದೇವರ ದರ್ಶನ ಪಡೆದುಕೊಳ್ಳುತ್ತಾರೆ. ಸಾಧ್ಯವಾದ ಮಟ್ಟಿಗೆ ದಕ್ಷಿಣೆ ಕೊಡುತ್ತಾರೆ. ತೇರ ಎಳೆಯುತ್ತಾರೆ. ಖರೀದಿ–ಬಿಕರಿ ಮಾಡುತ್ತಾರೆ. ಬಂಧು–ಬಳಗದವರನ್ನು ಭೇಟಿಯಾಗಿ ಆನಂದದಿಂದ ಮನೆಗೆ ತೆರಳುತ್ತಾರೆ. ಹೀಗೆ ಮಾಡುವುದರಿಂದ ಮನಸ್ಸಿಗೆ ಶಾಂತಿ ಸಮಾಧಾನ ದೊರೆಯುತ್ತದೆ.

ಜಾತ್ರೋತ್ಸವಗಳು ಜನಪದ ಸಾಂಸ್ಕೃತಿಕ ಪರಂಪರೆಯ ಪ್ರಮುಖ ಆಧಾರಸ್ಥಂಭಗಳಾಗಿರುವುದರಿಂದ ಗ್ರಾಮೀಣ ಬದುಕಿನ ಜೀವಂತ ನಾಡಿಮಿಡಿತಗಳಾಗಿವೆ. ಸಾಮಾಜಿಕ ಧಾರ್ಮಿಕ ಹಾಗೂ ಕಲಾತ್ಮಕ ಬದುಕಿನ ಜೀವಸತ್ತ್ವ ಅಲ್ಲಿ ಹಲವು ಮುಖಗಳಲ್ಲಿ ವ್ಯಕ್ತಗೊಂಡಿರುವುದನ್ನು ಕಾಣುತ್ತೇವೆ. ಜಾತ್ರೆ ಕೇವಲ ಜನ–ದನಗಳ, ವ್ಯಾಪಾರ ವಹಿವಾಟುಗಳ, ಕೇಂದ್ರವಷ್ಟೇ ಅಲ್ಲ; ಅದೊಂದು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಗಮ. ಒಂದೊಂದು ಜಾತ್ರೆಯೂ, ಒಂದೊಂದು ಗ್ರಾಮದ, ಗ್ರಾಮದೇವತೆಯ ಹಿನ್ನೆಲೆಯನ್ನೂ ಅದರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನೂ ಒಳಗೊಂಡಿರುತ್ತದೆ. ಜಾತ್ರೆಯ ಅಧ್ಯಯನವೆಂದರೆ, ಅದೊಂದು ಸಂಸ್ಕೃತಿಯ ಅಧ್ಯಯನವಿದ್ದಂತೆ. ಅದರ ಹುಟ್ಟು, ಬೆಳವಣಿಗೆ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯಗಳು, ಇವೆಲ್ಲವನ್ನೂ ಮೈಗೂಡಿಸಿಕೊಂಡಿರುತ್ತದೆ. ಜಾತ್ರೆಗಳು ಧಾರ್ಮಿಕ ಪ್ರಾಮುಖ್ಯತೆಯನ್ನು ಪಡೆದಿರುವಂತೆಯೇ ಸಾಮಾಜಿಕ ಮಹತ್ವವನ್ನು ಪಡೆದುಕೊಂಡಿವೆ. ಎಂಬ ಡಾ. ಡಿ.ಕೆ. ರಾಜೇಂದ್ರ ಹಾಗೂ ಹ.ಕ. ರಾಜೇಗೌಡರ (ಸ್ವಾಮಿ : ಸಂಪಾದಕರ ಮತ್ತು ಭಾಗದಿಂದ: ೧೯೯೫) ವಿಚಾರ ಮನನೀಯವಾಗಿದೆ.

ಜಾತ್ರೆ ಹಲವಾರು ದೃಷ್ಟಿಯಿಂದ ಹಳ್ಳಿಗರ ಜೀವನದಲ್ಲಿ ಮಹತ್ವದ ಪಾತ್ರವಹಿಸಿದೆ. ಸಾಂಸ್ಕತಿಕ ಹಿನ್ನೆಲೆ ಇದಕ್ಕಿದೆ. ಪ್ರತಿಯೊಂದು ಜಾತ್ರೆ ಎಲ್ಲರಿಗೂ ಬಲು ಪ್ರೀತಿ. ಬಹಳ ಆಕರ್ಷಕವಾದ ವಿಷಯ. ಅದು ಎಲ್ಲ ಕಡೆಗೂ ಕಂಡು ಬರುವ ಎಲ್ಲರನ್ನು ರಂಜಿಸುವ ಸಮಷ್ಟಿ ಬದುಕಿನ ಒಂದು ಸಂಕೀರ್ಣ ಮತ್ತು ಸಾಮಾಜಿಕ ಧಾರ್ಮಿಕ ಸಂಗತಿಗಳಿಂದ ಸಮನ್ವಿತವಾದ ಸಾಂಸ್ಕೃತಿಕ ಮೊತ್ತವಾಗಿದೆ. ಹೀಗಿದ್ದರೂ ಜಾತ್ರೆಗಳ ಕುರಿತು ಕ್ರಮಬದ್ಧವಾದ ಅಧ್ಯಯನದ ಕೊರತೆ ಕಂಡು ಬರುತ್ತದೆ. ಜನಪದ

ಸಾಹಿತ್ಯ ಕೃತಿಗಳನ್ನು ಪರಿಶೀಲಿಸಿದರೂ ಜಾತ್ರೆ ಕುರಿತಾದ ಉಲ್ಲೆಖಗಳು ತುಂಬಾ ವಿರಳ.

ಹಿಂದೆ ಜಾತ್ರೆ ಜರುಗುವಾಗ, ತೇರು ಎಳೆಯುವಾಗ ವೈಭವ ಎದ್ದು ಕಾಣುತ್ತಿತ್ತು. ಎಲ್ಲ ಜಾತಿಯ ಜನರು ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದರು. ಹಿಂದೂ-ಮುಸ್ಲಿಂ ಕ್ರೈಸ್ತರೆಂಬ ಅಳುಕು ಅವರಲ್ಲಿರಲಿಲ್ಲ. ನಾವೆಲ್ಲರೂ ಒಂದೇ ಎನ್ನುವ ಮನೋಭಾವ ಅವರದಾಗಿತ್ತು. ಆದರೆ ಜನಪದ ಸಂಸ್ಕೃತಿಯ ಮೇಲೆ ರಾಜಕೀಯ ಹಾಗೂ ಹೊರದೇಶದ ಪ್ರಭಾವವುಂಟಾಗಿ ಜಾತ್ರೆಗಳು ದಿನೇ ದಿನೇ ಕಡಿಮೆಯಾಗುತ್ತಿವೆ. ಹಳ್ಳಿ ಪಟ್ಟಣದಲ್ಲಿರುವ ದೇವರ ಮೂರ್ತಿಗಳು ಮೂಲೆ ಸೇರಿವೆ. ದೇವರ ಮೆರವಣಿಗೆ ಹೋಗಿ ಜನರ ಮೆರವಣಿಗೆ ಬಳಕೆಗೆ ಬಂದಿದೆ.

ಉತ್ಸವಗಳಲ್ಲಿ ಹುಲಿ ಕುಣಿಯುವವರು, ವಾದ್ಯ ಬಾರಿಸುವವರು, ಹಾಡು ಹೇಳುವವರು ಪ್ರೋತ್ಸಾಹವಿಲ್ಲದ್ದಕ್ಕೆ ಕೂಲಿ-ನಾಲಿ ಕೆಲಸ ಮಾಡಿ ಉಪಜೀವನ ನಡೆಸುತ್ತಿದ್ದಾರೆ. ಪೂಜೆ ಉಪಾಸನೆ – ಆರಾಧನೆ ಕೈಬಿಟ್ಟು ಸ್ವಾರ್ಥಕ್ಕಾಗಿ ಪ್ರಾರ್ಥನೆ ಮಾಡುವುದು ಕಂಡು ಬರುತ್ತಿದೆ. ಪಲ್ಲಕ್ಕಿ ರಥೋತ್ಸವಗಳು ರಾಜಕೀಯ ವ್ಯಕ್ತಿಗಳಿಗೆ ಸೀಮಿತವಾಗಿವೆ. ದೇವರ – ದಿಂಡರ ಮೇಲಿನ ಭಕ್ತಿ ಕಡಿಮೆಯಾಗಿದೆ. ಅವುಗಳನ್ನೆಲ್ಲ ಕಳೆದುಕೊಂಡ ನಾವು ಇಂದು ಸಂದಿಗ್ಧ ವ್ಯವಸ್ಥೆಗೆ ಒಳಗಾಗಿದ್ದೇವೆ. ಅಂದಿನ ಭಾವೈಕ್ಯತೆ, ಹಳ್ಳಿ-ಪಟ್ಟಣಿಗರೆಂಬ ಜಾತಿಮತಗಳೆಂಬ ಭೇದ ಭಾವವಿಲ್ಲದಿರುವಿಕೆ ಮುಂತಾದ ಸನ್ನಿವೇಶಗಳು ಹಿಂತಿರುಗಿ ನೋಡಬೇಕಾದರೆ ನಮ್ಮ ಬದುಕಿನಲ್ಲಿ ಅವುಗಳನ್ನು ಅಳವಡಿಸಿಕೊಂಡು ಸನ್ಮಾರ್ಗ ಹಿಡಿಯಬೇಕಾದರೆ, ಜಾತ್ರೆಗಳ ಅಧ್ಯಯನ ತೀರ ಅಗತ್ಯವೆನಿಸುತ್ತದೆ. ಈ ಹಿನ್ನೆಯೆಲ್ಲಿ ಕಣ್ಮರೆಯಾಗಿ ಹೋಗುತ್ತಿರುವ ಸಂಪ್ರದಾಯ-ಆಚರಣೆಗಳು ಹಾಗೂ ರಾಷ್ಟ್ರೀಯ ಭಾವೈಕ್ಯತೆಯ ಪ್ರತೀಕವಾದ ಜಾತ್ರೆಗಳು, ಸಾಂಸ್ಕೃತಿಕ ಅಧ್ಯಯನದ ಅಗತ್ಯತೆಯನ್ನು ಗಮನಿಸಿ ಈ ಪ್ರಯತ್ನಕ್ಕೆ ಕೈ ಹಾಕಲಾಗಿದೆ.

ಜಾತ್ರೆಗಳ ವ್ಯಾಪ್ತಿ :

"ಹಿಂದಿನಿಂದಲೂ ದೇಶ ವಿದೇಶಗಳಲ್ಲಿ ಜಾತ್ರೆಗಳು ಜರುಗುತ್ತ ಬಂದಿವೆ. ಈಗಲೂ ಜರುಗುತ್ತವೆ" (ಶಿವಕುಮಾರಸ್ವಾಮಿ:೧೯೮೮:೭೦) ಆದರೆ ಆಯಾ ಜನಾಂಗದ ರೀತಿ ನೀತಿ ರೀವಾಜುಗಳಿಗನುಗುಣವಾಗಿ ಪ್ರತಿಬಿಂಬಿಸುತ್ತಾ ಬಂದಿರುತ್ತವೆ. ಪ್ರತಿಯೊಂದು ಜನಾಂಗದ ಜಾತ್ರೆಗಳ ಉದ್ದೇಶ ಒಂದೆಯಾಗಿದೆ. ಸಾಮೂಹಿಕವಾಗಿ

ದೇವರನ್ನು ಆರಾಧಿಸುವುದು. ಬಂಧು ಬಳಗದವರನ್ನು ಭೇಟಿಯಾಗುವುದು, ತಮಗೆ ಇಷ್ಟವಾದ ವಸ್ತುಗಳನನು ಜಾತ್ರೆಯಲ್ಲಿ ಕೊಳ್ಳುವುದು ಇನ್ನೂ ನಡೆಯುತ್ತಲೇ ಇವೆ. "ಜಾತ್ರೆಗಳ ಕಾಲಕ್ಕೆ ದೂರದ ಊರಿನ ವ್ಯಾಪಾರಿಗಳು ಪರಡಿ, ಬಟ್ಟೆ, ಬರೆ, ಬಳೆ ಮುಂತಾದ ವಸ್ತುಗಳನ್ನು ಮಾರಲು ತರುತ್ತಿದ್ದು, ಹೊಸದಾಗಿ ತಯಾರಾದ ವಸ್ತುಗಳನ್ನು ಪ್ರದರ್ಶಿಸಿ ಹಳ್ಳಿಯ ಜನಕ್ಕೆ ಮಾರಲು ಜಾತ್ರೆಗಳು ಅವಕಾಶ ಒದಗಿಸುತ್ತವೆ" (ಕಾಮತ್:೧೯೫:).

ದೇವಾಲಯವಿದ್ದಲ್ಲಿ ಜಾತ್ರೆ ನಡೆದೇ ಇರುತ್ತದೆ. ಕೆಲವೊಂದು ಕಡೆ ನಡೆಯಲಿಕ್ಕಿಲ್ಲ. ಇಂದಿನ ಕಾಲದಲ್ಲಿ ಜರುಗುವ ಜಾತ್ರೆಗಳಲ್ಲಂತೂ ಜಾನಪದ ಕಲೆಗಳಿಗೆ, ಕಲಾಕೋವಿದರಿಗೆ ಉತ್ತಮವಾದ ಅವಕಾಶ ಕಲ್ಪಿಸಿಕೊಡುತ್ತಾ ಬಂದಿವೆ. ಪ್ರಪಂಚದಲ್ಲಿ ಶಾಂತಿ, ಸೌಖ್ಯಗಳು ನೆಲೆಸಿ ಎಲ್ಲರೂ ನೀತಿವಂತರಾಗಬೇಕೆಂದು, ಪ್ರತಿಯೊಂದು ಜಾತ್ರೆಗಳು ಕರೆ ನಿಡುತ್ತಾ ಬಂದಿವೆ. ನೀಡುತ್ತಿವೆ. ಸಮಾಜ ಬದಲಾವಣೆಯಾದಂತೆ, ಜಾತ್ರೆಗಳಲ್ಲಿ ಕೂಡ ಹೊಸತನವನ್ನು ಕಂಡುಕೊಳ್ಳುತ್ತೇವೆ. ಹಿಂದೆ ನರಬಲಿ, ಪಶುಬಲಿ, ಕೊಡುತ್ತಿದ್ದರು. ಇಂದು ಮಾಯವಾಗಿ ಹೋಗುತ್ತಿವೆ. ಹೀಗಾಗಿ ಜಾತ್ರೆಗಳ ವ್ಯಾಪ್ತಿ ಇಷ್ಟೇ ಎಂದು ಹೇಳುವುದು ಕಷ್ಟವಾದರೂ ಮಾನವನ, ವಿಚಾರಗಳು ದಿನೇ ದಿನೇ ಹೆಚ್ಚಾದಂತೆ, ಜಾತ್ರೆಗಳಲ್ಲಿ ಕೂಡ ಬದಲಾವಣೆ ಕಂಡು ಬರುತ್ತಿದೆ.

ಹೈದ್ರಾಬಾದ ಕರ್ನಾಟಕದ ಜಾತ್ರೆಗಳು ಅಧ್ಯಯಯನ ಸಂಕೀರ್ಣದ ವಿಷಯವಾಗಿದೆ. ಬೀದರ, ಗುಲ್ಬರ್ಗ ಮತ್ತು ರಾಯಚೂರು ಈ ಮೂರು ಜಿಲ್ಲೆಗಳಲ್ಲಿ ಜರುಗುವ ಪ್ರಮುಖ ಜಾತ್ರೆಗಳನ್ನು ಗಮನದಲ್ಲಿಟ್ಟುಕೊಂಡು ಅಧ್ಯಯನ ಮಾಡಲಾಗಿದೆ. ಜನರ ಮನಸ್ಸಿನ ಏರು-ಪೇರುಗಳ ಚಿತ್ರಣ, ಬಲಿ, ಆಚರಣೆ, ಹರಕೆ, ಭಾಷೆ, ಸಾಹಿತ್ಯ, ಮತ್ತು ಸಂಸ್ಕೃತಿ ಮುಂತಾದ ವಿಷಯಗಳ ಕುರಿತು ಈ ಮಹಾ ಪ್ರಬಂಧದಲ್ಲಿ ಚರ್ಚಿಸಲಾಗಿದೆ.

* * *

ಅಧ್ಯಾಯ–೨

ಉಗಮ ವಿಕಾಸ

"ಮಾನವ ಪ್ರಥಮ ಹಂತದಲ್ಲಿ ಮಂಗನಂತಿದ್ದ, ಕಾಲ ಬದಲಾದಂತೆ, ಸಮಾಜ ವಿಕಾಸಗೊಂಡಂತೆ ಅವನಲ್ಲಿ ವಿಚಾರ ಮತ್ತು ತಿಳುವಳಿಕೆಗಳು ಬರಹತ್ತಿದ್ದವು. ನಾನು ಎಲ್ಲ ಪಶು-ಪ್ರಾಣಿಗಳಿಗಿಂತ ಭಿನ್ನನೆಂದು ತಿಳಿದುಕೊಂಡ. ನನ್ನ ನಡೆ-ನುಡಿಯೇ ಬೇರೆ ಎಂದುಕೊಂಡ. ಅವನಿಗೆ ಜ್ಞಾನ ಬಂತು, ತಿಳುವಳಿಕೆ ಬಂತು, ಮಾತು ಬಂತು. ತನ್ನ ಹೊಟ್ಟೆ ಪಾಡಿಗಾಗಿ ಭೇಟೆಯಾಡುವುದನ್ನು ಶುರು ಮಾಡಿದ. ಅಲೆಮಾರಿ ಜೀವನ ಬಿಟ್ಟು ಬಿಡಾರ ಹಾಕತೊಡಗಿದ. ಭೂಮಿಯಲ್ಲಿ ಬೆಳೆಗಳು ಬೆಳೆಸಲು ಪ್ರಾರಂಭಿಸಿದ. ಅಂತಹ ಸಮಯದಲ್ಲಿ ಪ್ರಕೃತಿಯಲ್ಲಿ ಗಾಳಿ, ಚಳಿ, ಬಿಸಿಲು, ಗುಡುಗು, ಮಿಂಚು, ಸಿಡಿಲು, ಭೂಕಂಪ, ಬೆಂಕಿ, ಬಿರುಗಾಳಿ, ಸುಂಟರಗಾಳಿ, ಹುಟ್ಟು ಸಾವಿನ ಪ್ರವಾಹ ಮುಂತಾದವುಗಳು ಹುಟ್ಟಿಕೊಂಡು ಅವನಿಗೆ ಹೆದರಿಕೆಯನ್ನುಂಟು ಮಾಡುತ್ತಿದ್ದವು. ಭಯಭೀತನಾದ, ಹೆದರಿದ, ಭಯದಿಂದಲೇ ಭಕ್ತಿ ಎನ್ನುವಂತೆ ಭಯ ಹುಟ್ಟಿಸುವ ಪ್ರಕೃತಿಯಲ್ಲಿ ಅದ್ಭುತ ಶಕ್ತಿ ಇದೆ ಎಂದು ತಿಳಿದು ಅವುಗಳಿಗೆ ಗೌರವ-ಪವಿತ್ರ ಭಾವನೆಯಿಂದ ನೋಡಿ ಆರಾಧನೆ ಮಾಡಲು ಪ್ರಾರಂಭಮಾಡಿದ".

ಹೀಗೆ ಆಚರಣೆಗೆ ಬಂದ ಆರಾಧನೆ ಪ್ರಾರಂಭದಲ್ಲಿ ಕುಟುಂಬ ವ್ಯಕ್ತಿಗಳ ಗುಂಪಿಗೆ ಮೀಸಲಾಗಿತ್ತು. ಜನಸಂಖ್ಯೆ ಬೆಳೆದಂತೆ, ನಾಗರೀಕತೆ ವಿಕಾಸಗೊಂಡಂತೆ, ಆರಾಧನೆ ಕುಟುಂಬದ ಚೌಕಟ್ಟನ್ನು ಮೀರಿ ಸಮಾಜ ಸೇರಿತು. ಕ್ರಮೇಣ ಆರಾಧನೆ ನಿಯಮಿತತನ ಪಡೆಯಿತು. ಹೀಗೆ ನಿಯಮಿತತನ ಪಡೆದ ಪದ್ಧತಿ ಆರಾಧನೆಗಳು ಗ್ರಾಮದಿಂದ ಪಟ್ಟಣ ಸೇರಿದವು. ಬರುಬರುತ್ತಾ ಆರಾಧನೆಯೇ (ಆಚರಣೆಗಳೇ) ಜಾತ್ರೆಗಳಿಗೆ ಕಾರಣವಾಯಿತು.

ಆರಾಧನೆ ಪದಕ್ಕೆ ಸೇವೆ, ಪೂಜೆ, ಎಂಬ ಅರ್ಥಗಳಿವೆ(ನರಸಿಂಹಚಾರ) (ಸಂ : ೧೯೭೦:೬೫೭). ಜಾತ್ರೆ ಇವುಗಳನ್ನು ಒಳಗೊಂಡಿರುತ್ತದೆ. ಆರಾಧನೆಗೆ ಜಾತ್ರೆ, ಜಾತ್ರೆಗೆ ಆರಾಧನೆ ಪೂರಕವಾಗಿರುತ್ತದೆ. ಜಾತ್ರೆ ಮತ್ತು ಆರಾಧನೆಯ

ಸ್ವರೂಪ ಬೇರೆ ಬೇರೆಯಾದರೂ ಉದ್ದೇಶ ಒಂದೇ ಆಗಿದೆ. ಜಾತ್ರೆಯಲ್ಲಿ ಆರಾಧನೆಯ ಸ್ವರೂಪ ಬೇರೆ ಬೇರೆಯಾದರೂ ಉದ್ದೇಶ ಒಂದೇ ಆಗಿದೆ. ಜಾತ್ರೆಯಲ್ಲಿ ಆರಾಧನೆ ಕಷ್ಟವಾದರೂ ಸ್ಥೂಲವಾಗಿ ಪ್ರಾರಂಭದಲ್ಲಿ ಆರಾಧನೆ ಆನಂತರ ಜಾತ್ರೆಗಳು ಎನ್ನಬಹುದು. ಇಂದು ಪ್ರತಿಯೊಂದು ಜಾತ್ರೆ ಆರಾಧನೆಯ ಹಿನ್ನೆಲಯಲ್ಲಿಯೇ ಜರುಗುತ್ತವೆ. ಭಾರತದಲ್ಲಿನ ಪ್ರಮುಖ ಜಾತ್ರೆಗಳಾದ ಶ್ರೀಶೈಲದ ಜಾತ್ರೆ, ಪ್ರಯಾಗದ ಕುಂಭಮೇಳದಲ್ಲಿ ಸೇರುವ ಜಾತ್ರೆ, ತಲಕಾಡಿನ ಪಂಚಲಿಂಗ ಜಾತ್ರೆ, ತಿರುಪತಿ ಬ್ರಹ್ಮೋತ್ಸವ, ದಕ್ಷಿಣ ಕರ್ನಾಟಕದಲ್ಲಿ ಕೊಳ್ಳೇಗಾಲದ ಮಹದೇಶ್ವರನ ಬೆಟ್ಟದ ಜಾತ್ರೆ, ಚುಂಚನ ಕಟ್ಟೆ ಜಾತ್ರೆ, ಬೆಂಗಳೂರಿನ ಸುಬ್ರಹ್ಮಣ್ಯ ಜಾತ್ರೆ ಮೈಸೂರಿನ ಚಾಮುಂಡಿ ಜಾತ್ರೆ, ಮುಂತಾದ ಜಾತ್ರೆಗಳು ಆರಾಧನೆಯ ಹಿನ್ನೆಲೆಯಲ್ಲಿರುತ್ತವೆ. ಜಾತ್ರೆಗಳು ಒಂದು ರಾಜ್ಯ ಮತ್ತು ದೇಶಕ್ಕೆ ಸೀಮಿತವಲ್ಲ. ಈಜಿಪ್ಟ್, ಫ್ರಾನ್ಸ್ ಹಾಗೂ ಇಟಲಿಗಳಲ್ಲಿನ ಅತ್ಯಂತ ಹಳೆಯ ಮಾದರಿಯ ಜಾತ್ರೆಗೆ 'ಫೇರಾರ್' ಎನ್ನುತ್ತಾರೆ. ಈ ಫೆರ್-ಫೇರಾರ್ ಹಬ್ಬ ಜರ್ಮನಿಯ 'Messe' ಶಬ್ದದಿಂದ ಹುಟ್ಟಿದ್ದು, 'Messe'ಎಂದರೆ ದೇವ ಪ್ರಾರ್ಥನೆಯ ಸಮಾರಂಭವನ್ನು ಸೂಚಿಸುತ್ತದೆ. ಅದು ರಜಾದಿನ. ಅಂಚೇ ಫೇರ್ ನಡೆಸುವುದು ಪ್ರಶಸ್ತ ಎಂಬ ಭಾವನೆ ಹುಟ್ಟಿ ಬೆಳೆದಿದೆ. ಜಾತ್ರೆಗಳು ಒಂದೇ ಸಮಯಕ್ಕೆ ಅಥವಾ ಬೇರೆ ಬೇರೆ ಕಾಲದಲ್ಲಿ ಹುಟ್ಟಿಕೊಂಡರೂ ನಿಧಾನವಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅನುಕರಣದ ಮೂಲಕ ಬೆಳೆದು ಬಂದಿರಬೇಕು. ಮಾನವನ ಮನಸ್ಸು ನಿರ್ದಿಷ್ಟವಾಗಿರಲಾರದು.

ಹಾಗೇಯೇ ಅಲ್ಲಲ್ಲಿಯ ಜಾತ್ರೆಗಳ ಸ್ವರೂಪ ವಿಧಿ-ವಿಧಾನಗಳು ಭಿನ್ನ ಹಾಗೂ ಸಾಮ್ಯ ಕಾಣಬಹುದೆಂದು ದೇ. ಜವರೇಗೌಡ ಅವರು ಜಾತ್ರೆಗಳ ಉಗಮ ವಿಕಾಸ ಕುರಿತು ಹೀಗೆ ಹೇಳುತ್ತಾರೆ. "ಪ್ರಾರಂಭದಲ್ಲಿ ಯಾತ್ರೆ ಅಥವಾ ಜಾತ್ರೆ ಸುಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ ಜನ ಸೇರುತ್ತಿದ್ದರು. ಅನಂತರ ಕೆಲವು ಹಳ್ಳಿಗಳಲ್ಲಿ ನಿಯತ ಅಥವಾ ಅನಿಯತ ಕಾಲದಲ್ಲಿ ಅದ್ದೂರಿಯಿಂದ ಜರುಗುತ್ತಿದ್ದ ದೊಡ್ಡ ಹಬ್ಬಗಳಲ್ಲಿ ನೆಂಟರಿಷ್ಟರ ಜೊತೆಗೆ ಶ್ರದ್ಧಾವಂತ ಜನರು ಬರಲಾರಂಭಿಸಿದರು. ದೇವರು ಪ್ರಭಾವಶಾಲಿಯಾದರಂತೂ ಜನರ ಗದ್ದಲವೂ ಅಧಿಕವಾಗುತ್ತಿತ್ತು. ಒಂದು ದಿನದ ಹಬ್ಬ ಅಥವಾ ಹೆಚ್ಚು ದಿನಗಳಿಗೆ ಹಬ್ಬುತ್ತ ಹೋಗಿ ಕುಣಿತ ಮೆರೆತಗಳು ಕೂಡಿಕೊಂಡು ಮದ್ದು-ಪಟಾಕಿಗಳ ವೈಭವ ಆಕರ್ಷಕವಾಗಿದ್ದು ಅಂಗಡಿ ಮುಂಗಟ್ಟುಗಳೂ ಜಮಾಯಿಸಿ ಜನ ಮರುಳಾಗಿ ಪರಿಸೆ ಸೇರಿದರೆ ಅದು ಜಾತ್ರೆಯೆಂಬ ನಾಮಕರಣಕ್ಕೆ ಯೋಗ್ಯವಾಯಿತು. ಕೊನೆಗೆ ರೈತನ ಜೀವನಾಡಿಯಾಗಿರುವ ದನಗಳ ನೆರವಿನಿಂದ ಸಂಘಟನೆಗೊಂಡಾಗ ಆ ಪದದ

ಅರ್ಥ ತುಂಬ ವಿಶಾಲವಾಯಿತು. ಧಾರ್ಮಿಕ ಸ್ವರೂಪದ ಹಬ್ಬ ಕ್ರಮೇಣ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದು ಕೊನೆಗೆ ವಾಣಿಜ್ಯ ಮುಖ್ಯವನ್ನು ರೂಪಿಸಿಕೊಂಡಾಗ ಜಾತ್ರೆಯಾಯಿತೆಂದು ಹೇಳುತ್ತಾರೆ"(ಜವರೇಗೌಡ ದೇ:೧೯೭೬:೩೪೨)

ವರ್ಷದ ಸುಗ್ಗಿ ಮುಗಿದ ನಂತರ ಅಥವಾ ಇನ್ನೊಂದು ಪ್ರಶಸ್ತವಾದ ಕಾಲದಲ್ಲಿ ಜನರು ಹಿಂದಿನಿಂದಲೂ ಹಬ್ಬ-ಹುಣ್ಣಿಮೆ ಆಚರಿಸುತ್ತ ಬಂದಿದ್ದಾರೆ. ಇವು ಬಿಡುವಿನ ರಜಾ ದಿನಗಳು. ಇಂತಹ ಕಾಲದಲ್ಲಿ ಜಾತ್ರೆ ನಡೆಯಿಸಲು ನಿರ್ಧರಿಸಿರಬಹುದು. ಇನ್ನು ಜಾತ್ರೆಯ ಅಂಗಡಿಗಳ ಕುರಿತು ಹೇಳಬೇಕಾದರೆ, ದೂರ ದೂರದ ಹಳ್ಳಿಗಳಿಂದ ಅಥವಾ ಆದಿವಾಸಿ ನೆಲೆಗಳಿಂದ ಪ್ರಾಣಿಗಳ ಮೇಲೆ ಹೇರು ಹೊರಿಸಿಕೊಂಡು ಬರುತ್ತಿದ್ದರು. ಇಂತಹ ವ್ಯಾಪಾರದ ದಾರಿಗಳು ಕೂಡುವಲ್ಲಿ 'ಜಾತ್ರೆಗಳು' ನೆರೆದರೆ ಅನುಕೂಲವಾದೀತೆಂದು, ಗ್ರಹಿಸಿಕೊಂಡು ಅಲ್ಲಿ ಜಾತ್ರೆಗಳನ್ನು ನಡೆಸುವುದು. ಹೇರಳ ಸರಕು ಬಂದಿರುವ ಅನುಕೂಲಕರ ತಾಣಗಳಲ್ಲಿ ಅಂಗಡಿ ಮುಂಗಟ್ಟುಗಳು ಬಂದವು. ಒಂದು ದಿನ ಜರುಗುತ್ತಿದ್ದ ಜಾತ್ರೆ ೨-೩ ಹತ್ತಿಪ್ಪತ್ತು ದಿನಗಳವರೆಗೂ ವಿಸ್ತರಿಸಿತು. ಅಲ್ಲಿ ಬಂದು ಸೇರುವ ವ್ಯಾಪಾರಸ್ಥರಿಗೂ ಗ್ರಾಹಕರಿಗೂ ಊಟೋಪಚಾರದ ವ್ಯವಸ್ಥೆಯಾಯಿತು. ವ್ಯಾಪಾರದ ವಹಿವಾಟುಗಳಿಗೆ ಅವಶ್ಯವಾದ ಅಳತೆ ತೂಕ ಲೇವಾದೇವಿ ಬಂದೋಬಸ್ತ ವ್ಯವಸ್ಥೆಗಳು ಹುಟ್ಟಿಕೊಂಡವು. ಮನರಂಜನೆಗೆ ಅನುವಾಯಿತು.

ಆರ್ಥಿಕ ಪ್ರಚೋದನೆ ಅಥವಾ ವ್ಯಾಪಾರ ವಹಿವಾಟಿನ ಅಗತ್ಯವೇ ಜಾತ್ರೆಗೆ ಮೂಲ ಪ್ರೇರಣೆಯಾಗಿದ್ದರೆ ಪ್ರಾಚೀನ ಕಾಲದ ಜಾತ್ರೆಗಳು ಒಂದಲ್ಲ ಒಂದು ದೈವದ ನೆಲೆ. ಇಲ್ಲವೇ ಗುಡಿ ಗುಂಡಾರ, ಸಾಧು ಸತ್ಪುರುಷರ ಸಮಾಧಿಗಳ ಬಳಿಯಲ್ಲಿಯೇ ಏಕೆ ನಡೆಯುತ್ತಿದ್ದವು ಎನ್ನುವುದಕ್ಕೆ ಒಂದು ಸಮಾಧಾನಕರ ವಿಚಾರ ಹೀಗಿದೆ. ಅಂತಹ ಪವಿತ್ರ ಸ್ಥಳಗಳನ್ನು ಆರಿಸಿಕೊಂಡರೆ ಯಾವುದಕ್ಕೂ ಜಗ್ಗದ ಮೋಸಗಾರರು ಇಲ್ಲಿರುವ ದೈವಗಳಿಗೆ ಅಥವಾ ಪ್ರೇತಾತ್ಮಗಳಿಗೆ ಹೆದರಿಕೊಂಡು ಯೋಗ್ಯ ರೀತಿಯಲ್ಲಿ ವ್ಯಾಪಾರ ನಡೆಯಬಹುದು ಹಾಗೂ ಶಾಂತಿ ಪಾಲನೆಗೆ ಸುಲಭವಾದೀತು. ಎಂಬುದು ಜನರ ಭಾವನೆಯಾಗಿತ್ತು. ಫ್ರಾನ್ಸ್ ಸಂತಡೆಮಿಟ್ರಯಸ್ ಜಾತ್ರೆ, ರೋಮ್ ಮತ್ತು ಇಂಗ್ಲೆಂಡ್ ದೇಶಗಳ ಬಹುತೇಕ ಜಾತ್ರೆಗಳು ಅಂತಹ ಪವಿತ್ರ ಸ್ಥಳದಲ್ಲಿಯೇ ಹುಟ್ಟಿ ಬೆಳೆದವು. ಎಂದು ಎಸ್.ಕೆ. ಅಯ್ಯಂಗಾರ್ ಉಲ್ಲೇಖಿಸಿದ್ದು(೧೯೭೧-೨೯೭) ಅರ್ಥಪೂರ್ಣವಾಗಿದೆ. ಇದಕ್ಕೆ ವ್ಯತಿರಿಕ್ತವಾದ ಇನ್ನೊಂದು ಅಭಿಪ್ರಾಯವೆಂದರೆ ಜಾತ್ರೆ ಮೂಲತ: ಧಾರ್ಮಿಕ ಸ್ವರೂಪದಲ್ಲಿದ್ದು, ಮುಂದೆ ಆರ್ಥಿಕ ಮತ್ತು ಸಾಂಸ್ಕೃತಿಕ ಅಂಶಗಳು ಸೇರಿಕೊಂಡು ಬೆಳೆದುಬಂದವು.

ನಡುವಿನ ಸಂಪರ್ಕ ನವೀಕರಿಸಿಕೊಳ್ಳುವುದು, ಅಂಗಡಿಯಿಂದ ಅಂಗಡಿಗೆ ಅಲೆಯುವುದು, ಸರಕು ಸಾಮಾನು ಖರೀದಿಸುವುದು ನಡೆದೇ ಇರುತ್ತದೆ. ಹೀಗಾಗಿ ಯಾವ ಕಡೆ ನೋಡಿದರೂ ಜನರೇ ಕಾಣುತ್ತಿರುತ್ತಾರೆ. ರಾತ್ರಿ ಹೊತ್ತಿನಲ್ಲಿ ಭಜನೆ, ಕೀರ್ತನೆ, ಉಪನ್ಯಾಸ, ಮನರಂಜನೆ ಕಾರ್ಯಕ್ರಮಗಳು ಇರುತ್ತವೆ. ಕೆಲವೊಂದು ಕಡೆ ಅನ್ನ ಸಂತರ್ಪಣೆ (ಖಾಂಡ) ವ್ಯವಸ್ಥೆಯು ಇರುತ್ತದೆ.

ನಗರದಲ್ಲಿ ಜರುಗುವ ಜಾತ್ರೆಗಳು ವೇದ–ಆಗಮ ವಿಧಿ–ವಿಧಾನ ಆಗಮೋಕ್ತವಾಗಿ ನಿರ್ದಿಷ್ಟ ಸಮಯದಲ್ಲಿ ನಡೆಯುತ್ತವೆ. ಉದಾ : ಬೀದರಿನ ಪಾಂಡುರಂಗನ ಜಾತ್ರೆ, ದತ್ತ ಮಠದ ಜಾತ್ರೆ, ಮೊದಲಾದವುಗಳು ಹೆಸರಿಸಬಹುದಾಗಿದೆ. ಹಳ್ಳಿಗಳಲ್ಲಿ ಗ್ರಾಮ ದೇವತೆಗಳ ಜಾತ್ರೆಗಳೇ ಮುಖ್ಯವಾಗಿರುತ್ತವೆ. ಕುರಿ–ಕೋಳಿ, ಕೋಣಗಳ ಬಲಿ ಅಲ್ಲಿರುತ್ತದೆ. ಬೇವು ಇಲ್ಲವೆ ಲಕ್ಕಿ ತಪ್ಪಲಿನ (ಸೊಪ್ಪಿನ) ಪೂಜೆ ನಡೆಯುತ್ತದೆ. ಮೂರು ಹಾಗೂ ಏಳು ವರ್ಷಕ್ಕೊಮ್ಮೆ ಚೌಡಮ್ಮ, ಕರೆಮ್ಮ, ಮಾರೆಮ್ಮ ಮುಂತಾದ ಜಾತ್ರೆಗಳು ಜರುಗುತ್ತವೆ.

ವೃತ್ತಿ ಕಲಾವಿದರಾದ ಬಹುರೂಪಿಗಳು, ಭೂತೇರು ಜಾದುಗಾರ ಆಟ, ಡೊಂಬರಾಟ, ಹಾವುಗಾರಾಟ, ಬುರ–ಬುರ ಪೋಚಮ್ಮ ಮುಂತಾದವರು ತಮ್ಮ ತಮ್ಮ ಕಲೆ ತೋರಿಸುತ್ತ ಕುಣಿಯುತ್ತ, ಹಾಡುತ್ತ, ಭಕ್ತರಿಂದ ಕಾಣಿಕೆ ಪಡೆದುಕೊಳ್ಳುತ್ತಾರೆ. ಕಾಯಿ–ಕರ್ಪೂರದ ವ್ಯಾಪಾರ, ತಾಳ–ಮೇಳ, ಜೂಜು–ಗೂಜು, ಮೋಟು–ಖಾಟು, ದನ–ಕರು ಅಯ್ಯ–ಅಪ್ಪಂದಿರು ಹುಡುಗ–ಹುಡುಗಿಯರ ಸರಸ–ವಿರಸದ ಮಾತುಗಳಿಂದ ಕಿವಿಗಳು ಕಿರ್‍ರ್ ಎನ್ನುತ್ತವೆ. ಸರ್ಕಸ್ಸು, ಸಂಚಾರಿ ಚಿತ್ರ ಮಂದಿರ, ಕಂಪನಿ ನಾಟಕ ಥಿಯೆಟರ್‌ಗಳ ಮಾಲೀಕರು ಚಿಲ್ಲರೆ ಹಣದಿಂದ ಚೀಲಗಳನ್ನೇ ತುಂಬುವ ತರಾ–ತುರಿಯಲ್ಲಿರುತ್ತಾರೆ. ಕೈಚಳಕದ ಪ್ರದರ್ಶನಗಳಾದ ನರ್ತನ ಕೂಟಗಳು, ಕೈಮಾಡಿ ಕರೆಯುವಂತಿರುತ್ತವೆ.

೨:೩: ಜಾತ್ರೆಗಳ ಪ್ರಾಮುಖ್ಯತೆ

ಜಾತ್ರೆ ಹೆಸರು ಕೇಳಿದೊಡನೆ ಪ್ರತಿಯೊಬ್ಬನ ಮನದಲ್ಲಿ ಸಂತಸದ ಬುಗ್ಗೆ ಚಿಮ್ಮುತ್ತಿರುತ್ತದೆ. ಹಿಗ್ಗಿನಿಂದ ಹೃದಯ ಹೂವಾಗುತ್ತದೆ. ವರ್ಷಕ್ಕೊಮ್ಮೆ ಬರುವ ಜಾತ್ರೆಗಳಿಗೆ ಬಡವರು–ಬಲ್ಲಿದರು, ಮಧ್ಯಮರು, ಶ್ರೀಮಂತರು, ಹಿರಿಯರು–ಕಿರಿಯರು ಹರ್ಷದಿಂದ ಸ್ವಾಗತಿಸುತ್ತಾರೆ. ಹಳ್ಳಿಗಳಲ್ಲಿ ಜಾತ್ರೆಗಳು ಬಹಳ ಪ್ರಿಯವಾದರೂ ಪಟ್ಟಣಗಳಲ್ಲಿನ ಪ್ರಭಾವ ಕಡಿಮೆಯೇನಿಲ್ಲ. ಹಳ್ಳಿಯ ಮಕ್ಕಳು ಮಣ್ಣಿನ ಮಕ್ಕಳು ಇವರಿಗೆ ಮನರಂಜನೆಯ ಬಹುಮುಖಗಳು ಯಾವಾಗಲೂ ಲಭಿಸುವುದಿಲ್ಲ. ಇಂಥವರಿಗೆ ಉತ್ಸವಗಳು ಎಂದರೆ ಸಂತೊಷ. ಉತ್ಸವದ ಸಮಯದಲ್ಲಿ ಮಕ್ಕಳ

ಮಾತೇ ಬೇರೆ. ಉತ್ಸವದಷ್ಟೇ ಉತ್ಸಾಹ ಅವರಲ್ಲಿರುತ್ತದೆ. ಸಂತೋಷದಿಂದ ಅಂಗಡಿಯಿಂದ ಅಂಗಡಿಗೆ ಅಲೆಯುತ್ತ ಚೂಡಾಬೊಂದಿ ತಿನ್ನುತ್ತಾ ಬಾಯಿ ಚಪ್ಪರಿಸುತ್ತಾರೆ. ತಂದೆ ತಾಯಿಗಳು ಮಕ್ಕಳಿಗಾಗ, ಘುಗ್ಗಾ ಕರ್ರ್-ಕುರ್ರ-ಕಿರ್ರ ಶಬ್ದಮಾಡುವ ವಿವಿಧ ಆಟಿಕೆ ಸಾಮಾನುಗಳು ಖರೀದಿ ಮಾಡುತ್ತಾರೆ.

ದೇವಾಲಯ ಮತ್ತು ತೇರಿಗೆ ಥಳ-ಥಳಿಸುವ ವಿದ್ಯುತ್ ದ್ವೀಪಗಳನ್ನು ಅಳವಡಿಸುತ್ತಾರೆ. ಬಣ್ಣ ಬಣ್ಣದ ಹೂಗಳ ಮಾಲೆಗಳು ಹಾಕಿ ಅಂದ-ಚಂದವಾಗಿ ಕಾಣುವಂತೆ ನೋಡಿಕೊಳ್ಳುತ್ತಾರೆ. ಜಾತ್ರೆಗೆ ಬಂದ ಭಕ್ತರು ಅಂದ ಚಂದವನ್ನು ನೋಡಿ ದೇವಾಲಯದ ಸಮೀಪವಂತೂ, ವಿಪರೀತ ಸಂಖ್ಯೆಯಲ್ಲಿ ಸೇರುತ್ತಾರೆ. ರಾತ್ರಿ ಹೊತ್ತಿನಲ್ಲಿ ಪ್ರತಿಯೊಬ್ಬ ಭಕ್ತ ಮೇಲು ಕೀಳೆನ್ನದೆ ಸಾಲಾಗಿ ಕುಳಿತು ದೇವಾಲಯದ ವ್ಯವಸ್ಥಾಪಕರು ನೀಡಿದ ಪ್ರಸಾದ ಸಂತೋಷದಿಂದ ಸ್ವೀಕರಿಸುವ ಪದ್ಧತಿ ಹೈದ್ರಾಬಾದ್ ಕರ್ನಾಟಕ ಪ್ರದೇಶದ ಪ್ರತಿಯೊಂದು ಜಾತ್ರೆಯಲ್ಲಿ ಎದ್ದು ಕಾಣುತ್ತದೆ.

ಜಾತ್ರೆಗಳ ದಿನಗಳಲ್ಲಿ ಹೆಣ್ಣುಮಕ್ಕಳು ಉತ್ಸಾಹ ಹೇಳತೀರದು. ಅವರಿಗೆ ಎಲ್ಲಿಲ್ಲದ ಆನಂದ. ಎಂದಿಲ್ಲದ ಸ್ವಾತಂತ್ರ್ಯ. ಬೇಜಾರಿನ ಕೆಲಸಗಳನ್ನು ಮರೆತು ಸಂತೋಷ ಅನುಭವಿಸುವ ಹಕ್ಕನ್ನು (ರೈಟ್ಸ್) ಪಡೆದಿರುತ್ತಾರೆ. ಕೂಡಿಟ್ಟ ಹುಂಡಿಗಳನ್ನು (ಮುಡುಪು ಹಣ) ಮನರಂಜನೆಗೂ ಇಲ್ಲವೆ ತಮ್ಮ ಇಷ್ಟ ಬಂದ ಸರಕು ಸಾಮಗ್ರಿ ಖರೀದಿಸುವುದ್ಕಕೂ ಖರ್ಚು ಮಾಡುತ್ತಾರೆ. ಹಕ್ಕಿಯಂತೆ ಸಂತೋಷದಿಂದ ಕಾಲ ಕಳೆಯುವ ನಿಜವಾದ ಸ್ವಾತಂತ್ರ್ಯವನ್ನು ಅಂದು ಅನುಭವಿಸುತ್ತಾರೆ. ಅವರ ಉತ್ಸಾಹದಲ್ಲಿ ಇನ್ನೊಂದು ನೆಪವೂ ಇರುತ್ತದೆ. ತಮ್ಮ ತಮ್ಮ ಬಂಧು ಬಾಂಧವರಲ್ಲದೆ ಅಕ್ಕ-ಪಕ್ಕದ ಜನರು ಬರ್ತಾರಲ್ಲ. ಆಗ ತಮ್ಮ ಗೆಳೆಯರನ್ನೋ ಪರಿಚಯಸ್ಥರನ್ನೋ ಭೇಟ್ಟಿ ಮಾಡಿ ತಮ್ಮ ಕಷ್ಟ ದುಃಖಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತಾರೆ.

ಈ ನಾಡಿನ ಪ್ರಮುಖ ಜಾತ್ರೆಗಳಾದ ಹುಮನಾಬಾದ ವೀರಭದ್ರೇಶ್ವರ, ಕಲ್ಬುರ್ಗಿ ಶರಣಬಸವೇಶ್ವರ, ಬಸವಕಲ್ಯಾಣದ ಬಸವಣ್ಣ, ಕೊಪ್ಪಳದ ಗವಿಸಿದ್ದೇಶ್ವರ ಜಾತ್ರೆಗಳಂದು, ಭಕ್ತರು ಅಡಿಪಾಯ ಹಾಕುವುದು, ಹೊಸ ವ್ಯಾಪಾರ ಪ್ರಾರಂಭ ಮಾಡುವರು. ಜಾವಳ ಕತ್ತರಿಸುವುದು. ಲಗ್ನ ಮಾಡುವುದು, ಹೊಸ ಬಟ್ಟೆ ಧರಿಸುವುದು, ಹೊಸದಾಗಿ ಕಟ್ಟಿದ ಮನೆಗೆ ಪ್ರವೇಶ ಮಾಡುವ ಪದ್ಧತಿ ಇದೆ. ಹೀಗೆ ಮಾಡುವುದರಿಂದ ಮೇಲಿನವುಗಳಿಗೆ ಯಾವುದೇ ಶನಿ ಅಡ್ಡ ಬರುವುದಿಲ್ಲ. ಏನೇ ಆದರೂ ಆ ದೇವರು ನೋಡಿಕೊಳ್ಳುತ್ತಾನೆಂದು ಭಕ್ತರ ನಂಬಿಕೆಯಾಗಿದೆ. ಉತ್ಸವದ ಕೊನೆಯ ದಿನಗಳಲ್ಲಿ ಕುಸ್ತಿ-ಸ್ಪರ್ಧೆ ನಡೆಯುತ್ತದೆ. ಆಯಾ ಜಾತ್ರೆಯ ಸುತ್ತಮುತ್ತಲಿನ ತಂಡಗಳು

ಭಾಗವಹಿಸುತ್ತವೆ. ಕುಸ್ತಿ ಜರುಗುವಾಗ ತಮ್ಮೂರಿನ ಪೈಲ್ವಾನರನ್ನೇ ಹುರಿದುಂಬಿಸುತ್ತಾರೆ. ಚಪ್ಪಾಳೆ ತಟ್ಟುತ್ತಾರೆ. ಸಿಳ್ಳೆ ಹೊಡೆಯುತ್ತಾರೆ. ಕುಣಿದಾಡುತ್ತಾರೆ. ಕುಸ್ತಿಯಲ್ಲಿ ಗೆದ್ದರೆ ಪೈಲ್ವಾನನಿಗೆ ಹೆಗಲ ಮೇಲೆ ಕೂಡಿಸಿಕೊಂಡು ಕುಣಿಯುತ್ತಾರೆ. ಜಾತಿ ಅಂತಸ್ತು ಮರೆತು ಪೈಲ್ವಾನ ನಮ್ಮವನು ಅವನು ಗೆದ್ರೆ ನಾವು ಗೆದ್ದ ಹಾಗೆ ಎನ್ನುತ್ತಾರೆ. ಹೀಗಾಗಿ ಜಾತ್ರೆ ಏಕತೆ, ಶಾಂತತೆ ಮತ್ತು ದುರ್ಗುಣ ಅಳಿಸುವ ಆಚರಣೆಯಾಗಿದೆ.ಮನರಂಜನೆಯ ಮಾಧ್ಯಮವು ಆಗಿದೆ.

೨:೪: ಜಾತ್ರೆಗಳ ಪ್ರಯೋಜನ :

ಜಾತ್ರೆಗಳಿಂದ ಅನೇಕ ಲಾಭಗಳಿವೆ. ವಿವಿಧ ಕಡೆಗಳಿಂದ ಭಕ್ತರು ಜಾತ್ರೆಗೆ ಬರುವುದುಂಟು. ಬಂದವರು ಖಾಲಿ ಕೈಯಿಂದ ಮನೆಗೆ ಹೋಗುವವರು ಕಡಿಮೆ. ಸಾಧ್ಯವಾದಷ್ಟು ದೇವಾಲಯದ ದಾನ ಪೆಟ್ಟಿಗೆಯಲ್ಲಿ ಕಾಣಿಕೆ ಹಾಕುತ್ತಾರೆ. ಒಂದೊಂದು ಸಲ ಈ ಕಾಣಿಕ ಹಣ ಲಕ್ಷ ರೂ. ಮೀರುತ್ತದೆ. ಇನ್ನು ಜಾತ್ರೆಗಳಲ್ಲಿ ತಲೆಯೆತ್ತುವ ಅರೆಕಾಲಿಕ ಅಂಗಡಿ ಮುಂಗಟ್ಟುಗಳ ಮಾಲೀಕರು ಜಾತ್ರೆ ನಡೆಸುವ ಸಮಿತಿಯವರಿಗೆ ಬಾಡಿಗೆ ಹಣ ಕೊಡುತ್ತಾರೆ. ಹೀಗೆ ವಿವಿಧ ಮೂಲಗಳಿಂದ ಜಾತ್ರೆಯ ಸಂದರ್ಭದಲ್ಲಿ ಹಣ ಸಂಗ್ರಹವಾಗುತ್ತದೆ. ಆ ಹಣ ಅನ್ನದಾಸೋಹ, ಜ್ಞಾನದಾಸೋಹ, ರಸ್ತೆ, ಸುಧಾರಣೆ, ಉಚಿತ ಶಿಕ್ಷಣ, ಕಲ್ಯಾಣ ಕಾರ್ಯಕ್ರಮಗಳಿಗೆ ವಿನಿಯೋಗಿಸುತ್ತಾರೆ. ಕಲ್ಬುರ್ಗಿ ಶರಣ ಬಸವೇಶ್ವರ, ಖಾಜಾಬಂದೇನವಾಜ, ಬಸವಕಲ್ಯಾಣದ ಬಸವಣ್ಣ, ಕಲ್ಮಲಾದ ಕರಿಯಪ್ಪ ಶಿವಯೋಗಿ ಮುಂತಾದ ದೇವಾಲಯಗಳು ಮೇಲಿನಂತೆ ಕಾರ್ಯನಿರ್ವಹಿಸುತ್ತಿವೆ. ಜಾತ್ರೆ ಪ್ರತಿಯೊಬ್ಬನಲ್ಲಿ ಧಾರ್ಮಿಕ ಶ್ರದ್ದೆ ಹುಟ್ಟಿಸಲು ಅವರವರ ನಡಾವಳಿಕೆಗಳು ಉತ್ತಮಗೊಳಿಸಲು ಕಾರಣವಾಗಿದೆ. ದೇವರಿರುವ ಪವಿತ್ರ ಸ್ಥಳಕ್ಕೆ ನಾನಾ ಭಾಗದಿಂದ ಭಾವದಿಂದ ಬಂದ ಭಕ್ತ ವರ್ಗ ಸಾಮೂಹಿಕವಾಗಿ ಕುಳಿತು ದೇವತಾರಾಧನೆ ಮಾಡುವುದರೊಂದಿಗೆ ಭಜನೆ, ಕಿರ್ತನೆ, ಪ್ರವಚನ, ಉಪನ್ಯಾಸ ಮತ್ತು ರಥೋತ್ಸವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಂತೋಷಪಡುತ್ತಾರೆ.

ಪ್ರತಿಯೊಂದು ಜಾತ್ರೆ ಆಯಾ ಧರ್ಮದ ಮತ–ತತ್ವಗಳ ಪ್ರಸಾರಕ್ಕೆ ಹೆಚ್ಚು ಮಹತ್ವ ಕೊಡುತ್ತದೆ. ಸಂಸ್ಕೃತಿ–ಸಾಹಿತ್ಯ ಮುಂತಾದ ವಿಷಯಗಳ ಕುರಿತು ವಿದ್ವಾಂಸರಿಂದ ಉಪನ್ಯಾಸಗಳನ್ನು ಏರ್ಪಡಿಸುತ್ತಾರೆ. ಇದರಿಂದ ಜಾತ್ರೆಗೆ ಬಂದ ವಿವಿಧ ವರ್ಗದ ಜನರು ಬೇರೆ ಬೇರೆ ಧರ್ಮಗಳ ವಿಷಯ ತಿಳಿದುಕೊಳ್ಳಲು ಅನುಕೂಲ ಮಾಡಿಕೊಡುತ್ತದೆ. ಇದರಿಂದ ಜಾತ್ರೆಗೆ ಬಂದ ಭಕ್ತನ ಜ್ಞಾನದ ಪರಿಧಿ ಹೆಚ್ಚುತ್ತದೆ.

ಜಾತ್ರೆಯಲ್ಲಿ ಮೇಲು–ಕೀಳೆಂಬ ಭೇದವಿಲ್ಲದೆ ಜನರು ಸೇರುವುದರಿಂದ

ವಿವಿಧ ಸಂಸ್ಕೃತಿಯ ಪರಿಚಯವೂ ಆಗುತ್ತದೆ. ಎಲ್ಲರೂ ಒಟ್ಟಾಗಿ ಕಲೆತು ಪರಸ್ಪರ ಸಂಬಂಧವನ್ನು ಧೃಢಪಡಿಸಿಕೊಳ್ಳುವುದರ ಜೊತೆಗೆ ಹೊಂದಾಣಿಕೆಯನ್ನು ರೂಢಿಸಿಕೊಳ್ಳಲು ಜಾತ್ರೆಗಳು ನೆರವಾಗುತ್ತವೆ. ಆ ಏಕತೆ ಭಾವನೆ ಭಾಗಶಃ ರಕ್ತ ಸಂಬಂಧದ ಭಾವನೆಯಿಂದ ಸಾಧಿತವಾದರೆ ಬಹುಭಾಗ ಸಾಮುದಾಯಿಕ ಆಸಕ್ತಿ ಮತ್ತು ಉತ್ಸವಗಳಿಂದ ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಎಲ್ಲ ವರ್ಗದ ಹೆಣ್ಣು ಮಕ್ಕಳ ವ್ಯಾಮೋಹ ಚಿನ್ನದ ಮೇಲಿರುತ್ತದೆ. ಹಣದ ಅನುಕೂಲವಿದ್ದ ಹೆಣ್ಣು ಮಕ್ಕಳು ಚಿನ್ನ ಖರೀದಿಸಿ ಬೇಕಾದ ಆಭರಣಗಳನ್ನು ಮಾಡಿಸಿಕೊಳ್ಳುತ್ತಾರೆ. ಹಣದಿಂದ ವಂಚಿತರಾದ (ಬಡ ವರ್ಗ) ಸ್ತ್ರೀಯರು ಚಿನ್ನದ ಕನಸು ಕಾಣುವುದು ಸಹಜ. ಏಕೆಂದರೆ ಚಿನ್ನ ಕೊಳ್ಳುವಷ್ಟು ಹಣ ಅವರಲ್ಲಿರುವುದಿಲ್ಲ: ಹೀಗಾಗಿ ಜಾತ್ರೆಯ ದಿನಗಳು ಎಣಿಸುತ್ತಿರುತ್ತಾರೆ. ಏಕೆಂದರೆ ಉತ್ಸವಗಳಲ್ಲಿ ಬಂಗಾರದ ನೀರು ಕೂಡಿಸಿದ (ನಕಲಿ ಬಂಗಾರ) ಆಭರಣಗಳ ಅಂಗಡಿ–ಮುಂಗಟ್ಟುಗಳು ಇರುತ್ತವೆಂಬ ಖಾತರಿ ಅವರಿಗೆ ಇರುತ್ತದೆ. ಹತ್ತು–ಇಪ್ಪತ್ತು ರೂಪಾಯಿ ಕೊಟ್ಟು ಬೇಕಾದ ಒಡವೆ–ಆಭರಣಗಳು ಕೊಳ್ಳಬಹುದಾಗಿದೆ. ಆದ್ದರಿಂದ ಬಡ ಹೆಣ್ಣು ಮಕ್ಕಳು ತಮಗೆ ಬೇಕಾದ ಒಡವೆಗಳು ಸುಲಭ ಬೆಲೆಯಲ್ಲಿ ಖರೀದಿಸಬಹುದಾಗಿದೆ. ಒಡವೆಗಳು ಅಂದ ಕೂಡಲೇ ಒಂದೇ–ಎರಡೇ ಹತ್ತಾರು ಪ್ರಕಾರಗಳುಂಟು. ರುಳಿ, ಗೆಜ್ಜೆ, ಚೈನ್, ಗುಂಡಾ, ಡಾಬ, ಕಾಲ್ಗಡಗ, ಹಾಲ್ಗಡಗ, ಒಡ್ಯಾಣ, ಹರಡಗಿ, ಸರಗಿ, ಕಡಗ, ನಾನ್, ಗೆಜ್ಜೆಟಿಕ್ಕೆ, ನತ್ತು ಸುಪಾನಿ, ಉಂಗುರು, ಲ್ಯಾಕೀಟು, ಸರಗಜ್ಜೆ, ಕಾಲುಂಗರ, ಪತ್ತ, ಬುಗಡಿ, ಝುಂಕಲ್ ಮುಂತಾದವುಗಳು ಹೆಸರಿಸಬಹುದು.

ಜಾತ್ರೆಯಲ್ಲಿ ಎಂದೂ ಕೇಳದ, ಕೇಳಿದರೂ ನೋಡದ ಮನರಂಜನೆ ಮಾಧ್ಯಮಗಳಿರುತ್ತವೆ. ವಿವಿಧ ಆಟಿಕೆ ಸಾಮಾನುಗಳು, ಕುಣಿತಗಳು, ಮೇಳಗಳು ಮುಂತಾದವುಗಳು ಕಿವಿ, ಕಣ್ಣು, ದೇಹ ಮನಸ್ಸಿಗೆ ಸಮಾರಾಧನೆ ನೀಡುತ್ತವೆ. ಇವು ಒಂದು ಕಡೆಯಾದರೆ ದೇವಾಲಯದ ಹೊರಗಿರುವ ಅಂಗಡಿಗಳು ವಿವಿಧ ಬಗೆಯ ಖಾದ್ಯಗಳನ್ನು ತಯಾರಿಸಿ ಭಾವುಕರ ನಾಲಿಗೆಯಲ್ಲಿ ನಿರೂರುವಂತೆ ಮಾಡುತ್ತವೆ. ಹೀಗಾಗುವುದರಿಂದ ಜಾತ್ರೆಗೆ ಬಂದ ಭಕ್ತರು ಖಾದ್ಯಗಳನ್ನು ಖರೀದಿಸಿ ತಿಂದೆ ಬಿಡುವರು. ಇದರಿಂದ ಖಾದ್ಯ ವಸ್ತುಗಳ ಮಾಲೀಕನಿಗೆ ಹೆಚ್ಚಿನ ಲಾಭ ಬರುತ್ತದೆ.

ಸಮಷ್ಟಿಯ ಸಂಪತ್ತು ಜಾತ್ರೆ ಎಲ್ಲರ ಕ್ಷೇಮಾಭಿವೃದ್ಧಿಗಾಗಿ ಒಂದು ನಿಗದಿತ ಸಮಯದಲ್ಲಿ ದೇವರುಗಳ ಹೆಸರಿನಲ್ಲಿ ಧಾರ್ಮಿಕ ಕ್ಷೇತ್ರವೊಂದರಲ್ಲಿ ಸಾಮೂಹಿಕವಾಗಿ ಆಚರಿಸುವ ಧಾರ್ಮಿಕ ವಿಧಿಯಾಗಿ ಇಂದು ರೂಢಿಯಲ್ಲಿದೆ. ಇದು ಹತ್ತಾರು

ರೂಢಿ ಸಂಪ್ರದಾಯಗಳನ್ನು ಅನೇಕ ಜಾನಪದ ಅಂಶಗಳನ್ನು ತನ್ನಲ್ಲಿ ಇಟ್ಟುಕೊಂಡು ಒಂದು ಸಂಕೀರ್ಣ ವ್ಯವಸ್ಥೆಯಾಗಿದೆ. ಹಳ್ಳಿ–ಪಟ್ಟಣದವರಿಗೆ ಜಾತ್ರೋತ್ಸವವೊಂದು ಪುಣ್ಯ ಪ್ರಸಂಗವಾಗಿದೆ. ಎಲ್ಲರೊಂದಿಗೆ ಕೂಡಿ ಆನಂದ ಪಡುವ ಹಬ್ಬವಾಗಿದೆ. ಜಾತ್ರೆಯ ಮೂಲೋದ್ದೇಶ ಸಾಮಾಜಿಕ ಜನ ಜೀವನದ ವ್ಯವಸ್ಥೆ ಸುರಕ್ಷಿತವಾಗಿ ಮುನ್ನಡೆಸಲು ಮತ್ತು ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದ ಸಂಸ್ಕೃತಿಯ ಪ್ರವಾಹವನ್ನು ಮುಂದುವರಿಸುವುದೇ ಆಗಿದೆ.

ಜಾತ್ರೆಗಳು ಕೇವಲ ಜನ ಜಂಗುಳಿಯ ಉತ್ಸಾಹ, ಮೋಜು ಗದ್ದಲಗಳ ಸ್ಥಳವನ್ನಾಗಿ ಉಳಿಯಗೊಡದೆ ಅವುಗಳಿಗೆ ಒಂದು ಸಾಂಸ್ಕೃತಿಕ ಹಿರಿಮೆಯನ್ನು ತಂದುಕೊಡುವ ಶ್ರೇಯಸ್ಸು, ಪ್ರತಿಯೊಂದು ಜಾತ್ರೆಯಲ್ಲಿ ಎದ್ದು ಕಾಣುತ್ತದೆ. ಭಜನೆ, ಕೀರ್ತನೆ, ಉಪನ್ಯಾಸ, ಸಾಹಿತ್ಯ, ಸಂಗೀತ, ನೃತ್ಯ ಗೋಷ್ಠಿಗಳು, ಬಯಲಾಟ, ಲಾವಣಿ, ಕುಸ್ತಿ, ಕರಕುಶಲ ವಸ್ತು ಪ್ರದರ್ಶನಗಳು ಹೆಸರಿಸಬಹುದು.

ಜಾತ್ರೆಯಿಂದ ಪ್ರತಿಯೊಬ್ಬನ ಮನಸ್ಸು ಧಾರ್ಮಿಕತೆಯಲ್ಲಿ ಮಿಂದು, ಲೌಕಿಕ ಸುಖ ಸಂತೋಷವುಂಡು, ನಿರಂತರ ದುಡಿಮೆಯ ದವಡೆಯಿಂದ ಅಲ್ಪವಿರಾಮ ಪಡೆಯುತ್ತದೆ. ಗೊಂದಲದ ಬದುಕಿನಿಂದ ಕ್ಷಣಕಾಲ ತಪ್ಪಿಸಿಕೊಂಡು ಲೌಕಿಕ ಪಾರಮಾರ್ಥಿಕಗಳೆರಡರ ಸವಿ ಸುಖದರ್ಶನ ಪಡೆಯಲು ಅನುಕೂಲವಾಗುತ್ತದೆ. ಅದರಿಂದ ಪ್ರತಿಯೊಬ್ಬನ ಮನಸ್ಸು ಹಸನಾಗಿ, ಅವನಲ್ಲಿ ವಿವೇಕ ಹುಟ್ಟಿ ಬದುಕು ಸಾರ್ಥಕಪಡಿಸಿಕೊಳ್ಳುತ್ತಾನೆ.

ಜಾತ್ರೆ ದೇವ–ದೇವತೆಗಳ ಸಂಪ್ರೀತಿಗಾಗಿಯೋ, ಫಲಶಕ್ತಿಯ ಹಾರೈಕೆಗಾಗಿಯೋ ಮಹಾತ್ಮರ ಗೌರವಾರ್ಥವಾಗಿಯೋ, ಸಮಾಜ ಸುಧಾರಣೆಕ್ಕಾಗಿಯೋ, ಜರುಗಿ ಆ ನೆಪದಲ್ಲಿ ಧಾರ್ಮಿಕ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ, ತಾತ್ವಿಕ ಮತ್ತು ರಾಜಕೀಯ ಸಂಘಟನೆ ಹೆಚ್ಚಿಸಿ, ವ್ಯಷ್ಟಿ ಹಾಗೂ ಸಮಷ್ಠಿ ಹಿತಗಳನ್ನು ಏಕ ಕಾಲದಲ್ಲಿ ಸಾಧಿಸುತ್ತದೆ.

* * *

ಅಧ್ಯಾಯ-೩

ಜಾತ್ರೆಗಳ ವರ್ಗೀಕರಣ

ಬದುಕಿನ ಎಲ್ಲವನ್ನು ಒಳಗೊಂಡ ಬಹು ವಿಸ್ತಾರವಾದ ಜಾತ್ರೆಗಳ ವಿಂಗಡನೆ ಕಠಿಣವಾದ ವಿಷಯ. ದಂತಕಥೆ, ಪುರಾಣ ಇತಿಹಾಸದಲ್ಲಿ ಹೆಸರು ಹೊಂದಿರುವ ದೇವ ದೇವತೆಗಳಿವೆ. ಆದಿಮಾನವ ಮಾತ್ರವಲ್ಲ ಎಲ್ಲ ಕಾಲದ ಸಾಮಾನ್ಯ ಜನರ ಕಲ್ಪನೆಗಳು, ನಂಬಿಕೆಗಳು, ಹಬ್ಬ-ಹರಿದಿನಗಳು ಸಾಂಸ್ಕೃತಿಕ ಚಟುವಟಿಕೆಗಳು, ಕಷ್ಟ ದುಃಖ, ಮನರಂಜನೆ ಹತ್ತು ಹಲವಾರು ಆಶೋತ್ತರಗಳು ಅದರಲ್ಲಿ ಸೇರಿಕೊಂಡಿವೆ. ನಿಜಕ್ಕೂ ಅದು ಇತಿಹಾಸ ಪೂರ್ವಯುಗದ ಹಾಗೂ ಸಾರ್ವಕಾಲಿಕ ಶ್ರೀಸಾಮಾನ್ಯರನ್ನು ಒಳಗೊಂಡಿದೆ. ದೇವರು ಜನ-ದನ, ಗೀತೆ, ನೃತ್ಯ, ಸಂಗೀತ, ಕಲೆ ಮೊದಲಾದವುಗಳನ್ನು ಒಳಗೊಳ್ಳುವ ಜಾತ್ರೆ ಬಹು ಸಂಕೀರ್ಣವೂ ಅಪಾರ ವೈವಿಧ್ಯಮಯವೂ ಎನಿಸಿದೆ. ಜಾತ್ರೆ ಯಾವ ಆಧಾರದ ಮೇಲೆ ವಿಂಗಡಿಸಿದರೂ ಅಸಮರ್ಪಕತೆಯ ದೋಷವನ್ನು ಪರಿಹರಿಸುವುದು ಅಸಾಧ್ಯವಾದ ಮಾತೇ ಸರಿ. ಆದರೂ ಅಧ್ಯಯನದ ಅನುಕೂಲತೆಗಾಗಿ ಜಾನಪದ ವಿದ್ವಾಂಸರು ಜಾತ್ರೆಗಳನ್ನು ಈ ಕೆಳಕಂಡಂತೆ ವರ್ಗೀಕರಣ ಮಾಡಿದ್ದಾರೆ.

ಉತ್ತರ ಕರ್ನಾಟಕದಲ್ಲಿ 'ಗುಡಿ ಜಾತ್ರೆಗಳು' ಮತ್ತು 'ಮಠದ ಜಾತ್ರೆಗಳು' ಎಂಬ ಎರಡು ವಿಭಾಗಗಳನ್ನು ಡಾ. ಎಂ.ಎಸ್. ಲಠ್ಠೆ (೧೯೮೮:೧-೬)ಯವರು ಮಾಡಿದ್ದಾರೆ. ತುಳುನಾಡಿನಲ್ಲಿ ಭೂತಗಳ ಜಾತ್ರೆ, ಮಾರಿ ಜಾತ್ರೆ, ಸಿರಿಜಾತ್ರೆ, ಕೋಟಿಚನ್ನಯ್ಯ, ಬೈದ್ಯಕನಳ ಜಾತ್ರೆ, ನಾಗಮಂಡಲ ಜಾತ್ರೆಗಳೆಂಬ ಐದು ಪ್ರಬೇದಗಳನ್ನು ಕೆ. ಚಿನ್ನಪ್ಪ ಗೌಡರು (೧೯೮೮-೨೯-೩೦) ಕಲ್ಪಿಸಿದ್ದಾರೆ. ಗುಡಿಜಾತ್ರೆಗಳಲ್ಲಿ ಸವದತ್ತಿ ಚಿಂಚನಸೂರು ನೀರಮಾನ್ವಿಗಳ ಎಲ್ಲಮ್ಮ, ಸಿಂಧನೂರು, ಉಡಚಣ, ಖಾನಪುರಗಳ ಅಂಬಾ ಮುಂತಾದ ದೇವತೆಗಳು, ಮಠದ ಜಾತ್ರೆಗಳಲ್ಲಿ ಕೊಪ್ಪಳ ಗವಿಸಿದ್ಧೇಶ್ವರ, ಕಲುಬುರ್ಗಿ ಶರಣಬಸವೇಶ್ವರ ಬಸವಕಲ್ಯಾಣದ ಬಸವಣ್ಣ ಪ್ರಭುದೇವ, ಮೊದಲಾದ ದೇವರುಗಳನ್ನು ಲಠ್ಠೆಯವರು ಹೆಸರಿಸಿದ್ದಾರೆ. ಭೂತರಾಧನೆಯಲ್ಲಿ ಪುರಾಣ ಸಂಬಂಧ ಭೂತಗಳ ಜಾತ್ರೆ (ಶೈವ, ವೈಷ್ಣವ,ಶಾಕ್ತ)

ಚಾರಿತ್ರಿಕ, ಐತಿಹಾಸಿಕ, ಆಧಾರಗಳಿರುವ ವೀರಗಾರರ ಜಾತ್ರೆ, ಕುಲ ಲಾಂಛನದ ಸಂಕೇತ ಪ್ರಾಣ ಸಂಬಂಧ ಹೊಂದಿರುವ ಜಾತ್ರೆಗಳು ಎಂದು ಪ್ರಸ್ತಾಪ ಮಾಡುತ್ತಾ ಕೊನೆಗೆ ಜಾತ್ರೆಯಲ್ಲಿ ಪ್ರಧಾನವಾಗಿ ಎರಡು ಬಗೆ ೧) ಆಗಮರೀತಿ(ವೈದಿಕ, ಶಿಷ್ಟ) ಪದ್ಧತಿಯ ಜಾತ್ರೆ, ೨) ಜನಪದ ಶೈಲಿಯ ಜಾತ್ರೆ ಎಂದು ವಿಂಗಡಿಸಿ ಆಗಮರೀತಿಯ ಜಾತ್ರೆಯಲ್ಲಿ ಪೌರಾಣಿಕ ದೇವರು-ದೇವತೆಗಳ ಆರಾಧನೆ ನಡೆಯುತ್ತದೆ. ಮಾರಿ ಸಿರಿ ಜಾತ್ರೆಗಳು ಜನಪದ ಶೈಲಿಯ ಮಾದರಿಯಲ್ಲಿರುತ್ತವೆಂದು ಚಿನ್ನಪ್ಪಗೌಡರು ಅಭಿಪ್ರಾಯ ಪಡುತ್ತಾರೆ. ಈ ಒಂದೊಂದು ವಿಭಾಗವೂ ಒಂದೊಂದು ಪ್ರತ್ಯೇಕ ಜಾತ್ರೆ ಪ್ರಕಾರವಾಗಿ ಎಂಬುದು ಗಮನಾರ್ಹವಾದ ವಿಷಯ.

ಶಿವಾನಂದ ಗುಬ್ಬಣ್ಣನವರು(೧೯೮೮:೧೦೦) ಜಾತ್ರೆಯನ್ನು ಕುರಿತು ವಿವರಣೆಯನ್ನು ಕೊಡುತ್ತಾ, ಮೂರು ಪ್ರಕಾರಗಳಾಗಿ ವಿಂಗಡಿಸುತ್ತಾರೆ. ವೈದಿಕರ ರಾಮ, ಕೃಷ್ಣ, ನಾರಾಯಣ, ವಿಶ್ವಕರ್ಮದವರ ಕಾಳಿಕಾದೇವಿ, ಲಿಂಗಾಯತರ ಈಶ್ವರ, ಕುರುಬರ ಬೀರದೇವರು, ಮುಸಲ್ಮಾನರ ಉರುಸು, ಹರಿಜನರ ದುರಗಪ್ಪ ಇತ್ಯಾದಿ ಜಾತ್ರೆಗಳನ್ನು ಜಾತಿ ಇಲ್ಲವೇ ಮತ ಸೂಚಕ ಜಾತ್ರೆಗಳೆಂದು, ಹನುಮಂತ ಶಿಶುನಾಳ ಷರೀಪ, ಶಿರಹಟ್ಟಿ ಫಕೀರಸ್ವಾಮಿ, ಇತ್ಯಾದಿ ಜಾತ್ರೆಗಳನ್ನು 'ಲೌಕಿಕ ಜಾತ್ರೆಗಳೆಂದು, ಸವದತ್ತಿ ಎಲ್ಲಮ್ಮ, ಬಾದಾಮಿಯ ಬನಶಂಕರಿ, ಚಿಂಚಲಿ ಮಾಯವ್ವ ಬೂದನಗುಡ್ಡ ಬಸವಣ್ಣ, ಉಳವಿಯ ಚನ್ನಬಸವಣ್ಣ, ಗರಗದ ಮಡಿವಾಳೇಶ್ವರ ವರವಿಯ ಮೌನೇಶ್ವರ ಮುಂತಾದ ಜಾತ್ರೆಗಳನ್ನು ಸ್ಥಳವಾಚಕ ಜಾತ್ರೆಗಳೆಂದು ವಿಂಗಡಿಸಿದ್ದಾರೆ. ಈ ವರ್ಗೀಕರಣ ಕ್ರಮಬದ್ಧತೆಯ ದೃಷ್ಟಿಯಿಂದ ಜಾತ್ರೆಗಳ ಪ್ರಕಾರ ಅಷ್ಟೇನೂ ಮುಖ್ಯವಲ್ಲವಾದರೂ ವಿಷಯ ವ್ಯಾಪ್ತಿಯ ದೃಷ್ಟಿಯಿಂದ ಇಂತಹದೊಂದು ವಿಂಗಡಣೆ ಆಳವಾದ ಅನುಭವ ಅಧ್ಯಯನಕ್ಕೆ ಸಾಕ್ಷಿಯಾಗಿದೆ ಎನ್ನಬಹುದು.

ಭಾರತೀಯ ಹಾಗೂ ಪಾಶ್ಚಾತ್ಯ ವಿದ್ವಾಂಸರು ಜಾನಪದ ವಿಂಗಡಣೆಯ ಪ್ರಯತ್ನಕ್ಕೆ ಕೈ ಹಾಕಿದ್ದಾರೆ. ಆದರೆ ಜಾತ್ರೆಯ ಪ್ರಸ್ತಾಪ ಮತ್ತು ವಿಂಗಡಣೆ ಮಾಡಿರುವುದಿಲ್ಲ. ಜಾತ್ರೆಯ ವರ್ಗೀಕರಣಕ್ಕೆ ಸಂಬಂಧಿಸಿದ ನೂರಾರು ಜಾನಪದ ಗ್ರಂಥಗಳು ತಿರುವಿದರೂ ಹೆಚ್ಚಿನ ಮಾಹಿತಿ ಸಿಗುವುದಿಲ್ಲ. ನಾಲ್ಕಾರು ವಿದ್ವಾಂಸರು ವಿಂಗಡಣೆ ಮಾಡಿದ ಉಲ್ಲೇಖಗಳು ಮಾತ್ರ ಸಿಗುತ್ತವೆ. ಹೀಗಾಗಿ ಜಾತ್ರೆಗಳ ವರ್ಗೀಕರಣದ ಬಗ್ಗೆ ಆಳವಾದ ಅಧ್ಯಯನ ನಡೆಯಬೇಕಾಗಿದೆ. ನನ್ನ ಕ್ಷೇತ್ರ ಕಾರ್ಯ ಮತ್ತು ಅಧ್ಯಯನದಿಂದಾಗಿ ಲಿಂಗ ಆಧರಿಸಿ ಗಂಡು ಮತ್ತು ಹೆಣ್ಣು ದೇವತೆಗಳ ಜಾತ್ರೆಗಳೆಂದು ಎರಡು ಪ್ರಕಾರ ಮಾಡಬಹುದು. ಜಾತಿ ಮತ ಗಣನೆಗೆ ತೆಗೆದುಕೊಂಡು

ಹಿಂದುಗಳ ಜಾತ್ರೆ, ಕ್ರೈಸ್ತರ ಜಾತ್ರೆ, ಸಿಖ್ಖರ ಜಾತ್ರೆಗಳೆಂದು ವಿಂಗಡಿಸಬಹುದು. ಭೌಗೋಲಿಕ ಹಿನ್ನೆಲೆಯಾಗಿ ಗ್ರಾಮೀಣ ಪ್ರದೇಶಗಳಲ್ಲಿ ನಡೆಯುವ ಜಾತ್ರೆಗಳನ್ನು ಗ್ರಾಮದೇವರ ಜಾತ್ರೆಗಳೆಂದು ಕರೆಯಬಹುದು. ಜಾತ್ರೆ ಜರುಗುವಾಗ ಆರ್ಥಿಕ ಮಟ್ಟವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಣ್ಣ ಪ್ರಮಾಣದಲ್ಲಿ ಆಚರಣೆ ಮಾಡುವ ಉತ್ಸವಕ್ಕೆ ಸಣ್ಣ ಜಾತ್ರೆ ಅದ್ದೂರಿಯಾಗಿ ಆಚರಿಸಲ್ಪಡುವ ದೇವ-ದೇವತೆಯ ಉತ್ಸವಕ್ಕೆ ದೊಡ್ಡ ಜಾತ್ರೆಯೆಂದು ಪರಿಗಣಸಬಹುದು. ಆದರೆ ಈ ಪ್ರಕಾರಗಳು ಒಂದರಲ್ಲಿ ಒಂದು ಹೆಣೆದುಕೊಳ್ಳುತ್ತವೆ. ಪರಿಪೂರ್ಣ ಎನಿಸುವುದಿಲ್ಲ. ಹೀಗಾಗಿ ಜಾತ್ರೆಯನ್ನು ಎಷ್ಟೋ ವಿಭಾಗಗಳಾಗಿಯಾದರೂ ವರ್ಗೀಕರಣ ಮಾಡಿಕೊಳ್ಳುವ ಸಾದ್ಯತೆಗಳಿವೆ. ಈ ಮೇಲಿನ ಎಲ್ಲ ಪ್ರಕಾರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಜಾತ್ರೆಗಳನ್ನು ಸ್ಥೂಲವಾಗಿ ಎರಡು ಪ್ರಕಾರಗಳನ್ನಾಗಿ ವರ್ಗೀಕರಿಸಿಕೊಳ್ಳಬಹುದು. ಒಂದು ಐತಿಹಾಸಿಕ ಇನ್ನೊಂದು ಪೌರಾಣಿಕ ಜಾತ್ರೆಗಳು.

೩:೧: ಐತಿಹಾಸಿಕ ಜಾತ್ರೆಗಳು :

ಇತಿಹಾಸಕ್ಕೆ ಸಂಬಂಧಿಸಿದ ದೇವ ದೇವತೆಗಳ ಜಾತ್ರೆಯೇ ಐತಿಹಾಸಿಕ ಜಾತ್ರೆಗಳು, ಸಮಾಜದಲ್ಲಿ ಹುಟ್ಟಿ-ಬೆಳೆದು ನಾಸ್ತಿಕನಾಗದೆ ಆಸ್ತಿಕನಾಗಿ, ಶಿವಯೋಗಿಯಾಗಿ ಶಿವನ ಸನ್ನಿದಿ ಸೇರಿದ ಮಹಾತ್ಮರ ಸಾಧು-ಸಂತರ ಸ್ಮರಣಾರ್ಥ ಸಾಮೂಹಿಕವಾಗಿ ಆಚರಣೆ ಮಾಡುವ ಪುಣ್ಯ ತಿಥಿಯೇ 'ಐತಿಹಾಸಿಕ ಜಾತ್ರೆಗಳು' ಈ ಜಾತ್ರೆಗಳು ವರ್ಷ ಇಲ್ಲವೆ ಎರಡು ಮೂರು ವರ್ಷಕ್ಕೊಮ್ಮೆ ಜರುಗುತ್ತವೆ.

ಜಾತ್ರೆ ಜರುಗುವಾಗ ಮಠ-ಮಸೀದಿಗಳಿಗೆ ಸುಣ್ಣ ಬಣ್ಣ ಬಳಿದು ಅಲಂಕರಿಸುತ್ತಾರೆ. ಉತ್ಸವದಂದು ಧ್ವನಿವರ್ಧಕಗಳು ಅಳವಡಿಸುತ್ತಾರೆ. ಆ ದಿನ ಸುತ್ತಮುತ್ತಲಿನ ಭಕ್ತರು ಜಾತ್ರೆಯಲ್ಲಿ ಪಾಲ್ಗೊಂಡು ದರ್ಶನ ಪಡೆದು ಊಟ ಮಾಡುವರು. ಮಧ್ಯಾಹ್ನದ ವೇಳೆಗೆ ಪಲ್ಲಕ್ಕಿಯಲ್ಲಿ ಮಹಾನುಭಾವನ ಮೂರ್ತಿ ಇಟ್ಟು ಮೆರವಣಿಗೆ ಮಾಡುವರು. ಮೆರವಣಿಗೆಯಲ್ಲಿ ಪುರವಂತಿಕೆ, ಹಲಗೆ ಡೊಳ್ಳು, ಮುಂತಾದ ಮೇಳಗಳಿರುತ್ತವೆ. ಕುಣಿದು ಕುಪ್ಪಳಿಸಿದಂತೆ ಪಲ್ಲಕ್ಕಿ ಮುಂದೆ ಮುಂದೆ ಸಾಗುತ್ತದೆ. ಜಯಘೋಷಣೆಗಳು ಮೊಳಗುತ್ತಿರುತ್ತವೆ. ಕೊನೆಗೆ ಪಲ್ಲಕ್ಕಿ ಸಂಜೆ ಹೊತ್ತಿಗೆ ಸ್ವಸ್ಥಳವನ್ನು ತಲುಪುವುದು. ಸಂಜೆಗೆ ಪುರಾಣ ಪ್ರವಚನ ಭಜನೆ-ಕೀರ್ತನೆ, ವಚನಗಾಯನ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ.

ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಗುರುನಾನಕರ ಜಾತ್ರೆ, ಖಾಜಾ ಬಂದಾ ನವಾಜರ ಉರುಫ್ ಬಸವಣ್ಣನ ಜಾತ್ರೆ, ಶರಣಬಸವೇಶ್ವರ ಜಾತ್ರೆ,

ಗವಿಸಿದ್ದೇಶ್ವರ ಜಾತ್ರೆ, ಮಾಣಿಕ ಪ್ರಭುಗಳ ಜಾತ್ರೆ ಮುಂತಾದ ಪ್ರಸಿದ್ಧ ಐತಿಹಾಸಿಕ ಜಾತ್ರೆಗಳೆನಿಸಿವೆ. ಈ ಜಾತ್ರೆಗಳಲ್ಲಿ ಯಾವುದೇ ಅಹಿತಕರ ಘಟನೆಗಳು ಹೆಚ್ಚಾಗಿ ಜರುಗುವುದಿಲ್ಲ. ಉತ್ಸವ ನಡೆಯುವಾಗ ಜಾತಿ ವರ್ಗದ ಸಂಘರ್ಷಗಳು ಮಾಯವಾಗಿ ಎಲ್ಲರೂ ಒಂದೇ ಎನ್ನುವಂತೆ ಎಲ್ಲ ವರ್ಗದ ಜನರು ಜಾತ್ರೆಯ ಯಶಸ್ವಿಗಾಗಿ ಸಹಕರಿಸುತ್ತಾರೆ ಮತ್ತು ಭಾಗವಹಿಸುತ್ತಾರೆ. ಐತಿಹಾಸಿಕ ಜಾತ್ರೆಗಳಿಗೆ ತನ್ನದೇ ಆದ ಕೆಲವು ಸರಳ ಆಚರಣೆಗಳಿರುತ್ತವೆ. ಪೂಜೆ ಮನಸ್ಕಾರ, ಪಲ್ಲಕ್ಕಿ ಇತ್ಯಾದಿಗಳು ತನ್ನ ಚೌಕಟ್ಟಿನಲ್ಲಿಯೇ ನಡೆಯುತ್ತವೆ. ಶಾಂತ ರೀತಿಯಿಂದ ಈ ಜಾತ್ರೆಗಳು ಜರುಗಿ ಜನಸಾಮಾನ್ಯರಿಗೆ ಶಾಂತಿಯನ್ನು ಕಲ್ಪಿಸಿಕೊಡುತ್ತವೆ.

೩:೨: ಪೌರಾಣಿಕ ಜಾತ್ರೆಗಳು :

ವೇದಗಳಲ್ಲಿ ಪ್ರತಿಪಾದಿತವಾಗಿರುವ ಹಲವಾರು ಅಂಶಗಳನ್ನು ಕಥೆಯ ಚೌಕಟ್ಟಿನಲ್ಲಿ ವಿವರಿಸುವುದು ಪುರಾಣಗಳ ವಿಶಿಷ್ಟ ಲಕ್ಷಣ. ಪುರಾಣಗಳು ಭಾರತೀಯ ಪವಿತ್ರ ಗ್ರಂಥಗಳು. ಧಾರ್ಮಿಕ ಗ್ರಂಥಗಳಲ್ಲಿ ವೇದಗಳ ಅನಂತರ ಅವುಗಳಿಗೆ ಹೆಚ್ಚಿನ ಪ್ರಾಧಾನ್ಯವಿದೆ. ಇದನ್ನು ಹಿಂದೂಧರ್ಮ ಮತ್ತು ಸಂಸ್ಕೃತಿಯ ವಿಶ್ವಕೋಶ ಎನ್ನಬಹುದು. ಇಂತಹ ಪುರಾಣ ಇಲ್ಲವೆ ದಂತ ಕಥೆಗಳಲ್ಲಿ ಬರುವ ದೇವ ದೇವತೆಗಳ ಉತ್ಸವವೇ 'ಪೌರಾಣಿಕ ಜಾತ್ರೆಗಳು' ಎನ್ನಬಹುದು. ದೇವತೆಗಳು ಪ್ರಾಚೀನ ಕಾಲದಲ್ಲಿ ನಿಜವಾಗಿಯೂ ಇದ್ದವೆಂದು ನಮ್ಮ ದಂತ ಕಥೆಗಳು ಮತ್ತು ಪುರಾಣಗಳು ಹೆಳುತ್ತವೆ. ಆದರೆ ಈ ಕುರಿತು ಯಾವುದೇ ನಿಖರವಾದ ದಾಖಲೆ ಅಥವಾ ಪುರಾವೆಗಳು ಸಿಗುವುದಿಲ್ಲ.

ಪುರಾಣಗಳಿಗೆ ಸಾಮಾನ್ಯವಾಗಿ ಧಾರ್ಮಿಕ ಹಿನ್ನೆಲೆ ಇದ್ದೇ ಇರುತ್ತದೆ. ಅದರ ಮುಖ್ಯ ಪಾತ್ರ ದೇವ ದೇವತೆಗಳಾಗಿರುತ್ತಾರೆ. ಕಥೆಗಳು ಮತ್ತು ಪುರಾಣಗಳಿಗೆ ಹುಟ್ಟು ಹಾಕಿದವರು ಋಷಿಗಳು ಎನ್ನುವ ತಿಳುವಳಿಕೆ ಇದೆ. "ಪುರಾಣ ಮತ್ತು ದಂತ ಕಥೆಗಳಲ್ಲಿ ಮಾರಮ್ಮ, ಚೌಡಮ್ಮ, ಹುಲಿಗೆಮ್ಮ, ಕರೆಮ್ಮ, ಪೋಚಮ್ಮ, ಎಲ್ಲಮ್ಮ ಮುಂತಾದ ದೇವ ದೇವತೆಗಳ ಪ್ರಸ್ತಾಪ ಬರುತ್ತದೆ." (ಬಲದೇವ:೧೯೫೩:೮)

ಹೈದ್ರಾಬಾದ ಕರ್ನಾಟಕದ ಪ್ರತಿಯೊಂದು ಹಳ್ಳಿಗಳಲ್ಲಿ ದೇವತೆಗಳು ಕಂಡುಬರುತ್ತವೆ. ಇವುಗಳಲ್ಲಿ ಹೆಣ್ಣು ದೇವತೆಗಳೇ ಹೆಚ್ಚು. ಹೆಣ್ಣು ಸೃಷ್ಟಿಗೆ ಕಾರಣಳು. ಸೌಮ್ಯ ರೂಪದವಳೂ ಹೌದು, ಉಗ್ರ ರೂಪದವಳು ಹೌದು. ಹೀಗಾಗಿ ತಾಯಿಯೇ ಪ್ರಧಾನವಾಗಿ ಇದ್ದ ನಮ್ಮ ಸಮಾಜದಲ್ಲಿ ಹೆಣ್ಣು ದೇವತೆಗಳ ಉಗಮ ಹೆಚ್ಚಾಗಿ ಆಗಿರಬೇಕೆನಿಸುತ್ತದೆ. ಈ ದೇವತೆಗಳು ಗ್ರಾಮದ ಸಂರಕ್ಷಣೆ ಮಾಡುತ್ತವೆಂಬ ಕಾರಣದಿಂದ 'ಗ್ರಾಮ ದೇವತೆಗಳೆಂದು' ಕರೆಯುತ್ತಾರೆ. ಇವು ಉಗ್ರ ರೂಪಿ ಎಂಬ

ಅರ್ಥವೂ ಇದೆ. ಅನೇಕ ದಂತ ಕಥೆಗಳಿವೆ. ಒಟ್ಟಿನಲ್ಲಿ ಗ್ರಾಮದೇವತಗಳು ದುಷ್ಟರನ್ನು ಶಿಕ್ಷಿಸುವ, ಮೊರೆ ಹೋದವರನ್ನು ಕಾಪಾಡುವ ದೇವತೆ ಎಂದು ಜನ ನಂಬಿಕೊಂಡು ಬಂದಿದ್ದಾರೆ. ಉರುಳು ಸೇವೆ, ಕೆಂಡ ಹಾಯುವದು, ಬೇವಿನುಡಿಗೆ, ಬಲಿ ಸಂಪ್ರದಾಯ ಮುಂತಾದ ಅನಿಷ್ಟ ಪದ್ಧತಿಗಳು ಈ ಜಾತ್ರೆಯಲ್ಲಿರುತ್ತವೆ.

ಜನಪದರು ಪ್ರಕೃತಿಯ ನಡುವೆ ಬದುಕು ಕಟ್ಟಿಕೊಂಡು ನಿಸರ್ಗವೆ ದೇವ ಸ್ವರೂಪವೆಂದು ತಿಳಿದು

'ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಗಾಗಿ ಕಣ್ಣ ತೆರೆದಾನ: ಲಿಂಗಯ್ಯನ
ನೋಡಲಿಕ್ಕೆ ನಿದ್ದೆ ಬಯಲಾಗಿ'

ಎಂದು ಜನಪದರು ಹಾಡಿ ಹೊಗಳಿದ್ದಾರೆ. ಹೀಗೆ ದೇವರುಗಳ ಕಲ್ಪನೆಯನ್ನು ಜೀವನದ ನಡುವೆ ಇಟ್ಟುಕೊಂಡಿದ್ದಾರೆ.

ಜೀವನ ಸುಖದ ಸುಪ್ಪತ್ತಿಗೆ ಅಲ್ಲ. ಕಷ್ಟ ನಷ್ಟ ನೋವು ನರಳಿಕೆಗಳ ಹೋರಾಟ ಅದು. ದು:ಖದ ಹೊಡೆತಕ್ಕೆ ಮನಸ್ಸು ಬದಲಾವಣೆ ಆಗುತ್ತದೆ. ಬದಲಾವಣೆ ಮನಸ್ಸಿಗೆ ಭಯ ಹುಟ್ಟಿಸುತ್ತದೆ. ಭಯದ ಕತ್ತಲು ಕವಿಸಿ ಕಾಡಿಸಿ ಪೀಡಿಸುವ ದೇವ ದೇವತೆಗಳು ಹಲವು. ದೇವರುಗಳ ಕುರಿತು ವಿಚಾರ ಮಾಡತೊಡಗಿದರೆ, ಅದೊಂದು ಅದ್ಭುತ ವಿಸ್ಮಯಕಾರಕ ಪ್ರಪಂಚ. ಕಲ್ಪನೆಗಳ ಹಿಂದೆ ಭಯ ಬೇಡಿಕೆ, ಆಸೆ ಕನಸು ನನಸು ಇತ್ಯಾದಿ ಈ ಕಾಲ್ಪನಿಕ ದೇವರುಗಳ ಪ್ರಪಂಚ ಆಗಿದೆ. ಹೀಗಾಗಿ ಕಾಲ್ಪನಿಕ ದೇವತೆಗಳು ಭಯದ ಕಾರಣಕರ್ತೃ ಆಗಿದ್ದಾರೆ. ಪ್ರತಿಯೊಂದು ದೇವರುಗಳ ಹಿಂದೆ ಒಂದಲ್ಲ ಒಂದು ಕಥೆ ಇಲ್ಲವೇ ಪುರಾಣ ಇದ್ದೇ ಇರುತ್ತದೆ. ಇಂತಹ ದೇವರುಗಳ ಉತ್ಸವಗಳೇ ಪೌರಾಣಿಕ ಜಾತ್ರೆಗಳೆಂದು ಕರೆಯಲಾಗಿದೆ. ಈ ಜಾತ್ರೆಗಳು ಜನಪದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಅಂತರಂಗ ಬಹಿರಂಗ ದರ್ಶನಕ್ಕೆ ಆಕರಗಳನ್ನು ಒದಗಿಸುತ್ತವೆ.

೩:೧:೧: ಬಲವಂತ ಶರಣರ ಜಾತ್ರೆ :

ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ನಗನೂರು ಗ್ರಾಮದಲ್ಲಿ ಶರಣಬಸವೇಶ್ವರ ಜಾತ್ರೆ ಚೈತ್ರ ಶುಕ್ಲ ಪ್ರತಿಪದೆಯಂದು ಪ್ರಾರಂಭವಾಗಿ ಕೃಷ್ಣ ಏಕಾದಶಿಯಂದು ರಥೋತ್ಸವ ಜರುಗಿ-ಬಸವ ಜಯಂತಿಗೆ ಮುಕ್ತಾಯವಾಗುತ್ತದೆ. ನಗನೂರಿನ ಈ ಜಾತ್ರೆಗೂ ಅರಳ ಗುಂಡಿಗೆ ಶರಣಬಸವೇಶ್ವರ ಜಾತ್ರೆಗೂ ಸಾಮ್ಯವಿದೆ. ಕಲ್ಬುರ್ಗಿ ಮತ್ತು ಅರಳ ಗುಂಡಿಗೆಯಲ್ಲಿ ಶರಣಬಸವನ ದೇವಾಲಯವಿದ್ದರೆ,

ನಗನೂರಿನಲ್ಲಿ ಶರಣಬಸವೇಶ್ವರ ಮಠ ಒಂದಿದೆ. ಯಾವುದಕ್ಕೂ ಹೋಲಿಕೆಯಾಗದ ಈ ಜಾತ್ರೆಯನ್ನು ಪ್ರಾರಂಭಿಸಿದವರು ಲಿಂಗೈಕ್ಯ ಬಲವಂತ ಶರಣನೆಂಬ ಲೀಲಾ-ಮೂರ್ತಿಗಳು.

ಶರಣಬಸವೇಶ್ವರ ಜೀವಿತ ಕಾಲದಲ್ಲಿಯೇ ಅದೇ ಅರಳಗುಂಡಿಗೆ ಗ್ರಾಮದ ಗಾಣಿಗರ ಜಾತಿಯ ಪೋಲಿಸ್‌ಗೌಡರ ಮನೆತನಕ್ಕೆ ಸೇರಿದ ಕೇತಪ್ಪಗೌಡ ಹಾಗೂ ಅವರ ಧರ್ಮಪತ್ನಿ ಗಂಗಮ್ಮ ಈರ್ವರಿಗೂ ಶರಣಬಸವೇಶ್ವರನಲ್ಲಿ ಅಪಾರ ಶ್ರದ್ಧೆ ಮತ್ತು ಭಕ್ತಿಯನ್ನಿಟ್ಟ ದಂಪತಿಗಳಾಗಿದ್ದರು. ಇವರಿಗೆ ಮಕ್ಕಳ ಭಾಗ್ಯವಿರಲಿಲ್ಲ. ಒಮ್ಮೆ ಶರಣಬಸವನು ನಿಮಗೆ ಇಬ್ಬರು ಗಂಡು ಮಕ್ಕಳನ್ನು ಶಿವನು ಕರುಣಿಸುತ್ತಾನೆ. ಅವನಲ್ಲಿ ಹಿರಿಯವನು ನನ್ನ ಮಗ ಅದರಂತೆ ಈ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳು ಹುಟ್ಟಿದರು. ಹಿರಿಯವನಿಗೆ ಬಲವಂತಪ್ಪ ಗೌಡನೆಂದೂ ನಾಮಕರಣ ಮಾಡಲಾಯಿತು. ಬಾಲ್ಯದಲ್ಲಿಯೇ ಬಲವಂತಪ್ಪಗೌಡರು ಸಂಸಾರ ಮತ್ತು ಇಹ ಭಾಗ್ಯಾದಿಗಳಲ್ಲಿ ವಿರಕ್ತಿ ಹೊಂದಿದ್ದರು. ಭಿಕ್ಷುಕರಿಗೆ ಮನೆಯಲ್ಲಿದ್ದ ಬಟ್ಟೆ, ಹಣ ಮೊದಲಾದವುಗಳನ್ನು ಧಾರಾಳವಾಗಿ ಕೊಡುತ್ತಿದ್ದರು. ಬಲವಂತಪ್ಪ ಗೌಡನ ಪ್ರವೃತ್ತಿಯನ್ನು ಕಂಡ ಅವರ ತಂದೆ ಕೇತಪ್ಪಗೌಡರು ಅವರನ್ನು ಮನೆಯಿಂದ ಹೊರಗೆ ಅಟ್ಟಿದರು.

ಶರಣಬಸವೇಶ್ವರರು ಅಂದು ಪೋಲಿಸ್‌ಗೌಡರ ದಂಪತಿಗಳಿಗೆ ಹೇಳಿದಂತೆ ಬಲವಂತಪ್ಪ ಗೌಡರು ಶರಣರ ದತ್ತು ಮಗನಾಗಿ ದಾಸೋಹವನ್ನು ಪ್ರಾರಂಭಿಸಿದರು. ಒಂದು ದಿನ ಬೇಸಿಗೆಯಲ್ಲಿ ನಾಲ್ಕಾರು ಜನರು ಗುಡಿಗೆ ಬಂದು ನೀರು ಕೇಳಿದರು. ಆಗ ಗೌಡರಲ್ಲಿ ಕೇವಲ ಒಂದು ತಂಬಿಗೆ ನೀರು ಮಾತ್ರ ಇತ್ತು. ಗೌಡರು ಇಷ್ಟು ನೀರಿನಿಂದ ಅತಿಥಿಗಳ ತೃಪ್ತಿಯಾಗಲಾರದೆಂದು ಬಗೆದು ಕುಳಿತ ಸ್ಥಳದಲ್ಲಿ ಒಂದು ತಗ್ಗು ತೆಗೆದು ಅದರಲ್ಲಿ ಆ ತಂಬಿಗೆ ನೀರನ್ನು ಹಾಕಿ ಪುನಃ ಅದೇ ನೀರನ್ನು ಅನೇಕ ಸಲ ತಂಬಿಗೆ ತುಂಬಿ ದಾರಿಕಾರರಿಗೆ ಮನದಣಿಯುವಂತೆ ಕೊಟ್ಟರು. ಈ ಸಮಾಚಾರವನ್ನು ಗ್ರಾಮದಲ್ಲಿ ಹರಡಿ ಅಂದಿನಿಂದ ಬಲವಂತಪ್ಪ ಶರಣರೆಂಬ ಹೆಸರಿನಿಂದ ಜನರು ಕರೆಯತೊಡಗಿದರು. ದಾಸೋಹ ಕಾರ್ಯ ಸುವ್ಯವಸ್ಥಿತವಾಗಿ ನಡೆಯತೊಡಗಿತು. ಶರಣಬಸವನ ತಾಯಿಯು ತವರೂರಾದ ಗೋರವ ಗುಡಿಗೆ ಬಲವಂತ ಶರಣರು ಹೋಗಿ ಶರಣಬಸವನ ಮಠ ಕಟ್ಟಿಸಿ ದಾಸೋಹ ಮತ್ತು ರಥೋತ್ಸವವನ್ನು ಪ್ರಾರಂಭಿಸಿದರು. ಅಲ್ಲಿ ಇವರು ಉಪಯೋಗಿಸಿದ ಗಾದಿ ತಲೆದಿಂಬು, ತೆಕ್ಕೆಗಳು ಇನ್ನೂ 'ಬಸಲಿಂಗಪ್ಪ ಸಾಲಕ್ಕಿ' ಇವರ ಮನೆಯಲ್ಲಿ ಪೂಜೆಗೊಳ್ಳುತ್ತಲಿವೆ. ದಿನೇ ದಿನೇ ಇವರ ಕೀರ್ತಿ ಕಲುಬುರ್ಗಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಪಸರಿಸತೊಡಗಿತು. ಶರಣಬಸವನ ಮಠಗಳನ್ನು ಸ್ಥಾಪಿಸಬೇಕೆಂಬ

ಹಂಬಲದಿಂದ ಶರಣರು ದೇಶ ಪರ್ಯಟನೆ ಪ್ರಾರಂಭಿಸಿದರು. ನೆಲೋಗಿ ಹಳ್ಳಿಯ ಮೋದಿ ಸಾಹುಕಾರರ ಹತ್ತಿರ ಶರಣಬಸವೇಶ್ವರರ ದಾಸೋಹ ಬಾಕಿಯನ್ನು ತಾವೇ ಯಾವ ಪಟ್ಟಿ ಇಡಲಾರದೆ ಲೆಕ್ಕ ಮಾಡಿಕೊಟ್ಟರಂತೆ. ಲೀಲಾ–ಮೂರ್ತಿಗಳಾದ ಶರಣರು ಗ್ರಾಮಗಳನ್ನು ಅಲೆಯುತ್ತಾ ಸುರಪೂರ ತಾಲ್ಲೂಕಿನ ನಗನೂರು ಗ್ರಾಮಕ್ಕೆ ಬಂದು ಅಲ್ಲಿಯ ಗುರುಲಿಂಗ ಶಿವಾಚಾರ್ಯರ ದರ್ಶನ ಪಡೆದರು. ಈರ್ವರೂ ಒಮ್ಮೆ ತಾಳಿಕೋಟೆಗೆ ಹೋದಾಗ ಅಲ್ಲಿಗೆ ಒಬ್ಬ ತಪಸ್ವಿಗಳು ಆಗಮಿಸಿದರು. ಮಾತು ಮಾತಿನಲ್ಲಿಯೇ ವಾದವೇರ್ಪಟ್ಟು ಪಂದ್ಯಕ್ಕೆ ಬಂದಿತು. ತಪಸ್ವಿಯು ಸೊಪ್ಪೆಯ ಬಣಮೆಯ ಮೇಲೆ ಕುಳಿತು ಬಣಮೆಗೆ ಬೆಂಕಿ ಹಚ್ಚಿದರೆ ಸುಟ್ಟು ಹೋಗಬಾರದು ಎಂದು ಹೇಳಲು ಬಲವಂತ ಶರಣರು ಒಂದು ಸೊಪ್ಪೆಯ ಬಣಮೆಯ ಮೇಲೆ ಗುರುಲಿಂಗ ಶಿವಾಚಾರ್ಯರನ್ನು ಕುಳ್ಳಿರಿಸಿ ತಮ್ಮ ಹಸ್ತದಿಂದಲೇ ಬಣಮಗೆ ಬೆಂಕಿ ಹಚ್ಚಿದರು. ಬಣಮೆ ಸುಟ್ಟು ಬೂದಿಯಾಯಿತು. ಆದರೆ ಗುರುಲಿಂಗ ಶಿವಾಚಾರ್ಯರು ಶಿವಧ್ಯಾನದಲ್ಲಿ ಜೀವಂತ ಕುಳಿತಿದ್ದರು. ಈ ಪವಾಡವನ್ನು ಶರಣರು ಮಾಡಿದ್ದರಿಂದ ಗುರುಲಿಂಗ ಶಿವಾಚಾರ್ಯರಿಗೆ ಬೆಳ್ಳಿಯ ಕಹಳೆ ಮತ್ತು ಬಿರುದುಗಳನ್ನು ಕೊಟ್ಟರು. ಅಲ್ಲಿಂದ ಬಾಲೆಬೆಂಚಿ ಗ್ರಾಮಕ್ಕೆ ಬಂದು ಮಲ್ಲಿಕಾರ್ಜುನನ ಗುಡಿಯಲ್ಲಿದ್ದುಕೊಂಡು ಶರಣರು ದಾಸೋಹವನ್ನು ಪ್ರಾರಂಭಿಸಿ ರಥೋತ್ಸವವನ್ನು ಏರ್ಪಡಿಸಿದರು. ಕೆಲ ಕಾಲದ ನಂತರ ದಾಸೋಹವು ನಿಂತು ಹೋಯಿತು. ಶರಣರು ಬೇರೆ ಕಡೆಗೆ ಹೋಗಬೇಕೆಂದು ನಿಶ್ಚಯಿಸಿ ಮೂರು ಗ್ರಾಮಗಳ ಹೆಸರುಗಳನ್ನು ಚೀಟಿಯಲ್ಲಿ ಬರೆದು ಹಾಕಿ ಅದೇ ಗ್ರಾಮದ ಹೂಳಯ್ಯನ ಮಗ ಮಲಿಕಯ್ಯನಿಂದ ಚೀಟಿಯನ್ನು ಎತ್ತಿಸಲು ನಗನೂರು ಗ್ರಾಮದ ಹೆಸರು ಬಂದಿತು.

ಅಲ್ಲಿಯ ಭಕ್ತರು ವಾದ್ಯಗಳಿಂದ ಜಯಘೋಷಣೆ ಹಾಕುತ್ತ ಶರಣರನ್ನು ಮೆರವಣಿಗೆಯೊಂದಿಗೆ ನಗನೂರು ಗ್ರಾಮಕ್ಕೆ ಕರೆತಂದು ಶಿವಪ್ಪಯ್ಯನ ಗವಿಯಲ್ಲಿ ವಾಸಿಸಲು ವ್ಯವಸ್ಥೆ ಮಾಡಿದರು. ಶರಣರ ಮಾತಿನಂತೆ ನಗನೂರು ಗ್ರಾಮದ ಜನರು ಮನೆಗೊಂದು ಹಂಚಿನ ಮೇಲಿನ ಮೊದಲಿನ ರೊಟ್ಟಿಯನ್ನು ದಾಸೋಹಕ್ಕೆ ಕೊಡಲು ಪ್ರಾರಂಭಿಸಿದರು. ಇನ್ನು ಈ ಪದ್ಧತಿ ನಗನೂರು ಗ್ರಾಮದಲ್ಲಿದೆ. ಶರಣರ ಪೂಜೆ ದಾಸೋಹಗಳು ನಿರಂತರವಾಗಿ ನಡೆದವು. ಗವಿಯಲ್ಲಿ ಸಜೀವ ಸಮಾಧಿ ತೆಗೆದುಕೊಂಡು ಶಿವಪ್ಪಯ್ಯನವರು ಶರಣರಿಗೆ ಶಿವಪೂಜೆಯಲ್ಲಿದ್ದು ದರ್ಶನ ಕೊಟ್ಟರು.

ಹಳ್ಳಿಯ ಜನರ ಸಲಹೆಯಂತೆ ಶರಣರು ಶಿವಪ್ಪಯ್ಯನ ಗವಿಯನ್ನು ಬಿಟ್ಟು ಗ್ರಾಮದ ಸ್ಮಶಾನದಲ್ಲಿ ಗುಡಿಸಲು ಹಾಕಿಕೊಂಡು ಅಲ್ಲಿ ತಮ್ಮ ಲಿಂಗಾರ್ಚನೆ ಮತ್ತು

ದಾಸೋಹ ಕಾಯಕವನ್ನು ಪ್ರಾರಂಭಿಸಿದರು. ಕೆಲಕಾಲ ನಂತರ ಶರಣರ ಅಪ್ಪಣೆಯಂತೆ ಭೋಜಪ್ಪಗೌಡರು ಮತ್ತು ಬಸಣ್ಣ ದೇಶಪಾಂಡೆಯವರು ಸಮಸ್ತ ಹಳ್ಳಿಯ ಭಕ್ತರ ಸಹಾಯದಿಂದ ಗುಡಿಸಲು ಹಾಕಿದ ಸ್ಥಳದಲ್ಲಿ ಮಠವನ್ನು ಕಟ್ಟಿದರು. ಅದಕ್ಕೆ 'ಶರಣಬಸವೇಶ್ವರ ಮಠವೆಂದು' ನಾಮಕರಣ ಮಾಡಿದರು. ಗಂಗವ್ವ ಮಾಳಪ್ಪ ಎಂಬುವವರಿಗೆ ಒಂದು ಕುಳಭಾನಕ್ಕೆ ಒಬ್ಬ ಪುತ್ರನನ್ನು ಬಲವಂತ ಶರಣರು ಕರುಣಿಸಿದರು. ಅವನೇ ಪ್ರಸಿದ್ಧ ಕರೆಪ್ಪ ಪೂಜಾರಿ. ಶರಣಬಸವೇಶ್ವರರು ಸ್ವಾತಿಯ ಹೊನ್ನಿಗೆ ಒಂದು ಸಂತಾನ ಕೊಟ್ಟರೆ ಅವರ ದತ್ತು ಪುತ್ರ, ಬಲವಂತ ಶರಣರು ಸಾವಿರ ಕುಳ್ಳಿಗೆ ಒಂದು ಸಂತಾನ ಕೊಟ್ಟರು. ಈ ಶರಣನು ಮನನೊಂದು ನುಡಿದ ಮಾತಿಗೆ ನಗನೂರಿನ ಮಡಿಪತಿ ರಾಯರ ಮನೆತನ ರಾಡಿಯವರ ಮನೆತನ ಮತ್ತು ಅಪ್ಪಯ್ಯನ ಮನೆತನಗಳಿಗೆ ಪುತ್ರ ಸಂತಾನ ಇಲ್ಲದಾಗಿದೆ.

ದಿನದಿನಕ್ಕೆ ಶರಣರ ಕೀರ್ತಿ ಹೆಚ್ಚುತ್ತಾ ಹೋದಂತೆ ಮಠಕ್ಕೆ ಬರುವ ಭಕ್ತರ ಸಂಖ್ಯೆ ಜಾಸ್ತಿಯಾಯಿತು. ಶರಣರು ಬಸವೇಶ್ವರರ ಪುರಾಣ, ಪ್ರವಚನ ಹಾಗೂ ರಥೋತ್ಸವವನ್ನು ಸ್ವಯಂ ಪ್ರೇರಣೆಯಂತೆ ಮತ್ತು ಸೇವೆಯಿಂದ ಪ್ರಾರಂಭಿಸಿದರು. ಅನ್ನ ಸಂತರ್ಪಣೆಗೆ ಆರು ಕ್ವಿಂಟಲ್ ಅಡುಗೆಯನ್ನು ಖಾಂಡ ಮಾಡಲಾಯಿತು. ಆಮ್ರ ಸಾರು ಅಥವಾ ಸಾಂಬಾರಕ್ಕೆ ಉಪ್ಪು ಇರಲಿಲ್ಲ. ಆಗ ಶರಣರು ಇನ್ನೂ ಉಪ್ಪಿಲ್ಲದೆ ಆಮ್ರವನ್ನು ಸಿದ್ಧಪಡಿಸಿದರೆಂದು ಪುರುಷವಾಣಿಯಿಂದ ಹೇಳಲು ಹಾಗೆಯೇ ಮಾಡಲಾಯಿತು. ಜನರು ಆಮ್ರದಲ್ಲಿ ಉಪ್ಪಿನ ರುಚಿಕಂಡು ಬೆರಗಾದರು. ಇಂದಿನವರೆಗೂ ಈ ಜಾತ್ರೆಯ ಖಾಂಡಿನಲ್ಲಿ ಆಮ್ರಕ್ಕೆ ಉಪ್ಪನ್ನು ಹಾಕವುದಿಲ್ಲ. ಇದು ಶರಣರ ಅಂದು ಮಾಡಿದ ಜೀವಂತ ಪವಾಡವಾಗಿದೆ. ತಮ್ಮ ಜೀವಿತ ಕಾಲದಲ್ಲಿ ಒಮ್ಮೆ ಶರಣರು ಲಿಂಗ ಮತ್ತು ಸರ್ಪಗಳೆರಡು ಮಾಡದ ಮುಂದಿನ ಹುತ್ತಿನಲ್ಲಿವೆ. ಎಂದು ಹೇಳಲು ಹುತ್ತನ್ನು ಜನರು ಅಗಿಯಲು ಅಲ್ಲಿ ಒಳ್ಳೆ ಲಿಂಗಕ್ಕೆ ಸರ್ಪ ಸುತ್ತಿಕೊಂಡಿರುವುದನ್ನು ಕಂಡರು. ಈಗಲೂ ಸಹ ಈ ಹುತ್ತ ಮತ್ತು ಲಿಂಗಗಳು ಮಠದ ಮುಂಭಾಗದಲ್ಲಿದ್ದು ಪೂಜೆಗೊಳ್ಳುತ್ತಲಿವೆ.

ಶರಣರು ತಮ್ಮ ಅಂತಿಮ ದಿನಗಳಲ್ಲಿ ನನ್ನ ಸಮಾಧಿ ಅಗಿಯುವಾಗ ಅದರ ಆಳದಲ್ಲಿ ಒಂದು ರುಂಡದ ಶಿಲಾ ವಿಗ್ರಹ ಸಿಗುತ್ತದೆ. ಅದೇ ನನ್ನ ವಿಗ್ರಹ ಎಂದು ಹೇಳಿದರು. ಶರಣರು ಇಹ ಲೋಕವನ್ನು ತ್ಯಜಿಸಿದಾಗ ಅವರ ಪಾರ್ಥಿವ ಶರೀರದ ಅಂತಿಮ ಸಂಸ್ಕಾರಕ್ಕಾಗಿ ಮಠದ ಮುಂದೆ ಸಮಾಧಿ ಅಗಿಯಲು ರುಂಡವು ಹಾಗೂ ವಿಗ್ರಹವು ಸಿಕ್ಕಿತ್ತು. ಅದನ್ನೆ ಬಲವಂತ ಶರಣರ ಸಮಾಧಿಯು

ಮೇಲೆ ಸ್ಥಾಪಿಸಿ ಈಗಲೂ ಪೂಜಿಸುತ್ತಾರೆ. ಇದೊಂದು ಜಾಗೃತ ಸಮಾಧಿಯಾಗಿ ಭಕ್ತರ ಬೇಡಿಕೆಗಳನ್ನು ಸಫಲಗೊಳಿಸುತ್ತದೆ.

ಕಲ್ಬುರ್ಗಿ ಜಿಲ್ಲೆಯ ಶರಣಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಈ ಜಾತ್ರೆಯನ್ನು ಶರಣಬಸವೇಶ್ವರ ಗೋತ್ರದ ಸಾಲೋಕ್ಯವಂಶದ ಶ್ರೀ ಆದಪ್ಪ ಶರಣರು ಮತ್ತು ಅವರ ತಮ್ಮನಾದ ಶ್ರೀ ಶರಣಪ್ಪ ಶರಣರು ಮುಂತಾದ ಭಕ್ತರ ಸಹಕಾರದಿಂದಲೂ ವಿವಿಧ ಮತ ಪಂಗಡದ ಜನರು ಭೇದಭಾವ ಮರೆತು ನಡೆಸುತ್ತಾರೆ.

೩:೧:೨: ಬಕ್ಕಪ್ರಭು ಜಾತ್ರೆ :

"ಬೀದರ್ ಜಿಲ್ಲೆ ಸಾಧು ಸಂತರ ಶರಣರ, ಶರಣೆಯರ ಸಿದ್ಧಿ ಪುರಷರ ಕೇಂದ್ರ ಸ್ಥಳವಾಗಿದೆ. ಭಕ್ತಿಯ ಕಿಚ್ಚು ಅನುಭಾವದ ಅಚ್ಚು ಇಲ್ಲಿಯ ನೆಲದ ಗುಣವಾಗಿದೆ". (ಲಠ್ಠೆ ಮತ್ತು ರೆಡ್ಡಿ : ೧೯೮೭:೬) ಹನ್ನೆರಡನೆಯ ಶತಮಾನದ ಬಸವಾದಿ ಶರಣರಿಂದ ಈ ನಾಡು ಪುಣ್ಯದ ಬೀಡಾಗಿದೆ. ಇಲ್ಲಿ ಆಗಿ ಹೋದ ಹತ್ತಾರು ಶಿವಶರಣರಲ್ಲಿ ಸಿದ್ದಿಪುರುಷ ಶಿವಯೋಗಿ ಬಕ್ಕಪ್ರಭು ಒಬ್ಬರು.

ಹುಮನಾಬಾದದಿಂದ ಸುಮಾರು ೪೩ ಕಿ.ಮಿ. ದೂರದಲ್ಲಿರುವ ಕರಕನಹಳ್ಳಿ. ಇದು ಬಕ್ಕಪ್ರಭು ಎಂಬ ಶಿವಯೋಗಿಗಳು ವಾಸಿಸಿದ ಸ್ಥಾನ. 'ಗೊಟ್ಟಮಂ ಗೊಟ್ಟಿ' ಎಂಬಲ್ಲಿ ತಪಸ್ಸನ್ನು ಮಾಡಿದ ಈ ಮಹಾಮಹಿಮರು ಸರಳ ಜೀವಿಗಳು ಬ್ರಹ್ಮಜ್ಞಾನಿಗಳೂ ಆಗಿದ್ದರಂತೆ. ಮಾನವ ಪ್ರೇಮಿಗಳು ಹೌದು. ಇವರ ದಿವ್ಯ ಜೀವನ ಕುರಿತು ಹಲವಾರು ಜಾನಪದ ಹಾಡುಗಳಲ್ಲಿ ಭಕ್ತರ ಭಾವನೆಗಳು ಅಭಿವ್ಯಕ್ತಗೊಳಿಸುತ್ತವೆ. ಇಂತಹ ಮಹಾಪುರಷರ ಪಾದಸ್ಪರ್ಶದಿಂದ ಧನ್ಯವಾದ ಈ ನೆಲ ಕರಕನಳ್ಳಿ. ಇಲ್ಲಿ ಶ್ರೀಗಳ ಗದ್ದುಗೆ ಇದೆ. ಪ್ರತಿವರ್ಷ ಮಾರ್ಚ ತಿಂಗಳಲ್ಲಿ ವೈಭವದಿಂದ ಜಾತ್ರೆ ಜರುಗುತ್ತದೆ. ಜಾತ್ರೆ ಸಮಯದಲ್ಲಿ ಪೂಜೆ ನೈವೇದ್ಯ ಅರ್ಪಣೆ, ಟೆಂಗು ಕಾಯಿ, ಕರ್ಪೂರ ವಿನಿಯೋಗಿಸುವ ಪದ್ಧತಿ ಇಲ್ಲಿದೆ. ಜಾತ್ರೆಗೆ ಬಂದ ಭಕ್ತರಿಗಾಗಿ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಿರುತ್ತಾರೆ. ಶ್ರೀಗಳ ಕುರಿತು ಹಾಡುವರು. ಭಜನೆ ಮಾಡುವರು. ಮಂಗಳಾರುತಿ ಪದ ಹೇಳಿ ಜಾತ್ರೆ ಮುಗಿಸುವರು.

೩:೧:೩: ದಿಗಂಬರ ಮಾಣಕೇಶ್ವರ ಶಿವಯೋಗಿಗಳ ಜಾತ್ರೆ :

ಹಿಂದೂ ಮುಸ್ಲಿಂ ಬಾಂಧವರ ಮಧ್ಯ ಭಾವೈಕ್ಯದ ಕಹಳೆ ಮೊಳಗಿಸಿದವರಲ್ಲಿ ಶ್ರೀ ದಿಗಂಬರ ಮಾಣಕೇಶ್ವರ ಶಿವಯೋಗಿಗಳು ಅಗ್ರ ಪಂಕ್ತಿಗೆ ಸೇರುತ್ತಾರೆ. ಪ್ರತಿವರ್ಷ ಯುಗಾದಿ ಹಬ್ಬವಾದ ಏಳು ದಿವಸಕ್ಕೆ ಗುಲ್ಬರ್ಗಾದ ಕಲ್ಮೂಡದಲ್ಲಿ ಹಾಗೂ ಯುಗಾದಿ

ದಿನದಂದು ಹುಟ್ಟೂರಾದ ಬೀದರದ ಯರನಳ್ಳಿ ಗ್ರಾಮದಲ್ಲಿ ಅತಿ ವೈಭವದಿಂದ ಜಾತ್ರೆ ಜರುಗುತ್ತದೆ. ಯುಗಾದಿ ಹಬ್ಬದ ಮರುದಿನದಿಂದ ಏಳು ದಿವಸದವರೆಗೆ ಸಪ್ತಾಹ ಕಾರ್ಯಕ್ರಮ ಜರುಗುವುದು.

ಜಾತ್ರೆ ಸಮಯದಲ್ಲಿ ಲಿಂಗೈಕ್ಯ ಶ್ರೀ ದಿಗಂಬರ ಮಾಣಕೇಶ್ವರನ ಸಮಾಧಿಗೆ ದಿನದಲ್ಲಿ ಮೂರು ಬಾರಿ ಪೂಜೆ ಅಭಿಷೇಕ ನೆರವೇರುತ್ತದೆ. ದೂರದಿಂದ ಬಂದ ಭಕ್ತರು ಟೆಂಗು ಕಾಯಿ ಕರ್ಪೂರದಿಂದ ಅರ್ಚನೆಗೈದು ಒಂದು ರಾತ್ರಿ ಮಠದಲ್ಲಿಯೇ ಮಲುಗುವ ಪರಿಪಾಠವಿದೆ. ಸಂಜೆ ಹೊತ್ತಿನಲ್ಲಿ ಭಜನೆ ಮೇಳಗಳಿಂದ ಗೀಗೀ ಪದಗಳಿಂದ ಜಾತ್ರೆಗೆ ಮೆರುಗು ಬರುತ್ತದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯವರು ಮನೋರಂಜನೆ ಕಾರ್ಯಕ್ರಮಗಳಲ್ಲದೆ ಸರಕಾರದ ಯೋಜನೆಗಳು ಕುರಿತು ಮಾಹಿತಿ ಒದಗಿಸಿಕೊಡುತ್ತಾರೆ.

ಜಾತ್ರೆಗೆ ಬಂದ ಭಕ್ತರಿಗಾಗಿ ಖಾಂಡ (ಪಾಯಸ) ಹುಗ್ಗಿ ವ್ಯವಸ್ಥೆಯಿರುತ್ತದೆ, ಜಾತ್ರೆಯ ಕೊನೆಯ ದಿನದಂದು ಪಲ್ಲಕ್ಕಿ ಉತ್ಸವ ಜರುಗುವುದು. ಈ ಕಾರ್ಯಕ್ರಮದಲ್ಲಿ ಮೂರು ನಾಲ್ಕು ಸಾವಿರ ಭಕ್ತರು ಭಾಗವಹಿಸುತ್ತಾರೆ. ಶಿವಯೋಗಿಗಳ ಕುರಿತು ಜಯಘೋಷಗಳು ಆಕಾಶಕ್ಕೆ ಮುಟ್ಟುವಂತಿರುತ್ತವೆ. ಭಜನೆ ಮೇಳಗಳಿಂದ ವಾದ್ಯಗಳಿಂದ ಭಕ್ತರಿಂದ ಗದ್ದಲವೇ ಗದ್ದಲ ಕಂಪಿಸುತ್ತದೆ. ಹಲಗಿಯ ನಾದಕ್ಕೆ ಕುಣಿತ ಜೋರಾಗಿರುತ್ತದೆ. ಹಾಡುಗಳಿಂದ ಕಿವಿಗೆ ಇಂಪನ್ನು ತಂದು ಕೊಡುತ್ತವೆ.

ಶಿವಯೋಗಿಗಳ ಕಥೆ ಹೀಗಿದೆ. ಲಿಂಗೈಕ್ಯ ಶ್ರೀ ದಿಗಂಬರ ಮಾಣಿಕೇಶ್ವರ ಶಿವಯೋಗಿಗಳು, ಬೀದರಿನ ಯರನಳ್ಳಿ ಪಟೇಲ ವೀರಶೈವ ಸುಸಂಸ್ಕೃತ ಮನೆತನದಲ್ಲಿ (೧೯೦೧ ರಲ್ಲಿ) ಜನ್ಮ ತಾಳಿದರು. ಹದಿನೈದು ವರ್ಷದವರೆಗೆ ಹುಟ್ಟೂರಿನ ರೇವಣಸಿದ್ಧ ಮಠದಲ್ಲಿ ಪ್ರಾರ್ಥನೆ, ಪ್ರವಚನ ಮಾಡಿ, ಕೇಳಿ ಬ್ರಹ್ಮಾನಂದ ಗ್ರಂಥ ಓದಿ, ಕೊನೆಯಲ್ಲಿ ಬ್ರಹ್ಮಚಾರಿಗಳಾದರು.

ಮೂವತ್ತು ವರ್ಷ ದಕ್ಷಿಣ ಕಾಶಿಯೆಂದು ಹೆಸರುವಾಸಿಯಾದ ಯಾತ್ರಾ ಸ್ಥಳ ಬೀದರ ಜಿಲ್ಲೆಯ ಮೈಲಾರದಲ್ಲಿ ಯೋಗ ಸಿದ್ಧಿ ಸಾಧನೆ ಮಾಡಿ ತನ್ನ ಸ್ವಇಚ್ಛೆಯಂತೆ ಗುಲ್ಬರ್ಗದ 'ಸ್ವಂತ' ಹಳ್ಳಿಗೆ ಪ್ರಯಾಣ ಮಾಡಿ (೧೯೭೦) ಕಲ್ಮೂಡದಲ್ಲಿ ಲಿಂಗೈಕ್ಯರಾದರು. ಆ ವರ್ಷದ ಸ್ಮರಣಾರ್ಥವಾಗಿ ಭಕ್ತರು ಜಾತ್ರೆ ನಡೆಸಲು ಪ್ರಾರಂಭಿಸಿದರು. ಜಾತ್ರೆ ಸಾಮಾನ್ಯವಾದರೂ ಅಲ್ಲಿ ನಡೆಯುವ ಮನೋರಂಜನೆಗಳು ಸಾಂಸ್ಕೃತಿಕ ಕಲಾಮೇಳಗಳು, ಭಜನೆ ಪದಗಳು ಬಹು ಆಕರ್ಷಕವಾಗಿವೆ.

೩:೧:೪: ಕ್ಷೇಮಲಿಂಗೇಶ್ವರ ಜಾತ್ರೆ :

ಕಲುಬುರ್ಗಿಯಿಂದ ೩೫ ಕಿ.ಮಿ. ದೂರದಲ್ಲಿರುವ ಸರೋಣಾ ಗ್ರಾಮದ ಐತಿಹಾಸಿಕ ಸುಕ್ಷೇತ್ರದಲ್ಲಿ 'ಕ್ಷೇಮಲಿಂಗೇಶ್ವರ' ದೇವಾಲಯವಿದೆ. ಭಕ್ತರಿಗೆ ಕ್ಷೇಮ ಒದಗಿಸುವ ಲಿಂಗವೇ 'ಕ್ಷೇಮ ಲಿಂಗ' ಎಂದು ಹೇಳಲಾಗುತ್ತಿದೆ. ಅನೇಕ ದಂತ ಕತೆಗಳು ಕ್ಷೇಮಲಿಂಗದ ಕುರಿತು ಹುಟ್ಟಿಕೊಂಡಿವೆ. ಇಲ್ಲಿ ಗುಪ್ತ ತೀರ್ಥ, ನಾರಸಿಂಹತೀರ್ಥ ಲಕ್ಷ್ಮೀ ತೀರ್ಥ, ಸರ್ವತೀರ್ಥ, ಭವನಾಶತೀರ್ಥ, ರುದ್ರತೀರ್ಥ ಹಾಗೂ ದಾಮತೀರ್ಥಎಂಬ ತೀರ್ಥಗಳಿವೆ. ಮಳೆಗಾಲದಲ್ಲಿ ಇಡೀ ದೇವಾಲಯದ ಅರ್ಧಭಾಗ ನೀರಿನಲ್ಲಿ ಮುಳುಗಿರುತ್ತದೆ.

ದೇವರ ದರ್ಶನಾರ್ಥಿಗಳು ಕನಿಷ್ಟ ಆಳುದ್ದ ನೀರಿನಲ್ಲಿ ಹೋಗಲೇಬೇಕು. ಪ್ರತಿ ವರ್ಷ ಮೇ-ಜೂನ್ ತಿಂಗಳಲ್ಲಿ ಜಾತ್ರೆಯಾಗುತ್ತದೆ. ಜಾತ್ರಾಮಹೋತ್ಸವ ಸಮಯದಲ್ಲಿ ಹತ್ತಾರು ಬಗೆ ಬಗೆಯ ಆಚರಣೆ ಪದ್ಧತಿಗಳು ನಡೆಯುತ್ತವೆ. ನಾಲ್ಕು ದಿನ ಜರುಗುವ ಈ ಜಾತ್ರೆಯಲ್ಲಿ ಕರ್ನಾಟಕ ಮಹಾರಾಷ್ಟ್ರದ ಸಾವಿರಾರು ಭಕ್ತರು ಸೇರುತ್ತಾರೆ. ಉತ್ಸವದ ಪ್ರಥಮ ದಿನ ಉಚ್ಚಾಯಿ (ಸಣ್ಣ ತೇರು) ಮಹೋತ್ಸವ, ಮರುದಿನ ಸಂಜೆಗೆ ಶ್ರೀ ಹೇಮಲಿಂಗೇಶ್ವರ ರಥೋತ್ಸವ ಕಾರ್ಯಕ್ರಮವಿರುತ್ತದೆ. ಸಹಸ್ರಾರು ಭಕ್ತರು ದರ್ಶನ ಪಡೆಯುತ್ತಾರೆ. 'ನಮೋ-ನಮೋ' ಎಂದು ಹಾಡುತ್ತಿದ್ದರೇ ಕೆಲವರು ಶ್ರೀ ಗುರು ಕ್ಷೇಮಲಿಂಗೇಶ್ವರನಿಗೆ 'ಜಯವಾಗಲಿ' ಎಂದು ರಥೋತ್ಸವದ ಕಡೆಗೆ ಬಾಳೆ ಹಣ್ಣುಗಳು ಎಸೆಯುತ್ತಾರೆ. ಬಾಳೆಹಣ್ಣುಗಳ ಎಸೆತದ ಸವಡಿನಲ್ಲಿ ಆಕಾಶದ ಕಡೆಗೆ, ನೋಡಿದಾಗ ಹಕ್ಕಿಗಳು ಹಾರಾಡುತ್ತಿದ್ದಂತೆ ಕಾಣುತ್ತವೆ. ರಥದ ಕಡೆಗೆ ಎಸೆದ ಬಾಳೆಹಣ್ಣುಗಳು ತಿನ್ನಬೇಕು, ಪಡೆದುಕೊಳ್ಳಬೇಕೆಂಬ ಹಂಬಲದಿಂದ ಭಕ್ತರು ನಾ ಮುಂದು, ತಾ ಮುಂದೆಂದು, ನುಗ್ಗುತ್ತಿರುತ್ತಾರೆ. ರಥ ಗ್ರಾಮದ ಬೀದಿಗಳ ಕಡೆಗೆ ಸಾಗಿಸಿಕೊಂಡು ಹೋದ ನಂತರ ದೇವಾಲಯದಲ್ಲಿ ತಂದಿಡುತ್ತಾರೆ. ಇದಾದ ಮೇಲೆ ವಿದ್ವಾಂಸರಿಂದ, ಸ್ವಾಮಿಗಳಿಂದ, ಪೂಜ್ಯರಿಂದ, ಪಾಠ ಪ್ರವಚನ, ಆಶೀರ್ವಚನ ಭಜನೆ, ಆಮೇಲೆ ಜಾನಪದ ಕಲಾವಿದರಿಂದ ಗೀಗೀ ಪದ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವವು.

ಉತ್ಸವದ ಮೂರನೆ ದಿನದಂದು, ಮಧ್ಯಾಹ್ನ ೪ ಗಂಟೆ ಸುಮಾರಿಗೆ ಜಂಗಿ ಕುಸ್ತಿಗಳು ನಡೆಯುತ್ತವೆ. ಸುತ್ತ-ಮುತ್ತಲಿನ ಪ್ರಸಿದ್ಧ ಪೈಲ್ವಾನರು ಕುಸ್ತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಶಕ್ತಿ ಪ್ರದರ್ಶನ ಮಾಡುವರು. ಕುಸ್ತಿಯಲ್ಲಿ ಜಯಗಳಿಸಿದವರಿಗೆ ಜಾತ್ರೆ ಸಮಿತಿಯವರು ನಗದು ಬಹುಮಾನ ಅಥವಾ ಬೆಳ್ಳಿ ಕಡಗ ಕೊಡುವರು, ಅಂತಿಮ ದಿನದ ಜಾತ್ರೆಯಂದು ರಾತ್ರಿ ೮-೯ ಗಂಟೆ ಸುಮಾರಿಗೆ ಪಲ್ಲಕ್ಕಿ

ಕಾರ್ಯಕ್ರಮವಿರುತ್ತದೆ. ಸುಕ್ಷೇತ್ರದಿಂದ ಹೊರಟ ಪಲ್ಲಕ್ಕಿ ಶ್ರೀ ಮಹಾಂತೇಶ್ವರ ಮಠಕ್ಕೆ ತಲುಪಿ, ಮತ್ತೆ ಹಿಂದಕ್ಕೆ ತರುತ್ತಾರೆ. ಶ್ರಾವಣಮಾಸ ಪೂರ್ತಿ ಅಮವಾಸ್ಯೆ ಹುಣ್ಣಿಮೆ ದಿನಗಳಲ್ಲಿ ಭಜನೆ, ಕೀರ್ತನೆ ವಿಶೇಷ ಪೂಜೆ ಜರುಗುತ್ತದೆ. ಜಾತ್ರಾ ಸಮಯದಲ್ಲಿ ಭಕ್ತರಿಗಾಗಿ ಊಟದ (ಪಾಯಸ) ವ್ಯವಸ್ಥೆ ಮಾಡಿರುತ್ತಾರೆ.

೩:೧:೫: ಗುರುನಾನಕ ಜಾತ್ರೆ :

ಸಿಖ್ ಮತ ಪ್ರವರ್ತಕ ಗುರುನಾನಕ ಅವರ ಸಾನ್ನಿಧ್ಯದಿಂದ ಪುನೀತವೆನಿಸಿರುವ ಬೀದರಿನ ಗುರುನಾನಕ ಕ್ಷೇತ್ರ. 'ನಾನಕ ಝಿರಾ' ಎಂದೇ ಹೆಸರಾಗಿದೆ. ಗುರುನಾನಕರು ೧೫೧೧ರಲ್ಲಿ ತೀರ್ಥಯಾತ್ರೆ ಮತ್ತು ತತ್ವ ಪ್ರಚಾರಕ್ಕೆಂದು, ದಕ್ಷಿಣ ಭಾರತದ ಕಡೆ ಹೊರಟರು. ಅವರು ನಾಗಪುರ, ಓಂಕಾರೇಶ್ವರ, ನಾಂದೇಡ, ಭಾಗ್ಯನಗರ ಮಾರ್ಗವಾಗಿ ಬೀದರನ್ನು ತಲುಪಿದರು. ಬೀದರ ನಗರದ ಪಕ್ಕದಲ್ಲಿರುವ ಪ್ರಶಾಂತ ಸ್ಥಳವೊಂದನ್ನು ಕಂಡು ಬೀಡು ಬಿಟ್ಟರು. ನಾನಕರು ಅಲ್ಲಿದ್ದಾಗ ಆ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವ ಉಂಟಾಯಿತು. ಸ್ಥಳೀಯ ಜನರ ನೀರಿನ ಕಷ್ಟವನ್ನು ಕಂಡು ಗುರುನಾನಕರು ಕನಿಕರ ಪಟ್ಟರು. ಬೆಟ್ಟದ ತುದಿಯನ್ನು ಕಾಲಿನಿಂದ ಮೆಟ್ಟಿ ಸಿಹಿ ನೀರು ಹೊರ ಹರಿಯುವಂತೆ ಮಾಡಿದರು. ಇದೇ 'ನಾನಕ್ ಝಿಲ್' ಎಂದು ಹೆಸರಾಯಿತೆನ್ನುವ ದಂತ ಕಥೆ ಇದೆ.

ನೀರಿನ ಝುರಿ ಮೊದಲಿನಿಂದಲೂ ಇತ್ತು. ಇದರ ಸುತ್ತಲೂ ಇದ್ದ ಹಸಿರಿನ ತಂಪಿನಿಂದ ನಾನಕರು ಆಕರ್ಷಿತರಾದರು. ಅವರು ಕೆಲ ಕಾಲ ಅಲ್ಲಿಯೇ ಉಳಿದು ಧರ್ಮೋಪದೇಶ ಮಾಡಿದರು.. ಅವರ ಸ್ಪರ್ಶ ಸಾನಿಧ್ಯದಿಂದ ಪವಿತ್ರಗೊಂಡ ಆ ಜಲಧಾರೆ 'ನಾನಕ್ ಝುರಾ ಸಾಹೇಬ' ಎಂದು ಖ್ಯಾತಿ ಪಡೆಯಿತು. ನಾನಕ್ ಝುರಾದ ನೀರು ರುಚಿಕರ ಅಷ್ಟೇ ಅಲ್ಲ, ಆರೋಗ್ಯಕರ ಕೂಡ. ಅಲ್ಲದೆ ಪವಿತ್ರ ಪ್ರೇಕ್ಷಣೀಯ ಸ್ಥಳ. ಅಲ್ಲೊಂದು ಗುರುದ್ವಾರವಿದೆ. ಅಲ್ಲಿಯೇ ಒಂದು ಪ್ರಬಂಧಕ ಸಮಿತಿಯ ಕಚೇರಿ ಇದೆ. ಪ್ರತಿವರ್ಷ ಗುರುನಾನಕರ ಹುಟ್ಟು ಹಬ್ಬವನ್ನು ಕಾರ್ತಿಕ ಪೂರ್ಣಿಮೆಯಂದು, ಮೂರು ದಿನಗಳ ಕಾಲ ಜಾತ್ರೋತ್ಸವ ಪ್ರಬಂಧಕ ಸಮಿತಿಯವರು ಏರ್ಪಡಿಸುತ್ತಾರೆ. ದೇಶದ ನಾನಾ ಕಡೆಗಳಿಂದ ಸಿಖ್‌ರು ಬರುತ್ತಾರೆ. ಗುರುದ್ವಾರದಲ್ಲಿ ಕೀರ್ತನೆ, ಸತ್ಸಂಗಗಳೂ, ಗುರು ಗ್ರಂಥ ಸಾಹೇಬ ಗ್ರಂಥದ ಅಖಂಡ ಪಠಣವೂ ನಡೆಯುತ್ತದೆ. ಅನ್ನ ಸಂತರ್ಪಣೆ ವ್ಯವಸ್ಥೆಯೂ ಇದೆ.

ಜಾತ್ರೆ ದಿನಗಳಲ್ಲಿ ಗುರುದ್ವಾರವನ್ನು ವಿದ್ಯುತ್ ದೀಪಗಳಿಂದ ಅಲಂಕರಿಸುತ್ತಾರೆ. ಹಗಲೂ ರಾತ್ರಿ ಭಜನೆ ನಡೆಯುತ್ತದೆ. ನಗರದಿಂದ ವೀರಶೈವರು, ಬ್ರಾಹ್ಮಣರು ಇನ್ನಿತರ ವರ್ಗದ ಜನರು ಗುರುನಾನಕರ ದರ್ಶನ ಪಡೆಯಲು ಗುರುದ್ವಾರಕ್ಕೆ

ಧಾವಿಸುತ್ತಾರೆ. ಗುರುದ್ವಾರದೊಳಗೆ ಕಾಲಿಡುವಾಗ ತಲೆಯ ಮೇಲೆ ಬಟ್ಟೆ ಹಾಕಿಕೊಳ್ಳಬೇಕೆಂಬ ಕಟ್ಟುನಿಟ್ಟಾದ ನಿಯಮ ಇದೆ.

ಉತ್ಸವದ ಕೊನೆಯ ದಿನ ಗುರುನಾನಕರ ಹೆಸರಿನ ಪೀಠಗಳೊಂದಿಗೆ ಸಂಜೆ ಹೊತ್ತಿನಲ್ಲಿ ಮೆರವಣಿಗೆ ಮಾಡುತ್ತಾರೆ. ಸಹಸ್ರಾರು ಸಿಖ್‌ರು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ. ಖಡ್ಗಗಳು ತಿರುವುತ್ತಾರೆ. ಕುದುರೆಯ ಮೇಲೆ ಕುಳಿತು ಕುಣಿಸುತ್ತಾರೆ. ಭಜನೆ ಮಾಡುತ್ತಾರೆ. ಹಲಗೆ ತಾಸ್ಯಾ, ಬ್ಯಾಂಡುಗಳಿಂದ ಕಿವಿಗಳು ಕಿರ್ರ್ ಎನ್ನುತ್ತವೆ. ವಾದ್ಯಗಳ ಗತ್ತಿಗೆ ಕುಣಿಯುತ್ತಾರೆ. ರಂಗಿನಿಂದ ಕೂಡಿದ ಸಿಖ್ ಬೆಡಗಿಯ ಕಡೆ ಪ್ರೇಕ್ಷಕರ ಕಣ್ಣುಗಳ ನೋಟ ತಾಕಿರುತ್ತವೆ. ಚಪ್ಪಾಳೆ ಹಾಕುತ್ತಾರೆ. ಜಾನಪದ ಕಲಾ ಮೇಳದವರು ಭಾಗವಹಿಸುತ್ತಾರೆ. ಗುರುನಾನಕರ 'ಜಯಘೋಷಗಳು' ಮೊಳಗುತ್ತವೆ. ರಾತ್ರಿ ೧೦-೧೧ ಗಂಟೆ ಸುಮಾರಿಗೆ ಜಾತ್ರೆ ಮುಕ್ತಾಯವಾಗುತ್ತದೆ. ಯಾವುದೇ ಅಹಿತಕರ ಘಟನೆ ಜರುಗದಂತೆ, ಪೋಲಿಸ್ ಇಲಾಖೆಯವರು ತೀವ್ರ ಕಾಳಜಿ ವಹಿಸುತ್ತಾರೆ. ಗುರುನಾನಕರ ಉತ್ಸವದಲ್ಲಿ ಪಾಲ್ಗೊಂಡ ಪ್ರತಿಯೊಬ್ಬನಿಗೂ ಪಂಜಾಬಿ ಸಂಸ್ಕೃತಿಯ ಅರಿವು ಹುಟ್ಟುವುದಲ್ಲಿ ಅನುಮಾನವೇ ಇಲ್ಲ.

೩:೧:೬: ಶಿವಲಿಂಗೇಶ್ವರ ಜಾತ್ರೆ :

ಮಾಗಿಯು ಚಳಿಯು ಕಳೆದು ಮಾರ್ಚ್ ಏಪ್ರಿಲ್ ತಿಂಗಳು ಪ್ರಾರಂಭವಾಗುತ್ತಿದ್ದಂತೆ, ಹೈದ್ರಾಬಾದ ಕರ್ನಾಟಕದಲ್ಲಿ ಹಳ್ಳಿಗರು ಸುಗ್ಗಿಯ ಹಿಗ್ಗನ್ನು ಅನುಭವಿಸುತ್ತಿರುತ್ತಾರೆ. ಬೇಸಿಗೆ ಕಾಲಿಡುತ್ತದೆ. ಹೆಚ್ಚಾಗಿ ದೇವರ ಜಾತ್ರೆಗಳು ಜರುಗುವುದು ಈ ವೇಳೆಯಲ್ಲಿಯೇ, ಕಲಬುರ್ಗಿ ತಾಲ್ಲೂಕಿನ ಶ್ರೀ ಕ್ಷೇತ್ರ ಹಿರೇಸಾವಳಗಿ ಶ್ರೀ ಶಿವಲಿಂಗೇಶ್ವರ ಜಾತ್ರೆ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ.

ಮಹಾ ತಪೋನಿಧಿಗಳು ತತ್ವಜ್ಞರೂ ಮಹಿಮಾ ಪುರುಷರೂ ಆದ ಸಾವಳಗಿ ಶ್ರೀ ಶಿವಲಿಂಗೇಶ್ವರ ತಮ್ಮ ಶಿವಯೋಗ ಸಾಮರ್ಥ್ಯದಿಂದ ಕಾರಣಿಕ ಪುರುಷರಾಗಿ, ಅನಂತ ಪವಾಡಗಳನ್ನು ಮೆರೆದು ಭಕ್ತರನ್ನು ಉದ್ಧರಿಸಿ ವಿಭೂತಿ ಪುರುಷರಾಗಿ ಈಗಲೂ ನಿತ್ಯ ಪವಾಡಗಳನ್ನು ಮೆರೆಯಿಸುತ್ತಿರುವುದು-ಪ್ರತ್ಯಕ್ಷ ಅನುಭವದ ಸಂಗತಿಯಾಗಿದೆ. ಹೈದ್ರಾಬಾದ ಕರ್ನಾಟಕದ ಮುಖ್ಯ ಸ್ಥಳಗಳಲ್ಲಿ ಭಕ್ತಾಧಿಗಳು ಅವರ ಸ್ಮರಣಾರ್ಥವಾಗಿ ಕಟ್ಟಿದ ಮಠಗಳು ಇಂದು ಪೂಜ್ಯ ಕ್ಷೇತ್ರಗಳಾಗಿ ಕಂಗೊಳಿಸುತ್ತಲಿವೆ. ಇಂತಹ ಮಹಿಮಾ ಪುರುಷರ ಸ್ಮರಣಾರ್ಥ ಜರುಗುವ ಈ ಯಾತ್ರಾ ಮಹೋತ್ಸವಕ್ಕೆ ಸುತ್ತ ಮುತ್ತಲಿನ ಗ್ರಾಮದ ಜನರು ಆಗಮಿಸಿ ಶ್ರೀ ಶಿವಲಿಂಗೇಶ್ವರರ ದರ್ಶನಾಶೀರ್ವಾದಗಳನ್ನು ಪಡೆದು ಕೃತಾರ್ಥರಾಗುತ್ತಾರೆ.

ಮಠದ ಸ್ವಾಮಿಗಳಾದ ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ದಿವ್ಯ ನೇತೃತ್ವದಲ್ಲಿ ೫ ದಿನಗಳ ಕಾಲ ಜಾತ್ರೆ ನೆರವೇರುತ್ತದೆ. ಜಾತ್ರೆ ಪ್ರಾರಂಭವಾದ ಮೊದಲನೆ ದಿವಸ ಪಲ್ಲಕ್ಕಿ ಮೆರವಣಿಗೆ ಶ್ರೀ ಕಲ್ಯಾಣ ಕಟ್ಟೆಯ ದರ್ಶನ ಸಮಾರಂಭ ಜರುಗುವುದು. ಮರುದಿವಸ ಗಣಾರಾಧನೆ ಮತ್ತು ವಸ್ತ್ರದಾನ ಉಚ್ಚಾಯ ಮಹೋತ್ಸವ ನಡೆಸುವರು. ಜಾತ್ರೆಯ ನಾಲ್ಕನೆಯ ದಿವಸ ಸಂಜೆ ೪ ಗಂಟೆಗೆ ಮಠದ ಅಧಿಕಾರಿಗಳಾದ ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು ಪಲ್ಲಕ್ಕಿಯಲ್ಲಿ ಆರೋಢ ರಥದ ಸ್ಥಳಕ್ಕೆ ತಲುಪಿದ ಕೂಡಲೇ ರಥ (ತೇರು) ಸಾಗುವುದು. ಸಾವಿರಾರು ಭಕ್ತಾದಿಗಳು ರಥದ ದರ್ಶನ ಪಡೆಯುತ್ತಾ ಜಯಕಾರ ಹಾಕುತ್ತಾ ಮುನ್ನಡೆಯುತ್ತಾರೆ. ಬಾಳೆಹಣ್ಣು ಅಳ್ಳು ಖಾರಿಖ ಮುಂತಾದವುಗಳು ರಥದ ಮೇಲೆ ಹಾರಿಸುವರು. ಹಾಡುಗಳು ಹಾಡುವರು. ಭಜನೆ ಮಾಡುವರು. ಕುಣಿದಾಡುವರು. ಪುರುವಂತರು ಒಡಬುಗಳು ಓದುತ್ತಾ ಕುಣಿವರು.

ಜಾತ್ರೆ ಕೊನೆಯ ದಿವಸದಂದು, ಸುಪ್ರಸಿದ್ಧ ಜಂಗಿ ಪೈಲವಾನರ ಕುಸ್ತಿಗಳು ನಡೆಸುತ್ತಾರೆ. ಕುಸ್ತಿಯಲ್ಲಿ ಗೆದ್ದವರಿಗೆ ನಗದು ಬಹುಮಾನ, ಬೆಳ್ಳಿಕಡಗ ಕೊಡುವ ಪದ್ಧತಿ ಇದೆ. ಜಾತ್ರ ಪ್ರಾರಂಭ ದಿನದಂದು ವಿದ್ವಾಂಸರ ಪ್ರವಚನಗಳು, ಸುಪ್ರಸಿದ್ಧ ವ್ಯಕ್ತಿಗಳಿಂದ ಭಜನೆ, ಕೀರ್ತನೆ, ಗಾಯನ ಗೀಗೀ ಪದಗಳು ಮೊದಲಾದ ಸಾಂಸ್ಕೃತಿಕ ಮನೋರಂಜನೆಯ ಕಾರ್ಯಕ್ರಮಗಳು ಭಕ್ತಾದಿಗಳಿಗೆ ತಲ್ಲಣಗೊಳಿಸುತ್ತವೆ.

೩:೧:೭: ಕರಿಯಪ್ಪ ಶಿವಯೋಗಿಗಳ ಜಾತ್ರೆ :

ರಾಯಚೂರಿನಿಂದ ೧೭ ಕಿ.ಮೀ. ಅಂತರದಲ್ಲಿರುವ ಶ್ರೀ ಕರಿಯಪ್ಪ ಶಿವಯೋಗಿಗಳ (ಗದ್ದುಗೆ) ದೇವಾಲಯ 'ಕಲ್ಮಲಾ' ಎಂಬ ಹಳ್ಳಿಯಲ್ಲಿದೆ. ಅರವತ್ತು ವರ್ಷಗಳಿಂದ ಮಹಿಮಾ ಪೂರ್ಣ ಪರಂಪರೆಯುಳ್ಳ ಒಂದು ಪುಣ್ಯಕ್ಷೇತ್ರ, "ಅದ್ವೈತ"ದಲ್ಲಿ ಆಚಾರ–ವಿಚಾರ ಜೀವನದಲ್ಲಿ ಅಳವಡಿಸಿಕೊಂಡು ಪವಾಡ–ಸಿದ್ಧಿಪುರುಷ ಲಿಂಗೈಕ್ಯ ಶ್ರೀ ಕರಿಯಪ್ಪನವರು ೧೨೦ ವರ್ಷಗಳ ಹಿಂದೆ ಇದರ ಗದ್ದುಗೆ ಮೇಲೆ ದೇವಾಲಯ ಕಟ್ಟಿಸಿದ್ದು ತಿಳಿದು ಬರುತ್ತದೆ. ಅರವತ್ತು ವರ್ಷಗಳಿಂದ ಜಾತ್ರೆ ನಡೆಯುತ್ತಿದೆ ಎಂದು ಹೇಳುತ್ತಾರೆ. (ಬೆಲ್ಲದ:೧೯೯೧:೭)

ಯಾರಿಗಾದರೂ ವಿಷ ಜಂತುಗಳು (ಹಾವು–ಚೇಳು) ಕಡಿದರೆ ಕರಿಯಪ್ಪ ತಾತನವರ ಹೆಸರು ಹೇಳಿದಾಕ್ಷಣ ವಿಷ ಇಳಿಯುತ್ತದೆ. ಇದು ಸತ್ಯ ಸಂಗತಿ ಎನ್ನಲಾಗಿದೆ. ಇಲ್ಲಿ ಪ್ರತಿ ದಿನ ಹತ್ತಾರು ಜನರು ವಿಷ ಜಂತು ಕಡಿಸಿಕೊಂಡವರು ಬರುತ್ತಾರೆ. ಯಾವುದೇ ಆಯುರ್ವೇದ ಔಷದ, ಆಲಪತಿಕ್, ಯುನಾನಿ, ಮಂತ್ರ–ತಂತ್ರ ನಡೆಯುವುದಿಲ್ಲ. ಕೇವಲ ಈ ಯೋಗಿಗಳ ಹೆಸರೇಳಿದರೆ ವಿಷ ಇಳಿಯುತ್ತದೆ. ಇವರ ಭಕ್ತಿಯ ಫಲವಾಗಿ ಪ್ರತಿ ನಿತ್ಯ ಟೆಂಗಿನ ಅರ್ಪಣೆ ನಡೆದಿರುತ್ತದೆ.

ಪ್ರತಿವರ್ಷ ಶ್ರಾವಣ ತಿಂಗಳಲ್ಲಿ ಒಂದು ತಿಂಗಳು ಉತ್ಸವ ನಡೆಯುತ್ತದೆ. ಪ್ರತಿದಿನ ಸಹಸ್ರಾರು ಭಕ್ತರು ಟೆಂಗಿನಕಾಯಿ ಅರ್ಪಿಸುತ್ತಾರೆ. ಒಂದು ಟೆಂಗಿನ ಕಾಯಿಗೆ ೫೦ ಪೈಸೆ ವಸೂಲು ಮಾಡುತ್ತಾರೆ. ಇದರಿಂದ ಒಂದು ಲಕ್ಷ ರೂ. ಉತ್ಪನ್ನವಿರುತ್ತದೆ. ಹುತ್ತಿಗೆ ಹಾಲು ಹಾಕುವುದು. ಗದ್ದುಗೆಗೆ ಅಭಿಷೇಕ ಮಾಡುವುದು. ಪಲ್ಲಕ್ಕಿ, ಭಜನೆ ಕೀರ್ತನೆ, ಜರುಗಿಸುವುದು. ಮಕ್ಕಳಿಲ್ಲದವರಿಗೆ ಮಕ್ಕಳು ಕೊಡುತ್ತಾನೆಂಬ ನಂಬಿಕೆಯಿಂದ ಶ್ರಾವಣ ಸೋಮವಾರ ಸಹಸ್ರಾರು ಭಕ್ತರಲ್ಲಿಗೆ ಬರುತ್ತಾರೆ. ಬಂಜೆ, ಹೆಣ್ಣು ಮಕ್ಕಳು ಜಾತ್ರೆಯಲ್ಲಿ ಪಾಲ್ಗೊಳ್ಳುವುದರಿಂದ ಮಕ್ಕಳಾಗುತ್ತವೆಂಬ ನಂಬಿಕೆ ಇದೆ. ಜಾತ್ರೆಯಲ್ಲಿ ಎಲ್ಲ ವರ್ಗದ, ಧರ್ಮದ, ಭಾಷೆಯ, ಕೋಮಿನ ಜನರು ತಮ್ಮ ವಿವಿಧ ಬಗೆಯ ಬೇಧಗಳನ್ನೆಲ್ಲ ಬದಿಗೊತ್ತಿ ಸಂಭ್ರಮದಿಂದ ಸೋದರಭಾವವನ್ನು ಮೆರೆಯುತ್ತಾರೆ. ಇಲ್ಲಿ ಬಡತನ ಸಿರಿತನಗಳ ತಾಕಲಾಟವಿಲ್ಲ. ಉಚ್ಚ-ನಿಚಗಳ ತುಚ್ಚ ಕಲ್ಪನೆಗಳಿಲ್ಲ. ವರ್ಗ-ವರ್ಣಗಳ ಭೇಧಾಚರಣೆ ಇಲ್ಲ. ಧರ್ಮ-ಧರ್ಮಗಳ ಗದ್ದಲವಂತು ಇಲ್ಲವೆ ಇಲ್ಲ.

ಪ್ರತಿದಿನ ಸಂಜೆ ಹೊತ್ತಿಗೆ ವಿವಿಧ ಮನೋರಂಜನೆ, ವಿನೋದಾವಳಿ ಕಾರ್ಯಕ್ರಮಗಳು ಜರುಗುತ್ತವೆ. ಕರ್ನಾಟಕದ ಧಾರ್ಮಿಕ ದತ್ತಿ ಇಲಾಖೆಗೆ ನೋಂದಣಿಯಾದ ೪೭ ಸಾವಿರ ದೇವಾಲಯಗಳಲ್ಲಿ ಇದು ಒಂದು.

೩:೧:೮: ಅಲ್ಲಮ ಪ್ರಭು ಜಾತ್ರೆ :

ಬೀದರಿನಿಂದ ಕೇವಲ ಐದು (೫) ಕಿ.ಮಿ. ದೂರದಲ್ಲಿರುವ ಅಷ್ಟೂರ ಎಂಬ ಹಳ್ಳಿ ಜಿಲ್ಲೆಯ ಅನೇಕ ಹಳ್ಳಿಗಳಂತೆ ನಿರಕ್ಷರತೆ ಹಾಗೂ ಇತರ ಅನೇಕ ಅನಾನುಕೂಲತೆಗಳು ಈ ಗ್ರಾಮವನ್ನು ಮುಸುಕಿವೆ. ಕುಡಿಯುವ ನೀರಿಗಾಗಿ ಪರದಾಡುವ ಪ್ರಸಂಗವಿದೆ. ಇಂತಹ ಕುಗ್ರಾಮದಲ್ಲಿ ರಾಷ್ಟ್ರೀಯ ಭಾವೈಕ್ಯ ಹಾಗೂ ಕೋಮು ಸೌಹಾರ್ದ ಭಾವನೆ ಹೇಗಿದೆ ಎಂಬುದುರ ಬ,,ಗ ಕೆಲವರಿಗೆ ಆಶ್ಚರ್ಯವಾಗಬಹುದು.

ಈ ಆದರ್ಶದ ಪಾಠವನ್ನು ಅವರಿಗೆ ಯಾವ ಸುಶಿಕ್ಷಿತ ವೇದಿಕೆಯೂ ಕಲಿಸಿಲ್ಲ. ಅನೇಕ ಶತಮಾನಗಳಿಂದ ಬಂದ ಐತಿಹಾಸಿಕ ಪರಂಪರೆ ಅವರನ್ನು ಉತ್ತಮ ಮಾರ್ಗಕ್ಕೆ ಕರೆದುಕೊಂಡು ಹೋಗಿದೆ. ಹಾಗೆ ನೋಡಿದರೆ ಇಡೀ ಬೀದರ್ ಜಿಲ್ಲೆಯ ಇತಿಹಾಸದ ಪುಟವನ್ನು ಒಮ್ಮ ತಿರುವಿ ನೋಡಿದರೆ ವಿವಿಧ ಜಾತಿ ಧರ್ಮಗಳ ಅಪೂರ್ವ ಸಂಗಮ ಕಾಣಬಹುದಾಗಿದೆ. ಜಿಲ್ಲೆಯಲ್ಲಿರುವ ಮುಸ್ಲಿಂ ದರ್ಗಾಗಳಿಗೆ ಹಿಂದುಗಳು ಹೋಗಿ ಹರಕೆ ನೈವೇದ್ಯ, ಕಾಣಿಕೆಗಳನ್ನು ಸಲ್ಲಿಸುವುದು ಮುಸ್ಲಿಂ ಜತೆ ಸೇರಿ ಉರಸ್‌ಗಳಲ್ಲಿ ಭಾಗವಹಿಸುವ ದೃಶ್ಯ

ಸಾಮಾನ್ಯವಾಗಿದೆ. ಬಸವಕಲ್ಯಾಣದಲ್ಲಿ (ಬಸವೇಶ್ವರ ಪೀಠದ ಪಕ್ಕದಲ್ಲಿಯೇ ಮುಸ್ಲಿಂ ದರ್ಗಾ ಕೂಡ ಇದೆ) ಅಂದ ಹಾಗೆ ಬೀದರ್ ಜಿಲ್ಲೆ ವಿವಿಧ ಜಾತಿ ಮತಗಳ ಏಕತೆಯ ಸಂಕೇತವೆಂದರೆ ತಪ್ಪಾಗಲಾರದು.

ವಿವಿಧ ಜಾತಿ ಧರ್ಮಗಳ ಏಕತೆಗೆ ಶ್ರಮಿಸಿದ ಅಹಮ್ಮದ ಷಾವಾಲಿ ಕಲ್ಬುರ್ಗಿಯಲ್ಲಿ ತನ್ನ ಗುರುವಿನ ನೆನಪಿಗಾಗಿ ಕಟ್ಟಿಸಿದ ದರ್ಗಾದಲ್ಲಿ ಇಂದಿಗೂ ಹಿಂದೂ ಮತ್ತು ಮುಸ್ಲಿಂರು ತಮ್ಮ ಧಾರ್ಮಿಕ ಗೌರವ ಸಲ್ಲಿಸುತ್ತಾರೆ. ಈತನ ಉದಾರ ನೀತಿಯೇ ಬೀದರಿನ ಇತಿಹಾಸದಲ್ಲಿ ಕಾಯಂ ದಾಖಲೆಯಾಗಿ ಉಳಿದಿದೆಯಲ್ಲದೇ ಇಂದು ಅವನ ಗೋರಿ ದೇವಾಲಯವಾಗಿ ಮಾರ್ಪಟ್ಟಿದೆ. ಈ ದರ್ಗಾದಲ್ಲಿ ಚೈತ್ರಮಾಸದ ಪ್ರಾರಂಭದಲ್ಲಿ ನಡೆಯುವ ವಾರ್ಷಿಕ ಜಾತ್ರೆಯನ್ನು "ಅಲ್ಲಮ ಪ್ರಭು ಜಾತ್ರೆ" ಎಂದು ಕರೆಯಲಾಗುತ್ತದೆ. ಐದು ದಿನಗಳವರೆಗೆ ನಡೆಯುವ ಈ ಜಾತ್ರೆಗೆ ಮುಖ್ಯ ಅರ್ಚಕರಾಗಿ ವೀರಶೈವ ಧರ್ಮದ ಜಂಗಮರು ಕಾರ್ಯನಿರ್ವಹಿಸುತ್ತಾರೆ. ಈ ಜಂಗಮರು ಇಲ್ಲಿಂದ ೧೨೦ ಕಿ.ಮೀ. ದೂರದಲ್ಲಿರುವ ಕಲ್ಬುರ್ಗಿ ತಾಲ್ಲೂಕಿನ ಮಾಡ್ಯಾಳ ಗ್ರಾಮದಿಂದ ಪಲ್ಲಕ್ಕಿಯೊಂದಿಗೆ ಅನೇಕ ಸಹಚರರೊಡನೆ ಧಾರ್ಮಿಕ ವಿಧಿ ನೆರವೇರಿಸಲು ಪಲ್ಲಕ್ಕಿ ಉತ್ಸವದೊಂದಿಗೆ ನಡೆದುಕೊಂಡೇ ಬೀದರಿನ ಅಷ್ಟೂರ ಗ್ರಾಮಕ್ಕೆ ಬರುತ್ತಾರೆ. ಅವರು 'ದರವೇಶ' (ಸನ್ಯಾಸಿ) ರೀತಿಯಲ್ಲಿ ಬಟ್ಟೆಗಳನ್ನು ಧರಿಸುತ್ತಾರೆ. ಈ ಜಂಗಮರು ಧಾರ್ಮಿಕ ವಿಧಿಯಿಂದ ಪೂಜೆ ಮಾಡಿ ಉದ್ಘಾಟಿಸಿದ ನಂತರವೇ ಉರುಸ್ ಆರಂಭವಾಗುತ್ತದೆ. ಈ ಐದು ದಿನಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಹಿಂದು ಮುಸ್ಲಿಂ ಭಕ್ತರು ಜತೆಸೇರಿ ಆನಂದದಿಂದ ಕಾಲ ಕಳೆಯುತ್ತಾರೆ. ಕುಸ್ತಿ, ಭಜನೆ, ಮೇಳಗಳು, ಲಾವಣಿ ಪದಗಳು, ಹೀಗೆ ಹತ್ತಾರು ಬಗೆಯ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ಜಾತ್ರೆಗೆ ಬಂದವರು ಸಾಣಿಕಲ್ಲಿನಿಂದ ಗಂಧ ಬಳಿದುಕೊಳ್ಳುತ್ತಾರೆ.

ಹಿಂದೂಗಳು ತೆಂಗು ಒಡೆಯುವರು. ಮುಸಲ್ಮಾನರು ಫಾತಿಹ ಕೊಡುವರು ಊದು ಹಾಕುವರು. ಇದು ಬೀದರ ಜಿಲ್ಲೆಯಲ್ಲಿಯೇ ಅತ್ಯಂತ ದೊಡ್ಡ ಪ್ರಮಾಣದ ಉರುಸ್ ಆಗಿದೆ. ಉರುಸ್ ಮುಗಿದ ನಂತರ ನಡೆದುಕೊಂಡೇ ಮಾಡ್ಯಾಳದ ಪೂಜಾರಿ ಮತ್ತು ಅವರ ಪರಿವಾರ ಮಾಡ್ಯಾಳಕ್ಕೆ ಹಿಂತಿರುಗುವರು. ಇದೊಂದು ಈ ಜಾತ್ರೆಯ ವೈಶಿಷ್ಟ್ಯ ಪುರಾತನ ವಸ್ತು ಸಂಶೋಧನ ಇಲಾಖೆಯವರು ಅಲ್ಲಮ ಪ್ರಭು ಉರುಸ್ ಪದ್ಧತಿಯ ಸಂಬಂಧವಾಗಿ ಒಂದು ಟಿಪ್ಪಣಿಯನ್ನು ತಮ್ಮ ರಿಪೋರ್ಟದಲ್ಲಿ ಬರೆದಿರುವುದು ಕಂಡು ಬರುತ್ತದೆ. "The devolitation of lingayaths to Ahmadsha contries to this day and of the time of urs theis chief prilit (jagam) comes from Gulbarga

to bidas with a large situal to make offerings and preform ceremonies according to this rituals. a respresentative of the lingayaths is always in attendence of the tomb and markers the forehead of votiries with sandal paste. The couch is blown prequently when voltries perform the situal"(ಕಪಟರಾಳ : ೧೯೭೦:೧೨೮)

ಈ ಮಾಡ್ಯಾಳದ ಒಕ್ಕಲಿಗ ಮನೆತನಕ್ಕೂ ಈ ಅಹಮ್ಮದ ಷಹವಲಿಗೂ ಏನೂ ಸಂಬಂಧವಿದೆಯೆಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಈ ವಡವಾಳಸಿದ್ಧ ನಾಗೇಶನ ಗುರು ಬಂದೇನವಾಜನ ಶಿಷ್ಯನು ಅಹಮದಷಹನು. ಈ ಮಾಡ್ಯಾಳ ಮೆನತನಕ್ಕೂ ವಡವಾಳಸಿದ್ಧನಿಗೂ ಸಂಬಂಧವಿದ್ದಿರಬಹುದೆ? ಅಂತೂ ಮಾಡ್ಯಾಳ, ತೇರದಾಳು ಬಿರೊಳ್ಳಿ ಮುಂತಾದ ಸ್ಥಳಗಳಲ್ಲಿ ಅಲ್ಲಮಪ್ರಭುವಿನ ಸಮಾಧಿಗಳಿವೆ ಎಂದು ಹೇಳಿಕೊಳ್ಳುವ ರೂಢಿಯು ಈ ಬಾದಷಹನ ಸಮಾಧಿಯಿಂದ ಪ್ರಾರಂಭವಾಗಿರಬಹುದು. ಅಂತೆಯೇ ಎಲ್ಲ ಕಡೆಗೂ ಇಸ್ಲಾಮ್ ಪದ್ಧತಿಯ ಪ್ರಕಾರ ಗೋರಿಗಳಿವೆ.

ಅಷ್ಟೂರನಲ್ಲಿರುವ ಎಂಟು ಗೋರಿಗಳಲ್ಲಿ ಅಹಮ್ಮದಷಾವಲಿಯ ಗೋರಿಯೇ ಅತ್ಯಂತ ದೊಡ್ಡದು. ಈ ದರ್ಗಾದ ಎತ್ತರ ೧೦೧ ಅಡಿ ೯ ಅಂಗುಲ ಅದನ್ನು ಚೌಕಾಕಾರದಲ್ಲಿ ನಿರ್ಮಿಸಲಾಗಿದ್ದು, ಪ್ರತಿ ಗೋಡೆಯ ಉದ್ದ ೭೭ ಅಡಿ ಒಂದು ಅಂಗುಲವಿದೆ. ಇದು ಅಂದಿನ ಇಂಜಿನಿಯರಿಂಗ್ ವೈಶಿಷ್ಟ್ಯಕ್ಕೆ ಒಂದು ಉತ್ತಮ ಉದಾಹರಣೆ. ಹೊರಗಿನಿಂದ ನೋಡಲು ಈ ದರ್ಗಾ ಅಷ್ಟೇನೂ ಕಲಾತ್ಮಕವಾಗಿ ಕಾಣದಿದ್ದರೂ ಒಳಗಡೆ ಗೋರಿಯ ಗುಮ್ಮಟದ ಛಾವಣಿಯ ಮೇಲೆ ಅತ್ಯಂತ ಕಲಾತ್ಮಕ ಅಪರೂಪದ ಅರಬ್ಬಿ ಬರಹಗಳಿವೆ.

ಹೊರಗಡೆಯಿಂದ ಕನ್ನಡಿಯನ್ನು ಒಂದು ಕೋನದಲ್ಲಿ ಸೂರ್ಯ ಪ್ರಕಾಶದತ್ತ ಹಿಡಿದರೆ ಈ ವರ್ಣ ಕಲಾಕೃತಿಯನ್ನು ನೋಡಬಹುದಾಗಿದೆ. ಆದರೆ ಅದನ್ನು ಸಂಪೂರ್ಣವಾಗಿ ಆನಂದಿಸಲು ಒಳಗಡೆ ವಿದ್ಯುತ್ ದೀಪದ ವ್ಯವಸ್ಥೆ ಮಾಡಲಾಗಿದೆ. ಅಜಂತಾ ವರ್ಣಕಲೆಯ ಮಾದರಿಯನ್ನು ಈ ಗೋರಿಯ ಒಳಗಡೆ ಕಾಣಬಹುದು. ಸೂಫಿ ಸಂತರ ವಚನಗಳನ್ನು ಒಳಗಡೆ ಕೆತ್ತಲಾಗಿದ್ದು ಪರ್ಷಿಯನ್ ಶಿಲ್ಪಿಗಳು ಗೋರಿಯನ್ನು ನಿರ್ಮಿಸಿರುವುದು ಸ್ಪಷ್ಟವಾಗಿದೆ. ಇದೊಂದು ಭಾರತೀಯ ಮತ್ತು ಪರ್ಷಿಯನ್ ಕಲೆಯ ಅಪರೂಪದ ಸಂಗಮವಾಗಿದೆ.

೩:೧:೯: ಬಸವಣ್ಣನ ಜಾತ್ರೆ :

ಜಿಲ್ಲಾ ಕೇಂದ್ರವಾದ ಬೀದರಿನಿಂದ ೮೦ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳ ಬಸವಕಲ್ಯಾಣ ತಾಲ್ಲೂಕು ಕೇಂದ್ರ, ಸಮೃದ್ಧಿ ಆಧ್ಯಾತ್ಮಿಕತೆ ಹಾಗೂ ಸಹಿಷ್ಣುತೆಗೆ ಹೆಸರುವಾಸಿಯಾದ ಈ ನಗರವು ಚಾಳುಕ್ಯರ ಹಾಗೂ ಕಲಚೂರ್ಯರ ರಾಜಧಾನಿಯಾಗಿತ್ತು. ಬಹಮನಿ ದಾಖಲೆಗಳಲ್ಲಿ ಇದನ್ನು ಕಸಬ ಕಲ್ಯಾಣಬಾದ್ ಎಂದು ಕರೆಯಲಾಗಿದೆ. ಬಸವಣ್ಣನವರ ಕ್ರಾಂತಿ ಆರಂಭವಾದ ಸ್ಥಳ ಇದು. ಇಲ್ಲಿ ಬಸವೇಶ್ವರ ದೇವಸ್ಥಾನ, ಅನುಭವ ಮಂಟಪ, ಪ್ರಭುದೇವರ ಗದ್ದುಗೆ, ಅಕ್ಕನಾಗಮ್ಮ ಗವಿ ಬಸವೇಶ್ವರ ಮಹಾಮನೆಯ ನಿವೇಶನ, ಅರಿವಿನ ಗವಿ, ನುಲಿಯ ಚಂದಯ್ಯನ ಗವಿ, ಘನಲಿಂಗ ರುದ್ರ ಮುನಿಯ ಗವಿ, ಮಡಿವಾಳ ಮಾಚಯ್ಯನಕೆರೆ (ತ್ರಿ–ಪುರಾಂತಕ ಕರೆ) ಉರಿಲಿಂಗ ಪೆದ್ದಿಮಠ, ಮೊದಲಾದವು ಇಲ್ಲಿನ ಚಾರಿತ್ರಕ ಯಾತ್ರಾ ಸ್ಥಳದ ಮಹತ್ವವನ್ನು ಹಾಗೂ ವೀರಶೈವ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಕಲ್ಯಾಣದ ಚಾಲುಕ್ಯರು ನಿರ್ಮಿಸಿದ ಕೋಟೆಯನ್ನು ಇಂದಿಗೂ ಕಾಣಬಹುದು.

ಹನ್ನೆರಡನೆಯ ಶತಮಾನದಲ್ಲಿ ಸಮಗ್ರ ಕ್ರಾಂತಿಯ ಕಾರಣ ಪುರುಷ ಬಸವಣ್ಣನವರು. ಅವರು ಜೀವನ ಧ್ಯೇಯ ವಿಶ್ವವಿಶಾಲ, ತತ್ವದರ್ಶಿ, ಕಾರ್ಯಶೀಲ ಮಾನವೀಯ ಮೌಲ್ಯಗಳೇ ಅವರ ಜೀವನ ಸಿದ್ಧಾಂತ ಅವರೊಬ್ಬ ಮಹಾಕಾರಣಿಕ ವಿಭೂತಿ ಪುರುಷ. ಬಸವಣ್ಣನವರದು ಹಮ್ಮು ಬಿಮ್ಮುಗಳಿಲ್ಲದ ಭಕ್ತಿ. ಮನಕ್ಕೆ ಮನಸಾಕ್ಷಿಯಾದ ಬದುಕು. ಸುತ್ತಣ ಬದುಕಿಗೆ ಸ್ಪಂದಿಸಿದ ಬಸವಣ್ಣನವರು ದಲಿತರಿಗೆ ದಾನಿಯಾಗಿದ್ದರು. ಶೋಷಕರಿಗೆ ಶೂಲವಾಗಿದ್ದರು, ನೊಂದವರಿಗೆ ನೆರಳಾಗಿದ್ದರು. ಧರ್ಮದ ದೃಷ್ಟರಾಗಿ, ಸ್ತ್ರೀ ಕುಲದ ಉದ್ಧಾರಕರಾಗಿ ಸಾಹಿತ್ಯದ ಸೆಲೆಯಾಗಿ, ಶೀಲದ ಸಂಪತ್ತಾಗಿ ಬಾಳಿದ ಬಸವಣ್ಣನವರು ವ್ಯಷ್ಟಿ ಮತ್ತು ಸಮಷ್ಟಿ ಜೀವನದ ಚಾರಿತ್ರ್ಯಕ್ಕೆ ಶಿಸ್ತು ಸಂಯಮಗಳ ಸಂಸ್ಕಾರ ನೀಡಿದರು. ಅವರು ಕಾಯಕದ ಕಲಿಯಾಗಿದ್ದರು. ದಾಸೋಹದ ದಾರ್ಶನಿಕರಾಗಿದ್ದರು, 'ಎನಗಿಂತ ಕಿರಿಯರಿಲ್ಲ' ಎಂಬ ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದವರು. ಇಹದ ಮಣಿಹವನ್ನು ಮುಗಿಸಿ ಬಯಲಲ್ಲಿ ಬಯಲಾದ ಮಹಾನುಭಾವಿ.

ಹನ್ನೆರಡನೆಯ ಶತಮಾನದಲ್ಲಿ ಕಂಡು ಬರುವ ಬೃಹತ್ ಶರಣ ಸಂಕುಲದ ಕೇಂದ್ರಬಿಂದುವಾಗಿದ್ದರು. ಬಸವಣ್ಣನವರು, ದೈವೀಧ್ಯಾನ, ಸಮಾನ ಲಾಂಛನ ಸಂಸಾರ ಜೀವನ ಕಾಯಕ, ಸಾಧನ, ದಾಸೋಹ ಭಾವನೆ, ಸಾಹಿತ್ಯ ಚಿಂತನ, ವಿಚಾರ ಮಂಥನ ಮತ್ತು ಶೂನ್ಯ ಸಂಪಾದನ ಇವುಗಳನ್ನು ಶರಣ ಜೀವನದ ಸೂತ್ರಗಳನ್ನಾಗಿ ಮಾಡಿದರು. ಅಜ್ಞಾನ ನಿರ್ಮೂಲನ, ಬಡತನ ನಿವಾರಣೆ ಮತ್ತು

ಶೀಲ ಸಂಪಾದನೆಗಳ ಮೂಲಕ ಲೋಕ ಜೀವನವನ್ನು ಸುಧಾರಿಸಿರುವ ಕ್ರಾಂತಿಕಾರಿ ಬಸವಣ್ಣನವರು. ಸಮಾಜ ವ್ಯವಸ್ಥೆ ಧಾರ್ಮಿಕ ನೀತಿ, ರಾಜಕೀಯ ದೃಷ್ಟಿ ಸಾಹಿತ್ಯ ಸೃಷ್ಟಿ ಮತ್ತು ವ್ಯಕ್ತಿ ಚಾರಿತ್ರ್ಯಗಳಿಗೆ ಹೊಸ ಆಯಾಮ ಒದಗಿಸಿದ ಯುಗ ಪ್ರವರ್ತಕರು ಬಸವಣ್ಣನವರು. ಅವರ ಬದುಕಿನ ಸ್ಮರಣೆ ಮತ್ತು ಅವರ ಆದರ್ಶಗಳ ಆಚರಣೆ ಇಂದು ಅಗತ್ಯ. ಬಸವಣ್ಣನವರದು ಆಗಿ ಹೋದ ಜೀವ, ಆದರೆ ಈಗಲೂ ಬೇಕಾಗಿರುವ ಜೀವನ ಮುಂದೆಯೂ ಬೇಕಾಗುವ ಚೇತನವೆಂದು ಪ್ರತಿವರ್ಷ ಬಸವ ಜಯಂತಿಯಂದು ಬಸವಕಲ್ಯಾಣದಲ್ಲಿ ೩ ದಿವಸಗಳ ಕಾಲ ಅತಿ ವೈಭವದಿಂದ ಜಾತ್ರೆ ಜರುಗುತ್ತದೆ. ಬಸವೇಶ್ವರ ದೇವಾಲಯ ಬಸವಕಲ್ಯಾಣದ ಮಧ್ಯದಲ್ಲಿ ವಿಶಾಲವಾದ ಈ ಗುಡಿಯನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಬಸವೇಶ್ವರ ದೇವಸ್ಥಾನ ಸಮಿತಿಯವರು ಜಾತ್ರೆ ನಡೆಸುತ್ತಾರೆ. ಪ್ರತಿ ದಿವಸ ಭಾಷಣ, ಪ್ರವಚನ, ಉಪನ್ಯಾಸ ಕಾರ್ಯಕ್ರಮಗಳು ಏರ್ಪಡಿಸುವರು. ಪ್ರತಿಯೊಂದು ಓಣಿಯಲ್ಲೂ ಕೇಳುವಂತೆ ಧ್ವನಿವರ್ಧಕಗಳನ್ನೂ ಅಳವಡಿಸುತ್ತಾರೆ. ಈ ಜಾತ್ರೆಗೆ ನಾನಾ ಬಗೆಯ ಧರ್ಮದವರು ಬರುತ್ತಾರೆ.

ಇಲ್ಲಿ ಯಾವುದೇ ನಿರ್ಭಂಧವಿಲ್ಲ, ಜಾತ್ರೆಯ ಪ್ರಥಮ ದಿನದಂದು ತೊಟ್ಟಿಲ ಕಾರ್ಯಕ್ರಮ, ಭಜನೆ, ಕೀರ್ತನೆ ಪ್ರವಚನ ಪಲ್ಲಕ್ಕಿ ಮೆರವಣಿಗೆ ನೆರವೇರಿಸುತ್ತಾರೆ. ಉತ್ಸವದ ಕೊನೆಯ ದಿವಸ ೨೦ ಅಡಿ ಎತ್ತರದ ಕಟ್ಟಿಗೆಯೊಂದಕ್ಕೆ ಬಟ್ಟೆಯನ್ನು ಸುತ್ತಿ ಎಣ್ಣೆಯನ್ನು ಸುರಿದು ದೀವಟಿಗೆಯೊಂದಿಗೆ, ಬಸವಣ್ಣನ ಮೆರವಣಿಗೆ ನಡೆಸುವರು. ಮೆರವಣಿಗೆಯಲ್ಲಿ ಭಜನೆ ಮೇಳಗಳು, ಡೊಳ್ಳು ಕುಣಿತ, ನಂದಿಕೋಲ ಕುಣಿತ ಮುಂತಾದವು ಕಣ್ಣು, ಕಿವಿ, ಮನಸ್ಸಿಗೆ ಆನಂದವನ್ನು ಕೊಡುತ್ತವೆ. ಜಾತ್ರೆ ಸಮಯದಲ್ಲಿ ಬಸವಕಲ್ಯಾಣ ತಾಲ್ಲೂಕಿನ ಪಶು ಸಂಗೋಪನಾ ಮತ್ತು ಆರೋಗ್ಯ ಇಲಾಖೆಯವರು ವಿಶೇಷವಾಗಿ ಮಳಿಗೆಗಳನ್ನು ತೆರೆಯುತ್ತಾರೆ.

ಜಾತ್ರೆಯ ಕಾಲದಲ್ಲಿ ಹಲವಾರು ಹೋಟೆಲ್‌ಗಳು ತಲೆ ಎತ್ತುತ್ತವೆ. ವಿಭೂತಿ ಲಿಂಗ, ರುದ್ರಾಕ್ಷಿ, ಹತ್ತು ಹಲವಾರು ಬಗೆಯ ವಚನಕಾರರ ಕಾರತಿಯರ ಭಾವಚಿತ್ರಗಳು ವಿದ್ಯುತ್‌ಚ್ಛಕ್ತಿ ಉಪಕರಣಗಳು ಅಂಗಡಿಯಲ್ಲಿ ದೊರೆಯುತ್ತವೆ.

ಈ ತಾಲ್ಲೂಕಿನ ಇತರ ಹಳ್ಳಿಗಳಲ್ಲಿ ನಡೆಯುವ ಪ್ರಮುಖ ಜಾತ್ರೆಗಳೆಂದರೆ, ಹಾರಕೂಡದಲ್ಲಿ ಚನ್ನಬಸವೇಶ್ವರ ಜಾತ್ರೆ, ಜನವರಿಯಲ್ಲಿ ಮೂರು ದಿವಸ, ಹುಲಸೂರಿನಲ್ಲಿ ವೀರಭದ್ರೇಶ್ವರ ಜಾತ್ರೆ ಜನವರಿಯಲ್ಲಿ ೨ ದಿವಸ, ಅದರಂತೆ ಅಲ್ಲಿಯೇ ಜನವರಿಯಲ್ಲಿ ರಘುನಾಥ ಮಹಾರಾಣಿ ಜಾತ್ರೆ ಒಂದು ದಿವಸ, ಕಿಣ್ಣಿಯಲ್ಲಿ ಶರಣಬಸವೇಶ್ವರ ಜಾತ್ರೆ, ಫೆಬ್ರುವರಿಯ ೩ ದಿವಸ, ಉಜಳಮ್ ಖಂಡೋಬ

ಜಾತ್ರೆ ಮೂರು ದಿವಸ ಮೇ ತಿಂಗಳಲ್ಲಿ ಚಿತಕೋಟದಲ್ಲಿ ವೀರಭದ್ರೇಶ್ವರ ಜಾತ್ರೆ ಮೂರು ದಿವಸ ಮಾರ್ಚ್ ತಿಂಗಳು, ಚಂಡಕಾಪೂರದಲ್ಲಿ ಅಮೃತಕುಂಡ ಜಾತ್ರೆ, ಮೂರು ದಿವಸ ಮಾರ್ಚ್ ತಿಂಗಳಲ್ಲಿ ಚಿಕನಾಗಾಂವದಲ್ಲಿ ಶರಣಬಸವೇಶ್ವರ ಜಾತ್ರೆ, ಎರಡು ದಿವಸ, ಮಾರ್ಚ್ ತಿಂಗಳು, ಬಟಿಗೇರಾದಲ್ಲಿ ಗೋಣದುದ್ರ ಜಾತ್ರೆ, ಎರಡು ದಿವಸ ಏಪ್ರಿಲ್ ತಿಂಗಳು ಕೊಹಿನೂರ್ ಪಹಾಡದಲ್ಲಿ ಚಾಂದಪಾಶಾ ಮದಾರ ಉರುಸ್, ಜಮಾದಿಲ್ವಾಲ್ ನಾಲ್ಕು ದಿವಸ ಜರುಗುತ್ತದೆ.

ಬಸವಣ್ಣನ ಉತ್ಸವದಲ್ಲಿ ಮನೋರಂಜನೆಗಾಗಿ ದೊಡ್ಡಾಟ, ಬಯಲಾಟ, ಕೋಲಾಟ, ಗೊಂದಲಿಗರ ಹಾಡು, ಗೀಗೀ ಪದಗಳು, ಲಾವಣಿ ಕರಡಿ ಮಜಲು, ಜಲಸಾ ಕವ್ವಾಲಿ, ನಂದಿಕೋಲು, ಭಜನೆ ಮುಂತಾದ ಕಲೆಗಳು ಜಾತ್ರೆಗೆ ಬಂದ ಭಕ್ತರಿಗೆ ಬೇಸರ ಕಳೆಯುವ ವಿಶಿಷ್ಟ ಕಲೆಗಳಾಗಿವೆ.

೩:೧:೧೦: ಅಮರೇಶ್ವರ ಜಾತ್ರೆ :

ರಾಯಚೂರು ಜಿಲ್ಲೆಯ ಲಿಂಗಸೂಗುರು ತಾಲ್ಲೂಕಿನ ಪ್ರಾಚೀನ ಕ್ಷೇತ್ರಗಳಲ್ಲಿ ಶ್ರೀ ಅಮರೇಶ್ವರ ಕ್ಷೇತ್ರ ಒಂದು. ಇಲ್ಲಿ ಸಮಾಧಿಸ್ಥನಾಗಿರುವ ಶರಣ ಅಮರೇಶ್ವರರು ೧೭ನೆಯ ಶತಮಾನದವನೆಂದು ಹೇಳಲಾಗುತ್ತಿದೆ. ಈತನ ವಿಷಯವಾಗಿ ಅನೇಕ ಪವಾಡ ಕಥೆಗಳು ಈ ಭಾಗದಲ್ಲಿ ಲಭ್ಯವಿವೆ. ಅಮರೇಶ್ವರನನ್ನು ಕುರಿತು ಪುರಾಣ ಗ್ರಂಥಗಳು ಹುಟ್ಟಿವೆ. ಲಿಂಗಸೂಗೂರಿನಿಂದ ೧೫ ಕಿ.ಮೀ.ಗಳ ಅಂತರದಲ್ಲಿರುವ ದಕ್ಷಿಣೋತ್ತರವಾಗಿ ಹಬ್ಬಿದ ಗುಡ್ಡಗಳ ಆಳವಾದ ಕೊಳ್ಳದಲ್ಲಿ ಶ್ರೀ ಅಮರೇಶ್ವರನ ಮೂಲ ಲಿಂಗವಿದೆ. ಇದು ಉದ್ಭವ ಲಿಂಗವಾಗಿದೆ.

ಸುತ್ತಲೂ ಗುಡ್ಡಗಳ ಸಾಲು ಮಧ್ಯದಲ್ಲಿ ತಿಳಿನೀರು ಝರಿ ಇದೆ. ಈ ನೀರು ಅಂತರ್ಜಲವಾಗಿ ಇಲ್ಲಿ ಹೊರಹೊಮ್ಮುತ್ತಿದೆ. ಅಂತರ್ಜಲವಾಗಿ ಹೊರಹೊಮ್ಮುವ ಈ ಗಂಗಾಸ್ಥಲಕ್ಕೆ ಗಡಿಗಿ ಭಾವಿ ಎನ್ನುತ್ತಾರೆ. ಇದೇ ನೀರು ಮುಂದೆ ಹರಿದು ಬಂದು ಉದ್ಭವ ಮೂಲಲಿಂಗ ಶ್ರೀ ಅಮರೇಶ್ವರ ಗರ್ಭಗುಡಿ ತುಂಬಾ ಹರಿದು ಮುಂದೆ ಸಾಗುತ್ತದೆ. ಇಲ್ಲಿ ಒಂದು 'ಕೊಳ'ವನ್ನು ನಿರ್ಮಿಸಿದ್ದಾರೆ. ಈ ನೀರು ಅಲ್ಲಿಯೇ ನಿಲ್ಲುತ್ತದೆ. ಹೀಗೆ ಕೊಳದಲ್ಲಿ ನಿಂತ ನೀರು, ಜಾತ್ರೆಗೆ ಬಂದ ಭಕ್ತರ ನಂಬಿಕೆಯಾಗಿದೆ.

ಜಾತ್ರೆಗೆ ಬಂದ ಭಕ್ತರು ಪೂರ್ವದ ಮಹಾದ್ವಾರವನ್ನು ಸೇರಿ ನೂರಾರು ಪಾವಟಿಗೆಗಳನ್ನು ಇಳಿದು, ನಿಸರ್ಗ ನಿರ್ಮಿತ ಪುಣ್ಯವಾಹಿನಿಯನ್ನು ತಲುಪಿದಾಗ ಭಕ್ತರಿಗೆ ಆದ ಶ್ರಮ ತಾನೆತಾನಾಗಿ ಮಾಯವಾಗುತ್ತದೆ. ಪುಣ್ಯವಾಹಿನಿಯ ದರ್ಶನ ಹಾಗೂ ಅಮರೇಶ್ವರ ಮಹಾಲಿಂಗದ ದರ್ಶನ ಒಂದೇ ಕಡೆ, ಒಂದೇ ಸಲಕ್ಕೆ ಇಲ್ಲಿ

ದೊರೆಯುತ್ತದೆ. ಈ ಮೊದಲು ಇಲ್ಲಿ ಹಳೆಯದಾದ ಮಹಾದ್ವಾರ ಹಳೆಯ ಗುಡಿಗಳು ಇದ್ದವು. ಲಿಂಗಸೂಗೂರಿನ ತಹಸೀಲ್ದಾರರಾಗಿದ್ದ ಲಿಂಗೈಕ್ಯ ಶಿವಪುತ್ರಪ್ಪ ಇವರ ಪರಿಶ್ರಮದಿಂದ ಕಲಾತ್ಮಕವಾದ ರೀತಿಯಲ್ಲಿ ಗುಡಿಯ ಗೋಪುರ ನಿರ್ಮಾಣಗೊಳ್ಳ ತೊಡಗಿದೆ.

ಪ್ರತಿವರ್ಷ ಹೋಳಿ ಹುಣ್ಣಿಮೆ ದಿನ ಇಲ್ಲಿ ದೊಡ್ಡ ಪ್ರಮಾಣದ ಜಾತ್ರೆಯಾಗುತ್ತದೆ. ಕರ್ನಾಟಕ, ಮಹಾರಾಷ್ಟ್ರ, ಆಂಧ್ರಗಳಿಂದ ಲಕ್ಷಾಂತರ ಜನರು ಈ ಜಾತ್ರೆಗೆ ಬರುತ್ತಾರೆ. ಆಗ ದನಗಳ ಜಾತ್ರೆ ಹಾಗೂ ವ್ಯಾಪಾರವಾಗುತ್ತದೆ. ಜಾತ್ರೆ ಒಂದೇ ದಿನವಿರುವುದರಿಂದ ಲಿಂಗಕ್ಕೆ ನೀರಿನಿಂದ, ಹಾಲಿನಿಂದ, ರುದ್ರಾಭಿಷೇಕ ಮಾಡುತ್ತಾರೆ. ಟೆಂಗು ಒಡೆಯುವರು. ಕಾಣಿಕೆ ಕೊಡುವರು, ಜಾತ್ರೆಯ ಕಾಲಕ್ಕೆ ಅನ್ನ ದಾಸೋಹ ಜ್ಞಾನದಾಸೋಹ, ಸಾಂಸ್ಕೃತಿಕ ಕಾರ್ಯಕ್ರಮಗಳು ಸಾಮಾನ್ಯವಾಗಿರುತ್ತವೆ.

೩:೧:೧೧: ನಾರದ ಗಡ್ಡೆ ಜಾತ್ರೆ :

ರಾಯಚೂರಿನಿಂದ ೨೮ ಕಿ.ಮೀ. ಅಂತರದಲ್ಲಿರುವ ನಾರದಗಡ್ಡೆ ಚರಿತ್ರೆಯ ಮೇರೆಗೆ ದೇವಮುನಿ ನಾರದ ಮಹರ್ಷಿಗಳ ಇಲ್ಲಿ ತಪಗೈದು ಪರಶಿವನನ್ನು ಸಾಕ್ಷಾತ್ಕರಿಸಿದ 'ಪುಣ್ಯಕ್ಷೇತ್ರವೆಂದು' ಪ್ರಸಿದ್ಧಿ ಹೊಂದಿದೆ. ಕೃಷ್ಣ ನದಿಯಿಂದ ಸುತ್ತುವರಿಯಲ್ಪಟ್ಟ ಇದು ಸುಂದರ ದ್ವೀಪ. ದೇವಋುಷಿ ನಾರದನು ತಪಗೈದು ಒಮ್ಮೆ ಕೈಲಾಸಕ್ಕೆ ಪರಶಿವನನ್ನು ಸಂದರ್ಶಿಸಲು ಬಂದರಂತೆ. ಆ ಸಮಯದಲ್ಲಿ ಪರಶಿವನು ಪಾರ್ವತಿಯೊಡನೆ ಸಿಂಹಾಸನದಲ್ಲಿ ಕುಳಿತಿದ್ದನಂತೆ. ಸುತ್ತಲೂ ನಂದೀಶ, ಬೃಂಗೀಶ, ಶಿವಗಣ, ಪ್ರೇಮದ ಗಣ, ಭೂತಗಣಗಳು ನೆರೆದು ಶಿವನಾಮ ಸಂಕೀರ್ತನೆಯಲ್ಲಿ ಮುಳುಗಿದ್ದರು. ಅಲ್ಲಿಗೆ ಬಂದ ನಾರದರ ಕಾಲು ಅಲ್ಲಿದ್ದ ಪ್ರಮದನಿಗೆ ತಾಕಿತು. ಧ್ಯಾನ ಭಂಗವಾದ ಪ್ರಮದನು ನಾರದನಿಗೆ 'ನೀ ಭೂ ಸಂಚಾರಿಯಾಗು' ಎಂದು ಶಪಿಸಿದನು. ಆಗ ನಾರದರು ಕಾಲು ಸೋಕಿದ್ದು ಮಹಾಪಾಪವೆಂದು, ತಿಳಿಯದೆ ಮಾಡಿದ ಅಪರಾಧವನ್ನು ಮನ್ನಿಸಿ ಶಾಪ ವಿಮೋಚನೆಯ ಮಾರ್ಗ ತೋರಿಸಬೇಕೆಂದು, ಆತನನ್ನು ಪ್ರಾರ್ಥಿಸಿದರಂತೆ. ನಾರದನ ಮೇಲೆ ಕರುಣೆ ಹೊಂದಿದ ಪ್ರಮದನು, ನಾರದ ಕೃಷ್ಣ ನದಿಯ ಭೂಲೋಕದಲ್ಲಿ ಹರಿಯುತ್ತಿದ್ದ ಅದರ ಮಧ್ಯದಲ್ಲಿ ಪ್ರಮದ ದ್ವೀಪ, ಶಿವದ್ವೀಪ, ಗಣದ್ವೀಪ, ರಾಮದ್ವೀಪ ಎಂಬ ನಾಲ್ಕು ದೀಪಗಳಿವೆ. ಅದನ್ನು ದಾಟಿ ಮುಂದೆ ಹೋದರೆ ಅಲ್ಲೆ ಮತ್ತೊಂದು ಮಾವಿನ ಎಲೆಯ ಆಕಾರದ ದೀಪ ಕಾಣುವುದು. ಅಲ್ಲಿ ನೀರು ಸುದೀರ್ಘ ಕಾಲ ದಶಕೋಟಿ ಶಿವ ಪಂಚಾಕ್ಷರ ಮಂತ್ರಧನನ್ನು ಜಪಿಸುತ್ತಾ ತಪಸನ್ನಾಚರಿಸಲು, ಅಗ ಶಂಕರನು ನಿನ್ನ ಶಾಪ ವಿಮೋಚನೆ ಮಾಡುತ್ತಾನೆಂದು ಹೇಳಿದನಂತೆ. ನಾರದರು

ಈ ದ್ವೀಪದಲ್ಲಿ ತಪಸ್ಸು ಮಾಡಿ ಶಿವನನ್ನು ಸಾಕ್ಷಾತ್ಕರಿಸಿಕೊಂಡರಂತೆ, ಆದುದರಿಂದಲೇ ಈ ಕ್ಷೇತ್ರಕ್ಕೆ 'ನಾರದ ಗಡ್ಡೆ'ಯೆಂಬ ಹೆಸರು ಬಂದಿದೆ ಎನ್ನುವ ದಂತಕಥೆ ಇದೆ.

ಭಕ್ತಿ ಪಂಥದ ಅಗ್ರದೂತರಲ್ಲಿ ಶ್ರೀ ಚನ್ನಬಸವ ಸ್ವಾಮಿಗಳು ಒಬ್ಬರು. ಇವರು ೪೦೦ ವರ್ಷಗಳ ಹಿಂದೆ ಜನರ ಹೃದಯಗಳಲ್ಲಿ ಜ್ಞಾನ ಜ್ಯೋತಿ ಬೆಳಗಿಸಿದರು ಇವರು ಬೀದರ ಜಿಲ್ಲೆಯ 'ಲಿಂಗ್ದಳ್ಳಿಯೆಂಬ' ಗ್ರಾಮದ ಜಂಗಮ ಪ್ರೇಮದ ಸಂಪನ್ನ ಕುಟುಂಬದಲ್ಲಿ ಜನಿಸಿದರು. ಆದವಾನಿಯ ಯಾದವಗಿರಿ ಶೂನ್ಯ ಪೀಠದಲ್ಲಿ ಆಧ್ಯಾತ್ಮದ ಅನುಭವ ಶಿಕ್ಷಣ ಪಡೆದ ಗುರುಗಳು 'ಚರಚಕ್ರವರ್ತಿಯಾಗೆಂದು' ಆಶೀರ್ವಾದ ಮಾಡಿದರು. ಯಾದವಗಿರಿ ಶೂನ್ಯ ಪೀಠದ ಅಧಿಕಾರ ವಹಿಸಲು ಗುರುಗಳು ಕೇಳಿದಾಗ ತಿರಸ್ಕರಿಸಿದರು. ಯಾದವಗಿರಿ ಶೂನ್ಯ ಪೀಠದ ಅಧಿಕಾರವನ್ನು ಕರ್ತೃಶ್ರೀ ಕರಿಬಸವರಾಜ ಸ್ವಾಮಿಗಳವರಿಗೆ ವಹಿಸಿಕೊಟ್ಟು ತಾವು ದೇಶಸಂಚಾರ ಮಾಡುತ್ತಾ ರಾಯಚೂರಿನ 'ನಾರದ ಗಡ್ಡೆಯಲ್ಲಿ' ನೆಲೆಸಿದರು. ಶ್ರೀಗಳವರ ತಪದ ಪ್ರಭಾವ ಅವರ ಕೃಪೆ, ಕರುಣೆ, ಪವಾಡಗಳನ್ನು ಕಂಡು ಸುತ್ತಮುತ್ತಲಿನ ಆಂಧ್ರ ಮತ್ತು ಕರ್ನಾಟಕದ ಜನರು ತಂಡೋಪ ತಂಡವಾಗಿ ಕ್ಷೇತ್ರಕ್ಕೆ ಬಂದು ಶ್ರೀ ಸ್ವಾಮಿಗಳ ದರ್ಶನ ಪಡೆದು ಅವರ ಹಿತೋಪದೇಶಗಳನ್ನು ಲಾಲಿಸಿ ಹೋಗುತ್ತಿದ್ದರು. ಅವರಿಗೆ 'ತಾತ' ಹಾಗೂ 'ಗಡ್ಡೆ ತಾತಾ' ಎಂದು ಕರೆಯುತ್ತಿದ್ದರು.

ಶ್ರೀ ಸ್ವಾಮಿಯವರು ೮೦ ವರ್ಷದವರಿದ್ದಾಗ ಕಾರ್ತಿಕ ಶು.೪ರಂದು ಯೋಗಾ ಮಂಟಪದಲ್ಲಿ ಕುಳಿತು ಐದು ದಿನಗಳವರೆಗೆ ಬಾಗಿಲು ತೆಗೆಯಬಾರದೆಂದು ಭಕ್ತರಿಗೆ ಹೇಳಿ ಯೋಗಾಮಂಟಪದಲ್ಲಿ ಕುಳಿತರು. ಆದರೆ ಕೆಲವು ಹಠಮಾರಿ ಭಕ್ತರು ಮೂರನೇ ದಿನವೇ ಬಾಗಿಲನ್ನು ತೆರೆದರಂತೆ. ಆಗ ಸ್ವಾಮಿಗಳು ಭೂಮಿಯಿಂದ ೩ ಅಡಿ ಮೇಲಕ್ಕೆ ಅಂತರದಲ್ಲಿದ್ದರು. ಬಾಗಿಲು ತೆರೆದೊಡನೆ ಶರೀರ ಭುಮಿಗೆ ಇಳಿಯಿತು.

ಆತ್ಮವು ಆಗಲೇ ಪರಮಾತ್ಮನಲ್ಲಿ ಲೀನವಾಗಿತ್ತು. ಇಂದಿಗೂ ಕಾರ್ತಿಕ ಶು.೬(ಷಷ್ಠಿ)ಯೆಂದು, ಅತಿ ವೈಭವದಿಂದ ಶ್ರೀ ಸ್ವಾಮಿಗಳು ಆರಾಧನೆ ಜರುಗುವುದು. ಶ್ರೀಗಳ ತರುವಾಯ ಪೀಠಕ್ಕೆ ಬಂದ ಸ್ವಾಮಿಗಳು ಹಿಮದಿನ ಸಂಪ್ರದಾಯವನ್ನು ಉಳಿಸಿ ಬೆಳೆಸುತ್ತಾ ಬರುತ್ತಿದ್ದಾರೆ.

ಮೂಲ ಪುರುಷ ಶ್ರೀ ಚನ್ನಬಸವ ಸ್ವಾಮಿಗಳವರಿಂದ ನಿರಂಜನ ವೈರಾಗ್ಯ ಪೀಠ ಸ್ಥಾಪನೆಗೊಂಡು ಈ ಪೀಠಕ್ಕೆ ಪರಂಪರಾನುಗತ ಪೀಠಾಧಿಪತಿಗಳಾಗುತ್ತಾ ೧೮ ಮೂರ್ತಿಗಳು ಪೀಠಕ್ಕೆ ಬಂದಿರುತ್ತಾರೆ. ೧೯೦೬ ರಿಂದ ಸ್ವಾಮಿಗಳ ಚರಿತ್ರೆ ಸಿಗುತ್ತದೆ. ಈ ಪೀಠಕ್ಕೆ ಬಂದವರ ಹೆಸರುಗಳು ಚನ್ನಬಸವ ಸ್ವಾಮಿಗಳೆಂದು, ಇರುವುದರಿಂದ ಯಾವ ಯಾವ ಕಾಲದಲ್ಲಿ ಇದ್ದವರು ಎಂದು ತಿಳಿಯಲು ಬಾರದಂತಿದೆ.

ಈ ಭಾಗದಲ್ಲಿ ಶ್ರೀ ಸುಕ್ಷೇತ್ರ 'ನಾರದಗಡ್ಡೆ' ಜಾತ್ರೆ ಬಲು ದೊಡ್ಡದು. ಬಹಳ ವಿಶಿಷ್ಟವಾದುದು. ಆಂಧ್ರ, ಕರ್ನಾಟಕ ಗಡಿಯಲ್ಲಿ ಈ ಗಡ್ಡೆ ಇರುವುದರಿಂದ ಎರಡು ರಾಜ್ಯದ ಭಕ್ತರು ಭಾಗವಹಿಸುತ್ತಾರೆ. ಪ್ರತಿ ವರ್ಷ ಮಹಾಶಿವರಾತ್ರಿಗೆ ಜಾತ್ರೆ ಪ್ರಾರಂಭವಾಗುತ್ತದೆ. ಶಿವರಾತ್ರಿ ದಿನವೇ ಉತ್ಸವ ಮೂರ್ತಿಗಳನ್ನು ತೆಗೆದು ಗದ್ದುಗೆ ಮೇಲೆ ಇರಿಸಿ ಮಹಾಭಿಷೇಕ ಮಾಡುತ್ತಾರೆ. ಫಾಲ್ಗುಣ ಶುದ್ಧ ಪಾಡ್ಯ ಕಂಕಣ ಕಟ್ಟುವ ದಿನ ಪೂಜಾರಿಗಳು ಮತ್ತು ಸೇವಕರು ಅಂದು ಕಂಕಣ ಕಟ್ಟಿಕೊಳ್ಳುವರು. ಜಾತ್ರೆ ಮುಗಿಯುವರೆಗೆ ನದಿಯನ್ನು ದಾಟಲಾರದೆಂಬ ನಿಯಮವಿದೆ. ಕಂಕಣ ಕಟ್ಟಿಕೊಂಡ ಮೇಲೆ ತೇರಿಗೆ ಕಳಸ ಇರಿಸಿ ಛತ್ರಿ ಏರಿಸುವರು. ನದಿಗೆ ಹೋಗಿ ಗಂಗಾ ಪೂಜೆ ಮಾಡಿ ಪೂರ್ಣ ಕುಂಭ ತೆಗೆದುಕೊಂಡು ಬರುತ್ತಾರೆ. ಆಮೇಲೆ ಗಣಾರಾಧನೆ ಜರುಗುತ್ತದೆ. ಫಾಲ್ಗುಣ ಶುದ್ಧ ಜಾತಿಯೆಂದು ಪ್ರಭವಳಿ ಫಾ.ಶು. ಫೆಬ್ರವರಿ ಮಾಸದಲ್ಲಿ ಮಹಾ ರಥೋತ್ಸವ ರಥದಲ್ಲಿ ದೇವರ ಮೂರ್ತಿ ಜೊತೆಗೆ ಶ್ರೀಮಠದ ಅಧಿಪತಿಸ್ವಾಮಿಗಳನ್ನು ಕೂಡಿಸುವರು.

ಮರುದಿವಸ ಪಲ್ಲಕ್ಕಿ ಮಹಾಸೇವೆ ನಡೆಯುತ್ತದೆ. ಅದೇ ರಾತ್ರಿ ಕಾಮದಹನ ಕಾರ್ಯಕ್ರಮ ಜರುಗುತ್ತದೆ. ಮಾರನೇ ದಿನ ಕಡುಬಿನ ಕಾಳಗ ಅದಾದ ನಂತರ ರಾತ್ರಿ ದೇವರನ್ನು ತೊಟ್ಟಿಲಲ್ಲಿ ಹಾಕುವುದು.

೩:೧:೧೨: ಕೋರಿಸಿದ್ದೇಶ್ವರ ಜಾತ್ರೆ :

ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ನಾಲವಾರು ಸುಕ್ಷೇತ್ರ ಹಾಗೂ ಶರಣರು ಮೆಟ್ಟಿದ ಧರೆಯ ಪಾವನ ಗ್ರಾಮ ಇದು. ಅನೇಕ ಮಹಿಮಾ ಪುರುಷರು ಜನ್ಮವೆತ್ತಿದ ಪುಣ್ಯ ಬೀಡು. ಶ್ರೀ ಕೋರಿಸಿದ್ದೇಶ್ವರರು ಇಂಥ ಮಹಿಮಾ ಪುರುಷರಲ್ಲಿ ಒಬ್ಬರು. ೧೭೭೧ರಲ್ಲಿ ತಿಮ್ಮಾಪೂರ ಹಿರೇಮಠದ ಶಿವಲಿಂಗಯ್ಯ ಶಿವದೇವಿ ಗರ್ಭಾಂಬುಧಿಯಲ್ಲಿ ಅವತರಿಸಿದ ಕೋರಿಸಿದ್ದೇಶ್ವರರು, ಕಾಖಂಡಕಿಯ ಪೂಜ್ಯ ಶ್ರೀ ಗುರು ಮಲ್ಲಾರಾಧ್ಯರ ಆಧ್ಯಾತ್ಮ ಪ್ರವಾಹದಲ್ಲಿ ಮಿಂದರು. ಗುರು ದಯಮಾಡಿಸಿದರು. ಅಲ್ಲಿಯ ಮುರುಘೇಂದ್ರ ಸ್ವಾಮಿ ಮಠದಲ್ಲಿ ವಾಸವಾಗಿದ್ದ ಬ್ರಹ್ಮ ಪಿಶಾಚಿಯನ್ನು ಹೊಡೆದೋಡಿಸಿದರು. ಕೋರಿಸಿದ್ದೇಶ್ವರ ಘನತೆಯನ್ನು ಕಂಡ ಭಕ್ತರು ಮಠವನ್ನೇ ಕಟ್ಟಿಸಿಕೊಟ್ಟರು. ಮಲ್ಲಾರಾದ್ಯರ ಅಪ್ಪಣೆಯಂತೆ ಕಾಖಂಡಕಿ ಮಠದ ಅಧಿಕಾರವನ್ನು ವಹಿಸಿಕೊಂಡರು. ಒಮ್ಮೆ ಕಾಖಂಡಕಿಯಿಂದ ನಾಲವಾರಕ್ಕೆ ಪಾದಯಾತ್ರೆ ಕೈಕೊಂಡಾಗ ಹೊನ್ನಾಳದ ಹತ್ತಿರ ತುಂಬಿ ಹರಿದ ಭೀಮಾ ನದಿಯಲ್ಲಿ ಕಂಬಳಿ ಹಾಸಿ ನದಿ ದಾಟಿದರು. ನೂರಾರು ಪವಾಡಗಳನ್ನು ಮಾಡಿ ತೋಟೇಂದ್ರ ಶಿವಾಚಾರ್ಯರಿಗೆ ಪಟ್ಟಗಟ್ಟಿ ಲಿಂಗೈಕ್ಯರಾದರು.

ಸಧ್ಯದಲ್ಲಿರುವ ಪೀಠಾಧಿಪತಿಗಳಾದ ರತ್ನ ಬಿರುದಾಂಕಿತ ಶ್ರೀ ತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು ಉತ್ತಮ ವಾಗ್ಮಿಗಳು, ಶಿವಸಾಹಿತಿಗಳು, ದಾಸೋಹ ಮೂರ್ತಿಗಳು ಲಕ್ಷದೀಪೋತ್ಸವ ತನಾರತಿಗಳೆಂಬ ಧಾರ್ಮಿಕ ಕಾರ್ಯಕ್ರಮ ಹಮ್ಮಿಕೊಂಡು ಪೀಠದ ಘನತೆ ಹೆಚ್ಚಿಸಿದ್ದಾರೆ.

ಪ್ರತಿವರ್ಷ ಜನವರಿ ತಿಂಗಳಲ್ಲಿ ಮೂರು ದಿನ ಮಹಾತ್ಮಾ ಸದ್ಗುರು ಕೋರಿ ಸಿದ್ದೇಶ್ವರ ಜಾತ್ರೆ ಅತಿ ವಿಜೃಂಭಣೆಯಿಂದ ಜರುಗುತ್ತವೆ. ಉತ್ಸವದ ಸಮಯದಲ್ಲಿ ಮಹಾಮಹಿಮರ ರಥಕ್ಕೆ ೨೧ ಕಳಸಾರೋಹಣ ಏರಿಸುವ ಸಮಯದಲ್ಲಿ ನಾಲವಾರು ಹಾಗೂ ಸುತ್ತ-ಮುತ್ತಲಿನ ಗ್ರಾಮದವರು ತಲಾ ಒಂದೊಂದು ಕಳಸದಂತೆ, ಒಟ್ಟು ೨೧ ಕಳಸಾರೋಹಣ ನೆರವೇರಿಸುತ್ತಾರೆ, ಉತ್ಸವದ ಪ್ರತಿದಿನ ಸಂಜೆ ಪುರಾಣ, ಪ್ರವಚನ ಸಂಗೀತ ಹಾಗೂ ಪಾಯಸದ ಊಟದ ವ್ಯವಸ್ಥೆ ಇರುತ್ತದೆ. ಪ್ರಾತಃ ಕಾಲ ಕರ್ತೃ ಗದ್ದುಗೆಗೆ ರುದ್ರಾಭಿಷೇಕ, ಇದಾದ ಮೇಲೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಾದ್ಯ ವೈಭವಗಳೊಂದಿಗೆ, ಪುರಾಣ ಮೆರವಣಿಗೆ ಅಲ್ಲಿಯ ಮಹಾ ಮಠವನ್ನು ತಲುಪುವುದು. ಸಾಯಂಕಾಲ ಸ್ಥಳೀಯ ಶಾಲಾ ಮಕ್ಕಳಿಂದ ವಿವಿಧ ಮನೋರಂಜನೆ ಕಾರ್ಯಕ್ರಮಗಳಿರುತ್ತವೆ. ಅಂದು ಮಧ್ಯರಾತ್ರಿ ವೈಭವದ ಆರತಿಯ ಮಹೋತ್ಸವ ವೈವಿಧ್ಯಮಯವಾಗಿರುತ್ತದೆ.

೩:೧:೧೩: ಭದ್ರೇಶ್ವರ ಜಾತ್ರೆ :

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ನಿಡವಂಚ ಗ್ರಾಮದ ಭದ್ರೇಶ್ವರರು ೧೭೬೨ ರಿಂದ ೧೮೩೨ ರವರೆಗೆ ಬದುಕಿ ಬಾಳಿದವರು. ದೀನ ದಲಿತರ ದುಃಖಿತರ ತಾಪತ್ರಯಗಳನ್ನು ದೂರ ಮಾಡಿದ ದಯಾಮಯಿಗಳು ಅಂಗದ ಮೇಲೆ ಲಿಂಗಧರಿಸಿ ಷಟಸ್ಥಲಮಾರ್ಗಿಗಳಾಗಿ ಲಿಂಗಾಂಗ ಸಾಮರಸ್ಯದ ಸಿದ್ಧಿ ಪಡೆದುಕೊಂಡ ಮಹಾಮಹಿಮ ಶಿವಯೋಗಿಗಳು. ಜನ ಬದುಕಿ ನೀತಿವಂತರಾಗಬೇಕು ಸಚ್ಚಾರಿತ್ರ್ಯಶೀಲರಾಗಿ ಮುಕ್ತಿ ಪಡೆಯಬೇಕೆಂದು ಜನಸಾಮಾನ್ಯರಿಗೆ ತಿಳಿಸಿ ನೂರಾರು ಅನುಭವ ಪದಗಳು ರಚಿಸಿ ೧೮೩೨ರಲ್ಲಿ ಶಿವನಲ್ಲಿ ಲೀನರಾದರು.

ಗುರುಭದ್ರೇಶ್ವರ ತರುವಾಯ ಅವರ ಶಿಷ್ಯತ್ವ ವಹಿಸಿದ ಗೋಪಾನ ಪಳ್ಳಿಯ ಬುದ್ಧಯ್ಯ ಇವರಾದ ಮೇಲೆ ನಿಡವಂಚ ಭೀಮರಾಯ ಪಾಟೀಲರು ಇದೀಗ ಶ್ರೀ ಚನ್ನಮಲ್ಲೇಶ್ವರ ತ್ಯಾಗಿ ಗುರುಭದ್ರೇಶ್ವರ ಮಠದ ಪೀಠಾಧಿಪತಿಗಳಾಗಿದ್ದಾರೆ. ಲಿಂಗೈಕ್ಯ ಭದ್ರೇಶ್ವರ ಸ್ಮರಣಾರ್ಥ ಪ್ರತಿವರ್ಷ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ನಾಲ್ಕು ದಿನ ಭದ್ರೇಶ್ವರ ಶಿವಯೋಗಿಗಳ ಜಾತ್ರೆ ಮಹೊತ್ಸವ ನಡೆಸುತ್ತಾರೆ.

ಉತ್ಸವದ ಪ್ರಾರಂಭದ ದಿವಸ ಷಟ್‌ಸ್ಥಲ ಧ್ವಜಾರೋಹಣ ಬಸವಜ್ಯೋತಿ ಬೆಳಗಿಸುವುದು. ಮುಂತಾದ ಕಾರ್ಯಗಳು ಜರುಗುತ್ತವೆ. ಸಂಜೆ ಹೊತ್ತಿಗೆ ಭದ್ರೇಶ್ವರ ಕರ್ತೃಗದ್ದುಗೆಗೆ ರುದ್ರಾಭಿಷೇಕ, ರಾತ್ರಿ ಸಾಮೂಹಿಕ ಲಿಂಗಪೂಜೆ, ಗೀಗೀ ಪದಗಳ ಗಾಯನ ನಡೆಯುತ್ತದೆ. ಮರುದಿನ ಮುಂಜಾನೆ ನವಗ್ರಹಶನೇಶ್ವರ ಕರ್ತೃಗದ್ದುಗೆಗೆ ರುದ್ರಾಭಿಷೇಕ, ವಿದ್ವಾಂಸರಿಂದ ಉಪನ್ಯಾಸ ಅನಂತರ ಭಜನೆ ದಿಂಡಿಗಳ ಆಗಮನ, ಭರ್ಜರಿ ಭಜನೆ ಒಂದೆಡೆಯಾದರೇ, ಇನ್ನೊಂದೆಡೆ : ಬೃಹತ್ ಪ್ರಮಾಣದ ದನಗಳ ಜಾತ್ರೆ ಇರುತ್ತದೆ. ಉತ್ತಮ ದನಕರುಗಳಿಗೆ ಸೂಕ್ತ ಬಹುಮಾನ ಕೊಡುವ ಪರಂಪರೆ ಇಲ್ಲಿದೆ.

ಉತ್ಸವದ ಮೂರನೆಯ ದಿನ ಕರ್ತೃ ಗದ್ದುಗೆಗೆ ರಾಜೋಟೇಶ್ವರ, ಶಂಕರಲಿಂಗೇಶ್ವರ, ನಾಗಲಿಂಗೇಶ್ವರ, ಶನೇಶ್ವರ, ನವಗ್ರಹ ಆಂಜನೇಯ, ಪಾಂಡುರಂಗ, ರುಕ್ಮಿಣಿಗಳಿಗೆ ರುದ್ರಾಭಿಷೇಕ ಪೂಜೆ ಮಾಡುತ್ತಾರೆ. ಕುಂಭಮೇಳ ನಡೆಸುತ್ತಾರೆ. ಸಂಜೆ ರಥೋತ್ಸವ ಹಾಗೂ ಪಲ್ಲಕ್ಕಿ ಪೂಜೆಯಾದ ಮೇಲೆ ಮುತ್ತೈದೆಯರಿಂದ ಕೊಡದಲ್ಲಿ ಕುಂಭ ತರುವ ವಿಶಿಷ್ಟ ಪದ್ಧತಿ ಇಲ್ಲಿದೆ. ಕೊನೆಯ ದಿನ ಶಿವಭಜನೆ ಭದ್ರೇಶ್ವರ ಶಿವಯೋಗಿಗಳು ರಚಿಸಿದ ಅನುಭವ ಪದಗಳ ಗಾಯನ ಇರುತ್ತದೆ ಇದಾದ ನಂತರ ಭಕ್ತರು ಕೊಟ್ಟ ಧನ–ಧಾನ್ಯಗಳ ಸಹಾಯದಿಂದ ಖಾಂಡ ಮಾಡುವರು. ಉತ್ಸವಕ್ಕೆ ಬಂದ ಭಕ್ತರೆಲ್ಲರೂ ತಪ್ಪದೇ ಪ್ರಸಾದ ಸ್ವೀಕರಿಸುತ್ತಾರೆ. ಜಯಘೋಷಗಳು ಮೊಳಗುತ್ತವೆ. ಜಾತ್ರೆ ಸಂದರ್ಭದಲ್ಲಿ ಹುಮನಾಬಾದ ತಾಲ್ಲೂಕಿನಿಂದ ದಿನದಲ್ಲಿ ನಾಲ್ಕು ಸಲ ಬಸ್ಸು ಬಂದು ಹೋಗುವ ವಿಶೇಷ ಸೌಕರ್ಯ ಇರುತ್ತದೆ. ಬೀದರ ಜಿಲ್ಲೆಯ ಸುತ್ತ–ಮುತ್ತಲಿನ ಸಾಧು ಸಂನ್ಯಾಸಿಗಳು, ಈ ಉತ್ಸವದಲ್ಲಿ ಭಾಗವಹಿಸುತ್ತಾರೆ.

೩:೧:೧೪: ಶಿವಲಿಂಗೇಶ್ವರ ಜಾತ್ರೆ :

ಬಸವಕಲ್ಯಾಣ ತಾಲ್ಲೂಕಿನ ಖೇಳಗಿ ಗ್ರಾಮದಲ್ಲಿ ೧೫–೧೬ನೇ ಶತಮಾನದಲ್ಲಿ ಆಗಿ ಹೋದ ವಿಭೂತಿ ಹಾಗೂ ಪವಾಡ ಪುರುಷ ಶಿವಲಿಂಗೇಶ್ವರ ದೇವಾಲಯವಿದೆ. ಪ್ರತಿವರ್ಷ ಅವರ ಸ್ಮರಣಾರ್ಥವಾಗಿ ಏಪ್ರಿಲ್ ತಿಂಗಳಲ್ಲಿ ಎರಡು ದಿನ ಜಾತ್ರೆ ನಡೆಸುತ್ತಾರೆ. ಪೂಜೆ, ಅಖಂಡ ಶಿವನಾಮ, ಅಭಿಷೇಕ ಮಾಡುವ ಆಚರಣೆಗಳು ಇಲ್ಲಿವೆ. ಜಾತ್ರೆಗೆ ಬಂದ ಭಕ್ತರಿಗಾಗಿ ಹಾಗೂ ಸ್ಥಳೀಯರಿಗಾಗಿ ಖಾಂಡ ಮಾಡಿ ಊಟ ಬಡಿಸುತ್ತಾರೆ. ದೂರದಿಂದ ಬಂದ ಭಜನೆ ಮೇಳದವರು ರಾತ್ರಿ ಸಮಯದಲ್ಲಿ ಭಜನೆ ಮಾಡುತ್ತಾರೆ.

ಉತ್ಸವದ ಎರಡನೆಯ ದಿನ ಮುಂಜಾನೆ ಜಂಗಿ ಕುಸ್ತಿ ಸ್ಪರ್ಧೆಗಳು ನಡೆದರೆ ಸಂಜೆ ಹೊತ್ತಿಗೆ ರಥೋತ್ಸವ ಕಾರ್ಯಕ್ರಮವಿರುತ್ತದೆ. ಪ್ರವಚನ ಮತ್ತು ಅಖಂಡ ಶಿವನಾಮ ಸ್ಮರಣೆಯಾದನಂತರ ಮಂಗಳ ಕಾರ್ಯಕ್ರಮವಿರುತ್ತದೆ.

೩:೧:೧೫: ಬಸವೇಶ್ವರ ಜಾತ್ರೆ :

ಎಂಟು ನೂರು ವರ್ಷಗಳ ಹಿಂದೆ ಬಸವೇಶ್ವರರು ಬಿಜಾಪೂರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಜನಿಸಿ, ಕಲ್ಯಾಣದ ಬಿಜ್ಜಳ ರಾಜನಲ್ಲಿ ಮಂತ್ರಿಯಾಗಿ, ಅಧಿಕಾರ ಸ್ಥಾನದಲ್ಲಿದ್ದರೂ ಜನಸಾಮಾನ್ಯರ ಜೊತೆಕೂಡಿ ಜನಹಿತಕಾರ್ಯಗಳಲ್ಲಿ ನಿರತರಾಗಿ ಜಾತಿ ಭೇದಗಳನ್ನು ಖಂಡಿಸಿ, ಎಲ್ಲರೂ ಸಮಾನರು, ದುಡಿಮೆಯೇ ಧರ್ಮ ಎಂದು ವಚನಗಳ ಮೂಲಕ ಸಾರಿ, ವೀರಶೈವ ಧರ್ಮ ಉದಾತ್ತಗೊಳಿಸಿ, ಕೂಡಲ ಸಂಗಮದಲ್ಲಿ ಲೀನರಾದ ವಿಭೂತಿ ಪುರುಷ ಬಸವೇಶ್ವರರು. ಈ ಪುಣ್ಯ ಪುರುಷನ ಸ್ಮರಣಾರ್ಥ ಬಸವೇಶ್ವರ ದೇವಾಲಯ ಕಟ್ಟಿಸಿದ್ದಾರೆ. ಪ್ರತಿವರ್ಷ ಬಸವ ಜಯಂತಿಯಂದು ೪ ದಿನಗಳ ಕಾಲ ಜಾತ್ರೆ ನಡೆಸುತ್ತಾರೆ. ಬೀದರದಿಂದ ಹತ್ತು ಕಿ.ಮೀ. ಅಂತರದಲ್ಲಿರುವ ಚಿಮಕೋಡ ಚಿಕ್ಕಹಳ್ಳಿ, ವೀರಶೈವರೇ ಹೆಚ್ಚಾಗಿರುವ ಈ ಹಳ್ಳಿಯಲ್ಲಿ ಜಾತ್ರೆ ಭರ್ಜರಿಯಾಗಿ ಆಚರಿಸುತ್ತಾರೆ. ಜಾತ್ರೆ ದಿನಗಳಲ್ಲಿ ಬಸವೇಶ್ವರ ವಿಗ್ರಹಕ್ಕೆ ಪೂಜೆ ಮಾಡುವುದು, ಟೆಂಗು ಒಡೆವುದು, ಹೋಳಿಗೆ ನೈವೇದ್ಯ ಮಾಡಿ ಅರ್ಪಿಸುವುದು ಮಾಡುತ್ತಾರೆ.

೩:೧:೧೬: ಮಹಾಂತೇಶ್ವರ ಜಾತ್ರೆ :

ಕಲುಬುರ್ಗಿ (ಚಿಣಮಗೇರಿಯ) ಚೌಡಾಪೂರದ ತಪೋನಿಧಿ ಪವಾಡ ಪುರುಷ ಮಹಾಂತೇಶ್ವರ ಜಾತ್ರೆ ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ಎರಡು ದಿನ ನಡೆಯುತ್ತದೆ. ಲಿಂಗೈಕ್ಯ ಮಹಾಂತೇಶ್ವರ ಇವರು ಹಗಲಿರುಳು ಜ್ಞಾನಾನ್ನದಾಸೋಹ ನೀಡಿ ಅಧ್ಯಾತ್ಮ ಮಂದಿರದಿಂದ ಕಲಿಯುಗದಲ್ಲಿ ಧರ್ಮತತ್ವ ಪ್ರಚಾರ ಮಾಡಿದ ವಿಭೂತಿ ಪುರುಷರು.

ಜಾತ್ರೆ ಪ್ರಾರಂಭದಲ್ಲಿ ಧ್ವಜಾರೋಹಣ ಹಾಗೂ ಮಹಾರುದ್ರಾಭಿಷೇಕ ಪದ್ಧತಿಗಳಿರುತ್ತವೆ. ಮರುದಿನ ಲಿಂಗದೀಕ್ಷೆ ಪಲ್ಲಕ್ಕಿ ಉತ್ಸವ ನಂದಿಕೋಲಿನ ಮೆರವಣಿಗೆ ವಾದ್ಯ ವೈಭವಗಳೊಂದಿಗೆ ಮಾಡುವರು. ಮದ್ದುಗುಂಡು ಸುಡುವರು. ಕುಣಿದು ನಲಿದಾಡುವರು; ಜಯಘೋಷಗಳು ಮೊಳಗಿಸುವರು. ಅನ್ನಸಂತರ್ಪಣೆ ಮಾಡಿ ಮಂಗಳಾರುತಿ ಹಾಡುವರು.

೩:೧:೧೭: ಚನ್ನಬಸವೇಶ್ವರ ಶಿವಯೋಗಿಗಳ ಜಾತ್ರೆ :

"ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದ ಶರಣರ ನೆಲೆ ಬೀಡಾದ ಕಲ್ಯಾಣ ನಾಡಿನಲ್ಲಿ ಮಹಾಜ್ಯೋತಿಯಾಗಿ ಬೆಳಗಿದ ಹಾರಕೂಡದ ಸದ್ಗುರು ಶ್ರೀ ಚನ್ನಬಸವೇಶ್ವರ ಶಿವಯೋಗಿಗಳು ಗುಲಬರ್ಗಾ ಜಿಲ್ಲೆಯ ಮಗ್ಗಿಯಲ್ಲಿ ೧೮೫೭ರಲ್ಲಿ ಜನಿಸಿದ ಇವರು ಬಾಲ್ಯದಿಂದಲೇ ಕಾರಣಿಕ ಶಿಸುವಾಗಿ ಬೆಳೆದರು. ನಂತರ

ಹಾರಕೂಡದಲ್ಲಿ ಬಂದು ನೆಲೆಸಿ ಪವಾಡ ಪುರುಷರೆಂದೇ ಖ್ಯಾತರಾದರು. ಭಕ್ತರ ಮನೆ ಮನೆಗೆ ತೆರಳಿ ಸರಳವಾದ ಭಾಷೆಯಲ್ಲಿ ದೃಷ್ಟಾಂತಗಳನ್ನು ಹೇಳುತ್ತಿದ್ದರು. ಇವರ ಬೋಧನಗೆ ಭಕ್ತರು ದಂಗಾಗುತ್ತಿದ್ದರು. ಲಿಂಗದ ಸಂಬಂಧ ಮತ್ತು ಅದರ ಪ್ರಾಮುಖ್ಯತೆ ತಿಳಿಸಿಹೇಳುತ್ತಿದ್ದರು. ಶ್ರೀಗಳು ಬಿನ್ನ ಹೇಳಿದವರ ಮನೆಗೆ ಹೋಗುವಾಗ ರಸ್ತೆಯಲ್ಲಿ ಕಟ್ಟಿಗೆ ಕುಳ್ಳುಗಳನ್ನು ಆಯ್ದುಕೊಂಡು ಅವುಗಳನ್ನು ಅವರ ಮನೆಗೆ ಒಯ್ದು ಕೊಡುತ್ತಿದ್ದರು. ಗ್ರಾಮದಲ್ಲಿ ಯಾವುದೇ ಜಾತಿಯ ಜನಾಂಗದ ಒಳ ವ್ಯಾಜ್ಯಗಳಿದ್ದರೆ ಬಗೆ ಹರಿಸುವ ಮನೋಭಾವದವರಾಗಿದ್ದರು. ಮಠಕ್ಕೆ ಹೆಚ್ಚಿನ ಆಸ್ತಿಪಾಸ್ತಿ ಇರಬಾರದೆಂಬುದು ಇವರ ಉದ್ದೇಶವಾಗಿತ್ತು ನಾಡಿನಾದ್ಯಂತ ಸಂಚರಿಸಿ ಸದ್‌ಭಕ್ತರ ಉದ್ಧಾರವೇ ತಮ್ಮ ಉದ್ದಾರವೆಂದು ತಿಳಿದು, ಮೇಲು ಕೀಳೆನ್ನದೆ ಸರ್ವರಿಗೂ ಹಿತೋಪದೇಶ ಮಾಡುತ್ತಿದ್ದರು. ೧೯೫೨ರಲ್ಲಿ ಚಿಂಚೋಳಿಯಲ್ಲಿ ಲಿಂಗೈಕ್ಯರಾದರು. ಅವರ ಪ್ರಸಾದ ಕಾರ್ಯವನ್ನು ಹಾರಕೂಡಕ್ಕೆ ತಂದು ಸಮಾಧಿ ಮಾಡಲಾಯಿತೆಂದು ಉಲ್ಲೇಖಿಸಿದ್ದಾರೆ. (ಲಠ್ಠೆ: ಇಸ್ವಿ ಇಲ್ಲ :೮) ಅವರ ಲಿಂಗೈಕ್ಯ ದಿನದ ಸ್ಮರಣಾರ್ಥ ಅಂದಿನಿಂದ ಇಂದಿನವರಿಗೆ ಪ್ರತಿವರ್ಷ ಜಾತ್ರೆಯನ್ನು ನಡೆಸಿಕೊಂಡು ಬರಲಾಗುತ್ತಿದೆ. ಬಸವಕಲ್ಯಾಣ ತಾಲ್ಲೂಕಿನ ಹಾರಕೂಡದಲ್ಲಿ ಪ್ರತಿವರ್ಷ ಜನವರಿಯಲ್ಲಿ ಮೂರು ದಿವಸ ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ಜಾತ್ರೆ ವೈಶಿಷ್ಟ್ಯಪೂರ್ಣವಾಗಿ ಜರುಗುತ್ತದೆ. ಕಲ್ಯಾಣ ಕರ್ನಾಟಕದ ಭಾಗದ ಭಾವುಕ ಭಕ್ತಾದಿಗಳಿಗೆ ಈ ಜಾತ್ರೆ ಪವಿತ್ರವಾದುದು. ಈಗಿನ ಶ್ರೀಗಳಿಂದ ದೀಕ್ಷಾ ಸಂಸ್ಕಾರ ಪಡೆದುಕೊಂಡು ಪ್ರತಿಯೊಬ್ಬ ಭಕ್ತರು ಪ್ರತಿವರ್ಷದ ಉತ್ಸವದಲ್ಲಿ ಪಾಲ್ಗೊಳ್ಳುವುದು ಕಟ್ಟುನಿಟ್ಟಾದ ನಿಯಮವಾಗಿದೆ.

ಇಂದಿನ ಶ್ರೀ ಚನ್ನವೀರ ಶಿವಾಚಾರ್ಯರು ಕೂಡಾ ಹಿರಿಯ ಶಿವಯೋಗಿಗಳ ಆದರ್ಶ ಹಾಗೂ ತತ್ವಗಳನ್ನು ಪರಿಪಾಲಿಸಿಕೊಂಡು ಮುನ್ನಡೆಯುತ್ತಿದ್ದಾರೆ. ಸಮಾಜಧರ್ಮ ಹಾಗೂ ಆಧ್ಯಾತ್ಮ ಚಿಂತನೆಯ ಮಜಲುಗಳೊಂದಿಗೆ ಬೆಳೆಯುವಂತೆ ಬೋಧನೆ ಮಾಡುತ್ತಿದ್ದಾರೆ. ಜಾತ್ರೆಯಲ್ಲಿ ರುದ್ರಾಭಿಷೇಕ ಅಗ್ಗಿ ತುಳಿಯುವಿಕೆ ರಥೋತ್ಸವ ಅಲ್ಲದೆ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಕೀರ್ತನೆ ಭಜನೆ ಗೀಗೀ ಮೇಳ ಸಂಗೀತ ಸಭೆಗಳೂ ಒಂದೆಡೆಯಾದರೆ ದನಗಳ ಪ್ರದರ್ಶನ ಜಂಗಿ ಕುಸ್ತಿಗಳು, ಜಾತ್ರೆಯ ವಿಶೇಷ ಆಕರ್ಷಣೆಗಳೆನ್ನಿಸಿವೆ; ಒಟ್ಟಾರೆ ಜಾತ್ರಾಮಹೋತ್ಸವ ಸಾಂಸ್ಕೃತಿಕ ಧಾರ್ಮಿಕ ಆಧ್ಯಾತ್ಮಿಕ ಪರಂಪರೆಯ ಪ್ರತೀಕವಾಗಿದೆ.

೩:೧:೧೮: ಮೌನೇಶ್ವರ ಜಾತ್ರೆ :

ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ೧೬ ಕಿ.ಮೀ. ಅಂತರದಲ್ಲಿರುವ ತಿಂಥಿಣಿ ಎಂಬ ಗ್ರಾಮದಲ್ಲಿ ಕೃಷ್ಣಾನದಿಯ ತೀರಕ್ಕೆ ಎತ್ತರದ ಮೇಲೆ ಗುಮ್ಮಟಾಕಾರದ ಮೌನೇಶ್ವರ ದೇವಾಲಯ ನೆಲೆಗೊಂಡಿದೆ. ೧೬-೧೭ನೆಯ ಶತಮಾನದಲ್ಲಿ ಆಗಿ ಹೋದ ಪವಾಡ ಪುರುಷ ಮೌನೇಶ್ವರರು ಹಿಂದು ಮುಸ್ಲಿಂಮರ ಭಾವೈಕ್ಯತೆಗಾಗಿ ಶ್ರಮಿಸಿ ಸಾಧನೆ ಮಾಡಿರುವ ಇವರ ಅದ್ಭುತ ಸಾಮಾಜಿಕ ಪವಾಡವನ್ನಂತೂ ನಾವು ನಂಬಲೇಬೇಕು. "ಎಲ್ಲ ಮಾನವ ನಿರ್ಮಿತ ಜಾತಿ, ಕುಲ, ಮತ, ಶಾಸ್ತ್ರ, ಪುರಾಣ ದೈವಾದಿಗಳನ್ನು ಖಂಡಿಸಿದ ಮೌನೇಶ್ವರರರು ಕೇವಲ ಮಾನವ ಧರ್ಮವನ್ನು ಎತ್ತಿ ಹಿಡಿದಿದ್ದರು ಎಂಬುದಕ್ಕೆ ಅವರ ವಚನಗಳೇ ಸಾಕ್ಷಿಯಾಗಿವೆ. ಅವರು ವಿಶ್ವಕರ್ಮ ಜನಾಂಗದಲ್ಲಿ ಹುಟ್ಟಿ ಬಂದವರೆಂಬುದನ್ನು ಸ್ಪಷ್ಟವಾಗಿ ಅನೇಕ ವಚನಗಳಲ್ಲಿ ಮೌನೇಶ್ವರರು ಹೇಳಿಕೊಂಡಿದ್ದಾರೆ. (ಅರ್ಕಸಾಲಿ:೧೯೯೦:೧೦-೧೬) ಮೌನೇಶ್ವರ ಸತ್ಪುರುಷ. ಈತನು ಸೂಫಿ ಪಂಥದ ಮಹಾ ಪುರುಷನೆಂದು ಮುಸ್ಲಿಂರು ಪೂಜಿಸುತ್ತಾರೆ. ಭಾರತ ಹುಣ್ಣಿಮೆಯಂದು ಜಾತ್ರೆ ನೆರವೇರುತ್ತದೆ. ಅಭಿಷೇಕ ಪೂಜೆ ನಡೆಯುತ್ತದೆ. ದೂರದಿಂದ ಅಕ್ಕಸಾಲಿಗರು ಬಂದು ಸೇರುತ್ತಾರೆ. "ಹಿಂದು-ಮುಸಲ್ಮಾನರು ತಂಡೋಪತಂಡವಾಗಿ ಉತ್ಸವದಲ್ಲಿ ಭಾಗವಹಿಸುತ್ತಾರೆ. ಒಂದು ವಾರದವರೆಗೆ ಜಾತ್ರೆ ನಡೆಯುತ್ತದೆ. ಮೌನೇಶ್ವರರು ಬೇಡರನ್ನು ಸುರುಪುರದಲ್ಲಿ ರಾಜರಾಗುವಂತೆ ಮಾಡಿದರು. ಅವರೇ ಪಟ್ಟಕಟ್ಟಿ ಅವರ ಆಳ್ವಿಕೆಯನ್ನು ಅಲ್ಲಿ ಪ್ರಾರಂಭಿಸಿದರು ಎನ್ನುವುದಕ್ಕೆ ವಚನಗಳು ಸಾಕ್ಷಿಯಾಗಿವೆ" (ಅರ್ಕಸಾಲಿ:೧೯೯೦:೫೦-೫೧)ಅಷ್ಟೇ ಅಲ್ಲ ಪ್ರತಿ ವರ್ಷದ ಜಾತ್ರೆಯಲ್ಲಿ ರಾಜಮನೆತನದವರು ಮನೆಯಿಂದಲೇ ಪಲ್ಲಕ್ಕಿ ಮುಂತಾದುವುಗಳು ಬರುವ ಪರಿಪಾಠವಿದೆ.

೩:೧:೧೯: ಚನ್ನಬಸವ ಸ್ವಾಮಿಗಳ ಜಾತ್ರೆ :

ಗಂಗಾವತಿಯ ಕಲ್ಮಠ ಸುತ್ತಮುತ್ತಲೆಲ್ಲ ಬಹಳ ಪ್ರಸಿದ್ಧವಾದ ಮಠ, ಮೂಲತಃ ಈ ಮಠವನ್ನು ಕಟ್ಟಿಬೆಳೆಸಿದವರು ಲಿಂ.ಚನ್ನಬಸವಸ್ವಾಮಿಗಳು. ವಿಜಾಪುರ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ ಶಿರೂರದಲ್ಲಿ ಚೌಕಿಮಠ ಮರುಳಸಿದ್ಧಯ್ಯ ಮತ್ತು ಗೌರಮ್ಮ ದಂಪತಿಗಳ ಪುತ್ರರಾಗಿ ಜನಿಸಿದ ಇವರಿಗೆ ಶ್ರೀ ಹುಚ್ಚೇಶ್ವರಸ್ವಾಮಿಗಳು ಚನ್ನಬಸವ ಎಂದು ನಾಮಕರಣ ಮಾಡಿದರು. ಮುಂದೆ ಅವರು ಇದೇ ಮಠವನ್ನು ಕಟ್ಟಿಬೆಳೆಸಿದರು.

ಚನ್ನಬಸವ ತಂದೆ ತಾಯಿಗಳನ್ನು ಕಳೆದುಕೊಂಡು ತಬ್ಬಲಿಯಾದಾಗ ಹುಚ್ಚೇಶ್ವರ ಸ್ವಾಮಿಗಳು ದಿಕ್ಷಾಸಂಸ್ಕಾರ ಕೊಟ್ಟು ಶಾಸ್ತ್ರೋಕ್ತವಾಗಿ ತಮ್ಮ ಮರಿಯನ್ನಾಗಿ ಮಾಡಿದರು. ದೀಕ್ಷೆ ಪಡೆದ ನಂತರ ಶಿವಪೂಜೆ, ಯೋಗಾಭ್ಯಾಸ ತತ್ವಜ್ಞಾನಾರ್ಜನೆಯಲ್ಲೆ ಕಾಲ ಕಳೆದರು. ಇದರಿಂದ ಆಧ್ಯಾತ್ಮಜ್ಞಾನ ಸಂಪಾದಿಸಿದರು. ನಂತರ ಚನ್ನಬಸವಸ್ವಾಮಿಗಳು ಹುಚ್ಚೇಶ್ವರ ಸ್ವಾಮಿಗಳ ಸಾನ್ನಿಧ್ಯ ತೊರೆದು ತೀರ್ಥಯಾತ್ರೆ ಕೈಗೊಂಡು ಚಿಕ್ಕಗೊಡಗಲಿಯ ಮಹಾಲಿಂಗ ಸ್ವಾಮಿಗಳ ಬಳಿಜ್ಞಾನ ಪಡೆದು ಅವರ ಅಪ್ಪಣೆಯ ಪ್ರಕಾರ ಗಂಗಾವತಿಯ ಕಲ್ಮಠಕ್ಕೆ ಬಂದು ಮಠದ ಪುನರ್ ನಿರ್ಮಾಣ ಕಾರ್ಯದಲ್ಲಿ ತಲ್ಲೀನರಾದರು, ಗಂಗಾವತಿಯ ಮಠದ ಅಭಿವೃದ್ಧಿಯಲ್ಲಿ ಇವರಿಗಿರುವ ನಿಷ್ಠೆ ಜನರನ್ನು ಆಕರ್ಷಿಸಿತು. ಎಷ್ಟೋ ಭಕ್ತರು ಇವರ ಶಿಷ್ಯರಾದರು. ಜನ ಅವರ ಸಲಹೆ ಆಶೀರ್ವಚನೆಗಳಿಗೆ ಮಾರು ಹೋದರು. ಮಠದ ಕೀರ್ತಿ ದಿನದಿಂದ ದಿನಕ್ಕೆ ಬೆಳೆಯಿತು.

ಒಂದು ದಿನ ಊರ ಹೊರಗೆ ದುರಗಮ್ಮನ ಹಳ್ಳದ ಈಚಲು ಮರಗಳು ಕಾಪಾಸು ಕಳ್ಳಿಗಳಿಂದ ಕೂಡಿದ ಒಂದು ಸ್ಥಳದಲ್ಲಿ ಬನ್ನಿಗಿಡ ಮತ್ತು ಬನ್ನಿಗಿಡದ ಕಟ್ಟೆಯ ಮೇಲೆ ಬಸವಣ್ಣನವರ ಮೂರ್ತಿ ದೊರೆಯಿತು. ಆ ಸ್ಥಳ ಸ್ವಾಮಿಗಳವರನ್ನು ಬಲವಾಗಿ ಆಕರ್ಷಿಸಿತು. ಆ ಸ್ಥಳದಲ್ಲಿ ಒಂದು ಮಠಕಟ್ಟಬೇಕೆಂಬ ಆಶೆ ಶ್ರೀಗಳವರ ಮನದಲ್ಲಿ ಮೊಳೆಯಿತು. ಅದು ಸರಕಾರಿ ಸ್ಥಳವಾಗಿತ್ತು. ಆಗಿನ ತಹಶೀಲ್ದಾರ ಆಲೂರ ಬಸವಪ್ಪನವರು ಅದನ್ನು ಸ್ವಾಮಿಗಳಿಗೆ ಬಿಟ್ಟು ಕೊಟ್ಟರು. ಜನರಿಂದ ಸಹಾಯ ಧನ ಹರಿದು ಬಂತು. ಶ್ರೀಗಳು ಸ್ವತಃ ನಿಂತು ಅಲ್ಲಿ ಮಠ ಕಟ್ಟಿದರು. ಈಗ ಅದು ವೈಭವಯುತ ಮಲ್ಲಿಕಾರ್ಜುನ ಮಠವಾಗಿದೆ.

ಕಲ್ಮಠದ ಅಧಿಕಾರವನ್ನು ತ್ಯಜಿಸಿ ಮಲ್ಲಿಕಾರ್ಜುನ ಮಠದ ಅಭಿವೃದ್ಧಿಗೆ ಸ್ವಾಮಿಗಳು ನಿಂತರು. ಜನರ ಸಹಕಾರದಿಂದ ಅದನ್ನು ದಾಸೋಹ ಮಠವನ್ನಾಗಿ ಪರಿವರ್ತಿಸಿದರು. ಅಂದಿನಿಂದ ಇಂದಿನವರೆಗೆ ಮಠದಲ್ಲಿ ಪ್ರತಿದಿನ ವಿದ್ಯಾರ್ಥಿಗಳಿಗೆ ಇತರರಿಗೆ ದಾಸೋಹ ನಡೆಯುತ್ತಿದೆ. ಇಲ್ಲಿ ಊಟ ಮಾಡಿ ಕಲಿತ ವಿದ್ಯಾರ್ಥಿಗಳು ಈಗ ಹಿರಿಯ ಅಧಿಕಾರಿಗಳಾಗಿದ್ದಾರೆ. ಗಂಗಾವತಿಯ ಪ್ರಮುಖ ವ್ಯಾಪಾರಸ್ಥಳವಾದ ಗಂಜಿಗೆ ಚನ್ನಬಸವ ಸ್ವಾಮಿಗಳ ಗಂಜ ಎಂದು ನಾಮಕರಣ ಮಾಡಲಾಗಿದೆ. ಗಂಗಾವತಿಯ ಒಕ್ಕಲುತನ ಹುಟ್ಟುವಳಿ ಮಾರಾಟ ಸಮಿತಿಯ ಮುಂದೆ ಸ್ವಾಮಿಗಳ ಪುತ್ಥಳಿ ರಾರಾಜಿಸುತ್ತಿದೆ.

ಶ್ರೀ ಚನ್ನಬಸವ ಸ್ವಾಮಿಗಳು ಶಾಲಿವಾಹನ ಶಕೆ ೧೮೬೭ನೇ ಪಾರ್ಥಿವನಾಮ ಸಂವತ್ಸರದ ಪುಷ್ಯಶುದ್ಧ ತ್ರಯೋದಶಿಯಂದು ಲಿಂಗೈಕ್ಯರಾದರು. ಅವರ ಪುಣ್ಯಾರಾಧನೆ

ನಿಮಿತ್ಯ ಪ್ರತಿವರ್ಷ ಜನವರಿ ಫೆಬ್ರವರಿ ತಿಂಗಳಲ್ಲಿ ಎರಡು ದಿವಸ ಜಾತ್ರೆ ಜರುಗುತ್ತದೆ. ಇಲ್ಲಿಯ ರಥೋತ್ಸವ ಅದು ತಾತನವರ ರಥ ಎಂದೇ ಪ್ರಸಿದ್ಧ. ಸುತ್ತ ಮುತ್ತಲಿನ ಭಕ್ತಾದಿಗಳು ಉತ್ಸವದಲ್ಲಿ ಭಾಗವಹಿಸುತ್ತಾರೆ. ಪುಣ್ಯಾರಾಧನೆಯ ದಿನ ರಥೋತ್ಸವ ಜರುಗುವ ಸಮಯದಲ್ಲಿ ತರಬೇತಿ ವಿಮಾನದಿಂದ ಪುಷ್ಪವೃಷ್ಠಿಯಾಗುತ್ತದೆ. ವಿಮಾನದಲ್ಲಿ ತರಬೇತಿ ಪಡೆದ ಕಲಮಂಗಿ ಗುರುಪಾದಯ್ಯನವರ ಪುತ್ರ ಯೋಗಾನಂದ ಈ ಸೇವೆ ಇಂದಿಗೂ ಮಾಡುತ್ತಿದ್ದಾರೆ.

೩:೧:೨೦: ಮಡಿವಾಳೇಶ್ವರ ಜಾತ್ರೆ :

ಬೀದರಿನ ನಾವದಗೇರಿಯಲ್ಲಿ ಶುಕ್ರಾಚಾರ್ಯರು ಅನುಷ್ಠಾನ ಮಾಡಿದ ಸ್ಥಳವೇ ಶುಕ್ಲತೀರ್ಥ. ಬಂಡೆಗಲ್ಲು (ಧರಿ) ಒಳಗಿಂದ ನೀರು ಬರುವುದರಿಂದ 'ಶುಕ್ಲತೀರ್ಥ ಝುರಿ' ಎಂದು ಇನ್ನೊಂದು ಹೆಸರು. ಈ ತೀರ್ಥದಲ್ಲಿ ಸ್ನಾನ ಮಾಡಿದರೆ ಕಷ್ಟದಲ್ಲಿದ್ದವರು ಸುಖಿಗಳಾಗಿರುತ್ತಾರೆಂದು ಪ್ರತಿದಿವಸ ಭಕ್ತರು ತೀರ್ಥಸ್ನಾನಕ್ಕಾಗಿ ಬರುತ್ತಾರೆ. ಇದರ ಹತ್ತಿರದಲ್ಲಿಯೇ ಬೃಹದಾಕಾರವಾಗಿ ನಿಂತಿದ್ದ ಮಹಮ್ಮದಗವಾನನ ಕೋಟೆ ಇದೆ. ದೂರದೂರದಿಂದ ಯಾತ್ರಿಕರನ್ನು ಆಕರ್ಷಿಸಿದ ಪುಣ್ಯಕ್ಷೇತ್ರವಾಗಿದೆ. ಶುಕ್ಲತೀರ್ಥ ಪ್ರಾಕೃತಿಕ ಸೌಂದರ್ಯ ಮತ್ತು ನಿಸರ್ಗ ರಮಣೀಯ ದೃಶ್ಯಗಳಿಂದ ಪ್ರವಾಸಿಗರ ಸಂದರ್ಶನಕ್ಕೆ ಲಕ್ಷಣವಾದ ಸ್ಥಳವಾಗಿದೆ.

ಈ ಸ್ಥಳದಲ್ಲಿಯೇ ಆಗಿ ಹೋದ ಪವಾಡ ಪುರುಷ ಸಂತ ಮಡಿವಾಳಪ್ಪನ ಗದ್ದುಗೆ ಇದೆ. ಇವರು ಬದುಕಿಬಾಳಿದ ಯಾವುದೇ ಪುರಾವೆಗಳಿಲ್ಲ. ಬಸವಣ್ಣನವರ ಸಮಕಾಲೀನರು ಎನ್ನಲಾಗಿದೆ. ಆಂಧ್ರದ ಜಹೀರಾಬಾದ ತಾಲ್ಲೂಕಿನ ಜಂಬಗಿ ಗ್ರಾಮದ ಪಟೇಲ ಮನೆತನದ ಶ್ರೀ ಶಾಂತಲಿಂಗ ಶಿವಯೋಗಿಗ ಪರಿಶ್ರಮದಿಂದ ಗದ್ದುಗೆ ಸುತ್ತ ಮುತ್ತ ಮತ್ತು ಮೇಲೆ ಕಲಾತ್ಮಕ ರೀತಿಯಲ್ಲಿ ಗುಡಿಯಗೋಪುರ ನಿರ್ಮಾಣಗೊಳ್ಳತೊಡಗಿದೆ. ಪ್ರತಿವರ್ಷದ ಫಾಲ್ಗುಣ ಮಾಸದಲ್ಲಿ ನಾಲ್ಕು ದಿವಸ ಉತ್ಸವ ಜರುಗುತ್ತದೆ. ಶುದ್ಧ ನವಮಿಯಂದು ಪ್ರಾರಂಭವಾದ ಈ ಜಾತ್ರೆ ದ್ವಾದಶಿಯಂದು ಮುಕ್ತಾಯವಾಗುತ್ತದೆ. ಉತ್ಸವದ ಪ್ರತಿದಿನ ರೇಣುಕಾಚಾರ್ಯ ಸಿದ್ಧಾಂತ ಸಿಕಾಮಣಿ ಪಾರಾಯಣ, ೬೩ ಲಿಂಗಪೂಜೆ, ಅನ್ನದಾನ ಬಜನೆ, ಸತ್ಸಂಗ, ಶಿವಾನಂದ ಪ್ರವಚನ, ವರದಾಶಂಕರಕಥಾ ಚರಿತ್ರೆ, ರುದ್ರಾಭಿಷೇಕ ಅಲ್ಲದೆ ೬೩ ಶರಣರ ಪಾದಪೂಜೆ ಮತ್ತು ಲಿಂಗಪೂಜೆ ೬೩ ಗಣಗಳ ಪೂಜೆ ಮುಂತಾದ ಆಚರಣೆಗಳು ಇಲ್ಲಿವೆ.

ಬಿದರ ನಗರದ ಹಾಗು ಸುತ್ತ-ಮುತ್ತಲಿನ ಗ್ರಾಮದ ಭಕ್ತರು ಜಾತ್ರೆಗೆ ಬಂದು ಶುಕ್ಲತೀರ್ಥದಲ್ಲಿ ಸ್ನಾನಮಾಡಿ ತೆಂಗು ಒಡೆದು ಮಡಿವಾಳೇಶ್ವರ ಗದ್ದುಗೆಯ

ದರ್ಶನ ಪಡೆದು ಅನ್ನದಾಸೋಹದಲ್ಲಿ ಕುಳಿತು ಪ್ರಸಾದ ಸ್ವೀಕರಿಸುವರು. ಇಲ್ಲಿ ಬಿಲ್ವ ಪತ್ರಿಯ ಮರಗಳು ಸಾಕಷ್ಟಿವೆ. ಜಾತ್ರೆಗೆ ಬಂದ ಭಕ್ತರು ಶುಕ್ಲತೀರ್ಥದಲ್ಲಿ ಮಿಂದು ಮಡಿವಾಳಪ್ಪನ ಗದ್ದುಗೆಯ ಮೇಲೆ ಬಿಲ್ವಪತ್ರಿ ಏರಿಸುವ ಪರಿಪಾಠವಿಟ್ಟು ಕೊಂಡಿದ್ದಾರೆ. ಪಲ್ಲಕ್ಕಿ ರಥೋತ್ಸವ ಸಂಪ್ರದಾಯ ಇಲ್ಲಿಲ್ಲ. ಜಾತ್ರೆ ತುಂಬಾ ಸರಳ ರೀತಿಯಲ್ಲಿ ಜರುಗುತ್ತದೆ.

೩:೧:೨೧: ಸಿದ್ಧಲಿಂಗೇಶ್ವರ ಜಾತ್ರೆ :

'ಸೊನ್ನ' ಪಾವನ ಕ್ಷೇತ್ರ, ಇಲ್ಲಿ ೧೭–೧೮ನೆಯ ಶತಮಾನಲದಲ್ಲಿ ಆಗಿ ಹೋದ ಸಿದ್ಧಲಿಂಗ ಶಿವಯೋಗಿಗಳ ಮಠವಿದೆ. ಇದು ಜೇವರ್ಗಿಯಿಂದ ೧೮ ಕಿ.ಮೀ. ದೂರದಲ್ಲಿದೆ. ಪ್ರತಿವರ್ಷ ಮೇ ತಿಂಗಳಲ್ಲಿ ಜಾತ್ರೆ ವೈಭವದಿಂದ ಮೂರು ದಿನಗಳ ಕಾಲ ನಡೆಯುತ್ತದೆ. ಆಂಧ್ರದಿಂದ ಕಲ್ಯಾಣಕ್ಕೆ ಹೋಗುವಾಗ ಸಿದ್ಧಲಿಂಗ ಶಿವಯೋಗಿಗಳು 'ಸೊನ್ನ' ಗ್ರಾಮದ ಚೌಕಿ ತೋಟದಲ್ಲಿ ಉಳಿದಾಗ ಇವರ ತೇಜಸ್ಸು ವಾಕ್‌ಸಿದ್ಧಿ ಅಗಾಧವಾದ ಶಕ್ತಿಯನ್ನು ಗುರುತಿಸಿದ ಜನರು ತಮ್ಮ ಊರಿನಲ್ಲಿಯೇ ಇರುವಂತೆ ಬೇಡಿಕೊಂಡರು. ಇವರ ಮಹಿಮೆಯನ್ನು ಗುರುತಿಸಿದ ಸೂಗೂರು ದಾಸಪ್ಪ ಎಂಬುವವರು ಇವರಿಗಾಗಿ ಸೊನ್ನದಲ್ಲಿ ಮಠ ಕಟ್ಟಿಸುವುದರ ಜೊತೆಗೆ ತಾವೂ ಸಹ ಯೋಗಿಗಳಾದರು. ಸಿದ್ಧಲಿಂಗ ಶಿಯೋಗಿಗಳು ಸುರಪುರದ ದೊರೆಗಳ ಕಾಲಕ್ಕೆ ಅಪ್ರತಿಮವಾದ ಕೀರ್ತಿಯನ್ನು ಪಡೆದುಕೊಂಡು ಸೊನ್ನ ಗ್ರಾಮದಲ್ಲಿ ದೈವಾಧೀನರಾದರು. ಇವರ ಸ್ಮರಣಾರ್ಥ ಪ್ರತಿವರ್ಷ ಉತ್ಸವ ಜರುಗುತ್ತದೆ.

ಜಾತ್ರೆಯಲ್ಲಿ ಶ್ರೀಗಳ ಗದ್ದುಗೆ ಬಿಲ್ವ ಪತ್ರಿಯಿಂದ ಅಭಿಷೇಕ ಪ್ರಸಾದ ವಿನಿಯೋಗ ಮಾಡುವರು. ಗೀಗೀ ಪದಗಳ ಹಾಡುಗಾರಿಕೆ ಕುಸ್ತಿ ಮುಂತಾದ ಸ್ಪರ್ಧೆಗಳು ನಡೆಯುತ್ತವೆ. ಸಂಜೆ ಹೊತ್ತಿನಲ್ಲಿ ವೈಭವದ ರಥೋತ್ಸವ ಕಾರ್ಯಕ್ರಮವಿರುತ್ತದೆ. ಸುತ್ತಲಿನ ಭಕ್ತರು ಜಾತ್ರೆಗೆ ಬರುವ ಪರಿಪಾಠ ಬೆಳೆಸಿಕೊಂಡಿದ್ದಾರೆ.

೩:೧:೨೨: ಶಾಂತಲಿಂಗೇಶ್ವರ ಜಾತ್ರೆ :

ಅಫಜಲಪೂರ ತಾಲ್ಲೂಕಿನ ಹಿರೇ ಜೇವರ್ಗಿಯಲ್ಲಿ ಶಾಂತಲಿಂಗೇಶ್ವರ ಗದ್ದುಗೆ ಇದೆ. ಆಗಿ ಹೋದ ಕಾಲದ ಬಗ್ಗೆ ಯಾವುದೇ ಪುರಾವೆಗಳಿಲ್ಲ. ಪ್ರತಿವರ್ಷ ಜನವರಿ ತಿಂಗಳಲ್ಲಿ ಹನ್ನೊಂದು ದಿನಗಳವರೆಗೆ ಜಾತ್ರಾಮಹೋತ್ಸವ ಆಚರಿಸುತ್ತಾರೆ. ಪ್ರತಿನಿತ್ಯ ಸಂಜೆಗೆ ಶರಣಬಸವೇಶ್ವರ ಪುರಾಣ ವಿದ್ವಾಂಸರಿಂದ ಜರುಗುತ್ತದೆ.

ಶ್ರೀಗಳ ವೈಭವಪೂರ್ಣ ಪಲ್ಲಕ್ಕಿ ಉತ್ಸವ ಗ್ರಾಮದ ಬೀದಿ ಬೀದಿಗಳಲ್ಲಿ ಸಾಗುತ್ತದೆ. ಭಜನೆ ಮಾಡುತ್ತಾರೆ. ಹಾಡು ಹಾಡುತ್ತಾರೆ. ಉತ್ಸವದ ಕೊನೆಯ ದಿನದಂದು ಮಂಗಲದ ಜೊತೆಗೆ ಅಯ್ಯಾಚಾರ ದೀಕ್ಷಾ ಪದ್ಧತಿ ನಡೆಯುತ್ತದೆ.

೩:೧:೨೩: ಕ್ಷೀರಲಿಂಗೇಶ್ವರ ಜಾತ್ರೆ :

ಪವಾಡ ಪುರುಷರು ಮಹಾತಪಸ್ವಿಗಳು ಆದ ಶ್ರೀ ಕ್ಷೀರಲೀಂಗೇಶ್ವರ ಮಹಾಸ್ವಾಮಿಗಳು ರಾಯಚೂರಿನಿಂದ ೨೫ ಕಿ.ಮೀ. ಅಂತರದಲ್ಲಿರುವ ಕೃಷ್ಣಾ ತೀರದಲ್ಲಿ ಸಮಾಧಿ ಹೊಂದಿ ಇಂದಿಗೂ ಭಕ್ತರ ಅಭಿಷ್ಟಗಳನ್ನು ಪೂರೈಸುತ್ತಿದ್ದಾರೆ. ತ್ರಿವಿಧ ದಾಸೋಹಿಗಳಾದ ಪರಮ ಪೂಜ್ಯ ಪವಾಡ ಕ್ಷೀರಲಿಂಗೇಶ್ವರ ಮಹಾಸ್ವಾಮಿಗಳು ಕರ್ನಾಟಕ ಆಂಧ್ರಪ್ರದೇಶ, ಮಹಾರಾಷ್ಟ್ರದಲ್ಲಿ ಸಂಚಾರ ಮಾಡಿ ಅನ್ನದಾನ ವಸ್ತ್ರದಾನ ವಿದ್ಯಾದಾನಗಳನ್ನು ಮಾಡಿ ಪುಣ್ಯಪುರುಷರೆನಿಸಿದ್ದಾರೆ, ಅವರ ಅಸಂಖ್ಯಾತ ಭಕ್ತರು ಅವರ ಸಮಾಧಿಗೆ ಸೇವೆ ಸಲ್ಲಿಸಿ ಪುನೀತರಾಗುತ್ತಿದ್ದಾರೆ. ಅವರ ಪುಣ್ಯತಿಥಿಯ ಅಂಗವಾಗಿ ಪ್ರತಿವರ್ಷ ಡಿಸೆಂಬರ್ ಜನವರಿ ತಿಂಗಳಲ್ಲಿ ಎರಡು ದಿನ ಉತ್ಸವ ಜರುಗುತ್ತದೆ. ಇಲ್ಲಿ ಮಠವಿದೆ. ಭಜನೆ ಮಾಡಿ ನೈವೇದ್ಯ ಅರ್ಪಿಸುತ್ತಾರೆ. ಎರಡನೆಯ ದಿನದಂದು ಕ್ಷೀರಲಿಂಗೇಶ್ವರ ಸ್ವಾಮಿಗಳ ರಥೋತ್ಸವ ಜರುಗುತ್ತದೆ. ವಿದ್ವಾಂಸರಿಂದ ಭಾಷಣ ಕೀರ್ತನೆ ನಡೆಯುತ್ತದೆ. ಉತ್ಸವದ ವ್ಯವಸ್ಥೆ ಮಠದ ಟ್ರಸ್ಟ್ ಸಮಿತಿಯವರು ಮಾಡುತ್ತಾರೆ.

ಜಾತ್ರೆಯಲ್ಲಿ ನಡೆಯುವ ಪುರವಂತಿಕೆಯ ಕುಣಿತ ವಿಶೇಷವಾಗಿರುತ್ತದೆ. ವೀರಭದ್ರನ ಭಕ್ತರೆಂದು ಹೇಳಿಕೊಳ್ಳುವ ಪುರಂತಯ್ಯಗಳು ಮೌನೇಶ್ವರನ ಸಮ್ಮುಖದಲ್ಲಿ ಭಕ್ತಿ ಪರವಶರಾಗಿ ಆವೇಶದಿಂದ ವಚನಗಳನ್ನು ಹೇಳಿ ತಾಮ್ರದ ಶಸ್ತ್ರಗಳನ್ನು ಕತ್ತಿನಲ್ಲೂ, ನಾಲಿಗೆಗೂ ಮತ್ತು ಹೊಟ್ಟೆಯಲ್ಲೂ ಚುಚ್ಚಿಕೊಳ್ಳುತ್ತಾರೆ. ಹರಕೆ ಹೊತ್ತ ಈ ಜನ ಅಧಿಕ ಸಂಖ್ಯೆಯಲ್ಲಿ ಬಂದು ನೆರೆದು ತಮ್ಮ ಸೇವೆಯನ್ನು ಮಾಡುತ್ತಾರೆ. ಪುರವಂತಿಕೆ ನೋಡಲು ಬಹು ಕುತೂಹಲಕಾರಿಯಾದ ಕಲೆಯಾಗಿದೆ. ಉತ್ಸವದಲ್ಲಿ ಭಾಗವಹಿಸಿದ ಎಲ್ಲ ವರ್ಗದ ಭಕ್ತರಿಗೂ ಪ್ರಸಾದದ ವ್ಯವಸ್ಥೆ ಇರುತ್ತದೆ.

೩:೧:೨೪: ಶ್ರೀ ಗವಿ ಸಿದ್ದೇಶ್ವರ ಜಾತ್ರೆ :

ವೀರಶೈವ ಧರ್ಮದಲ್ಲಿ ಜಂಗಮ ಸ್ಥಳದ ಮಹಿಮೆಯು ಮಹತ್ವ ಪೂರ್ಣವಾದುದು. ಜಂಗಮನ ಸಳಹೂ ವಸಂತ ವಾಯುವಿನ ಸುಳ್ಳು ಹೂ ಜಂಗಮನ ಸೂಳಿದಾಟ ಮೃಗನ ಅಲೆದಾಟ ಅವರು ಮೆಟ್ಟಿದ ಧರೆಯಲ್ಲ ಅವಿಮುಕ್ತ ಕ್ಷೇತ್ರ ಮುಟ್ಟಿದವರೆಲ್ಲ ನಿತ್ಯಮುಕ್ತರು. ಸೋಂಕಿದ ಜಲವೆಲ್ಲ ಪುಣ್ಯ ತ್ರೀವೇಣಿ ಸಂಗಮ. ಜಂಗಮನಲ್ಲಿ ಅಂಗ ಗುಣಗಳು ಅಳಿದು ಲಿಂಗ ಗುಣಗಳು ಇಳಿದಿಧ್ಧಬೇಕು, ಬೆಳೆದಿಠಬೇಕು ಅಂದರೆ ಅಂಗಗುಣಗಳೆಲ್ಲ ಭಂಗಿಸಿ ಲಿಂಗ ಗುಣಗಳನ್ನು ಅಂಗವಿಸಿಕೊಂಡು ಲಿಂಗಮಯನಾಗಿರಬೇಕು. ಇವನೆ ಜಂಗಮನು, ಶಿವಯೋಗಿ ಸಾಮ್ರಾಟನು, ಷಟಸ್ಥಲ ಚಕ್ರವರ್ತಿಯು ಇಂತಹ ತತ್ವವೇತ್ತರೂ, ಸತ್ವಯುತರೂ ಮಹಾಮಹಿಮರು ಆದ ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಶಿವಯೋಗಿಗಳು, ಕೊಪ್ಪಳ ನಾಡನ್ನೇ ಬೆಳಗಿಸಿದರು, ಕೊಪ್ಪಳ ನಾಡಿಗೂ ಗವಿಮಠಕ್ಕೂ ಅನ್ಯೋನ್ಯ ಸಂಬಂಧವಿದೆ.

ಕೊಪ್ಪಳ ನಾಡಿನ ಸಮಸ್ತ ಜನಾಂಗದವರಿಗೆ ಗವಿಸಿದ್ದೇಶ್ವರನು ಇಂದಿಗೂ ಆರಾಧ್ಯ ದೇವನಾಗಿದ್ದಾನೆ. ಶ್ರಿ ಗವಿಮಠದ ಪರಂಪರೆಯಲ್ಲಿ ಬಂದ ಶ್ರೀಗಳವರಲ್ಲಿ ೧೧ನೆಯ ಶ್ರೀಗಳಾದ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ತಮ್ಮ ಜ್ಞಾನ ತಪೋಬಲದಿಂದ ಭಕ್ತರ ಮನ ಬೆಳಗಿಸಿದವರು. ಕೊಪ್ಪಳಕ್ಕೆ ಸಮೀಪ ಇರುವ ಮಂಗಳಾಪೂರ ಸ್ವಾಮಿಗಳವರ ಜನ್ಮಸ್ಥಳ. ತಂದೆ ಮಹಾದೇವಯ್ಯ ತಾಯಿ ಗುರುಲಿಂಗಮ್ಮ. ಮಹಾಸ್ವಾಮಿಗಳವರ ಬಾಲ್ಯದ ಹೆಸರು ಗುಡುದಯ್ಯ ಬಾಲ್ಯದಲ್ಲಿಯೇ ಅವರಿಗ ಶಿವಧ್ಯಾನದಲ್ಲಿ ತೀವ್ರ ಆಸಕ್ತಿ.

ಬಾಲ ಶಿವಯೋಗಿ ಗೌಡರ ಮನೆಯನ್ನು ತೊರೆದು ಹೋಗುವಾಗ ತಮ್ಮ ಕುರುಹು ಆಗಿ ಜಡೆಯನ್ನು ಕಿತ್ತುಕೊಟ್ಟರು. ಇಂದಿಗೂ ಸಹ ಅದು ಮಾಲಿಗೌಡರ ಮನೆಯಲ್ಲಿ ಪೂಜೆಗೊಳ್ಳುತ್ತಲಿದೆ. ಯೊಗಸಿದ್ಧಿಯನ್ನು ಪಡೆದು ಗುಡುದಯ್ಯನಿಗೆ ಗುರು ತನ್ನ ಬಸವಸ್ವಾಮಿಗಳವರು ಅಧಿಕಾರವನ್ನಿತ್ತು ಗವಿಸಿದ್ಧೇಶ್ವರ ಮಹಾಸ್ವಾಮಿಗಳೆಂದು ನಾಮಕರಣ ಮಾಡಿದರು.

೧೦ನೆಯ ಪೀಠಾಧಿಪತಿಗಳಾಗಿದ್ದ ಗವಿಸಿದ್ದೇಶ್ವರರು ಗುರುಗಳಾಗಿದ್ದ ಶ್ರೀ ಚನ್ನಬಸವ ಸ್ವಾಮಿಗಳವರು, ತಾವು ಲಿಂಗದಲ್ಲಿ ಬೆರೆಯುವ ವಿಷಯವನ್ನು ತಿಳಿಸಲು ಗುರುಗಳ ಅಗಲಿಕೆಯ ಅನುತಾಪ ಅವರ ಸೇವೆ ಮುಂದೆ ದೊರೆಯಲಾರದೆಂದು ಮನನೊಂದು ಗುರುಗಳಿಗಾಗಿ ಸಿದ್ಧಪಡಿಸಿದ ಸಮಾಧಿಯನ್ನು ಪ್ರವೇಶಿಸಿ ಸಮಾಧಿಸ್ಥಿತಿಯಲ್ಲಿ ಕುಳಿತು ಬಿಟ್ಟರು.

ಕ್ರಿ.ಶ. ೧೮೧೬ ಶ್ರೀಯವರು ಬಹುಳ ಬಿದಿಗೆಯಂದು ಪ್ರಾಣವನ್ನು ಬ್ರಹ್ಮ ಸ್ಥಾನಕ್ಕೇರಿಸಿ ಸಜೀವ ಸಮಾಧಿ ಸ್ಥಿತಿಯನ್ನು ಹೊಂದಿದರು. ನಂತರ ಗುರುಗಳೇ ನಿಂತು ಶ್ರೀ ಗವಿಸಿದ್ದೇಶ್ವರರ ಜಾತ್ರಾ ಮಹೋತ್ಸವ ನೆರವೇರಿಸಹತ್ತಿದರು. ಪ್ರತಿವರ್ಷ ಈ ಜಾತ್ರೆ ಜೂನ್ ತಿಂಗಳಲ್ಲಿ ೫ ದಿವಸ ನಡೆಯುತ್ತದೆ. ಸುತ್ತಮುತ್ತಲಿನ ಜನರು ಜಾತ್ರೆಗೆ ಬರುವರು. ಪ್ರತಿ ದಿವಸ ತೆಂಗು ಒಡೆಯುವುದು ಕಾಯಿ ಕರ್ಪೂರ ಅರ್ಪಿಸುವುದು ಸಾಮಾನ್ಯವಾಗಿರುತ್ತದೆ. ಕೀರ್ತನೆ, ಪ್ರವಚನ, ಭಜನೆ ನಡೆಯುತ್ತದೆ. ಅಂಗಡಿಗಳು ಮಕ್ಕಳ ಆಟಪಾಠಗಳ ಸಲುವಾಗಿ ತೊಟ್ಟಿಲು, ಗೊಂಬೆಯಾಟ, ಪುಂಗಿ, ಪುಗ್ಗಾ, ತೊಟ್ಟಿಲ ಚಕ್ರದಾಟ, ವಿವಿಧ ಬಗೆಗಳಲ್ಲಿ ವಿನೋದವನ್ನುಂಟು ಮಾಡುತ್ತವೆ. ಬಂದ ಭಕ್ತರಿಗಾಗಿ ಊಟದ ಮತ್ತು ನೀರಿನ ವ್ಯವಸ್ಥೆ ಮಾಡಿರುತ್ತಾರೆ.

ಇಲ್ಲಿ ನವೀನ ಮಾದರಿಯ ರಥ(ಹರಕೆಯ)ರಥಗಳಿವೆ. ಜಾತ್ರೆಯ ಮೂರನೇ ದಿನದಂದು ಶ್ರೀ ಗವಿಮಠದ ಮೇಲ್ಭಾಗದಲ್ಲಿರುವ 'ಲಿಂ'. ಮರಿಶಾಂತವೀರ ಮಹಾಸ್ವಾಮಿಗಳವರ ಗದ್ದುಗೆಯವರೆಗೆ ಕೆಳಗಿನಿಂದ ಹಿಡಿದು ದೀರ್ಘದಂಡ ಪ್ರಣಾಮಗಳನ್ನು ಹಾಕುತ್ತಾ ಹೋಗುವ ಕಾಯಕವನ್ನು ಅನೇಕ ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಜಾತ್ರೆಗೆ ಬಂದರೆ ಗವಿಸಿದ್ದೇಶ್ವರನ ಯೋಗಕ್ಷೇಮದಿಂದ

ನಮ್ಮನ್ನು ಕಾಪಾಡುತ್ತಾನೆಂದು, ಕಾಣಿಕೆಯನ್ನರ್ಪಿಸುತ್ತಾರೆ. ಉಪನ್ಯಾಸ ಮತ್ತು ಸಂಗೀತ ಕಾರ್ಯಕ್ರಮಗಳ ನಡೆಯುತ್ತವೆ. ಉತ್ಸವದ ಕೊನೆಯ ದಿನ ಸಾಯಂಕಾಲದ ವೇಳೆಗೆ ಗಡ್ಡೆಯ ತೇರಿನ ಕಾರ್ಯಕ್ರಮವಿರುತ್ತದೆ. ತೇರನ್ನು ನಾನಾ ಬಗೆಯಾಗಿ ಸಿಂಗರಿಸುತ್ತಾರೆ.

ತೇರು ಎಳೆಯುವಾಗ ಜಯಕಾರ ಮುಗಿಲಿಗೆ ಮುಟ್ಟುತ್ತದೆ. ಭಕ್ತರು ಕರಮುಗಿದು ಶಿರಬಾಗುತ್ತಾರೆ. ಬಾಳೆಹಣ್ಣು, ಖಾರಿಕ, ಅಡಿಕೆ ರಥದ ಮೇಲೆ ಎಸೆಯುತ್ತಾರೆ. ಗವಿಸಿದ್ಧನ ಮುಖ ಮತ್ತೊಮ್ಮೆ ನೋಡಿ ಕರಮುಗಿದು ಮನೆಗೆ ಮರಳುತ್ತಾರೆ. ಕಾಲಕಾಲಕ್ಕೆ ರಥ ಸಿಥಿಲಗೊಂಡಾಗ ನೂತನ ರಥದ ನಿರ್ಮಾಣವು ಅನಿವಾರ್ಯ ಎಂಬುದನ್ನು ಮನಗಂಡ ಇಲ್ಲಿಯ ಭಕ್ತ ಸಮೂಹವು, ಸಿಥಿಲಗೊಂಡ ಪುರಾತನ ರಥದ ಬದಲಾಗಿ ಈ ೨೦ನೆಯ ಶತಮಾನದ ಉತ್ತರಾರ್ಧದಲ್ಲಿ ಭವ್ಯವಾದ ಆಕರ್ಷಕವಾದ ಮತ್ತು ಅಂದವಾದ ಈ ರಥವು ಈಗಿನ ಜಗದ್ಗುರು ಶ್ರೀ ಶಿವಶಾಂತವೀರ ಮಹಾಸ್ವಾಮಿಗಳ ಅಪ್ಪಣೆಯ ಮೇರೆಗೆ ಭಕ್ತರ ಅಪೇಕ್ಷೆಯಂತೆ, ಮೂರು ವರ್ಷಗಳ ಪರಿಶ್ರಮದ ಫಲವಾಗಿ ರೂಪುಗೊಂಡಿರುತ್ತದೆ. ಈ ರಥದ ನಿರ್ಮಾಣವು ಶಿವಯೋಗಿಗಳ ಸೇವಾ ಭಾವವುಳ್ಳ ಕರಕುಶಲ ತಜ್ಞ ವಿಶ್ವಕರ್ಮ ಶ್ರೀ ಮಲ್ಲಪ್ಪ ಹೊಳೆ ಅಲೂರ ಹಾಗೂ ದೇವಾನುದೇವತೆಗಳ ವಿಗ್ರಹಗಳು, ಅನುಭವಮಂಟಪ, ಭಕ್ತ ಭಂಡಾರಿ ಬಸವಣ್ಣ, ಶರಣಬಸವೇಶ್ವರ, ವೈರಾಗ್ಯ ನಿಧಿ ಅಕ್ಕ ಮಹಾದೇವಿ, ಶ್ರೀ ಎಡೆಯೂರು ಸಿದ್ಧಲಿಂಗೇಶ್ವರ, ಅಷ್ಟದಿಕ್ಪಾಲಕರು, ಗವಿಮಠ ಪರಂಪರೆಯ ಹಿಂದಿನ ಮತ್ತು ಇಂದಿನ ಶ್ರೀಗಳ ಹಾಗೂ ಅನೇಕ ಶಿವಶರಣರ ಮೂರ್ತಿಗಳು ಮಹಾಮಹಿಮ ಶ್ರೀ ಗವಿಸಿದ್ದೇಶ್ವರನ ಪವಾಡಗಳನ್ನು ಗೈದ ಚಿತ್ರಗಳು ಹಾಗೂ ಪಂಚಾಚಾರ ಪಟಸ್ಥಲ ಅಷ್ಠಾವರ್ಣಗಳನ್ನು ಬೋಧಿಸುವ ಮತ್ತು ಇನ್ನೂ ಅನೇಕ ಸಂಸ್ಕೃತಿಯ ಸಾಕಾರ ಮೂರ್ತಿಯೇ ಇದು ಎನ್ನುಂತೆ ದರ್ಶನವಾಗುತ್ತದೆ. ೫೧ ಅಡಿ ಎತ್ತರದ ನೂತನ ರಥ ಕೊಪ್ಪಳ ಶ್ರೀ ಗವಿಸಿದ್ದೇಶ್ವರನದಾಗಿದೆ.

೩:೧:೨೫: ಶರಣಬಸವೇಶ್ವರ ಜಾತ್ರೆ :

ಕಲಬುರ್ಗಿ ಜಿಲ್ಲೆ ಧಾರ್ಮಿಕ ಸಾಂಸ್ಕೃತಿಕ ಪರಂಪರೆಯ ನೆಲೆವೀಡು ಶರಣರ ಬೀಡು, ಧರ್ಮ ಸಮನ್ವಯದ ನಾಡು–ಕಲ್ಯಾಣ ಕ್ರಾಂತಿಯಲ್ಲಿ ಶರಣರ ಕುರುಹುಗಳ ಅವಶೇಷಗಳು ನಾಶವಾದ ಕಾರಣ, ಆ ಕಲ್ಯಾಣನಾಡಿನ ಸಂಸ್ಕೃತಿ ಕಲ್ಯಾಣದ ಮಹಾದ್ವಾರವೆನ್ನಿಸಿದ ಕಲುಬುರ್ಗಿಯಲ್ಲಿ ಮೈವೆತ್ತಿತು. ಕಾಯಕ–ದಾಸೋಹ ತತ್ವಗಳನ್ನು ಬಿತ್ತಿ ಬೆಳೆಯಲು ಬಸವಣ್ಣನವರು ಕಲ್ಯಾಣವನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು, ಅರಳ ಗುಂಡಿಗೆಯಿಂದ ಬಂದ ಸಂತ ಶರಣಬಸವೇಶ್ವರರು ಕಲಬುರ್ಗಿಯನ್ನು ತಮ್ಮ ಕಾಯಕ್ಷೇತ್ರವಾಗಿಸಿಕೊಂಡರು. ಕಲುಬುರ್ಗಿಯನ್ನೇ

ಕಲ್ಯಾಣವನ್ನಾಗಿ ಮಾಡಿದರು. ದೊಡ್ಡಪ್ಪ ಶರಣಬಸವರ ಜೊತೆಗೆ ಸೇರಿದರು. ಶಿವನೇ ಮನುಷ್ಯ ರೂಪದಲ್ಲಿ ಬಂದು ಸಿರಿಯಾಳ ಚಂಗಳೆ, ನೆಲ್ಲೂರ ನಂಬಿಯಕ್ಕರ ಭಕ್ತಿ ಪರೀಕ್ಷೆ ಶಿವನು ಮಾಡಿದಂತೆ ಮನುಷ್ಯನಲ್ಲಿಯೇ ಪರಮಾತ್ಮನಿರುವುದನ್ನು ಕಂಡ ದೊಡ್ಡಪ್ಪ ನೀಲಮ್ಮ ಶರಣ ದಂಪತಿಗಳು ತಮ್ಮ ತೊಟ್ಟಿಲಲ್ಲಾಡುತ್ತಿದ್ದ ಮಗುವನ್ನು ಪುತ್ರ ಸಂತಾನಾಪೇಕ್ಷೆಯಿಂದ ಬಂದ ವೃದ್ಧ ದಂಪತಿಗಳಿಗೆ ಶರಣಬಸವರು ನೀಡಿದಾಗ ಎಳ್ಳಷ್ಟೂ ವಿಚಲಿತರಾಗದೆ ಆ ಶರಣದಂಪತಿಗಳ ದಾಸೋಹ ಭಕ್ತಿಗೆ ಅನುಕಂಪಿತರಾಗಿ ಆ ದೊಡ್ಡಪ್ಪ ಶರಣರ ವಂಶಕ್ಕೆಲ್ಲ ತಾನೇ ಮಗುವಾಗಿ ಹುಟ್ಟಿಬರುತ್ತಿದ್ದೇನೆಂದು ಹೇಳಿ ಅನುಗ್ರಹಿಸಿದರು.

ಯಾವ ಮಹಾಕಾರ್ಯಕ್ಕೆ ತಮ್ಮ ಮಗ ಅರ್ಪಿತನಾಗುವನೋ ಆ ಮಹಾ ದಾಸೋಹ ಕಾರ್ಯ ನಿರಂತರವಾಗಿ ತಮ್ಮ ಮಹಾಮನೆಯಲ್ಲಿ ನಡೆಯಲೆಂದು ದೊಡ್ಡಪ್ಪ ಶರಣರು ಬಿನ್ನವಿಸಿಕೊಂಡರು. ಆ ಶರಣದಂಪತಿಗಳ ತ್ಯಾಗ ಮಹಿಮೆ ಮಹಾದಾಸೋಹ ಧರ್ಮವೇ ಶರಣಬಸವೇಶ್ವರರ ಮಹಾದಾಸೋಹ ಪೀಠವಾಯಿತು. ಪರಹಿತದಲ್ಲಿ ಪರಮಾತ್ಮನನ್ನು ಕಂಡ ಪರಮ ದಾಸೋಹಿ ಶರಣಬಸವರು ವೃದ್ಧ ಜಂಗಮನ ಸಂಕಷ್ಟ ತಾವು ಸ್ವೀಕರಿಸಿ ತಮ್ಮ ಸಂತುಷ್ಟಿಯನ್ನು ಧಾರೆಯೆರೆದು ಮಹಾದಾಸೋಹಿ ಎನ್ನಿಸಿ ಕ್ರಿ.ಶ.೧೮೨೨ರಲ್ಲಿ ಲಿಂಗೈಕ್ಯರಾದವರು.

“ಶರಣಬಸವೇಶ್ವರ ಕಾಲದ ನಂತರ ಮೊದಲನೆಯ ದೊಡ್ಡಪ್ಪ ಶರಣರು, ಆ ಮೇಲೆ ಎರಡನೆಯ ಶರಣಬಸವಪ್ಪ ಅಪ್ಪ, ಬಸವಣಪ್ಪ ಅಪ್ಪ, ಲಿಂಗಬಸವಪ್ಪ ಅಪ್ಪ, ಮೂರನೆಯ ಶರಣಬಸವಪ್ಪ ಅಪ್ಪ, ಇವರು ಶರಣ ಸಂಸ್ಥಾನದ ಮಹಾದಾಸೋಹ ಪೀಠಾಧಿಪತಿಗಳಾದರು” (ಬಡಿಗೇರ : ಇಸ್ವಿಇಲ್ಲ : ಪುಟ ಇಲ್ಲ)ಭಕ್ತರು ಶರಣರ ಸಮಾಧಿಯ ಮೇಲೆ ದೇವಾಲಯ ಕಟ್ಟಿಸಿದರು. ಗರ್ಭಗುಡಿಯಲ್ಲಿ ಮರುಳಾರಾಧ್ಯರ ಮತ್ತು ಶರಣರ ಎರಡು ಮೂರ್ತಿಗಳಿವೆ. ಬಲಕ್ಕೆ ಗುರು, ಎಡಕ್ಕೆ ಶಿಷ್ಯ, ಹೀಗೆ ಗುರುಶಿಷ್ಯರ ಅವಿನಾಭಾವ ಸಂಬಂಧ ಅದು ಎತ್ತಿ ತೋರಿಸುತ್ತದೆ. ಭಕ್ತ ಜನ ನಮಸ್ಕರಿಸಿದರೆ, ಅದು ನನಗಲ್ಲ ನನ್ನ ಗುರುಗಳಿಗೆ ಸಲ್ಲಬೇಕು ಎನ್ನುವ ತತ್ವವೂ ಅವರಲ್ಲಿದೆ.

ಪ್ರತಿವರ್ಷ ಫಾಲ್ಗುಣವದ್ಯ ಪಂಚಮಿಯಂದು, ಶರಣಬಸವೇಶ್ವರ ಪುಣ್ಯ ತಿಥಿಯ ನಿಮಿತ್ತ್ಯ ನಡೆಯುವ ೧೫ ದಿವಸದ ಮಹಾದಾಸೋಹ ಯಾತ್ರಾಮಹೋತ್ಸವದಲ್ಲಿ ಸುಮಾರು ೧ ಲಕ್ಷ ಭಕ್ತರು ರಥೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪೀಠಾಧಿಪತಿಗಳ ದರ್ಶನಾಶೀರ್ವಾದ ಪಡೆದು ಅವರು ನೀಡಿದ ಸಂದೇಶ ಸ್ವೀಕರಿಸಿ ಪುನೀತರಾಗುತ್ತಾರೆ. ‘ಭಕ್ತನು ಭಕ್ತನ ಕಾಂಬುದು ಸದಾಚಾರ

ಅಲ್ಲಿ ಕೂಡಿ ದಾಸೋಹ ಮಾಡಿದಂಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವನು. ಎಂಬಂತೆ ಆ ಸಮಯದಲ್ಲಿ ಸುಮಾರು ಎರಡು ಲಕ್ಷಕ್ಕಿಂತ ಅಧಿಕ ಸಂಖ್ಯೆಯ ಭಕ್ತರು ಶರಣದಾಸೋಹ ಮಹಾಮನೆಯಲ್ಲಿ ದಾಸೋಹಂ ಭಾವದಿಂದ ಪ್ರಸಾದ ಸ್ವೀಕರಿಸಿ ಫಲಸಂತೃಪ್ತಿಯನ್ನು ಹೊಂದುತ್ತಾರೆ.

ಪ್ರತಿದಿವಸ ಸಂಜೆ ಹೊತ್ತಿನಲ್ಲಿ ವಿದ್ವಾಂಸರಿಂದ ಜ್ಞಾನ ದಾಸೋಹ, ಸಂಗೀತ, ಭಜನೆ, ಹೀಗೆ ಹತ್ತಾರು ಕಾರ್ಯಕ್ರಮಗಳಿರುತ್ತವ. ಶರಣಬಸವೇಶ್ವರ ದೇವಾಲಯದಲ್ಲಿ ವಿದ್ಯುತ್ ಬಲ್ಬಗಳಿಂದ ಅಲಂಕರಿಸಿ ಧ್ವನಿವರ್ದಕಗಳು ಅಳವಡಿಸಿರುತ್ತಾರೆ. ತೆಂಗು ಒಡೆಯುವುದು, ಕಾಯಿ ಕರ್ಪೂರ ಅರ್ಪಿಸುವುದು, ದರ್ಶನ ಪಡೆಯುವುದು, ಸಾಮಾನ್ಯವಾಗಿರುತ್ತದೆ. ಜಾತ್ರೆಯಲ್ಲಿ ವಿವಿಧ ಮನೋರಂಜನೆ ಮಾತನಾಡುವ ಗೊಂಬೆ, ತೊಗಲು ಗೊಂಬೆಯಾಟ, ತೊಟ್ಟಿಲು ಚಕ್ರದಾಟ, ವಿಮಾನದಾಟ, ಕುದುರೆಯಾಟ, ಬಯಲಾಟ, ಬೀದಿ ನಾಟಕ, ಪುರವಂತರ ಕುಣಿತ, ಭಜನೆ ಮೇಳಗಳು, ಕೋಲಾಟ, ಓಕುಳಿಯಾಟ, ಮೊಸರು ಗಡಿಗೆಯಾಟ, ತಮಾಶಾ, ಸರ್ಕಸ್, ಜಾದು ಆಟ: ತೊಟ್ಟಿಲು ಜೋಕಾಲಿ, ಕುದುರೆ ಜೋಕಾಲಿ, ಹೀಗೆ ಕಣ್ಣು ಕಿವಿ ಮನಸ್ಸಿಗೆ ಸಮಾಧಾನ ಮಾಡುವ ನೂರಾರು ಆಟಗಳು ಜಾತ್ರೆಯಲ್ಲಿ ಸೇರಿಕೊಂಡಿರುತ್ತವೆ, ದನಗಳ ಪ್ರದರ್ಶನ ಕ್ರಯವಿಕ್ರಯಗಳು ಇಲ್ಲಿ ನಡೆಯುತ್ತವೆ. ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ವ್ಯವಹಾರಿಕ ಪ್ರಾಮುಖ್ಯ ಉಳ್ಳವಾಗಿ ಆಯಾ ಸ್ಥಳದ ವಿಶಿಷ್ಟ ಪದಾರ್ಥಗಳು ವಿಲೇವಾರಿಯಾಗುತ್ತದೆ. ಈ ಜಾತ್ರೆ ಒಳ್ಳೆ ವ್ಯಾಪಾರ ಕೇಂದ್ರವಾಗಿದೆ, ಹೂವು ಹಣ್ಣು ಕಾಯಿ ಸಕ್ಕರೆ, ಕರ್ಪೂರ ಚಿತ್ರಗಳು, ಸ್ಥಳಮಹಿಮೆಯ ಪುಸ್ತಕಗಳು, ಶರಣಬಸವೇಶ್ವರ ವಚನಗಳು, ಕ್ಯಾಸೆಟ್ಟುಗಳು, ಶಿವದಾರ, ರುದ್ರಾಕ್ಷಿಸರಗಳು, ವಿಭೂತಿ ದೇವರ ಮೂರ್ತಿಗಳು, ಬೆಳ್ಳಿ ಸಾಮಾನು, ಬಗೆ ಬಗೆಯ ಉಡುದಾರಗಳು, ಅಳ್ಳು-ಪುಟಾಣಿ ಬೆಂಡು ಬತ್ತಾಸಿ, ಬಣ್ಣ-ಬಣ್ಣದ ಅಂಗಿ ಕುಲಾಯಿಗಳು, ಕಸೂತಿ ಕಲೆಗಳು ಪಾತ್ರೆಗಳು, ಇಂತಹ ನೂರಾರು ವಸ್ತು ಸಾಮಾಗ್ರಿಗಳು ಶರಣಬಸವೇಶ್ವರ ಜಾತ್ರೆಯಲ್ಲಿ ದೊರೆಯುತ್ತವೆ.

ಚಿಕ್ಕಮಕ್ಕಳು ಕಳೆದರೆ ಧ್ವನಿವರ್ಧಕಗಳಲ್ಲಿ ಪ್ರಸಾರ ಮಾಡುತ್ತಾರೆ. ಆರೋಗ್ಯ ಇಲಾಖೆಯವರು ಕಾಲರಾ ಚುಚ್ಚುಮದ್ದಿನ ವ್ಯವಸ್ಥೆ ಮಾಡಿರುತ್ತಾರೆ. ರಥೋತ್ಸವದ ಕಾರ್ಯಕ್ರಮ ಜಾತ್ರೆಯ ಕೊನೆಯ ದಿನದಂದು ಸಂಜೆಹೊತ್ತಿನಲ್ಲಿ ಜರುಗುತ್ತದೆ. ಲಕ್ಷಗಟ್ಟಲೇ ಜನರು ಭಾಗವಹಿಸಿ ರಥದ ದರ್ಶನ ಪಡೆಯುತ್ತಾರೆ. ಬಾಳೆಹಣ್ಣುಗಳು, ಸುರಿಮಳೆಯಂತೆ, ಹಾರಿಸುತ್ತಾರೆ. ಮದ್ದು ಗುಂಡಿನ ಶಬ್ದ ಮಾಡುತ್ತಾರೆ. ಅಂದು ಶರಣಬಸವೇಶ್ವರರು ಊಟ ಮಾಡುತ್ತಿದ್ದ ಪರುಬಟ್ಟಲ ಪ್ರದರ್ಶನವಿರುತ್ತದೆ.

ಹೈದ್ರಾಬಾದ ಕರ್ನಾಟಕದಲ್ಲಿಯೇ ಅತಿ ದೊಡ್ಡ ಜಾತ್ರೆಯೆಂದರೆ ಕಲ್ಬುರ್ಗಿ ಶರಣಬಸವೇಶ್ವರ ಜಾತ್ರೆ ಎನ್ನಬಹುದು. ಈ "ಜಾತ್ರೆ ಜನಮರಳೋ ಜಾತ್ರೆಮರಳೋ ಎನ್ನುವಂತೆ" ಸಡಗರವೋ ಸಡಗರ. ಹದಿಹರೆಯದ ತರುಣ ತರುಣಿಯರಿಂದ ಹಿಡಿದು ಮುಪ್ಪಿನ ಮುದುಕ-ಮುದುಕಿಯರವರೆಗೆ ಎಲ್ಲರಲ್ಲೂ ನವತಾರುಣ್ಯದ ಉತ್ಸಾಹ ಹುಟ್ಟಿಸುತ್ತದೆ. ಭಕ್ತರು ಶ್ರೀ ಶರಣಬಸವೇಶ್ವರರ ದೇವಾಲಯಗಳನ್ನು ಹಳ್ಳಿಯಲ್ಲೂ ಕಟ್ಟಿಸಿದ್ದಾರೆ. ಅರಳ ಗುಂಡಗಿ, ನಿಂಬರಗಿ, ಪರ್ವತಾಬಾದ ಅವರಾದಿ, ಶಹಾಬಾದ, ದಂಗಾಪೂರ, ಜವಳಿ, ಗುರುಮಿಠಕಲ್, ಮುಂತಾದ ಹಳ್ಳಿಗಳಲ್ಲಿ ಪ್ರತಿವರ್ಷ ಜಾತ್ರೆಯನ್ನು ನಡೆಸುತ್ತಾರೆ. ಶರಣಬಸವೇಶ್ವರ ಮಹಿಮೆ ವರ್ಣಿಸಿ ಕಟ್ಟಿದ ಜಾನಪದ ಹಾಡುಗಳಿಗೆ ಲೆಕ್ಕವಿಲ್ಲ. ಅನೇಕ ಪುರಾಣ, ಅಷ್ಟಕ, ಭಜನಾವಳಿ, ಸುಪ್ರಭಾತ, ಕಾದಂಬರಿಗಳು ವಚನಗಳು ರಚಿತವಾಗಿವೆ. ಇವು ಜಾತ್ರೆಗಳಲ್ಲಿ ಕಾಣಬಹುದಾಗಿದೆ. ಇಂದಿನ ದಾಸೋಹ ಪೀಠಾಧಿಪತಿಳಾದ ಪರಮಪೂಜ್ಯ ಶರಣಬಸವಪ್ಪ ಅಪ್ಪನವರು ಬಸವೇಶ್ವರರಂತೆ, ದಾಸೋಹ, ಕಾಯಕತ್ತ್ವ ಲಿಂಗನಿಷ್ಠೆ, ಸಮತಾಭಾವ ಪ್ರಾಣಿದಯೇ ದಲಿತೋದ್ಧಾರ ಮೊದಲಾದ ಗುಣಗಳು ತಿಳಿಸುವಲ್ಲಿ, ಆಚರಣಗೆ ತರುವಲ್ಲಿ, ಬೆಳೆಸುವಲ್ಲಿ ಕಾರಣಕರ್ತರಾಗಿದ್ದಾರೆ.

೩:೧:೨೬: ಬಸವೇಶ್ವರ ಜಾತ್ರೆ :

ಕುಷ್ಟಗಿ ತಾಲ್ಲೂಕಿನ ಗೂಡಪೂರದಲ್ಲಿ ಬಸವೇಶ್ವರ ಜಾತ್ರಾಮಹೋತ್ಸವ ಹಾಗೂ ಲಿಂಗೈಕ್ಯ ಬಸವಾರ್ಯ ತಾತನವರ ಜಯಂತಿ ಏಕಕಾಲದಲ್ಲಿ ಪ್ರತಿವರ್ಷ ಫೆಬ್ರವರಿ ತಿಂಗಳಲ್ಲಿ ಮೂರು ದಿವಸ ಜರುಗುತ್ತದೆ.

ಉತ್ಸವದ ಪ್ರಥಮ ದಿನದಂದು, ಶ್ರೀ ಕರ್ತೃ ಗದ್ದುಗೆಯಿಂದ ಶ್ರೀಮಠಕ್ಕೆ ಕಲಶಗಳ ಆಗಮನ ಕಾರ್ಯಕ್ರಮವಿರುತ್ತದೆ. ಮರುದಿನ ಆಗಿ ಹೋದ ಸಜ್ಜಲ ಗುಡ್ಡದ ಶರಣಮ್ಮ ತಾಯಿಯವರ ಭಾವ ಚಿತ್ರದೊಂದಿಗೆ ಉತ್ತರಾಧಿಕಾರಿಗಳಾದ ದೊಡ್ಡ ಬಸವಾರ್ಯರ ಆಗಮನ. ಇದಾದ ನಂತರ ಬಳೂರ್ಗಿ ಹಾಗೂ ದೇವ ಸಮುದ್ರ ಭಕ್ತರಿಂದ ನಂದಿಕೋಲ ಕುಣಿತ, ಕೊನೆಯಲ್ಲಿ ಕಲಶಾರೋಹಣ ಹಾಗೂ ವಟುಗಳ ಅಯ್ಯಾಚಾರವಿರುತ್ತದೆ.

ಮೂರುದಿನದ ಉತ್ಸವ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಜರುಗುತ್ತದೆ. ಗಣಾರಾಧನೆ, ರಥೋತ್ಸವ, ಪುರಾಣ ಮಹಾಮಂಗಲ ಶಿವಕೀರ್ತನೆ ಇವು ಸಂಜೆ ಹೊತ್ತಿನಲ್ಲಿ ನಡೆಯುವ ಕಾರ್ಯಕ್ರಮಗಳು. ಮುಂಜಾನೆ ಅಡ್ಡ ಪಲ್ಲಕ್ಕಿ ಮಹೋತ್ಸವ ಸಂಜೆಗೆ ಕಡುಬಿನ ಕಾಳಗ ಇವು ಜಾತ್ರೆಯ ಕೊನೆಯ ದಿನದ ಆಚರಣೆಗಳಾಗಿವೆ.

೩:೧:೨೭: ಶರಣಬಸವೇಶ್ವರ ಜಾತ್ರೆ :

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಸೋಮಲಾಪುರದ ದಾರಿಯಲ್ಲಿ ಗೋರೇಬಾಳ ಗ್ರಾಮವಿದೆ. ಈಚೆಗೆ ಆಗಿ ಹೋದ ಶರಣಬಸವೇಶ್ವರ ಹೆಸರಿನ ದೇವಸ್ಥಾನ ಹಾಗೂ ಕಲ್ಯಾಣಮಂಟಪ ಕಟ್ಟಿಸಿದ್ದಾರೆ. ಪ್ರತಿದಿನ ದಾಸೋಹವೂ ನಡೆಯುತ್ತದೆ. ವರ್ಷದ ಹೋಳಿ ಹುಣ್ಣಿಮೆಯ ನಂತರ ಪಂಚಮಿಯಂದು ಐದು ದಿನಗಳವರೆಗೆ ಜಾತ್ರೆ ಜರುಗುತ್ತದೆ.

ಶರಣಬಸವೇಶ್ವರ ವಿಗ್ರಹಕ್ಕೆ ರುದ್ರಾಭಿಷೇಕ, ಪಲ್ಲಕ್ಕಿ ಉತ್ಸವ, ಲಂಕಾದಹನ, ಕಡುಬಿನ ಕಾಳಗ, ಕಳಸ ವಿಸರ್ಜನೆ ಮುಂತಾದ ಪದ್ಧತಿಗಳು ಈ ಉತ್ಸವದಲ್ಲಿ ಪ್ರಮುಖವಾಗಿವೆ. ಪ್ರವಚನ, ಬಯಲಾಟ, ಭಜನೆ, ಸಾಂಸ್ಕೃತಿಕ ಚಟುವಟಿಕೆಗಳು ಮನಸ್ಸು ರಂಜಿಸುವ ಕಲೆಗಳಾಗಿವೆ. ಉತ್ಸವದಲ್ಲಿನ ಭಕ್ತರಿಗಾಗಿ ಪಾಯಸದ ಅನ್ನ ಸಮರ್ಪಣೆ ಇರುತ್ತದೆ. ಊಟ ಮಾಡುವಾಗ ವಚನಗಳು ಹೇಳುವ ಪರಿಪಾಠವಿದ್ದೆ. "ಮಹಾತ್ಮಾ ಶರಣಬಸವೇಶ್ವರ ಮಹಾರಾಜಕೀಜೈ" ಎಂದು ಊಟ ಪ್ರಾರಂಭಿಸುತ್ತಾರೆ. ಜಾತ್ರೆ ಚಿಕ್ಕದಾದರೂ ನೋಡಲು ಸೊಗಸಾಗಿದೆ.

೩:೧:೨೮: ಲಕ್ಷ್ಮಿನರಸಿಂಹ ಸ್ವಾಮಿ ಜಾತ್ರೆ :

ಗಂಗಾವತಿಗೆ ೧೮ ಕಿ.ಮೀ. ದೂರದಲ್ಲಿರುವ ಲಿಂಗಸೂಗೂರು ಮಾರ್ಗದಲ್ಲಿ ಕನಕಗಿರಿಯಲ್ಲಿ ಲಕ್ಷ್ಮಿನರಸಿಂಹ ಸ್ವಾಮಿಯ ಪೌರಾಣಿಕ ದೇವಾಲಯವಿದೆ. ಇಲ್ಲಿ ಮೂರು ನೂರಕ್ಕೂ ಹೆಚ್ಚು ದೇವಾಲಯಗಳಿವೆ. ಇವುಗಳಲ್ಲಿ ಈಗ ಒಂದು ನೂರಾದರೂ ನೋಡಲಿಕ್ಕೆ ಸಿಗುತ್ತವೆ. ಕನಕನೆಂಬ ಮುನಿ ಇಲ್ಲಿ ತಪಸ್ಸು ಮಾಡಿದ ಫಲವಾಗಿ 'ಕನಕಗಿರಿ' ಎಂಬ ಹೆಸರು ಬಂದಿದೆ–ಅಂತೆ, ಬೆಟ್ಟ ಗುಡ್ಡಕಾಡಾಗಿದ್ದ ಈ ಸ್ಥಳದಲ್ಲಿ ಶಿವಪಾರ್ವತಿ ಪ್ರಾರ್ಥನೆ ಮಾಡಲು ಬರುತ್ತಿದ್ದರಂತೆ, ಆದ್ದರಿಂದ ಈ ಸ್ಥಳ ಪವಿತ್ರ ಕ್ಷೇತ್ರ ಸ್ಥಳವಾಗಿದೆ. ಎನ್ನುವ ದಂತ ಕಥೆ ಇದೆ. ದೇವಾಲಯದ ಭವ್ಯಮಹಾದ್ವಾರ ಮತ್ತು ಗೋಪುರ ದೂರದಿಂದಲೇ ನೋಡುವವರ ದೃಷ್ಟಿಯನ್ನು ಸೆಳೆಯುವ ಲಕ್ಷ್ಮೀನರಸಿಂಹ ಸ್ವಾಮಿಯ ದೇವಾಲಯ ಈ ದೇವರ ಜಾತ್ರೆ ಪ್ರತಿವರ್ಷ ಮಾರ್ಚ್ ತಿಂಗಳಲ್ಲಿ ಐದು ದಿವಸ ಜರುಗುತ್ತದೆ.

ಜಾತ್ರೆ ಸಂದರ್ಭದಲ್ಲಿ ಸಿಂಹಾರೋಹಣ ಮತ್ತು ಗುರುಡೋತ್ಸವ, ರಥೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ. ಲಾವಣೀ ಹಾಡುಗಳು ತಂಡೋಪ ತಂಡದವರು ಬಂದು ಹಾಡುತ್ತಾರೆ. ಭಕ್ತರು ಹಾಡುಗಳು ಹೇಳುತ್ತಾ ಮೈ ಮರೆಯುತ್ತಾರೆ.

೩:೧:೨೯: ವಾರದ ನರಸಿಂಹನ ಜಾತ್ರೆ :

ಬೀದರ ನಗರದಿಂದ ೨ ಕಿ.ಮೀ. ದೂರ ಅಂತರದಲ್ಲಿರುವ ನರಸಿಂಹನ ಗುಹಾಂತರ ದೇವಾಲಯವಿದೆ. ಈ ನರಸಿಂಹನ ಕಾಲದ ಬಗ್ಗೆ ಯಾವುದೇ ಪುರಾಣಗಳು ದೊರೆಯದೇ ಇದ್ದರೂ ೧೫-೧೬ ಶತಮಾನ ಎಂದು ಹೇಳಲಾಗುತ್ತಿದೆ. ನಾಡಿನ ನಾನಾ ಕಡೆಗಳಿಂದ ಇಲ್ಲಿಗೆ ಭಕ್ತರು ಬರುತ್ತಾರೆ. ಗುಹೆಯಲ್ಲಿರುವ ನರಸಿಂಹ ದೇವರ ದರ್ಶನ ಮಾಡಲು ಎದೆ ಅಳತೆಯ ನೀರಿನಲ್ಲಿಯೇ ಹೋಗಬೇಕಾಗುತ್ತದೆ. ಇದು ಇಲ್ಲಿನ ವಿಶೇಷತೆ, ನೀರಿನ ಪಾತಳಿ ಎಲ್ಲ ಕಾಲದಲ್ಲಿಯೂ ಒಂದೇ ಪ್ರಮಾಣದಲ್ಲಿರುತ್ತದೆ. ಭಕ್ತರು ಈ ಕ್ಷೇತ್ರದಲ್ಲಿ ಅನೇಕ ಮಂಗಳ ಕಾರ್ಯಗಳನ್ನು ಮಾಡುತ್ತಾರೆ.

ಪ್ರತಿ ಶನಿವಾರ ಜಾತ್ರೆ ಜರುಗುತ್ತದೆ. ಹರಕೆಹೊತ್ತ ಕುರುಬ, ಕಬ್ಬಲಿಗರು, ಕುರಿ ಕೋಳಿ ಬಲಿ ಕೊಡುವರು, ಲಿಂಗಾಯಿತರು ಬ್ರಾಹ್ಮಣರು ಸಸ್ಯಾಹಾರಿಯನ್ನೇ ನೈವೇದ್ಯ ಮಾಡುವರು. ತೆಂಗು, ಕಾಯಿ ಅರ್ಪಿಸುವರು. ನವದಂಪತಿಗಳು ನರಸಿಂಹನ ಕೊಳದಲ್ಲಿ ಮಿಂದು ದರ್ಶನ ಪಡೆದು ಹೋದರೆ ಬೇಗ ಮಕ್ಕಳಾಗುತ್ತವೆಂಬ ನಂಬಿಕೆ ಇಲ್ಲಿದೆ. ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗುವುದಿಲ್ಲ. ಹರಕೆ ಮಾಡಿದವರು ಮಾತ್ರ ಜಾತ್ರೆಯಲ್ಲಿ ಹೆಚ್ಚಾಗಿ ಕಂಡು ಬರುತ್ತಾರೆ. ಉತ್ಸವ ಸಾಮಾನ್ಯವಾಗಿ ಕಂಡರೂ ಭಕ್ತರಿಂದ ಭಾರಿ ಪ್ರಮಾಣದ ಕಾಣಿಕೆ (ಹಣ) ಬರುತ್ತದೆ. ಸರಕಾರದವರು ಈಚೆಗೆ ಈ ದೇವಾಲಯ ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ.

೩:೧:೩೦: ಶಾಂತೇಶ್ವರ ಜಾತ್ರೆ :

ಗುಲ್ಬರ್ಗಾದ ಸುಕ್ಷೇತ್ರ ಹೀರೇನಂದೂರ ಗ್ರಾಮದಲ್ಲಿ ೧೬-೧೭ನೆಯ ಶತಮಾನದಲ್ಲಿ ಆಗಿಹೋದ ಶಾಂತೇಶ್ವರ ಶಿವಯೋಗಿಗಳ ಗದ್ದುಗೆ ಇದೆ. ಪ್ರತಿವರ್ಷ ಜನವರಿ ತಿಂಗಳಲ್ಲಿ ಎರಡು ದಿವಸ ಜಾತ್ರೆ ಜರುಗುತ್ತದೆ. ಉತ್ಸವದ ದಿನಗಳಲ್ಲಿ ರುದ್ರಾಭಿಷೇಕ ಪಲ್ಲಕ್ಕಿ ಉತ್ಸವ, ರಥೋತ್ಸವ, ಸಾಮಾಜಿಕ ನಾಟಕಗಳು, ಕುಸ್ತಿ ಸ್ಪರ್ಧೆಗಳು ನಡೆಸುತ್ತಾರೆ.

ಸುತ್ತ-ಮುತ್ತಲಿನ ಅನೇಕ ಭಜನಾ ಮಂಡಳಿಗಳು ಜಾತ್ರೆಗೆ ಬಂದು ತಮ್ಮ ಸೇವೆ ಸಲ್ಲಿಸಿ ಹೋಗುವ ಸಂಪ್ರದಾಯವಿದೆ. ಮಹಾತ್ಮಾ ಶ್ರೀ ಗುರು ಶಾಂತೇಶ್ವರನಿಗೆ ವೀರಶೈವ ಭಕ್ತರು ಹೆಚ್ಚಾಗಿದ್ದಾರೆ. ಜಾತ್ರೆಯಲ್ಲಿ ತೇರು ಎಳೆಯುವಾಗ ಸಂಪ್ರದಾಯದಂತೆ, ತೇರಿನ ಮುಂದೇ ಒಬ್ಬ ಸ್ವಾಮಿಯನ್ನು ಅಡ್ಡಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡುತ್ತಾರೆ. ಜಾತ್ರೆಯ ಅಂಗವಾಗಿ ಸಂಗೀತ ಕಾರ್ಯಕ್ರಮ ನಡೆಸಲು ದೂರದಿಂದ ಖ್ಯಾತ ಸಂಗೀತಗಾರರನ್ನು ಕರೆಸುತ್ತಾರೆ. ದನಗಳು, ಬಂಡಿಗಳು,

ಕಂಬಳಿ ವಿಶೇಷವಾಗಿ ವಿಲೇವಾರಿಯಾಗುತ್ತವೆ. (ಮಾರಾಟ) ಹೋಳಿ ಹುಣ್ಣಿಮೆವರೆಗೆ ಜಾತ್ರೆ ನಡೆಯುತ್ತದೆ. ಕೊನೆಗೆ ಶ್ರೀ ಅಪ್ಪನವರ ಗದ್ದುಗೆ ತೊಳೆಯುವುದರೊಂದಿಗೆ ಜಾತ್ರೆ ಮುಕ್ತಾಯವಾಗುತ್ತದೆ. ಈ ಜಾತ್ರೆಯ ಉತ್ಸವದಲ್ಲಿ ಭಜನೆ ಮೇಳ, ಡೊಳ್ಳು, ಕುಣಿತ, ಕೋಲಾಟ, ಮೊದಲಾದ ಜಾನಪದ ಕಲಾಮೇಳಗಳೂ ಭಾಗವಹಿಸುತ್ತವೆ. ಕಲೆಗಾರರು ದೈವಭಕ್ತಿಯ ಜೊತೆಗೆ ನೆರೆದಿರುವ ಜನಕ್ಕೆ ತಮ್ಮ ಕಲಾ ಪ್ರೌಢಿಮೆಯನ್ನು ಪ್ರದರ್ಶಿಸಬೇಕೆಂಬ ಉತ್ಸಾಹದಿಂದ ಜಾತ್ರೆಗೆ ಬರುತ್ತಾರೆ. ಜನರಿಗೆ ಮನರಂಜನೆಯೂ ಸಂತೋಷವೂ ಒದಗಿಸುತ್ತಾರೆ. ಇತರ ಕಲಾವಿದರಿಗೆ ಸ್ಫೂರ್ತಿ, ಪ್ರೇರಣೆಯೂ ಇದರಿಂದಾಗುವುದರಲ್ಲಿ ಅನುಮಾನವಿಲ್ಲ.

೩:೧:೩೨: ಮೌನಿಶ್ರೀಗಳ ಜಾತ್ರೆ :

ಸಮಾಜದ ಉದ್ಧಾರಕ್ಕಾಗಿ ಮಹಾತ್ಮರು ಜನಿಸಿ, ಜನಸಾಮಾನ್ಯರಿಗೆ ಉದ್ಧಾರ ಮಾಡಿದ ಅನೇಕ ಉದಾಹರಣೆಗಳಿವೆ. ಅಂಥ ಮಹಾನುಭಾವರ ಗುಂಪಿಗ ಸೇರಿದ ಮೌನಿ ಮಹಾರಾಜರೊಬ್ಬರು ಬೀದರ ನಗರದ ನರಸಿಂಹ ಝುರಿಯ ಹತ್ತಿರ ಗವಿಯನ್ನು ಕೊರೆದು, ತಪಸ್ಸು ಮಾಡಿ ಸಿದ್ಧಿಗೈದ ಪವಾಡ ಪುರುಷರು. ೧೯೮೨ರಲ್ಲಿ ಶಿವನ ಸನ್ನಿಧಿ ಸೇರಿದರು. ಪ್ರತಿವರ್ಷ ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ಮೂರು ದಿನ ಜಾತ್ರೆ ಜರುಗುತ್ತದೆ.

ಜಾತ್ರೆ ದಿನಗಳಲ್ಲಿ ಪ್ರತಿ ನಿತ್ಯ ಮೌನಿಶ್ರೀಗಳ ಗದ್ದುಗೆಗೆ ಪೂಜೆ, ತೆಂಗು, ಕಾಯಿ, ಕರ್ಪೂರ, ಹೂಗಳ ಅರ್ಪಣೆ ಉಪನ್ಯಾಸ, ಪ್ರವಚನ, ಕೀರ್ತನೆ, ಅಬಿಷೇಕ ಅಖಂಡ ಶಿವನಾಮ ಭಜನೆ ಮುಂತಾದವುಗಳು ನಡೆಯುತ್ತವೆ. ಉತ್ಸವದ ಕೊನೆಯ ದಿನ ಪ್ರಾತಃ ಕಾಲ ಮಹಾಪ್ರಸಾದದ ವಿನಿಯೋಗ ಮಾಡುತ್ತಾರೆ. 'ಸುರ್-ಸುರ್ ಸುರಿಯುವ ಪ್ರಸಾದ ಪಾಯಸ ಘಮ ಘಮಿಸುತ್ತದೆ. ಜಾತ್ರೆಯಲ್ಲಿ ಐದುನೂರಕ್ಕೂ ಹೆಚ್ಚು ಜನ ಸೇರುವುದಿಲ್ಲ. ಸ್ಥಳೀಯ ಭಕ್ತರು ಮಾತ್ರ ಬಂದು ದರ್ಶನ ಪಡೆದುಕೊಳ್ಳುತ್ತಾರೆ.

೩:೧:೩೩: ಕೊತ್ತಲ ಬಸವೇಶ್ವರ ಜಾತ್ರೆ :

ಕರ್ನಾಟಕದ ಗತಕಾಲದಲ್ಲಿ ವೈಭವದ ರಾಜ ಮನೆತನಗಳ ಕಾಲದಲ್ಲಿ ಸೇಡಮ್ ನಗರವು ಪ್ರಮುಖ ಅಗ್ರಹಾರದಂತೆ ಶಿಕ್ಷಣ ಕೇಂದ್ರ ಸ್ಥಾನವೂ ಆಗಿತ್ತು. ಹೀಗಾಗಿ ಅದು ಕಲ್ಯಾಣ ಚಾಲುಕ್ಯರ, ರಾಷ್ಟ್ರಕೂಟರ ಕಾಲದಲ್ಲಿ ಕಲೆಯ ಬೀಡಾಗಿ ವೈಭವದ ನಗರವಾಗಿ ಬೆಳೆದಿದೆ. ಶ್ರೀ ಕೊತ್ತಲ ಬಸವೇಶ್ವರ ದೇವಾಲಯ ಸೇಡಂ ನಗರಕ್ಕೆ ಪ್ರಸ್ತುತವಾಗಿ ಸಮಾಜದ ಸಾಮರಸ್ಯದ ಸಂಕೇತವಾಗಿದೆ. ಅನಾಥರಿಗೆ ಆಶ್ರಯ ನೀಡುವ ಮಹತ್ವದ ಸ್ಥಳ ಇದಾಗಿದೆ. ನಾಗರಕ್ಕೆ ಅನೇಕ ಕಾರ್ಯಕ್ರಮಗಳನ್ನು ಜರುಗಿಸುವ ವಿಶಾಲ ಪ್ರಾಂಗಣವುಳ್ಳ ಸಾಂಸ್ಕೃತಿಕ ಕೇಂದ್ರ ಇದಾಗಿದೆ.

ಮೊದಲು ಈ ದೇವಾಲಯವು ಗಿಡ–ಗಂಟೆ, ಕಲ್ಲು–ಮುಳ್ಳು, ತೆಗ್ಗು–ದಿಣ್ಣೆ, ಕೋಟೆ–ಕೊತ್ತಲುಗಳ ಮುಂತಾದ ಕಂದರ ಪ್ರದೇಶವಾಗಿತ್ತು. ಅವುಗಳ ಮಧ್ಯದಲ್ಲಿ ನಂದಿ(ಬಸವಣ್ಣ)ಯು ಪೂಜ್ಯ ಶ್ರೀ ಸಪ್ಪಣ್ಣಾರ್ಯ ಎಂಬ ಮುನಿಗಳ ಕಣ್ಣಿಗೆ ಗೋಚರಿಸಿತು. ಕೂಡಲೇ ಆ ಯೋಗಿಯು ಭಕ್ತರನ್ನು ಕೈಮಾಡಿ ಕರೆದು ಅಲ್ಲಿನ ಪ್ರದೇಶವೆಲ್ಲ ಸ್ವಚ್ಛಗೊಳಿಸಿ ದೇವಾಲಯಕ್ಕೆ ಒಂದು ಮೂರ್ತರೂಪ ನೀಡಿ ಭಕ್ತಿ–ಭಾವದಿಂದ ಪೂಜಿಸಿ ಆರಾಧಿಸಲು ಆರಂಭಿಸಿದರು. ಕೋಟೆ–ಕೊತ್ತಲಗಳ ಮಧ್ಯದಲ್ಲಿ ಬಸವಣ್ಣ ಇದ್ದುದರಿಂದ ಅದಕ್ಕೆ ಶ್ರೀ ಕೊತ್ತಲ ಬಸವೇಶ್ವರ ಎಂಬ 'ನಾಮಾಂಕಿತವಾಗಿ' ಜನರ ಮಾರ್ಗದರ್ಶಕ ಗುರುವಾಗಿ ಪೀಠಾಧಿಪತಿಗಳಾಗಿ ಪರಮ ಪೂಜ್ಯ ಲಿಂಗೈಕ್ಯ ಶ್ರೀ ಸಪ್ಪಣ್ಣಾರ್ಯರು ನೀತಿ ವಾಕ್ಯಗಳನ್ನು ಸಮಾಜದಲ್ಲಿ ಒಡಮೂಡಿಸಿದರು. ನಿಮ್ನವರ್ಗ ಅಥವಾ ಕೆಳವರ್ಗವೆಂಬ ಬೇಧಭಾವ ಎಣಿಸದೆ ಜನತೆಗೆ ಬೋಧಪ್ರದವಾದ ಹಿತ ಮಾತುಗಳನ್ನು ಹೇಳಿ ಆಶೀರ್ವಚನ ನೀಡುತ್ತಿದ್ದರು.

ಶಿವಯೋಗಿ ಸಪ್ಪಣ್ಣಾರ್ಯರು ಶಾಲಿವಾಹನ ಶಕ ೧೮೪೦ ಭಾದ್ರಪದ ಬಹುಳ ಸಪ್ತಮಿ ರೋಜ ಗುರುವಾಗ ರಾತ್ರಿ ೩ ಗಂಟೆಗೆ ಸಮಾಧಿ ಪಡೆದರು. ನಂತರ ಈ ಸ್ಥಾನಕ್ಕೆ ಸಪ್ಪಣ್ಣಾರ್ಯರ ವರಪುತ್ರರಾಗಿ ಬೆಳೆದ ಶ್ರೀ ಮಡಿವಾಳಯ್ಯ ಸ್ವಾಮಿಗಳ ಪೂಜನೀಯ ಸ್ಥಾನವನ್ನು ವಹಿಸಿಕೊಂಡರು. ಹೀಗೆ ಚಂದ್ರ ಸೂರ್ಯರು ಭೂ ಮಂಡಲವನ್ನು ರಾರಾಜಿಸುವಂತೆ ಈರ್ವ ಗಣ್ಯರು ಆಧ್ಯಾತ್ಮಿಕ ಘನತೆಯುಳ್ಳ ಪೂಜ್ಯರೂ ದೊರೆತದ್ದರಿಂದ ಸಮಾಜ ಧಾರ್ಮಿಕವಾಗಿ, ಹೊಸ ಚೇತನ ಭರಿತವಾಗಿ, ದೇದೀಪ್ಯಮಾನವಾಗಿ ಬೆಳೆಯುತ್ತಿದೆ.

ಅವರ ಮಾರ್ಗದರ್ಶನದಲ್ಲಿ ಶ್ರೀ ಕೊತ್ತಲ ಬಸವೇರ್ಶವರ ಹೆಸರಿನ ಮೇಲೆ ಮೊದಲು "ಬಾಲ ಭಾರತಿ ವಿದ್ಯಾ ಮಂದಿರವು" ೧೯೭೪ರ ವಸಂತ ಪಂಚಮಿಯಂದು ಶ್ರೀ ಮಡಿವಾಳಯ್ಯ ಸ್ವಾಮಿಗಳು ಭೋಧನೆಯಿಂದಲೇ ಪ್ರಾರಂಭವಾಯಿತು. ಇಂದು ಬೃಹತ್ ವಿದ್ಯಾಸಂಸ್ಥೆಯಾಗಿ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಲಿದೆ. ಈ ಬೆಳವಣಿಗೆ ಶಿಕ್ಷಣ ರಂಗದ ಒಂದು ಹೊಸ ಮೈಲುಗಲ್ಲಾಗಿದೆ.

ಪ್ರತಿವರ್ಷವೂ ಕೊತ್ತಲ ಬಸವೇಶ್ವರ ಜಾತ್ರಾ ಮಹೋತ್ಸವವೂ (ಏಪ್ರಿಲ್ ತಿಂಗಳಲ್ಲಿ) ಚೈತ್ರ ಬಹುಳದ್ವಾದಶಿಯಂದು ಬಹು ವಿಜೃಂಭಣೆಯಿಂದ ಜರುಗುತ್ತದೆ. ಜಾತ್ರೆಯಲ್ಲಿ ಸಾವಿರಾರು ಭಕ್ತರು ದರ್ಶನಕ್ಕಾಗಿ ಬರುತ್ತಾರೆ.

ಸುಮಾರು ೧೦ ದಿವಸಗಳ ಕಾಲ ವಿಭಿನ್ನ ಕಾರ್ಯಕ್ರಮಗಳೆಂದರೆ, ಕೀರ್ತನೆ, ಪಲ್ಲಕ್ಕಿ ಮೆರವಣಿಗೆ, ಭಕ್ತಿಗೀತೆಗಳ ಕಾರ್ಯಕ್ರಮ, ಸಂಗೀತ ರುದ್ರಾಭಿಷೇಕ ಕಾರ್ಯಕ್ರಮ,

ಗಣಾರಾಧನೆ, ಶಹನಾಯಿ ವಾದನ ಗೀಗೀ ಪದಗಳು ಕುಸ್ತಿ ಸ್ಪರ್ಧೆಗಳು ರಥೋತ್ಸವ, ವಿಶೇಷ ಪೂಜಾ ಹಾಗೂ ಭಜನಾ ಕಾರ್ಯಕ್ರಮ ಕೊನೆಗೆ ಎತ್ತುಗಳ ಪ್ರದರ್ಶನ ಹಾಗೂ ಬಹುಮಾನ ವಿತರಣೆ ಮುಂತಾದ ಕಾರ್ಯಕ್ರಮಗಳು ನಡೆಯುತ್ತವೆ.

೩:೧:೩೪: ಕ್ರೈಸ್ತರ ವಾರ್ಷಿಕ ಜಾತ್ರೆ :

ಕ್ರಿಸ್ತನ ಜನನ ದಿನ ಡಿಸೆಂಬರ್ ೨೫ರಂದು, ಸಾಂಪ್ರದಾಯಿಕ ನಂಬಿಕೆಯಂತೆ, ಅಂದು ಎಲ್ಲಾ ದೇಶಗಳ ಕ್ರೈಸ್ತಮತೀಯರು ಆಚರಿಸುತ್ತಾರೆ. ಕ್ರಿಸ್ತನ ಜನ್ಮದಿನೋತ್ಸವ ಹೈದ್ರಾಬಾದ ಕರ್ನಾಟಕದಲ್ಲಿಯೂ ಸಹ ಆಚರಿಸುತ್ತಾರೆ. ಕ್ರಿಸ್‌ಮಸ್ ಎಂಬುದು ಎಂದರೆ ಕ್ರಿಸ್ತಿನಿಗೆ ಸಂಬಂಧಿಸಿದ ಆರಾಧನೆ ಹಬ್ಬ ಎಂಬುದರ ಸಂಕ್ಷಿಪ್ತ ರೂಪ. ಕ್ರಿ.ಶ. ನಾಲ್ಕನೆಯ ಶತಮಾನದ ಉತ್ತರಾರ್ಧದಿಂದ ಈ ಉತ್ಸವ ಅಸ್ತಿತ್ವಕ್ಕೆ ಬಂದಿದೆ. ಎನ್ನಲಾಗಿದೆ. ರೋಮನ್ ಕ್ಯಾಥೋಲಿಕರು ಜನವರಿ ೬ ರಂದು ಆಚರಿಸುತ್ತದ್ದ ಸೂರ್ಯನ ಹಬ್ಬವಾದ ಎಲೆಫಿನಿಯೂ ಕ್ರಿಸ್ತನ ಜನನವನ್ನು ಸ್ಮರಣೆಗೆ ತರುವಂಥ ಹಬ್ಬವಾಗಿತ್ತು.

ಈ ಹಬ್ಬವನ್ನು ಆಚರಿಸಲಿಕ್ಕೆ ಪೌರ್ವಾತ್ಯರು ಒಂದು ತಾರೀಖನ್ನು, ಪಾಶ್ಚಾತ್ಯರು ಒಂದು ತಾರೀಖನ್ನು ಗೊತ್ತು ಮಾಡಿದುದರಿಂದ ಎರಡು ಭಿನ್ನ ದಿನಗಳಲ್ಲಿ ಈ ಹಬ್ಬವನ್ನು ಆಚರಿಸುವಂತಾಯಿತು. ಮುಂದೆ ಕ್ರಮೇಣ ಡಿಸೆಂಬರ್ ೨೫ ರಂದೇ ಎಲ್ಲ ದೇಶಗಳಲ್ಲೂ ಆಚರಣೆಗೆ ಬಂತು. ಕ್ರಿಸ್ತ ಹುಟ್ಟಿದ ತಾರೀಖಿನ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಕ್ರಿ.ಶ.೩೩೬ ಕ್ಕಿಂತ ಮುಂಚೆ ರೋಮಿನ ಕ್ರೈಸ್ತೇತರರು ಡಿಸೆಂಬರ್ ೨೫ ರಂದು, ಸೂರ್ಯನ ಹಬ್ಬವನ್ನು ಆಚರಿಸುತ್ತಿದ್ದರು. ಅದೇ ದಿನವನನು ಕ್ರಿಸ್ಮಸ್ ಹಬ್ಬವನ್ನಾಗಿ ಗೊತ್ತು ಮಾಡಿರಬಹುದೆಂದು ಇನ್ನೊಂದು ಊಹೆ. ಡಿಸೆಂಬರ್ ೨೫ ರಂದು ಜನ್ಮದಿನೋತ್ಸವದಂದು ಚರ್ಚ್‌ಗಳಲ್ಲಿ ಮೂರು ಆರಾಧನೆಗಳು ನಡೆಯುತ್ತವೆ. ಮೊದಲನೆಯದು ರಾತ್ರಿ ೧೨ ಗಂಟೆಗೆ, ಎರಡನೆಯದು ಬೆಳಿಗ್ಗೆ, ಮೂರನೆಯದು ಮಧ್ಯಾಹ್ನ ಜನ ಚರ್ಚುಗಳಲ್ಲಿ ಕ್ರಿಸ್ಮಸ್ ಹಬ್ಬದ ಕೀರ್ತನೆಗಳನ್ನು (ಕರೋಲ್ಸ್) ಹಾಡಿಕೊಂಡು ನಲಿಯುತ್ತಾರೆ.

ಸಾಮಾನ್ಯವಾಗಿ ಈ ಹಬ್ಬದ ಉತ್ಸವವನ್ನು ಹೊಸ ವರ್ಷದ ಮೊದಲ ದಿನದವರೆಗೂ ಅಂದರೆ ಒಂದನೇ ಜನವರಿವರೆಗೂ ಕಾಣಬಹುದಾಗಿದೆ. ಜಾತ್ರೆಯಂದು ಅನೇಕ ರೀತಿಯ ಪದ್ಧತಿಗಳು ರೂಢಿಗೆ ಬಂದಿವೆ. ಆ ದಿನ ಪ್ರತಿಯೊಬ್ಬರು ತಮ್ಮ ತಮ್ಮ ಗೃಹಗಳನ್ನು ಮನಮೆಚ್ಚುವಂತೆ ಅಲಂಕರಿಸುತ್ತಾರೆ. ಅಂದು ಸ್ತ್ರೀ ಪುರುಷ ಮಕ್ಕಳಾದಿಯಾಗಿ ಶುಭ್ರವಸ್ತ್ರಧಾರಿಗಳಾಗಿ ಚರ್ಚಿಗೆ ಹೋಗಿ

ಕರ್ತನಿಗೆ ಪ್ರಾರ್ಥನೆಯನ್ನು ಸಲ್ಲಿಸಿ ಭಕ್ಷ್ಯ ಭೋಜ್ಯ ತಿಂಡಿ ತಿನಿಸುಗಳನ್ನು ದಾನ ಮಾಡುವುದು ರೂಢಿಯಲ್ಲಿದೆ. ಉಳ್ಳವರು ಈ ದಿನದಂದು ತಮ್ಮ ಪ್ರೀತಿ ಪಾತ್ರರಿಗೆ ಬೆಲೆ ಬಾಳುವ ಪದಾರ್ಥಗಳನ್ನು ಉಡುಗೊರೆಯಾಗಿ ಕೊಡುತ್ತಾರೆ.

ದೂರದಲ್ಲಿರುವ ತಮ್ಮ ಆಪ್ತರು, ಆತ್ಮೀಯರಿಗೆ ಶುಭಾಕಾಂಕ್ಷೆ ಪತ್ರಗಳನ್ನು ಬರೆದು ಶುಭ ಕೋರುವುದು ಸರ್ವೇಸಾಮಾನ್ಯವಾಗಿದೆ. ಕ್ರಿಸ್‌ಮಸ್ ಗಿಡವನ್ನು ನಿರ್ಮಿಸಿ ಅದನ್ನು ಕಾಗದದ ಹೂ ಮತ್ತು ದೀಪಗಳಿಂದ ಅಲಂಕರಿಸುತ್ತಾರೆ. ಸಂಜೆ ಹೊತ್ತಿನಲ್ಲಿ ಏಸುವಿನ ಪ್ರತಿಮೆಯನ್ನು ವಾಹನದಲ್ಲಿರಿಸಿ ಹೂ ಮತ್ತು ವಿದ್ಯುತ್ ಲೈಟುಗಳಿಂದ ಅಲಂಕರಿಸಿ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆ ಕುಣಿತ, ಮಣಿತ, ಭಜನೆ ಮುಂತಾದವುಗಳಿಂದ ಒಳಗೊಂಡಿರುತ್ತದೆ. ಸಾವಿರಾರು ಜನರು ಮೆರವಣಿಗೆಯಲ್ಲಿ ಸೇರುತ್ತಾರೆ. ಜನಪದಗೀತೆ, ಹಾಡುವುದು, ಕೋಲಾಟ, ಆಡುವುದು, ಮುಂತಾದ ಮನೋರಂಜನೆ ಕಾರ್ಯಕ್ರಮಗಳಿರುವುದು ಈ ಉತ್ಸವದ ವೈಶಿಷ್ಟ್ಯ. ಬಾಣ ಬಿರುಸು, ಸುಡು ಮದ್ದುಗಳನ್ನು ಸುಡುತ್ತಾರೆ. ಇಲ್ಲಿ ಜಾತಿ ಬೇಧವಿರುವುದಿಲ್ಲ. ಪ್ರತಿಯೊಬ್ಬರು ತಮ್ಮ ಕುಂದು ಕೊರತೆಗಳನ್ನು ಬೇಕು ಬೇಡಗಳನ್ನು ದೇವರ ಮುಂದೆ ನಿವೇದಿಸುವುದು ಸಾಮಾನ್ಯ ವಿಷಯವಾಗಿದೆ. ಹೈದ್ರಾಬಾದ ಕರ್ನಾಟಕದ ಜಿಲ್ಲಾ ಕೇಂದ್ರಗಳಲ್ಲಿ ಕ್ರೈಸ್ತರ ಚರ್ಚುಗಳಿದ್ದು ಇವೆಲ್ಲಾ ಬಹು ಪ್ರಸಿದ್ಧವಾಗಿವೆ.

೩:೧:೩೫: ಸೂಫಿ ಸಂತ ಹಜರತ್ ಖಲಿಫಾತುರ್ ರಹಿಮಾನ ಉರ್ಸು :

ಮಳಖೇಡ ಎಂಬ ಗ್ರಾಮವು ಮಾನ್ಯಖೇಟವೆಂದು ಐತಿಹಾಸಿಕವಾಗಿ ಪ್ರಸಿದ್ಧಿಯನ್ನು ಪಡೆದಿದೆ. ಇದು ರಾಷ್ಟ್ರಕೂಟರ ರಾಜಧಾನಿಯಾಗಿತ್ತು. ಈಗ ಇದು ಕರ್ನಾಟಕ ರಾಜ್ಯದ ಕಲುಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿಗೆ ಸೇರಿದ ಹಳ್ಳಿ. ಕಲುಬುರ್ಗಿಯಿಂದ ಸೇಡಂಗೆ ಹೋಗುವ ರಸ್ತೆಯ ಮೇಲೆ ಗುಲಬರ್ಗಾದಿಂದ ೨೨ ಮೈಲುಗಳ ಅಂತರದಲ್ಲಿದೆ. ಸೇಡಂದಿಂದ ಹತ್ತು ಮೈಲು ಅಂತರವಾಗುತ್ತದೆ. ಸೇಡಂ ತಾಲ್ಲೂಕಿನಿಂದ ಮಳಖೇಡದವರೆಗೆ ಯಾವ ಸಾರಿಗೆ ಸೌಕರ್ಯವೂ ಇಲ್ಲ.

ಮಾನ್ಯಖೇಡವೂ ಹಿಂದೂ ಧರ್ಮದ ಕೇಂದ್ರ ಸ್ಥಳವಾಗಿದ್ದು, ಮಾನವ ಧರ್ಮವನ್ನು ಮೆರೆಯುತ್ತಿರುವಂತೆ ಇದು ಇಸ್ಲಾಮ ಧರ್ಮದ ಕೇಂದ್ರಸ್ಥಾನವಾಗಿದ್ದು, ಮಾನವಧರ್ಮವನ್ನು ಮೆರೆಯುತ್ತಲಿದೆ. ಹೀಗಾಗಿ ಮಾನ್ಯಖೇಡವೆಂದರೆ ಮೊದಲಿನಿಂದಲೂ ಮತ ಸಹಿಷ್ಣುತೆಗೆ ಧರ್ಮಸಹಿಷ್ಣುತೆಗೆ ಹೆಸರುವಾಸಿ. ಈಗ ಅದಕ್ಕೆ ಸಾಕ್ಷಿ ಇಲ್ಲಿರುವ ಗುಡಿ ಗುಂಡಾರಗಳು, ವೀರಶೈವ ಮಠ ಮಾನ್ಯಗಳು ಮತ್ತು ದರ್ಗಾಗಳು. ಅವುಗಳಲ್ಲಿ ಶ್ರೀ ಹಜರತ್ ಸೈಯದ್ ಷಹಾತಾಜೋದ್ದಿನ್ ಇಸ್ಮಾಯಿಲ್ ಅವರ ಪುತ್ರ ಶ್ರೀ ಹಜರತ್ ಸೈಯದ್‌ಷಹಾ ಖಲಿಫತುರ್ ರಹಿಮಾನ ಅವರು ಬಳ್ಳಾರಿ ಜಿಲ್ಲೆಯ ತುಂಗಭದ್ರಾನದಿಯ ತಟದ ಮೇಲಿರುವ ಕಂಪ್ಲಿಯಲ್ಲಿ ಜನ್ಮ ತಾಳಿದರು.

ಅವರು ಹುಟ್ಟಿದಾಗಲೇ 'ಅಲ್ಲಾ ಅಲ್ಲಾ' ಎಂದು ಹೇಳುತ್ತಲೇ ಭೂಮಿಯ ಸ್ಪರ್ಶವನ್ನು ಮಾಡಿದರಂತೆ, ಆ ಪವಿತ್ರ ದಿವಸವು ಹತ್ತನೆಯ ರಮಝಾನ್ ಹಿಜರಿ ಸನ್ ೧೨೦೯ (ಕ್ರಿ.ಶ.೧೮೫೧) ಅವರು ತಮ್ಮ ಏಳನೆಯ ವರ್ಷದಲ್ಲಿ ಮನೆಯನ್ನು ಬಿಟ್ಟು ನದಿದಾಟಿ ಗಂಗಾವತಿಯ ಸಪ್ತ ಪರ್ವತಗಳಲ್ಲಿ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದು ಸೂಫಿಸಂತರಾದರು. ಈ ಸೂಫಿ ತತ್ತ್ವವೆಂದರೆ ಮನುಷ್ಯನು ಆತ್ಮಸಮರ್ಪಣೆಯಿಂದ ಪರಮಾತ್ಮನ ಜ್ಞಾನವನ್ನು ಪಡೆಯುವುದು. ಅನಂತರ ಆತನೊಡನೆ ಸಂಪರ್ಕವನಿಟ್ಟುಕೊಂಡು ಕೊನೆಯ ಹಂತದಲ್ಲಿ ಅವನಲ್ಲಿ ಲೀನವಾಗುವುದು ಎಂದರ್ಥ.

ಈ ಇಂಗಿತಾರ್ಥವನ್ನು ತಿಳಿದುಕೊಂಡು ಅವರು ದಕ್ಷಿಣ ಭಾರತದ ಎಲ್ಲ ಪ್ರದೇಶಗಳಲ್ಲಿ ಸುತ್ತಾಡಿ ಮತ್ತು ತಮ್ಮ ಪ್ರಭಾವವನ್ನು ಬೀರಿದರು. ಮಾನವ ಧರ್ಮದ ತತ್ತ್ವಗಳನ್ನು ಬಿತ್ತಿ ಬೆಳೆದರು. ಈ ಕಾರಣಕ್ಕಾಗಿ ಜನತೆ ಅವರನ್ನು ಪ್ರೀತಿಯಿಂದ ಖಲೀಫಾ–ಎ–ದಕ್ಕನ್ ಎಂದು ಕರೆದು ಗೌರವ ತೋರುತ್ತಿದ್ದರು. ಈ ಸಂತಶ್ರೇಷ್ಠರು ಬೋಧಿಸಿದ ತತ್ತ್ವಗಳು ಇಂತಿವೆ. ಪ್ರತಿಯೊಬ್ಬನು ಮಾನವಕಲ್ಯಾಣಕ್ಕಾಗಿ ಸದಾ ಹೊರಾಡುತ್ತಿರಬೇಕು. ಅಲ್ಲಿ ಸೇವಾ ಮನೋವೃತ್ತಿಯಲ್ಲಿ ಪ್ರೀತಿ ತುಂಬಿರಬೇಕು. ಅಂತಹ ಪ್ರೀತಿಯಿಂದ ಶಾಶ್ವತ ಶಾಂತಿಯು ದೊರೆಯುತ್ತದೆ. ದೇವನೊಬ್ಬ ನಾಮ ಹಲವು. ಆದ್ದರಿಂದ ಎಲ್ಲ ಧರ್ಮಗಳನ್ನು ಗೌರವಿಸಬೇಕು. ದೀನ ದಲಿತರನ್ನು ಪ್ರೀತಿಸಿದರೆ ಪರಮಾತ್ಮನು ಒಲಿದೇ ಒಲಿಯುತ್ತಾನೆ.

ಇಂತಹ ಲೋಕಮಾನ್ಯ ತತ್ತ್ವಗಳನ್ನು ಅನುಷ್ಠಾನದಲ್ಲಿ ತಂದುಕೊಂಡು ಅನಂತರ ಬೋಧಿಸಿ ಗುರುವಾರ ೨೪ನೆಯ ಸನ್ ೧೩೦೫ರಂದು ಸುಮಾರು ೯೬ ವರ್ಷಗಳ ತುಂಬು ಬದುಕನ್ನು ಸಾಗಿಸಿ, ಇಹಲೋಕಯಾತ್ರೆಯನ್ನುಗೈದು ಶಿವನ ಸ್ನನಿಧಾನವನ್ನು ಸೇರಿದರು. ಅವರ ಪಾರ್ಥಿವ ಶರೀರವನ್ನು ಮಾನ್ಯಖೇಡದಲ್ಲಿ ಸಮಾಧಿ ಮಾಡಿ ಆಸ್ಥಳದಲ್ಲಿ ಭಕ್ತಾದಿಗಳೆಲ್ಲ ಸೇರಿ ದರ್ಗಾ ಕಟ್ಟಿದ್ದಾರೆ. ಸಜ್ಜಾದಾನಷೀನ್ ಆಗಿರುವ ಶ್ರೀ ಮೌಲಾನಾ ಸೈಯದ ಶಹಾ ರಹಮುತುಲ್ ಖಾದರಿಯವರ ಸೂಫಿಸಂತ್ ಖಲಿಫತುರ್ ರೆಹಮಾನ್ ದರ್ಗಾದಲ್ಲಿ ಪ್ರತಿವರ್ಷ ಐದು ದಿನಗಳ ಕಾಲ ಉರ್ಸು ನಡೆಯುತ್ತದೆ.

ದೇಶದ ನಾನಾ ಮೂಲೆಗಳಿಂದ ಸರ್ವಧರ್ಮಗಳ ಅನುಯಾಯಿಗಳು ಬಂದು ಈ ಉರ್ಸುದಲ್ಲಿ ಪಾಲ್ಗೊಳ್ಳುತ್ತಾರೆ. ಇತ್ತೀಚೆಗೆ ಆ ಸೂಫಿಸಂತರ ಸ್ಮೃತಿಯಲ್ಲಿ "ಮಾನವ ಧರ್ಮ ಸೇವಾ ಸಮಿತಿ"ಯೊಂದನ್ನು ಅಲ್ಲಿ ಸ್ಥಾಪಿಸಲಾಗಿದೆ. ಅದರ ಮುಖಾಂತರ ಪ್ರಯತ್ನಗಳು ನಡೆದಿವೆ. ಹೀಗೆ ಮಾನ್ಯಖೇಟವು ಸೂಫಿಸಂತನಿಗೂ ಎಡೆ ಮಾಡಿಕೊಟ್ಟು ತನ್ನ ವಿಶಾಲತೆಯನ್ನು ಮೆರೆದಿದೆ.

ಹಿಂದೂ ಪದ್ಧತಿಯಂತೆ ಹಣ್ಣು ಕಾಯಿ ನೈವೇದ್ಯಗಳು ಈ ದರ್ಗಾದಲ್ಲಿ ಅರ್ಪಿತವಾಗುತ್ತವೆ. ಐದು ದಿನಗಳಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಹಿಂದೂ ಮುಸ್ಲಿಂರು ಜತೆ ಸೇರಿ ಆನಂದದಿಂದ, ಕಾಲ ಕಳೆಯುತ್ತಾರೆ. ಕುಸ್ತಿ ಭಜನೆ, ಖವ್ವಾಲಿ ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತವೆ. ವಿವಿಧ ಬಗೆಯ ಅಂಗಡಿಗಳನ್ನು ಹಾಕಿರುತ್ತಾರೆ.

ಇದು ಸೇಡಂ ತಾಲ್ಲೂಕಿನಲ್ಲಿಯೇ ಅತ್ಯಂತ ದೊಡ್ಡ ಪ್ರಮಾಣದ ಉರ್ಸು ಎನ್ನಲಾಗಿದೆ. ಇದೇ ರೀತಿ ಹಿಂದೂ–ಮುಸ್ಲಿಂ ಸಹಯೋಗದ ಉರಸುಗಳು ಗುಲ್ಬರ್ಗಾದ ಖಾಜಾ ಬಂದೇನವಾಜ್ ಇನ್ನಿತರ ಅನೇಕ ಕಡೆಗಳಲ್ಲಿ ನಡೆಯುತ್ತಲೇ ಇವೆ. ರಾಷ್ಟ್ರೀಯ ಭಾವೈಕ್ಯ, ಕೋಮು ಸೌಹಾರ್ದ ಮತ್ತು ಜಾತ್ಯಾತೀತವಾದಿ ಆದರ್ಶಗಳನ್ನು ನಿಜವಾಗಿ ಆಚರಣೆಗೆ ತಂದಿರುವುದನ್ನು ಕಣ್ಣಾರೆ ನೋಡಬೇಕಿದ್ದರೆ ಈ ಉರ್ಸು ಕಂಡು ಆನಂದಿಸಬೇಕು.

೩:೧:೩೬: ಮುಲ್ತಾನಿ ಪಾಶಾ ಉರುಸು :

ರಮ್‌ಜಾನ್ ತಿಂಗಳು ಪ್ರಾರಂಭವಾದೊಡನೆ ಸರಕದ ಬಾಗಿಲು ಮುಚ್ಚಿ ಸ್ವರ್ಗದ ಬಾಗಿಲು ತೆರೆದಿರುತ್ತದೆಯಂತೆ. ಈ ತಿಂಗಳಲ್ಲಿ ಖುರಾನ್ ಧರ್ಮ ಗ್ರಂಥದ ಮಹತ್ವವನ್ನು ಪ್ರಚಾರ ಪಡಿಸುವದು, ಪೂಜಿಸುವುದು, ಇಸ್ಲಾಮ ಧರ್ಮಕ್ಕಾಗಿ ದುಡಿದ, ಮಹಾಯೋಗಿ ತ್ಯಾಗಿಗಳ ಸವಿನೆನಪಿಗಾಗಿ ಉರಸ್‌ಗಳು ನಡೆಸುವುದು, ಸಾಂಸ್ಕೃತಿಕ ಕಾರ್ಯಕ್ರಮಗಳು ಏರ್ಪಡಿಸುವುದು ಹೈದ್ರಾಬಾದ ಕರ್ನಾಟಕದ ಮೂರು ಜಿಲ್ಲೆಯ ಮುಸ್ಲಿಂ ಬಾಂಧವರು, ಆಯಾ ಗ್ರಾಮ ತಾಲ್ಲೂಕು ಜಿಲ್ಲೆಯಲ್ಲಿ ನಡೆಸುತ್ತಾರೆ.

ಬೀದರ ನಗರದಲ್ಲಿರುವ ಮುಲ್ತಾನಿ ಪಾಶಾ ಉರುಸ್ ಪ್ರತಿವರ್ಷ ರಂಜಾನ್ ಹಬ್ಬದಂದು ಪ್ರಾರಂಭವಾಗಿ ಐದು ದಿನಗಳ ಕಾಲ ಜರುಗುತ್ತದೆ. ಇದು ಹಿಂದೂ ಮುಸ್ಲಿಂ ಜನರ ಭಾವೈಕ್ಯದ ಸಂಕೇತವೆನಿಸಿದೆ. ಬೀದರ ಪಟ್ಟಣದವನೇ ಆದ ಮುಸ್ಲಿಂ ಸಂತ ಮುಲ್ತಾನಿ ಪಾಶಾ ಪವಾಡ ಪುರುಷರಾಗಿ, ಖುರಾನ್ ಧರ್ಮಗ್ರಂಥದ ಪ್ರಚಾರ, ಸದಾ ಅಲ್ಲಾಹ: ನಾಮಸ್ಮರಣೆ ಮಾಡುವುದರೊಂದಿಗೆ ಈ ಭಾಗದ ಜನರ ಆರಾಧ್ಯ ದೇವರಾಗಿದ್ದಾರೆ.

ಈತನ ಕಾಲ ೧೮ನೆಯ ಶತಮಾನ ಎಂದು ಹೇಳಲಾಗುತ್ತಿದೆ. ನಿಖರವಾದ ಪುರಾವೆಗಳು ದೊರೆತಿಲ್ಲ. ಸಂತ ಪಾಶಾ ಮರಣಾಂತರ ಸ್ಥಳೀಯ ಭಕ್ತ ಮುಸ್ಲಿಂ ಬಾಂಧವರು ಗೋರಿಯ ಮೇಲೆ ಭವ್ಯ ದರ್ಗಾ ಕಟ್ಟಿಸಿ ಪ್ರತಿವರ್ಷ ರಂಜಾನ್ ಹಬ್ಬದಂದು ಐದು ದಿವಸ ಉರುಸು ನಡೆಸುವ ಪರಪಾಠ ಬೆಳೆಸಿಕೊಂಡು ಬಂದಿದ್ದಾರೆ.

ದರ್ಗಾದ ತುಂಬೆಲ್ಲಾ ಚಿಕ್ಕ ಚಿಕ್ಕ ವಿದ್ಯುತ್‌ದ್ವೀಪಗಳಿಂದ ಅಲಂಕರಿಸುತ್ತಾರೆ. ಜಾತಿ ಮತ ಬೇಧವಿಲ್ಲದೆ ಜನ ಸೇರುತ್ತಾರೆ, ಮುಲ್ತಾನಿ ಪಾಶಾರವರ ಪ್ರೀತಿಯ "ಫಮಾ" ಭಜನಾ ಮೇಳಗಳು ಏರ್ಪಡುತ್ತವೆ. ಪರಮಾತ್ಮನ ಹಾಗೂ ಸಂತರ

ಗುಣಗಾನದ ಕವ್ವಾಲಿ ಗಜಲ್‌ಗಳ ಸುಗ್ಗಿಯನ್ನು ಕಾಣಬಹುದು. ಹಿಂದೂ ಮುಸ್ಲಿಂರು ಬೇಧಭಾವವಿಲ್ಲದೆ ಮುಲ್ತಾನಿ ಪಾಶಾ ಸಂತನ ದರ್ಶನ ಪಡೆಯುತ್ತಾರೆ. ಹಿಂದೂಗಳಾದವರು ಮಿಠಾಯಿ ಹಂಚಿದರೆ, ಮುಸ್ಲಿಂ ಹರಕೆಯ ಅನ್ನಯ "ಸುರುಕುಂಬಾ" ಅರ್ಪಣೆ ಮಾಡುತ್ತಾರೆ. ಅರ್ಚಕರು ನವಿಲಿನ ಗರಿಗಳಿಂದ ಆಶೀರ್ವಾದ ಕೊಡುತ್ತಾರೆ.

ಪುಷ್ಪಗುಚ್ಚ ಏರಿಸುವ ಸಂದರ್ಭ ಕಣ್ಣಾರೆ ಕಂಡು ಆನಂದಿಸಬಹುದಾಗಿದೆ. ಉರುಸ್ ಸಮಯದಲ್ಲಿ ನೂರಾರು ಹಂಗಾಮಿ ಅಂಗಡಿಳಗು ತಲೆ ಎತ್ತುತ್ತವೆ. ಮನೋರಂಜನೆಗಾಗಿ ಚಕ್ರದ ತೊಟ್ಟಿಲು, ಕುದುರೆ ಮೇಲೆ ಕೂಡುವ ತೊಟ್ಟಿಲ, ವಿಮಾನ ತೊಟ್ಟಿಲ, ಹೀಗೆ ಹತ್ತಾರು ಪ್ರಕಾರದ ಮನೋರಂಜನೆಯ ವ್ಯವಸ್ಥೆ ಇರುತ್ತದೆ, ಉರುಸ್ ಕೊನೆಯ ದಿವಸ ದರ್ಗಾದಲ್ಲಿ ಉಪನ್ಯಾಸ ಹಾಗೂ ಖಾಂಡ(ಊಟದ) ವ್ಯವಸ್ಥೆ ಮಾಡಿರುತ್ತಾರೆ. ಅಂದು ಮುಂಜಾನೆ ಮುಸ್ಲಿಂರು ಸ್ನಾನ ಮಾಡಿ ಹೊಸ ಬಟ್ಟೆ ಧರಿಸಿ ಪುರುಷರು ಸಡಗರ-ಸಂಭ್ರಮದಿಂದ ದರ್ಗಾಕ್ಕೆ ಬರುತ್ತಾರೆ. ಸಂತ ಮುಲ್ತಾನಿ ಪಾಶಾನ ದರ್ಶನ ಪಡೆದು ಪ್ರಸಾದ ಸ್ವೀಕರಿಸುತ್ತಾರೆ. ನಂತರ ಒಬ್ಬರಿಗೊಬ್ಬರು ಹರ್ಷೋದ್ಗಾರದಿಂದ ಕೈಕೂಡಿಸಿ ಸಹೋದರ ಭಾವದಿಂದ ಅಲಂಗಿಸುವರು. ಉರುಸು ಮತ್ತು ಹಬ್ಬದ ಮುಬಾರಕ್ ಎನ್ನುತ್ತ ಶುಭ ಕೋರುವರು.

ಈ ಸಂದರ್ಭದಲ್ಲಿ ಹಿಂದೂ-ಮುಸ್ಲಿಂ, ಬಡವ, ಸಿರಿವಂತ, ಶತೃ-ಮಿತ್ರ, ಪರಿಚಿತ ಅಪರಿಚಿತ ಎಂಬ ಬೇಧಭಾವ ಮೂಡದೆ ಎಲ್ಲರೂ ಸಹೋದರರು ಎಂಬ ಭಾವನೆಯು ಉಂಟಾಗುವುದು. ಉರುಸ್ ಮುಗಿಸಿಕೊಂಡು ತಮ್ಮ-ತಮ್ಮ ಮನೆಗೆ ಹೋದ ಮೇಲೆ 'ಘೀರ್ ಕುರಮಾ' ಎಂಬ ಸಿಹಿ ಅಡಿಗೆಯನ್ನು ಮಾಡಿ ಮತ ಬೇಧವಿಲ್ಲದೆ ಬಂಧು-ಮಿತ್ರರನ್ನು ಆಮಂತ್ರಿಸಿ, ಅಲಂಗಿಸಿ ಶುಭ ಕೋರುತ್ತಾರೆ. ಮುಲ್ತಾನಿ ಪಾಶಾ ಉರುಸು ರಂಜಾನ್ ತಿಂಗಳ ಕೊನೆಯ ತನಕ ಮತೀಯ ಸೌಹಾರ್ಧತೆಗೆ, ರಾಷ್ಟ್ರೀಯ ಭಾವೈಕ್ಯತೆಗೆ ಮಾದರಿಯಾಗಿದೆ.

ಮನುಷ್ಯ ಸಂಬಂಧ ಒಂದೂಗೂಡಿಸಲು ಪ್ರೇರೇಪಿಸುವ ರೀತಿಯಲ್ಲಿ ಮುಲ್ತಾನಿ ಪಾಶಾ ಉರುಸ್ ಒಂದಾಗಿದೆ.

೩:೧:೩.೨: ಖಾಜಾ ಬಂದಾನವಾಜ್ ಉರುಸ್ :

ಕಲುಬುರ್ಗಿ ಕರ್ನಾಟಕದ ಉತ್ತರ ಭಾಗದಲ್ಲಿರುವ ಜಿಲ್ಲಾ ಕೇಂದ್ರ, ಇದೊಂದು ಇತಿಹಾಸ ಪ್ರಸಿದ್ಧವಾದ ನಗರ, ೧೩ನೆಯ ಶತಮಾನದಲ್ಲಿ ಹಸನ್ ಗಂಗೂ ಬಹಮನಿ ಎಂಬ ಸರದಾರನೊಬ್ಬ ಕಲುಬುರ್ಗಿ ನಗರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಕಲುಬುರ್ಗಿಯು ಪ್ರಸಿದ್ಧಿಗೆ ಬಂತು. ಸುಮಾರು ೭೫ ವರ್ಷಗಳವರೆಗೆ ಅನೇಕ ಜನ ಮಹಾ ವಿದ್ವಾಂಸರು ರಾಜಕಾರಣ ಪಟುಗಳು ಕಲಾವಿದರೂ, ಸಂತಜ್ಞಾನಿಗಳು, ದೇಶದ ವಿವಿಧ ಭಾಗಗಳಿಂದ ಬಂದು ಇಲ್ಲಿ ನೆಲೆಸಿದರು. ಅಂಥವರಲ್ಲಿ ಮುಸ್ಲಿಂ ಸಂತ ಖಾಜಾ-ಬಂದೇನವಾಜರು ಒಬ್ಬರು.

ಈ ಭಾಗ ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ಕೇಂದ್ರವಾಗಿ ಬೆಳೆಯಿತು. ಖಾಜಾಬಂಧೇನವಾಜ (೧೩೨೧–೧೪೨೨) ದೆಹಲಿಯ ನಾಸಿರುದ್ದೀನ್ ಅವರ ಶಿಷ್ಯರಾಗಿದ್ದರು. ಪರ್ಶಿಯನ್ ಭಾಷೆಯ ಮೇಲೆ ಉತ್ತಮ ಪ್ರಭುತ್ವ ಹೊಂದಿದ್ದು, ಉತ್ತಮ ಬರಹಗಾರರೆಂದು ಖ್ಯಾತಿ ಪಡೆದಿದ್ದರು. ದೆಹಲಿ ಬಿಟ್ಟು ದಕ್ಷಿಣಕ್ಕೆ ಬಂದ ಅವರಿಗೆ, ಸ್ಥಳೀಯ ಜನರಿಗೆ ಪರ್ಶಿಯನ್ ಜ್ಞಾನ ಇಲ್ಲದಿರುವುದು ಅರಿವಿಗೆ ಬಂತು. ಉರ್ದು ಕಲಿಸಿ ಇಲ್ಲಿಯ ಜನತೆಯೊಂದಿಗೆ ಬೆರೆತ ಅವರು ಉರ್ದು ಭಾಷೆಯಲ್ಲಿ ಹತ್ತಾರು ಕೃತಿಗಳನ್ನು ರಚಿಸಿದರು. ಕಲುಬುರ್ಗಿಯಲ್ಲಿ ಬಂದಾನವಾಜರ ಧಾರ್ಮಿಕ ಪ್ರವಚನಕ್ಕೆ ಮಾರು ಹೋದ ಜನರು ಅವರನ್ನು ಅಪಾರ ಗೌರವದಿಂದ ಕಂಡರು. ೧೪೨೨ರಲ್ಲಿ ಮೃತರಾದ ಬಳಿಕ ಅವರ ಹೆಸರಿನ ದರ್ಗಾ ಕಟ್ಟಿಸಿ, ಅವರ ನೆನಪು ಸದಾ ಚಿರಸ್ಮರಣೀಯವಾಗಿ ಉಳಿವಂತೆ ಪ್ರತಿವರ್ಷ ಉರುಸ್ ಕಾರ್ಯ ಕೈಗೆತ್ತಿಕೊಂಡರು.

ಹಿಂದಿನಿಂದ ಇಂದಿನವರೆಗೆ ಪ್ರತಿವರ್ಷ ಉರುಸ್ ಜರುಗುತ್ತದೆ. ಅವರ ಗೋರಿಯ ಮೇಲೆ ನಿರ್ಮಿಸಲಾಗಿರುವ ಭವ್ಯ 'ದರ್ಗಾ' ಇಂದಿಗೂ ಭಾರತದ ಮುಸ್ಲಿಂರಿಗೆ ಒಂದು ಪವಿತ್ರ ಯಾತ್ರಾಸ್ಥಳವಾಗಿದೆ. ಹೈದ್ರಾಬಾದ ಕೊನೆಯ ನಿಜಾಮನು ಪ್ರತಿವರ್ಷ ಇವರ ಪುಣ್ಯ ತಿಥಿಯ ದಿನ ನಡೆಯುವ ಉರುಸ್‌ನಲ್ಲಿ ಭಾಗವಹಿಸಲು ಬರುತ್ತಿದ್ದುದು ಒಂದು ವಿಶೇಷ. ಉರುಸ್ ಎಂದರೆ ಮಹಾತ್ಮರ ಪುಣ್ಯದಿನ ಎಂಬ ಅರ್ಥ ಹೊರಡುತ್ತದೆ; ಈ ಶಬ್ದಕ್ಕೆ ಇನ್ನೊಂದು ಬಹು ಸಾಂಕೇತಿಕ ಹಾಗೂ ಪಾರಮಾರ್ಥಿಕ ಅರ್ಥವಿದೆ. ಮದು ಮಕ್ಕಳು ಪ್ರಥಮ ದಿನದ ಸಮಾಗಮದ ಶುಭ ಮೂಹೂರ್ತ (ಮೊದಲರಾತ್ರಿ) ಎಂಬುದೇ ಆಗಿದೆ.

ಬಂದಾನವಾಜರ ಪೈಗಂಬರವಾಸಿಗಳಾದ ಪುಣ್ಯದಿನದಂದು, 'ಉರುಸ್' ಸಮಾರಂಭ ಏರ್ಪಾಡಾಗುತ್ತದೆ. ಜಾತಿ ಮತ ಬೇಧವಿಲ್ಲದೆ, ಜನ ಸೇರುತ್ತಾರೆ. ಬಂದಾನವಾಜರ ಪ್ರೀತಿಯ 'ಸಮಾಭಜನಾ' ಮೇಳಗಳು ಏರ್ಪಡುತ್ತವೆ.

ಪರಮಾತ್ಮನ ಹಾಗೂ ಸಂತರ ಗುಣಗಾನದ ಕವ್ವಾಲಿ, ಗಜಲ್‌ಗಳ ಸುಗ್ಗಿ, ಪ್ರವಚನ, ಉಪನ್ಯಾಸ ಮುಂತಾದವುಗಳು ಕಾಣಬಹುದು, ಕೇಳಬಹುದು, ಬಂದಾನವಾಜರ ಹಿರಿಮೆ ಅವರ ಸಮನ್ವಯ ದೃಷ್ಟಿಯಲ್ಲಿ ಇತ್ತು. ಅದಕ್ಕಾಗಿಯೇ ಅವರನ್ನು ಮೆಚ್ಚಿಕೊಂಡವರಲ್ಲಿ ಮುಸ್ಲಿಮರಂತೆ ಹಿಂದೂ ಜೈನ್ ಮೊದಲಾದವರೂ ಇದ್ದಾರೆ. ಇದಕ್ಕೆ ನಿದರ್ಶನವಾಗಿ ಉರುಸ್ ಪ್ರಾರಂಭದಲ್ಲಿ ಗುಮ್ಮಟಕ್ಕೆ 'ರೆಫೀಲಾ' ಪುಷ್ಪಗುಚ್ಛ ಏರಿಸುವ ಸಂದರ್ಭದಲ್ಲಿ ಹಚ್ಚುವ 'ಸಂದಲ್' ಶ್ರೀಗಂಧವನ್ನು ದರಗಾಕ್ಕೆ ಮೆರವಣಿಗೆಯಲ್ಲಿ ಒಯ್ಯುವಾಗ ದೀವಟಿಗೆ (ಮಷಾಲ್) ಹಿಡಿಯುವ ಬಾಬು ಹಿಂದೂ ಭಕ್ತನದಾಗಿದೆ. ಇಂಥ ಸಾಮರಸ್ಯ ಸೂಚಕ ಸಂಪ್ರದಾಯ ಮೊದಲು ಉರುಸ್ ಆರಂಭವಾದದಿಂದನಿಂದ ಇರುವುದಾಗಿ ತಿಳಿದು ಬರುತ್ತದೆ. ನಗರದ ಪ್ರಮುಖ ಹಿಂದೂಗಳು ಪೂಜೆ ನೈವೇದ್ಯ (ಫಾತೆಹ) ಮಾಡಿಸುವುದನ್ನು ಕಾಣಬಹುದು. ಜಾತಿ ಮತ ಬೇಧವಿಲ್ಲದೆ ಸಾವಿರಾರು ಜನರನ್ನು ತನ್ನತ್ತ ಸೆಳೆಯುತ್ತಿರುವ ಕಲ್ಬುರ್ಗಿಯ

ಖಾಜಾ ಬಂದಾನವಾಜ್ ಉರುಸ್ ಧಾರ್ಮಿಕ ಮಹತ್ವ ಮಾತ್ರವಲ್ಲ, ಚಾರಿತ್ರಿಕ ಮಹತ್ವವನ್ನು ಕೂಡ ಹೊಂದಿದೆ. ಹಿಂದೂ ಮುಸ್ಲಿಂರ ಗೌರವಾದರಗಳಿಸಿದ ಈ ಉರುಸ್‌ಗೆ ರಾಷ್ಟ್ರಾದ್ಯಂತವಿರುವ ಮುಸ್ಲಿಂರು ತಪ್ಪದೇ ಬರುತ್ತಾರೆ. ಪ್ರತಿವರ್ಷ ಕನಿಷ್ಟ ಒಂದು ಲಕ್ಷ ಜನರು ಉರುಸ್‌ನಲ್ಲಿ ಪಾಲ್ಗೊಳ್ಳುತ್ತಾರೆ.

ಉರುಸ್‌ಗೆ ವಿಶೇಷ ರೈಲು-ಬಸ್ಸುಗಳಲ್ಲಿ ನಾಲ್ಕು ನಿಟ್ಟಿನಿಂದ ಆಗಮಿಸುವರು. ಭಕ್ತರಿಂದ ಕಲ್ಬುರ್ಗಿ ಹರ್ಷೋಲ್ಲಾಸದ ವಾತಾವರಣ ಎಂಟು ದಿನಗಳ ಕಾಲ ಇರುವುದು. ದರ್ಗಾದ ಸುತ್ತ ಮುತ್ತ ನೆರೆದ ವ್ಯಾಪಾರಿ ಸರಕು ಸಾಮಗ್ರಿ ಖರೀದಿಗಾಗಿ ಸಾವಿರಾರು ಜನರ ನಿತ್ಯ ಬೇಟ್ಟಿ ಇಲ್ಲಿ ಕಾಣಬಹುದಾಗಿದೆ. ದರ್ಗಾ ಕಲಾಭಿಮಾನಿಗಳ ಹೃದಯ ಸೂರೆಗೊಳಿಸುತ್ತದೆ. ತುರ್ಕಿ ಹಾಗೂ ಇರಾನ್ ಶೈಲಿಯ ಭಿತ್ತಿ ಚಿತ್ರಗಳು, ಗೋಪುರಗಳು ಇಲ್ಲಿ ಕಾಣಬಹುದು. ಶತಮಾನ ಕಳೆದರೂ ಭಿತ್ತಿ ಚಿತ್ರಗಳು ಸೌಂದರ್ಯ ಕಳೆಯದೆ ಉಳಿದಿದೆ.

ವರ್ಣಸಂಯೋಜನೆ ತಲೆದೂಗುವಂತಹದು. ದರ್ಗಾದ ಆವರಣದಲ್ಲಿರುವ ಗ್ರಂಥಾಲಯದಲ್ಲಿ ಸುಮಾರು ಹತ್ತು ಸಾವಿರ ಕೃತಿಗಳ ಸಂಗ್ರಹವಿದೆ. ಇವು ಧರ್ಮ ತತ್ವಜ್ಞಾನ, ಹಾಗೂ ಚರಿತ್ರೆಯ ವಿಷಯಗಳಿಗೆ ಸೀಮಿತವಾಗಿದ್ದು, ಪರ್ಶಿಯನ್ ಅರೆಬಿಕ್ ಹಾಗೂ ಉರ್ದು ಭಾಷೆಯಲ್ಲಿವೆ. ಕಲ್ಬುರ್ಗಿಗೆ ಭೆಟ್ಟಿ ನೀಡುವ ಯಾವ ಪ್ರವಾಸಿಗನು ದರ್ಗಾಕ್ಕೆ ಭೇಟಿ ನೀಡದೆ ಇರುವುದಿಲ್ಲ. ಏಕೆಂದರೆ ಬಂದಾನವಜಾರು ಶ್ರೇಷ್ಠ ಮಟ್ಟದ ದಾರ್ಶನಿಕರೂ ಸಮನ್ವಯ ಶೀಲರೂ ಜನ ಸಾಮಾನ್ಯರ ಉದ್ಧಾರಕ್ಕಾಗಿ ಶ್ರಮಿಸಿದರವರೂ ಆಗಿದ್ದರು. ಸಾತ್ವಿಕ ಜೀವನದ ದಾರಿ ತೋರಿದವರು ಶ್ರೇಷ್ಠ ಗದ್ಯ ಪದ್ಯ ಲೇಖಕ ವಿದ್ವಾಂಸ ಬಹು ಭಾಷಾ ವಿಶಾರದರಾಗಿದ್ದರು. "ಸುಲ್ತಾನ್ ದಕ್ಕನ್" ಖಜಾಯೆ ದಕ್ಕನ್ ಎನಿಸಿಕೊಂಡು ಜೀವಿಸಿ ಮಹಾವ್ಯಕ್ತಿಯಾಗಿ ಬಾಳಿದರು.

೩:೧:೩೮: ಚಂದಾ ಹುಸೇನರ ಜಾತ್ರೆ :

"ಗುಲ್ಬರ್ಗಾ ಜಿಲ್ಲೆಯ ಶಹಪೂರ ತಾಲ್ಲೂಕಿನ ಪಶ್ಚಿಮಕ್ಕೆ ಹನ್ನೊಂದು ಕಿ.ಮೀ. ಅಂತರದಲ್ಲಿರುವ ಗೋಗಿ ಗ್ರಾಮದಲ್ಲಿ ಕ್ರಿ.ಶ. ೧೩೭೪-೧೪೩೮ರಲ್ಲಿ ಬಾಳಿದ ಪವಾಡ ಪುರುಷ ಚಂದಾಹುಸೇನರು" (ಅಕ್ಕಿ:೯೮೬:೨೮). ಇವರ ಸ್ಮರಣಾರ್ಥಕವಾಗಿ ಪ್ರತಿವರ್ಷ ಭಾದ್ರಪದ ಪ್ರತಿಪದದಂದು ಹನ್ನೆರಡು ದಿನಗಳವರೆಗೆ ಜಾತ್ರೆ ಜರುಗುತ್ತದೆ. 'ಗೋಗಿ' ಎಂಬ ಗ್ರಾಮ 'ಗಾವಗೀರ್' ಎನ್ನುವ ಪಾರ್ಸಿ ಶಬ್ದದ ಅಪಭ್ರಂಶ ; ಗಾಂಯ ಎಂದರೆ ಆಕಳು. ಗೀರ್ ಎಂದರೆ ಹಟ್ಟಿ ಹಿಂದೆ ಈ ಗ್ರಾಮವಿದ್ದ ಸ್ಥಳದಲ್ಲಿ ದನಗಳನ್ನು ನಿಲ್ಲಿಸುತ್ತಿದ್ದರೆನ್ನಲಾಗಿದೆ. ಗಾವವೀರ್ ಎನ್ನುವ ಜನರ ಬಾಯಿಂದ 'ಗೋಗಿ' ಎಂದಾಗಿರಬಹುದು ಹೇಳುತ್ತಾರೆ. (ಅಕ್ಕಿ : ೯೮೬:೨೬)

ಈ ಗ್ರಾಮದಲ್ಲಿ ಆಗಿ ಹೋದ ಪವಾಡ ಪುರುಷ ಸಂತ ಚಂದಾ ಹುಸೇನಿಯವರು ತಮ್ಮ ಆಧ್ಯಾತ್ಮ ಹೊಂಗಿರಣದಿಂದ ಪ್ರಸಿದ್ಧಿ ಪಡೆದರು. ಇವರ

ಪ್ರಭಾವಕ್ಕೊಳಗಾಗಿ ವಿಜಾಪೂರದ ಆದಿಲಶಾಹಿ ಅರಸರು ಇವರ ಅನುಯಾಯಿಗಳಾದುದಕ್ಕೆ ದರ್ಗಾದಲ್ಲಿರುವ ಯುಸೂಫ್ ಆದಿಲ್‌ಶಾ ಇಸ್ಮಾಯಿಲ್ ಆದಿಲಶಾ ಮತ್ತು ಇಬ್ರಾಹಿಂ ಆದಿಲ್‌ಶಾರವರ ಗೋರಿಗಳೇ ಸಾಕ್ಷಿಯಾಗಿವೆ. ಚಂದಾಹುಸೇನಿಯರ ದರ್ಗಾವನ್ನು ಕ್ರಿ.ಶ.೧೫೮೭ರಲ್ಲಿ ಕಟ್ಟಿಸಿದ್ದಕ್ಕೆ ಸಾಕಷ್ಟು ಆಧಾರಗಳು ದರ್ಗಾದಲ್ಲಿವೆ.

ಜಯಂತ್ಯುತ್ಸವದಂದು ಗಂಧ ದೀಪೋತ್ಸವ ಮುಖ್ಯವಾಗಿರುತ್ತದೆ. ಸಾವಿರಾರು ಹಿಂದು-ಮುಸ್ಲಿಂರು ಒಂದಾಗಿ ಬೆರೆತು ಉತ್ಸವ ಯಶಸ್ವಿಗೆ ಕಾರಣರಾಗುತ್ತಾರೆ. ಸಣ್ಣ ಉತ್ಸವ ಅನಿಸಿದರೂ ರಾಷ್ಟ್ರೀಯ ಭಾವೈಕ್ಯದ ಪ್ರತೀಕವಾಗಿದೆ.

೩:೨:೧: ವೀರಭದ್ರೇಶ್ವರ ಜಾತ್ರೆ :

"ವೀರಭದ್ರನು ವೀರಶೈವ ಧರ್ಮದ ಮೂಲ ಪುರುಷನು ಎಂದು ಎಂ. ಚಂದ್ರಶೇಖರ ಆರಾಧ್ಯ ಅವರು ಶ್ರೀ ವೀರಶೈವ ಲೀಲಾ ದರ್ಶನಲದಲ್ಲಿ ಉಲ್ಲೇಖ ಮಾಡಿದ್ದಾರೆ." (ಆರಾಧ್ಯ:೧೯೮೦:೧-೭) ವೀರಭದ್ರೇಶ್ವರ ಹುಟ್ಟಿದ ಬಗ್ಗೆ ಅನೇಕ ದಂತ ಕಥೆಗಳಿವೆ. ಶಿವನ ರಕ್ಷಕರಲ್ಲಿ ವೀರಭದ್ರ ಒಬ್ಬನು ಇವನು ಶಿವನ ಕೋಪದಿಂದಾಗಿ ಹುಟ್ಟಿಬಂದ. ಪಾರ್ವತಿಯು ದಕ್ಷನ ಯಜ್ಞಕುಂಡದಲ್ಲಿ ಬಿದ್ದು ಮೃತಳಾದ ವಿಷಯನ್ನು ಕೇಳಿದ ಶಿವನು ಕೋಪಗೊಂಡು ತನ್ನ ಜಡೆಯನ್ನು ನೆಲಕ್ಕೆ ಬಡಿದಾಗ ಭದ್ರಕಾಳಿ ಮತ್ತು ವೀರಭದ್ರನು ಹುಟ್ಟಿ ಬಂದರು. (ಆರಾಧ್ಯ:೧೯೮೦:೧-೭).

ಮಹಾಭಾರತದ ಶಾಂತಿ ಪರ್ವದಲ್ಲಿ ವೀರಭದ್ರನು ಶಿವನ ಬಾಯಿಯಿಂದ ಹುಟ್ಟಿ ಬಂದ ಎಂಬ ಉಲ್ಲೇಖವಿದ್ದರೆ, ವೀರಭದ್ರನು ಶಿವನ ಹಣೆಗಣ್ಣಿನಿಂದ ಉದ್ಭವಿಸುವಾಗ ಸಾವಿರ ತಲೆ, ಮೂರು ಸಾವಿರ ಕಣ್ಣು ಎರಡು ಸಾವಿರ ಕೈ ಮುಂತಾದ ಅವಯವಗಳಿಂದ ಕಾಣುತ್ತಿದ್ದನೆಂದು ಶಿವಪುರಾಣ ಮತ್ತು ಲಿಂಗಪುರಾಣ ಸಾರುತ್ತವೆ. ಇವರ ಕಾಲದ ಬಗ್ಗೆ ಚನ್ನಬಸವಣ್ಣ ತನ್ನ ವಚನದಲ್ಲಿ 'ತ್ರೇತಾಯುಗದವರೆಂದು (ನಾಲ್ಕು ಯುಗಗಳಲ್ಲಿ ಎರಡನಯೆ ಯುಗದವನು) ಹೇಳಿದ್ದಾರೆ.

ಒಟ್ಟಿನಲ್ಲಿ ವೀರಭದ್ರೇಶ್ವರನಿಗೆ ವೀರಶೈವ ಧರ್ಮದಲ್ಲಿ ವಿಶೇಷ ಸ್ಥಾನವಿದೆ. ದೇಶದ ಇತರ ಭಾಷೆಗಳಲ್ಲಿ ವೀರಭದ್ರೇಶ್ವರ ಕಾಣಿಸಿಕೊಂಡಿದ್ದಾನೆ. ಕರ್ನಾಟಕದಲ್ಲಂತೂ ವೀರಭದ್ರನ ಪ್ರತಿಷ್ಠಾಪನೆ ದೇವಾಲಯಗಳ ನಿರ್ಮಾಣ, ಆರಾಧನೆ, ಜಾತ್ರೆಗಳು, ಶತಮಾನಗಳಿಂದಲೂ ವ್ಯಾಪಕವಾಗಿ ಜರುಗುತ್ತಿದ್ದುದ್ದಕ್ಕೆ ಅನೇಕ ಆಧಾರಗಳಿವೆ. ದಂತ ಕಥೆಗಳಿವೆ. ಕರ್ನಾಟಕದ ಅನೇಕ ಊರುಗಳಲ್ಲಿ ವೀರಭದ್ರರ ದೇವಾಲಯವಿರುವಂತೆ ಬೀದರ ಜಿಲ್ಲೆಯ ಹುಮನಾಬಾದನಲ್ಲಿಯೂ ಇದೆ. ಪ್ರತಿವರ್ಷ ಜನವರಿ ೧೫ ರಿಂದ ಜನವರಿ ೨೭ರವರೆಗೆ ಜಾತ್ರೆ ಅತಿ ವೈಭವದಿಂದ ಜರುಗುತ್ತದೆ.

ದೇವಾಲಯ :

ವೀರಭದ್ರೇಶ್ವರನ ದೇವಾಲಯವು ಹುಮನಾಬಾದ ನಗರದ ಉತ್ತರ ದಿಕ್ಕಿನಲ್ಲಿರುತ್ತದೆ. ಈ ದೇವಾಲಯದ ನಿರ್ಮಾಣ ೧೭೨೫ರಲ್ಲಿ ಆದದ್ದೊ ತಿಳಿದುಬರುತ್ತದೆ. ಇಲ್ಲಿಯ ವಾಸ್ತು ವಿನ್ಯಾಸ ನೋಡುಗರಿಗೆ ದಂಗುಬಡಿಸುತ್ತದೆ. ದೇವಾಲಯ ಎತ್ತರವಾದ ಗೋಡೆಗಳಿಂದ ಕೂಡಿಕೊಂಡಿದೆ. ಪ್ರವೇಶಕ್ಕೆ ಪೂರ್ವ ಹಾಗೂ ದಕ್ಷಿಣಕ್ಕೆ ಎರಡು ದ್ವಾರಗಳಿವೆ. ಹತ್ತಿರದಲ್ಲಿ ತೋಟ ಕುದುರೆಲಾಯ. ಗಣಶಾಲೆಗಳು ಇರುತ್ತವೆ. ಗರ್ಭಗುಡಿಯಲ್ಲಿ ೩ ಅಡಿ ಎತ್ತರದಲ್ಲಿ ಕರಿಶಿಲೆಯ ಕಟ್ಟೆಯ ಮೇಲೆ ಸುಮಾರು ೫ ಅಡಿ ಎತ್ತರದ ನುಣುಪಾದ ಕರಿಶಿಲೆಯ ವೀರಭದ್ರನ ಮೂರ್ತಿ ನೋಡಲು ಮೋಹಕವಾಗಿದೆ. ಕೈಯಲ್ಲಿ ಖಡ್ಗ ಹಿಡಿದು ನಿಂತಿದ್ದಾನೆ. ಬಲಭಾಗದಲ್ಲಿ ದಕ್ಷ ಬ್ರಹ್ಮ ಕೈ ಜೋಡಿಸಿ ನಿಂತಿದ್ದಾನೆ. ಬೆಳ್ಳಿಯ ಮುಖವಾಡ ಹೊತ್ತು ನಿಂತ ವೀರಭದ್ರನ ಅವಯವಗಳು ಕೂಡ ಬೆಳ್ಳಿಯ ಮೇಲು ಹೋದಿಕೆಗಳಾಗಿವೆ.

ಜಾತ್ರೋತ್ಸವ :

ಪ್ರತಿವರ್ಷ ಜನವರಿ ೧೫ರಂದು ಪ್ರಾರಂಭವಾಗುವ ವಾರ್ಷಿಕ ಜಾತ್ರೆ ಜನವರಿ ೩೦ರವರೆಗೆ ಮುಂದುವರಿಯುತ್ತದೆ. ಈ ಜಾತ್ರೆ ಪ್ರಾರಂಭವಾಗುವ ಮೊದಲೇ ದೇವಾಲಯಕ್ಕೆ ಸುಣ್ಣ-ಬಣ್ಣ ಬಳಿದು, ದೇವಾಲಯ ಸ್ವಚ್ಛಗೊಳಿಸುತ್ತಾರೆ. ಭಕ್ತರಿಂದ ಅಥವಾ ಇನ್ನಾರಿಂದಾಗಲಿ ಚಂದಾಹಣ ಕೂಡಿಸುವ ಸಂಪ್ರದಾಯ ಇಲ್ಲಿಲ್ಲ. ಭಕ್ತರೆ ಸ್ವಂತ : ಬಂದು ದವಸ ಧಾನ್ಯಗಳು ಕೊಟ್ಟು ಹೋಗುತ್ತಾರೆ. ಇಲ್ಲವೆ ಸಾಧ್ಯವಾದೆಷ್ಟು ನಗದು ಹಣ ಕಾಣಿಕೆಗುಂಡಿಯಲ್ಲಿ ಹಾಕುತ್ತಾರೆ. ಹೀಗೆ ಬರುವಂಥ ಹಣ ದವಸ ಧಾನ್ಯಗಳು ಜಾತ್ರೆ ಸಂದರ್ಭದಲ್ಲಿ ಉಪಯೋಗಕ್ಕೆ ಬಳಸಿಕೊಂಡು ವೈಭವಪೂರ್ಣ ಉತ್ಸವ ನೆರವೇರಿಸುತ್ತಾರೆ.

ಈ ವೀರಭದ್ರೇಶ್ವರ ಜಾತ್ರೆ ಸಂದರ್ಭದಲ್ಲಿ ಈ ಕೆಳಕಂಡ ಪ್ರಮುಖ ಆಚರಣೆಗಳು ಜರುಗುತ್ತವೆ. ೧) ಆನೆಯ ಮೆರಣಿಗೆ ೨) ಕೀರ್ತನೆ-ಗಾಯನ ೩) ಉಚಾಯಿ ಮೆರವಣಿಗೆ ೪) ಅಗ್ನಿ ಪೂಜಾ ೫) ರಥೋತ್ಸವ ೬) ಕುಸ್ತಿಯಾಟ ೭) ಸಮಯರೋಶನಿ ಮತ್ತು ದರಬಾರ ಇತ್ಯಾದಿ.

ಆನೆಯ ಮೆರವಣಿಗೆ :

ಇದು ಜೀವಂತ ಆನೆಯ ಮೆರವಣಿಗೆ ಅಲ್ಲ. ಕೈಯಿಂದ ಮಾಡಿದ ದೊಡ್ಡ ಗಾತ್ರದ ಆನೆ ಇಲ್ಲಿದೆ. ಈ ಆನೆಯ ಮೇಲೆ ಈ ದೇವಾಲಯ ಪುನರ್‌ನಿರ್ಮಾಣ ಮಾಡಿದ ರಾಜ ಚಂದ್ರಸೇನ ಜಾಧವನ ಪ್ರತೀಕವಾದ ಮೂರ್ತಿ ಇಲ್ಲಿದೆ. ಇದನ್ನು ಎತ್ತಿನ ಬಂಡಿಯ ಮೇಲಿಟ್ಟು ಜಾತ್ರೆ ಜರುಗುವುದು. ಪ್ರತಿ ದಿನ ದೇವಾಲಯದಿಂದ ಬಸವೇಶ್ವರ ಚೌಕ ಹಾಗೂ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಕೊಂಡೊಯ್ಯುತ್ತಾರೆ.

ಭಜನೆ, ಪುರವಂತರ ಕುಣಿತ, ಡೊಳ್ಳು, ಹಲಗೆ ಬ್ಯಾಂಡು ಮುಂತಾದ ತಂಡಗಳು ಮೆರವಣಿಗೆಯಲ್ಲಿ ಭಾಗವಹಿಸುತ್ತವೆ. ಸಹಸ್ರಾರು ಜನರು ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾರೆ.

ಈ ದೇವಾಲಯ ಕಟ್ಟಿಸಿದ ವೀರಭದ್ರೇಶ್ವರನ ಭಕ್ತ ಮತ್ತು ಅರಸ ಚಂದ್ರಸೇನ ಜಾಧವನು ಜಾತ್ರೆ ಪ್ರಪ್ರಥಮವಾಗಿ ಸುರು ಮಾಡಿದನು. ರಾಜ ಜಾಧವನ ನೆನಪಿನ ಪ್ರತೀಕ ಆನೆ ಮೆರವಣಿಗೆ ಮಾಡುವ ಸಂಪ್ರದಾಯ ಅಂದಿನಿಂದ ಇಂದಿನವರೆಗೆ ಜೀವಂತವಾಗಿದೆ.

ಕೀರ್ತನೆ–ಗಾಯನ :

ಜಾತ್ರೆಯ ಸಂದರ್ಭದಲ್ಲಿ ಪ್ರತಿದಿನ ಕೀರ್ತನೆ–ಗಾಯನ ಕಾರ್ಯಕ್ರಮವಿರುತ್ತದೆ. ಧಾರವಾಡ, ಬೆಂಗಳೂರು, ಬಸವಕಲ್ಯಾಣ, ಹುಲಸೂರು ಮುಂತಾದ ಕಡೆಗಳಿಂದ ಕೀರ್ತನೆಕಾರರು ಮತ್ತು ಗಾಯಕರನ್ನು ಕರೆಸಿಕೊಳ್ಳುತ್ತಾರೆ. ಅವರಿಗೆ ತಕ್ಕ ಸಂಭಾವನೆ ಇರುತ್ತದೆ. ಅಕ್ಕ ಮಹಾದೇವಿ ಬಸವಣ್ಣ, ಚನ್ನಬಸವಣ್ಣ ಮುಂತಾದವರ ಕುರಿತು ಕೀರ್ತನೆ ಹೇಳುತ್ತಾರೆ. ಆನಂತರ ಕರ್ನಾಟಕ–ಹಿಂದೂಸ್ತಾನಿ ಸಂಗೀತ ಮತ್ತು ಗಾಯನ ಇರುತ್ತದೆ. ಸಾವಿರಾರು ಭಕ್ತರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು, ಸಂಗೀತ ಸವಿಯನ್ನು ಅನುಭವಿಸುತ್ತಾರೆ. ಇಲ್ಲಿಯ ಸಂಗೀತ ನಿದ್ರಯಲ್ಲಿದ್ದವರಿಗೆ ಬಡಿದೆಬ್ಬಿಸುವಂತಿರುತ್ತದೆ ಎಂದು ದೇವಾಲಯದ ಪೂಜಾರಿ ಹೇಳುತ್ತಾರೆ.

ಉಚಾಯಿ ಮೆರವಣಿಗೆ :

ರಥೋತ್ಸವ ಜರುಗುವ ಐದು ದಿನಗಳ ಮೊದಲೆ ಸಣ್ಣ ತೇರೊಂದನ್ನು ಜಗ್ಗುವರು. ಇದಕ್ಕೆ 'ಉಚಾಯಿ ಮೆರವಣಿಗೆ' ಎಂದು ಕರೆಯುತ್ತಾರೆ. ಈ ಉಚಾಯಿ ಮೆರವಣಿಗೆ ದೇವಾಲಯದಿಂದ ಬಸವೇಶ್ವರ ಚೌಕಿನವರೆಗೆ ಇರುತ್ತದೆ. ಈ ಸಣ್ಣ ತೇರಿನಲ್ಲಿ ವೀರಭದ್ರೇಶ್ವರ ವಿಗ್ರಹದ ಜೊತೆಗೆ ಸ್ವಾಮಿಯನ್ನು ಕೂಡಿಸುತ್ತಾರೆ. ಉಚಾಯಿ ಜಗ್ಗುತ್ತಾರೆ. ಜಯಘೋಷಗಳನ್ನು ಹಾಕುತ್ತಾರೆ. ಪುರವಂತರ ಕುಣಿತ, ಶಸ್ತ್ರ ಹಾಕಿಕೊಳ್ಳುವುದು ಕಣ್ಣಿಗೆ ಕಟ್ಟಿದಂತಿರುತ್ತದೆ. ರಸ್ತೆಯ ಅಕ್ಕ–ಪಕ್ಕದಲ್ಲಿರುವ ಮನೆಯ ಸುಮಂಗಲೆಯರು ಉಚಾಯಿಗೆ ಮಂಗಳಾರುತಿ ಮಾಡುತ್ತಾರೆ. ತೆಂಗು ಒಡೆಯುತ್ತಾರೆ. ಶಲ್ಯ ಹಾಕುವರು. ದರ್ಶನ ಪಡೆದುಕೊಳ್ಳುವರು.

ಅಗ್ನಿ ಪೂಜೆ :

ಇದಕ್ಕೆ 'ಅಗ್ಗಿ' ತುಳಿಯುವುದು ಎನ್ನುತ್ತಾರೆ. ಹರಕೆ ಹೊತ್ತ ಭಕ್ತರು ಸೌದೆಗಳನ್ನು ಖರೀದಿಸಿ ಬೆಂಕಿಯ ಕುಂಡದಲ್ಲಿ ಒಂದೊಂದು ಕಟ್ಟಿಗೆಯನ್ನು ಹಾಕುತ್ತಾ ಕುಂಡದ ಸುತ್ತಾಕುವರು. ಹೀಗೆ ೫–೧೧ ಇಲ್ಲವೆ ೨೧ ಸುತ್ತಾಕಿ ವೀರಭದ್ರನ ದರ್ಶನ ಪಡೆದುಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ವರ್ಷದಲ್ಲಿ ತಾನು ಮಾಡಿದ

ಪಾಪಕರ್ಮಗಳೆಲ್ಲ ಸುಟ್ಟು ಹೋಗುತ್ತವೆಂಬ ಜನಪದ ನಂಬಿಕೆ ಇದೆ. ಇಂಥ ಸಮಯದಲ್ಲಿ ಎಲ್ಲೆಲ್ಲಿಯೋ ಇದ್ದಿರುವ ಪುರವಂತರೆಲ್ಲ ಜಾತ್ರೆಯ ದಿನ ಇಲ್ಲಿ ಕೂಡುತ್ತಾರೆ. ಪುರವಂತರ ಅವತಾರ ವೀರಭದ್ರ ದೇವತೆ ಸ್ವರೂಪ ಎನ್ನಲಾಗಿದೆ. ಪುರವಂತರ ಆಟ ಜನರ ಕಣ್ಮನವನ್ನು ತಣಿಸುವಂತಿರುತ್ತದೆ. ವಿವಿಧ ಭಾವ ಭಂಗಿಗಳಲ್ಲಿ ವಾದ್ಯಗಳ ಹಿನ್ನೆಲೆಯಲ್ಲಿ ನರ್ತಿಸುತ್ತಾರೆ. ಬೆಳಗಾಗುವವರೆಗೆ ಜನರಿಗೆ ರಂಜನೆ ನೀಡುತ್ತ ವೀರಭದ್ರನ ಒಡಬುಗಳನ್ನು ಹೇಳುತ್ತಾರೆ.

ಹೀಗೆ ಪುರವಂತರು ಹಲವಾರು ವೀರಭದ್ರ ದೇವರ ಒಡಬುಗಳಲ್ಲಿ ಆತನ ಮಹಿಮೆ, ರೌದ್ರತೆ, ಭೀಕರತೆಯನ್ನು ಸಂಕೇತಿಸುವ ಗದ್ಯದ ತುಣುಕು ಅವರ ಬಾಯಿಂದ ಹೊರಬೀಳುವುವು. ಆಗಾಗ ಅಂಗಾಂಗಗಳಲ್ಲಿ ಅಸ್ತ್ರಗಳನ್ನು ಚುಚ್ಚಿಕೊಳ್ಳುವರು. ಶಸ್ತ್ರ ಏರಿಸಿದ ಸ್ಥಳದಲ್ಲಿ ಸ್ವಲ್ಪಾದರೂ ರಕ್ತ ಕಾಣಿಸಿಕೊಂಡರೆ, ಆ ಶಸ್ತ್ರ ಹೊರತೆಗೆದು ಅಲ್ಲಿ ಭಸ್ಮವನ್ನು ಹಾಕಿಕೊಂಡು ಮತ್ತೆ ಕುಣಿಯುತ್ತಾರೆ.

ರಥೋತ್ಸವ :

ತೇರಿನಲ್ಲಿ ವೀರಭದ್ರೇಶ್ವರ ಹಾಗೂ ಕಾಳಮ್ಮನ ವಿಗ್ರಹಗಳು ಇಟ್ಟಿರುತ್ತಾರೆ. ಹಿರೇಮಠದ ಸ್ವಾಮಿ ಕುಳಿತಿರುತ್ತಾರೆ. ತಳಿರುತೋರಣ, ಕಬ್ಬು,, ದೀಪಾಲಂಕಾರ ಮಾಡಿದ ತೇರನ್ನು ಎಳೆಯಲು ಭಕ್ತರು ನಾಮುಂದೆ ತಾಮುಂದೆನ್ನುವರು. ತೇರು ಎಳೆಯುವಾಗ ಯಾವುದೇ ಅನಾಹುತಗಳಾಗಬಾರದೆಂಬ ಕಾರಣದಿಂದಾಗಿ ಒಂದು ಬಂಡಿ ಅನ್ನ ತೇರಿನ ಮುಂದೆ ಹಾಕಿ ಕಟ್ಟಿರುತ್ತಾರೆ. ಅದಕ್ಕೆ 'ಭೂಮಾ' ಎನ್ನುವರು.

ರಥೋತ್ಸವ ಸಂದರ್ಭದಲ್ಲಿ ತೇರಿನತ್ತ ಬಾಳೆಹಣ್ಣು, ಖಾರಿಕ, ಬಾದಾಮ ಮುಂತಾದವುಗಳು ಭಕ್ತರು ಎಸೆಯುತ್ತಾರೆ. ಅದನ್ನು ಹಿಡಿದು ತಿಂದರೆ ಪಾಪಕರ್ಮಗಳೆಲ್ಲ ದೂರಾಗುತ್ತವೆಂಬ ನಂಬಿಕೆಯಿಂದ ಇನ್ನುಳಿದ ಭಕ್ತರು ಬುತ್ತಿ ಹಿಡಿದು ತಿನ್ನಲು ಯತ್ನಿಸುವರು. ರಥೋತ್ಸವ ಎಳೆಯುವಾಗ ಭಕ್ತರಲ್ಲಿ ಕಂಡು ಬರುವ ಜನರ ಗೊಂದಲ ಗಡಿಬಿಡಿ ನೂಕುನುಗ್ಗಲು ಹೆಚ್ಚು. ಒಬ್ಬ ಭಕ್ತ ಆಯಾಸಗೊಂಡಂತೆಲ್ಲಾ ಇನ್ನೊಬ್ಬ ಭಕ್ತ ರಥದ ಹಗ್ಗ ಹಿಡಿದು ರಥ ಎಳೆಯುವ ಸಾಲಿನೊಳಗೆ ಸೇರಿಕೊಳ್ಳುತ್ತಾನೆ. ಹೀಗೆ ಪ್ರತಿಯೊಬ್ಬ ಭಕ್ತ ಒಬ್ಬನಾದ ನಂತರ ಒಬ್ಬ ರಥದ ಹಗ್ಗಕ್ಕೆ ಕೈ ಹಚ್ಚಿ ಎಳೆದು ಇನ್ನೊಬ್ಬರಿಗೆ ಅವಕಾಶ ಮಾಡಿಕೊಡುತ್ತಾರೆ. ಹೀಗೆ ಮಾಡುವುದರಿಂದ ಪಾಪದಿಂದ ಮುಕ್ತರಾದೇವು ಎಂದು ತಿಳಿದುಕೊಳ್ಳುತ್ತಾರೆ.

ಇದು ಒಂದು ಕಡೆಯಾದರೆ, ಇನ್ನೊಂದೆಡೆ ಮದ್ದು ಸುಡುವ ಕಾರ್ಯಕ್ರಮವಿರುತ್ತದೆ. ಇದನ್ನು ಬೆಳಕಿನ ಪ್ರತೀಕ ಎನ್ನಲಾಗಿದೆ. ಸುಮಾರು ಒಂದೆರಡು

ಗಂಟೆಗಳ ಕಾಲ ವಿವಿಧ ಮಾದರಿಯ ಮದ್ದು-ಗುಂಡುಗಳನ್ನು ಸುಡುತ್ತಾರೆ. ನೋಡಲು ಅದ್ಭುತವಾಗಿರುತ್ತದೆ. ಕಣ್ಣಿಗೆ ವಿವಿಧ ಬಗೆಯ ಬೆಳಕಿನ ಬಣ್ಣ ಕೊಡುತ್ತದೆ. ಸಹಸ್ರಾರು ಭಕ್ತರು ಮದ್ದು ಗುಂಡಿನ ಶಬ್ದಕೇಳಿ ಬೆಳಕಿನತ್ತ ಚಿತ್ತ ಹರಿಸುತ್ತಾರೆ. ಐವತ್ತು ಸಾವಿರ ರೂಪಾಯಿಗಳಷ್ಟು ಮೊತ್ತದ ಮದ್ದು ಗುಂಡುಗಳನ್ನು ಸುಡುವ ಪರಿಪಾಠ ಇಲ್ಲಿದೆಯೆಂದು ದೇವಾಲಯದ ಪೂಜಾರಿ ಹೇಳುತ್ತಾರೆ. ಮದ್ದು ಗುಂಡಿನ ಕಾರ್ಯಕ್ರಮ ಭಕ್ತರ ಮನದಲ್ಲಿನ ಕತ್ತಲೆಯನ್ನು ಕಳೆದು ಅಂತರಾತ್ಮದ ಬೆಳಕಿನ ದರ್ಶನವಾಗಲಿ ಎಂಬುವುದೇ ಆಗಿದೆ. ಇನ್ನು ತೇರು ದೇಹದ ಸ್ವರೂಪ ಎನ್ನಲಾಗಿದೆ. ಇಹಲೋಕದಿಂಪ ಪರಲೋಕಕ್ಕೆ ಸೇರುವ ಪ್ರತಿಕವೇ ತೇರು. ಹೀಗಾಗಿಯೇ ರಥೋತ್ಸವಗಳ ಅವಶ್ಯಕತೆ ಇವತ್ತಿಗೂ ಜರೂರಿ ಎನ್ನುತ್ತಾರೆ. ಈ ದೇಗುಲ ಅರ್ಚಕರು.

ಕುಸ್ತಿಯಾಟ :

ಜಾತ್ರೆ ಎಂದ ಬಳಿಕ ಸಾವಿರಾರು ಜನರು ಬಂದು ಸೇರುವುದು ಸಹಜ. ದೇವರ ದರ್ಶನ ಪಡೆದು ಬಂಧು-ಬಳಗದವರು, ಸ್ನೇಹಿತರು ಮುಂತಾದವರ ತನಿಖೆ ನಡೆಸಿ ಭೆಟ್ಟಿಯಗಲು ಹಾತೊರಿಯುತ್ತಾರೆ. ಭೆಟ್ಟಿಯಾದರಂತು ಹಿರಿ-ಹಿರಿ ಹಿರೇಕಾಯಿ ಹಂಗೆ ಹಿಗ್ಗುವುದುಂಟು. ಇದೆಲ್ಲ ಒಂದು ಎರಡು ಗಂಟೆವರೆಗೆ ನಡೆಯುವ ಮಾತು. ಇನ್ನು ಮುಂದೇನು ಮಾಡಬೇಕು ಎನ್ನುವುದು ಜಟೀಲವಾದ ಪ್ರಶ್ನೆ. ಜಾತ್ರೆ ೩-೪ ದಿನಗಳಿಂದ ತಿಂಗಳು ಗಟ್ಟಲೆ ಜರುಗುವ ಜಾತ್ರೆಗಳಿವೆ. ಹೀಗಾಗಿ ಜಾತ್ರೆಗೆ ಬಂದ ಭಕ್ತರಿಗಾಗಿ ದಿನಕ್ಕೊಂದರಂತೆ ಹೊಸ ಹೊಸ ಆಟ ಪಾಠಗಳು ಬೇಕು. ಅವಶ್ಯವಿರುವ ಪದಾರ್ಥಗಳು ಕೊಳ್ಳಲು ಅಂಗಡಿ ಮುಂಗಟ್ಟುಗಳು ಅವಶ್ಯ. ನಕ್ಕು-ನಗಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳು ಇರಬೇಕು. ಹೀಗಾಗಿಯೇ ನಮ್ಮ ಪೂರ್ವಜರು ಜಾತ್ರೆ ಜರುಗುವಾಗ ಹತ್ತೆಂಟು ಪ್ರಕಾರದ ಕಾರ್ಯಕ್ರಮಗಳು ನಡೆಸುವುದು ಸುರು ಮಾಡಿರಬೇಕು ಎನಿಸುತ್ತದೆ. ಅಂಥ ಕಾರ್ಯಕ್ರಮಗಳಲ್ಲಿ ಒಂದಾದ ಶಕ್ತಿ ಮತ್ತು ಯುಕ್ತಿಯ ಪ್ರತೀಕವಾದ ಕುಸ್ತಿಯಾಟ ಈ ಜಾತ್ರೆಯಕಲ್ಲಿ ನೆರವೇರುತ್ತದೆ. ಸೊಲ್ಲಾಪೂರ, ಹೈದ್ರಾಬಾದ, ಸಾಂಗ್ಲಿ ಬಿಜಾಪೂರ, ಬೀದರ ಜಹೀರಾಬಾದ ಮತ್ತು ಮೇದಕ ಮುಂತಾದ ಕಡೆಗಳಿಂದ ಕುಸ್ತಿ ಪಟುಗಳು ಬರುತ್ತಾರೆ.

ಬಂದವರು ಕುಸ್ತಿಯಾಟದ ವ್ಯವಸ್ಥಾಪಕನಲ್ಲಿ ಹೆಸರು ನೊಂದಣಿ ಮಾಡಬೇಕಾಗುತ್ತದೆ. ವ್ಯವಸ್ಥಾಪಕನ ನಿರ್ದೇಶನದಂತೆ ಕುಸ್ತಿಯಾಟದಲ್ಲಿ ಭಾಗವಹಿಸಿ ಕುಸ್ತಿ ಆಡಬೇಕು. ಗೆದ್ದವರಿಗೆ ನಗದು ಬಹುಮಾನ ಇಲ್ಲವೆ 'ಬೆಳ್ಳಿ ಕಡಗ' ಉಡುಗೊರೆಯಾಗಿ ಕೊಡುವ ಪದ್ಧತಿ ಇಲ್ಲಿದೆ.

ಸಮಯ ರೋಶನಿ ಮತ್ತು ದರಬಾರ :

ಇದು ಜಾತ್ರೆಯ ಕೊನೆಯ ದಿನದ ವಿಶಿಷ್ಟ ಕಾರ್ಯಕ್ರಮ. ಜಾತ್ರೆ ಯಶಸ್ವಿಗೊಳಿಸಲು ದುಡಿದ ಮಹಾನುಭಾವರಿಗೆ ಗೌರವಧನ ಕೊಟ್ಟು ಧನ್ಯವಾದಗಳನ್ನು ಹೇಳುವುದೇ 'ಸಮಯ ರೋಶನಿ ದರಬಾರ್' ಎಂದು ಕರೆಯಲಗಿದೆ. ಈ ದರಬಾರ ಕಾರ್ಯಕ್ರಮ ಮುಂಜಾನೆ ೧೦–೧೧ ಗಂಟೆ ಸುಮಾರಿಗೆ ಸುರುವಾರಿ ರಾತ್ರಿ ೧೦–೧೧ ಗಂಟೆಗೆ ಮುಕ್ತಾಯಗೊಳ್ಳುತ್ತದೆ. ಸಾವಿರಾರು ಜನರು ದರಬಾರ ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ. ದೇವಾಲಯದ ಸಮಿತಿಯವರು ಗಣ್ಯವ್ಯಕ್ತಿಗಳಿಗೆ ಆಹ್ವಾನಿಸಿ ಅವರ ಸಾನಿಧ್ಯದಲ್ಲಿ ದರಬಾರ ಸಮಾರಂಭ ಏರ್ಪಡಿಸುತ್ತಾರೆ. ಜಾತ್ರೆಯಲ್ಲಿ ಭಾಗವಹಿಸಿದ ವಾದ್ಯ ಪರಿಕರ ಕಲಾವಿದರಿಗೆ, ಗಾಯಕರಿಗೆ ಮುಂತಾದವರಿಗೆ ವೇದಿಕ ಮೇಲೆ ಕರೆದು ಕಾಣಿಕೆ ಹಣ ಕೊಟ್ಟು ಬೆನ್ನು ತಟ್ಟುತ್ತಾರೆ. ಸಾಧು ಸಂತರಿಗೆ ಸನ್ಮಾನಿಸುತ್ತಾರೆ. ಸ್ವಯಂ ಸೇವಕರಿಗೆ ಸತ್ಕರಿಸಿ ಶಲ್ಯ ಹಚ್ಚುತ್ತಾರೆ. ಕೊನೆಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ದುಡಿದ ಎಲ್ಲರಿಗೂ ಧನ್ಯವಾದ ಹೇಳಿ ಈ ಕಾರ್ಯಕ್ರಮ ಮಂಗಲಮಯಗೊಳಿಸುವುದುಂಟು.

೩:೨:೨ : ವಿಠಲ ಜಾತ್ರೆ

ಭಾರತ ದೇಶವು ಪುಣ್ಯ ಭೂಮಿ ಪುನೀತರ ಸ್ಥಾನ. ಪಂಡರಪುರದ ಪ್ರಮುಖ ದೇವತೆಯೇ ವಿಠಲ. ಪಂಡರಪುರದ ಪ್ರಮುಖ ದೇವತೆಯಾಗಿರುವ ವಿಠಲನಿಗೆ ಬೀದರಿನ ಜನರು ಪಂಡರಿನಾಥ, ಪಾಂಡುರಂಗ ಎನ್ನುವ ಹೆಸರುಗಳಿಂದ ಕರೆಯುತ್ತಾರೆ. ವಿಠಲನ ಜಾತ್ರೆ ಬದಲಾಗಿ 'ಪಾಂಡುರಂಗನ ಜಾತ್ರೆ' ಎನ್ನುತ್ತಾರೆ. ವಿಷ್ಣುವಿನ ಅವತಾರ ಇವನದು. ಈ ದೇವರ ಸ್ಮರಣಾರ್ಥವಾಗಿ ಬೀದರ ನಗರದ ಕೇಂದ್ರ ಸ್ಥಳದಲ್ಲಿ ವಿಠಲ ದೇವರ ಮೂರ್ತಿ ಸ್ಥಾಪಿಸಿ ದೇವಾಲಯವನ್ನು ಕಟ್ಟಿಸಿದ್ದಾರೆ. ಪ್ರತಿವರ್ಷ ಆಷಾಡ ಪೌರ್ಣಿಮೆಯಂದು ಮೂರು ದಿನಗಳ ಕಾಲ ಜಾತ್ರೆ ಜರುಗುತ್ತದೆ. ಉತ್ಸವದ ಪ್ರಥಮ ದಿನದಂದು ವಿಠಲನ ಮೂರ್ತಿಗೆ ಹಾಲಿನಿಂದ ಅಭಿಷೇಕ ಪೂಜೆ ನಡೆಯುತ್ತದೆ. ಸಂಜೆ ಹೊತ್ತಿಗೆ ಹೆಣ್ಣು ಮಕ್ಕಳು ಪಂಡರಿ ಭಜನೆ ಮಾಡುವರು. ಪ್ರತಿಯೊಬ್ಬ ಮಹಿಳೆ ತಾಳ ಹಿಡಿದುಕೊಂಡು ವಿಠಲನ ಕುರಿತಾಗಿದ್ದ ಹಾಡುಗಳೇ ಹಾಡುವರು.

ಮರುದಿನ ಖಾಂಡ ಪಲ್ಲಕ್ಕಿ ಉತ್ಸವವಿರುತ್ತದೆ. ಕೊನೆಯ ದಿನ ದಿಂಡಿ ಮೆರವಣಿಗೆ "ದಿಂಡಿಯೆಂದರೆ ಭಜನೆಯ ಮೇಳ, ದೇವಾಲಯದ ಒಳಭಾಗದಲ್ಲಿ ಭಜನೆಯೊಂದಿಗೆ ಎಳೆಯುವ ಚಿಕ್ಕ ತೇರು ಸಣ್ಣ ಉತ್ಸವ ಎಂದರ್ಥ (ವೆಂಕಟ ಸುಬ್ಬಯ್ಯ:೧೯೭೭:೩೮೮:೯) ವಿಠಲನ ದೇವಾಲಯದ ಪೂಜಾರಿ ಸಣ್ಣ ಗಡಿಗೆಯ

ತುಂಬ ಮೊಸರು ಹಾಕಿ ಅದಕ್ಕೆ ಪೂಜಿಸಿ ಅಲಂಕರಿಸಿಕೊಂಡು ತನ್ನ ತಲೆಯ ಮೇಲೆ ಇಟ್ಟುಕೊಂಡು ದಿಂಡಿ ಮೆರವಣಿಗೆಯಲ್ಲಿ ಪಾಲ್ಗೊಳ್ಳುತ್ತಾನೆ. ದಿಂಡಿ ಮೆರವಣಿಗೆ ಬೀದರ ನಗರದ ಶಾಹಗಂಜ ಕಮಾನಿನವರೆಗೆ ಬಂದು ನಿಲ್ಲುತ್ತದೆ. ಕಮಾನಿನ ಮೇಲೆ ನಿಂತು ಪೂಜಾರಿ ಮೊಸರು ಗಡಿಗೆ ಒಡಿಯುತ್ತಾನೆ. ಸೊರುವ ಮೊಸರು ಕುಡಿಯಬೇಕೆಂಬ, ಹಂಬಲದಿಂದ ಕೆಳಗೆನಿಂತ ಭಕ್ತರು ನಾಮುಂದ, ತಾಮುಂದ ಎಂದು ನೂಕು ನುಗ್ಗುಲುಗೊಳ್ಳುತ್ತಾರೆ. ಮೊಸರು ಗಡಿಗೆ ಒಡಿಯುವ ಸಂಪ್ರದಾಯವೆಂದರೆ ಎಲ್ಲರೂ ಮೊಸರಿನಂತೆ ಸುಖದ ಜೀವನ ಆಗಲೆಂಬುದೇ ಆಗಿದೆ.

ಜಾತ್ರೆಗೆ ಬಂದವರು ಟೆಂಗು–ಕಾಯಿ–ಕರ್ಪೂರ ವಿಠಲನಿಗೆ ಅರ್ಪಿಸುತ್ತಾರೆ. 'ದಿಂಡಿ' ಮೆರವಣಿಗೆಯಲ್ಲಿ ನಾನಾ ಹಳ್ಳಿಗಳಿಂದ ಬಂದ ಭಜನಾ ಮೇಳದವರು ಆಕರ್ಷಕವಾದ ಭಜನೆ ಮಾಡುತ್ತಾರೆ. ಧ್ವನಿವರ್ಧಕಗಳಲ್ಲಿ ಹಾಡು ಹೇಳುತ್ತಾರೆ. ಕುಣಿಯುತ್ತಾ ಭಜನೆ ಮತ್ತಾರೆ. ಹಲಗೆ ಭಾರಿಸುವವರು ಹಲಗೆಯನ್ನು ಕಾಯಿಸಿ ಬಿಗಿ ಮಾಡಿ ಚಡ್–ಚಡ್, ನಕುನ–ನಕುನ್ ಭಾರಿಸುವಾಗ ಕಂಚಿನ ಸ್ವರವು ಹೊರಹೊಮ್ಮುತ್ತದೆ. ಸುತ್ತ ಮುತ್ತ ಇದ್ದ ಹುಡುಗರು ದೊಡ್ಡವರು ಕುಣಿಯ–ತೊಡಗುತ್ತಾರೆ. ಎಲ್ಲರಿಗಿಂತಲೂ ಚಂದಾಗಿ ಹೆಜ್ಜೆ ಹಾಕಿ ಕುಣಿದವನ ಬಾಯಿಯಲ್ಲಿ ೧,೧೦,೨೦ ರೂಪಾಯಿಯ ನೋಟನ್ನು ಇಟ್ಟು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಮತ್ತೆ ಕುಣಿಯತೊಡಗುತ್ತಾರೆ. ಹಲಗೆಯ ಕುಣಿತ ರಂಗೇರಿದಂತೆ ಜಾತ್ರೆಗೆ ಕಳೆ ಬರುತ್ತದೆ. ಉತ್ಸವದಲ್ಲಿ ಬ್ರಾಹ್ಮಣ, ಕೋಮಟಿ ವರ್ಗದವರೇ ಹೆಚ್ಚಾಗಿರುತ್ತಾರೆ. 'ತಿನ್ನಲು ಜಾಮೂನ್ ಚಂದ, ವಿಠಲನ ಜಾತ್ರೆ ನೋಡಲು ಪಸಂದ' ಎನ್ನುವ ಗಾದೇ ಈ ಜಾತ್ರೆಯ ಕುರಿತಾಗಿದೆ.

೩:೨:೩ : ದತ್ತಾತ್ರೇಯ ಜಾತ್ರೆ :

ಅತ್ರಿಮಹರ್ಷಿ, ಅನುಸೂಯೆಯರ ಪುತ್ರ ದತ್ತಾತ್ರೆ, ವಿಷ್ಣುವಿನ ಅಂಗದಿಂದ ಹುಟ್ಟಿದವನು. ಮೂರು ತಲೆಗಳ ಈ ದೇವತೆ ತ್ರಿಮೂರ್ತಿಗಳ ಹಾಗೂ ತ್ರಿಗುಣಗಳ ಸಂಕೇತ ಎನ್ನುತ್ತಾರೆ. ತ್ರಿಮೂರ್ತಿಗಳು ತಾವೇ ಆದುದರಿಂದ ಈ ದೇವತೆಯದು ದತ್ತಾವತಾರ. ದತ್ತಾತ್ರೇಯ ಅವಧೂತ (ಎಲ್ಲವನ್ನು ಬಿಟ್ಟವ ಶಾಕ್ತ ಪಂಥದ ಮಹಾಗುರು, ಅದ್ವೈತ ಸಿದ್ಧಾಂತದ ಪ್ರತಿಪಾದಕ. ದತ್ತಾತ್ರೇಯನದು ಎತ್ತರದ ನಿಲುವು. ಮೂರು ತಲೆ ಆರು ಕೈ, ಕೈಯಲ್ಲಿ ತ್ರಿಶೂಲ ಜಪ–ಮಣಿ ಕಮಲಪುಷ್ಪ, ಚಕ್ರ, ಶಂಖ ಮತ್ತು ಕಮಂಡಲ. ಇಂದ್ರ ನೀಲ ಮಣಿಯಂತೆ ಇವನ ಜಟಾಬಂಧ. ಇವನೊಡನೆ ಒಂದು ಹಸು ಹಾಗು ನಾಲ್ಕು ನಾಯಿಗಳಿರುತ್ತವೆ. ದತ್ತಾತ್ರೇಯನನ್ನು ಹೀಗೆ ನಿರೂಪಿಸುವ ವಾಡಿಕೆ. ದತ್ತಾತ್ರೇಯ ಭಕ್ತೋದ್ಧಾರಕ್ಕಾಗಿ ಮತ್ತು ಧರ್ಮ ಸಂಸ್ಥಾಪನೆಗಾಗಿ

ಹುಟ್ಟಿ ಬಂದವನು ಎನ್ನುವುದು ದಂತ ಕಥೆ. ಕರ್ನಾಟಕದ ಕರುಗಡ್ಡಿ, ನರಸಿಂಹವಾಡಿ, ಭಲವಾಡಿ, ಬಾಬಾ ಬುಡನ್‌ಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಯ ಗಾಣಗಾಪೂರದಲ್ಲಿ ದತ್ತಾತ್ರೇಯ ಪೀಠಗಳಿವೆ.

ದತ್ತ ಸಂಪ್ರದಾಯದ ಒಂದು ಪವಿತ್ರ ತೀರ್ಥಕ್ಷೇತ್ರ ಗಾಣಗಾಪೂರ. ಕರ್ನಾಟಕ ಹಾಗೂ ಮಹಾರಾಷ್ಟ್ರದಿಂದ ಪ್ರತಿವರ್ಷ ಸಾವಿರಾರು ಭಕ್ತರನ್ನು ಆಕರ್ಷಿಸುತ್ತದೆ. ಶ್ರೀಗಳೂ ತಮ್ಮ ಜೀವಿತ ಕಾಲದಲ್ಲಿ ಆಚರಿಸಿದ ಯಜ್ಞಯಾಗಾದಿಗಳ ದ್ಯೋತಕವಾಗಿ ಭೀಮಾ ಅಮರಜಾ ನದಿಗಳ ಸಂಗಮ ಸ್ಥಳದಲ್ಲಿ ಒಂದು ಭಸ್ಮದ ಗುಡ್ಡವನ್ನು ಹೊಂದಿದ್ದು ಇಂದಿಗೂ ಭಕ್ತಾದಿಗಳು ಅಲ್ಲಿಂದ ಪವಿತ್ರ ಭಸ್ಮವನ್ನು ಧರಿಸುತ್ತಾರೆ. ಶ್ರೀ ನರಸಿಂಹ ಸರಸ್ವತಿಗಳು ತಾವು ಬದರಿ–ಕೇದಾರಕ್ಕೆ ತೆರಳುವ ಮುನ್ನ ಬಿಟ್ಟು ಹೋದ ಪಾದುಕೆಗಳನ್ನು ಹೊಂದಿರುವುದರಿಂದ ಭಕ್ತಾದಿಗಳು ಪ್ರತಿವರ್ಷ ಸಾವಿರ ಸಾವಿರ ಸಂಖ್ಯೆಯಲ್ಲಿ ಆಗಮಿಸಿ ಈ ಪಾದುಕೆಗಳನ್ನು ಪೂಜಿಸುತ್ತಾರೆ.

ಗರ್ಭಗುಡಿಯಲ್ಲಿನ ಪಾದುಕೆಗಳ ದರ್ಶನ ಮಾಡಬೇಕಾದರೆ, ಉಡುಪಿಯಲ್ಲಿನಂತೆ ಒಂದ ಬೆಳ್ಳಿಯ ಕಿಟಕಿಯ ಮೂಲಕ ನೋಡಬೇಕಾಗುತ್ತದೆ. ಅಲ್ಲಿ ನಿತ್ಯೋಪಾಸನೇ ಬೆಳಗ್ಗಿನಿಂದ ಪ್ರಾರಂಭವಾಗುತ್ತದೆ. ಪಾದುಕೆಗಳಿಗೆ ಜಲಸ್ಪರ್ಶ ಮಾಡುವುದಿಲ್ಲ. ಕೇಸರಿ ಮತ್ತು ಅಷ್ಟಗಂಧಗಳನ್ನು ಲೇಪಿಸುತ್ತಾರೆ. ಪ್ರತಿ ಗುರುವಾರ ರಾತ್ರಿ ಪಲ್ಲಕ್ಕಿ ಸೇವೆ ನಡೆಯುತ್ತದೆ.

ಗಾಣಗಾಪೂರ ಗ್ರಾಮದ ಒಂದು ಮೈಲು ದೂರದಲ್ಲಿರವ ಭೀಮಾ ಅಮರಜಾ ನದಿಗಳ ಸಂಗಮದಲ್ಲಿ ಯಾತ್ರಾರ್ಥಿಗಳು, ಭಾವುಕರು, ಭಕ್ತರು, ತಪ್ಪದೇ ಸ್ನಾನ ಮಾಡುತ್ತಾರೆ. ಇಲ್ಲಿನ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಅನೇಕ ಫಲಗಳು ಪ್ರಾಪ್ತಿಯಾಗುತ್ತವೆ ಎಂಬ ನಂಬಿಕೆ ಇದೆ.

ಪ್ರತಿವರ್ಷ ಫೆಬ್ರುವರಿ ತಿಂಗಳಲ್ಲಿ ಐದು ದಿನಗಳ ಕಾಲ ದೊಡ್ಡ ಪ್ರಮಾಣದಲ್ಲಿ ಜಾತ್ರೆ ಜರುಗುತ್ತದೆ. ಶ್ರೀಗುರು ಚರಿತ್ರೆ ಪಾರಾಯಣ, ಸಪ್ತಾಹ, ಪ್ರದಕ್ಷಿಣೆ ಜಪ ಧ್ಯಾನ, ಮುಂಜಾನೆ ನಡೆದರೆ ಮಧ್ಯಾಹ್ನ ನೈವೇದ್ಯ ಅರ್ಪಣೆ, ಸಾಯಂಕಾಲ ಆರತಿ ಭಜನೆ ನಡೆಯುತ್ತವೆ. ಜಾತ್ರೆಯ ಕೊನೆಯ ದಿನ ವಿಶೇಷವಾಗಿ ಸಹಸ್ರ ಬಿಲ್ಪತ್ರೆ ಅಭಿಷೇಕ, ಪಲ್ಲಕ್ಕಿ ಉತ್ಸವ ಇರುತ್ತದೆ.

ಜಾತ್ರೆ ಜರುಗುವಾಗ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಭಕ್ತರೇ ಹೆಚ್ಚಾಗಿ ಕಂಡುಬರುತ್ತಾರೆ. ಅದೇ ಕಾಲಕ್ಕೆ ಅಂಗಡಿಗಳು ಹುಟ್ಟಿಕೊಳ್ಳುತ್ತವೆ. ಅಳ್ಳು–ಪುಟಾಣಿ ಅಂಗಡಿಗಳ ವೈಶಿಷ್ಟ್ಯ ಹೇಳತೀರದು, ಜಾತ್ರೆಗೆ ಬಂದ ಭಕ್ತರು ಅಳ್ಳು ಪುಟಾಣಿ–ಮಿಠಾಯಿ ಉಡುದಾರ ಕುಂಕುಮ ದತ್ತಾತ್ರೇಯ ಫೋಟೋ ಖರೀದಿಸುವ ಪದ್ಧತಿ ಇದೆ. ಹರಕೆ ಉಳ್ಳವರು ಶ್ರೀಗುರು ಚರಿತ ಪಾರಾಯಣ ಮಾಡಿ ಭಿಕ್ಷೆ ಜೀವನವನ್ನು ನಡೆಸುವರು. ಉತ್ಸವದ ದಿನಗಳಲ್ಲಿ ವಿಶೇಷವಾದ ಊಟದ ವ್ಯವಸ್ಥೆ ಮಾಡಿರುತ್ತಾರೆ. ಯಾತ್ರಿಕರು ಸೇವಾಕರ್ತರಿಗೆ ಧನ ಧಾನ್ಯ ಸಹಾಯ ಒದಗಿಸುತ್ತಾರೆ.

ದತ್ತ ಪದ್ಧತಿ ಪ್ರಕಾರ ಜಾತ್ರೆಗೆ ಬಂದ ಯಾವನೇ ಯಾತ್ರಿಕನು ತಪ್ಪದೇ ಕನಿಷ್ಟ ಪಕ್ಷ ಐದು ಮನೆಗಳಲ್ಲಾದರೂ ಭಿಕ್ಷೆ ಬೇಡಬೇಕೆಂಬ ನಿಯಮವಿದೆ. ಭಾವುಕರು, ಭಕ್ತರು ಈ ನಿಯಮಗಳನ್ನು ಅತ್ಯಂತ ಶ್ರದ್ಧೆಯಿಂದ ಆಚರಿಸುತ್ತಾರೆ. ಬಯಲಾಟ ಗೀಗೀ ಪದ, ಡಪ್ಪಿನ ಪದಗಳ ಹಾಡುಗಾರಿಕೆ ರಾತ್ರಿ ಇರುತ್ತದೆ.

ಜಾತ್ರೆ ಜರುಗುವಾಗ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಭಕ್ತರೇ ಹೆಚ್ಚಾಗಿ ಕಂಡುಬರುತ್ತಾರೆ. ಅದೇ ಕಾಲಕ್ಕೆ ಅಂಗಡಿಗಳು ಹುಟ್ಟಿಕೊಳ್ಳುತ್ತವೆ. ಅಳ್ಳು-ಪುಠಾಣಿ ಅಂಗಡಿಗಳ ವೈಶಿಷ್ಟ್ಯ ಹೇಳತೀರದು. ಜಾತ್ರೆಗೆ ಬಂದ ಭಕ್ತರು ಅಳ್ಳು-ಪುಟಾಣಿ – ಮಿಠಾಯಿ, ಉಡುದಾರ, ಕುಂಕುಮ, ದತ್ತಾತ್ರೇಯ ಫೋಟೋ ಖರೀದಿಸುವ ಪದ್ಧತಿ ಇದೆ. ಹರಕೆ ಉಳ್ಳವರು ಶ್ರೀ ಗುರು ಚರಿತ ಪಾರಾಯಣ ಮಾಡಿ ಭಿಕ್ಷೆ ಜೀವನವನ್ನು ನಡೆಸುವರು. ಉತ್ಸವದ ದಿನಗಳಲ್ಲಿ ವಿಶೇಷವಾದ ಊಟದ ವ್ಯವಸ್ಥೆ ಮಾಡಿರುತ್ತಾರೆ. ಬಯಲಾಟ ಗೀಗೀ ಪದ, ಡಪ್ಪಿನ ಪದಗಳ ಹಾಡುಗಾರಿಕೆ ರಾತ್ರಿ ಇರುತ್ತದೆ.

೩:೨:೪ : ಪಾಪನಾಶನಿ ಜಾತ್ರೆ :

ಪುಣ್ಯಪ್ರದ ಜಲವಿಶೇಷವೇ 'ಪಾಪನಾಶನಿ' ತೀರ್ಥಕ್ಷೇತ್ರ. ಇದು ಬೀದರದಲ್ಲಿರುವ ಅನುಪಮ ಪ್ರೇಕ್ಷಣೀಯ ಸ್ಥಳ ಇದರ ಸುತ್ತ ಅನೇಕ ನೀರಿನ ಝುರಿಗಳಿರುವುದು ಇಲ್ಲಿನ ವಿಶೇಷ. ಅಲ್ಲದೆ ಇಲ್ಲಿ ಬೃಹದಾಕಾರದ ಸ್ವಯಂಭೂ ಜ್ಯೋತಿರ್ಲಿಂಗ ಇದೆ. ಈ ಶಿವಲಿಂಗದ ಕುರಿತ ದಂತ ಕಥೆ ಹೀಗೆ ಇದೆ. ಸುಪ್ರೀಮ್ ಪರಮದೇವ ಭಕ್ತ ಆತ ತನ್ನ ಜೊತೆಯವರೊಡನೆ ದೋಣಿಯಲ್ಲಿ ಹೋಗುತ್ತಿದ್ದಾಗ ದಾರುಕನೆಂಬ ರಾಕ್ಷಸ ಅವರನ್ನು ಹಿಡಿದು ಸೆರೆಯಲ್ಲಿಟ್ಟ ಅಲ್ಲಿಯೂ ಸುಪ್ರೀಮ್ ಶಿವನ ಪ್ರಾರ್ಥನೆ ಬಿಡಲಿಲ್ಲ, ಸುಪ್ರೀಮನನ್ನು ಕೊಲ್ಲಲು ದಾರುಕ ಯತ್ನಿಸಿದಾಗ ಜ್ಯೋತಿರ್ಲಿಂಗದ ರೂಪದಲ್ಲಿ ಶಿವಬಂದು ಅವನನ್ನು ಸಂಹರಿಸಿದ ಹೀಗೆ ಕಥೆ ಪ್ರಚಲಿತವಿದೆ. ಶಿವನು ಜ್ಯೋತಿಯಂತೆ ಸರ್ವ ವ್ಯಾಪಕ ಬೆಳಕು ಕೊಡವವನು, ಭಕ್ತರ ಮನದ ಕತ್ತಲೆಯನ್ನು ತನ್ನ ಬೆಳಕಿನಿಂದ ಕಳೆಯುವನು. ಈ ಅರ್ಥವೆಲ್ಲಾ ಈ ಶಿವಲಿಂಗದಲ್ಲಿ ಅಡಗಿದೆ.

ಶಿವನನ್ನು ಆರಾಧಿಸುವ ಹಬ್ಬ ಶಿವರಾತ್ರಿಯಂದು ಪ್ರತಿವರ್ಷ ಮೂರು ದಿನಗಳವರೆಗೆ ಪಾಪನಾಶಿನಿ ಪುಣ್ಯಕ್ಷೇತ್ರದಲ್ಲಿ ಅತಿ ವೈಭವದಿಂದ ಜಾತ್ರೆ ಜರುಗುತ್ತದೆ. ಭಕ್ತಾದಿಗಳು ಇಡೀ ದಿವಸ ಉಪವಾಸದಿಂದಿದ್ದು ಪಾಪನಾಶಿನಿ ಕ್ಷೇತ್ರಕ್ಕೆ ಬಂದು ಪೂಜಿಸಿ, ಮೂರು ರಾತ್ರಿಯೆಲ್ಲ ಜಾಗರಣೆಯಲ್ಲಿ ಶಿವನ ಧ್ಯಾನ ಮಾಡುವರು, ಉತ್ಸವ ಸಮಯದಲ್ಲಿ ಸ್ವಯಂಭೂಲಿಂಗಕ್ಕೆ ವಿಶೇಷ ಪೂಜೆ, ರುದ್ರಾಭಿಷೇಕ ನಡೆಯುತ್ತದೆ.

ಬೆಳಗಿನ ಜಾವದಿಂದ ಪ್ರಾರಂಭವಾದ ಶಿವಭಜನೆ ಇಡೀ ರಾತ್ರಿ ನಿರಂತರವಾಗಿ ನಡೆಯುತ್ತದೆ. ದೇವಾಲಯದ ಸುತ್ತಮುತ್ತ ಭಕ್ತರು ಕುಳಿತು ಶಿವನಲ್ಲಿ ಧ್ಯಾನಸ್ಥರಾಗಿರುತ್ತಾರೆ. ಭಕ್ತರು ಎಲ್ಲೆಡೆ ಮೌನವಾಗಿರುತ್ತಾರೆ. ಕೆಲವರು ಭಜನೆ ಮಾಡುತ್ತಿರುತ್ತಾರೆ. ಭಕ್ತರ ಪ್ರಾರ್ಥನೆ ವೈಶಿಷ್ಟ್ಯ ಪೂರ್ಣವಾಗಿರುತ್ತದೆ. ಹಿರಿಯ ಸ್ವಾಮಿಗಳು ವಿದ್ವಾಂಸರಿಂದ ಪ್ರವಚನ–ಕೀರ್ತನೆ ಜರುಗುವುದು. ಉತ್ಸವಕ್ಕೆ ಬಂದ ಭಕ್ತರು ತಪ್ಪದೇ ತೀರ್ಥದಲ್ಲಿ ಮಿಂದು ದೇವರ ದರ್ಶನ ಪಡೆಯುತ್ತಾರೆ.

ಜಾತ್ರೆಗೆ ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಸಹಸ್ರಾರು ಭಕ್ತರು ಬರುತ್ತಾರೆ. ಯಾವುದೇ ಜಾತಿ ಧರ್ಮಗಳ ನಿರ್ಭಂಧನೆ ಇಲ್ಲಿಲ್ಲ. ವೃತ್ತಿಗಾಯಕರಾದ ಭೂತೇರು, ಪೋತರಾಜರು ಹಾಡುತ್ತಾ ಭಕ್ತರಿಂದ ಹಣ ಪಡೆಯುವರು. ಈ ದೃಶ್ಯ ತುಂಬಾ ಮನೋಹರವಾಗಿ ಕಾಣಿಸುತ್ತದೆ. ಹಂಗಾಮಿ ಅಂಗಡಿಗಳಲ್ಲಿ ಟೆಂಗು–ಕಾಯಿ–ಕರ್ಪೂರ, ಮಿಠಾಯಿ–ಲಡ್ಡು ಬೆಂಡು ಬತ್ತಾಸು, ಅಳ್ಳು–ಪುಟಾಣಿ ವಿಶೇಷವಾಗಿರುತ್ತದೆ. ಚಿಕ್ಕ ಹುಡುಗರಿಂದ ಹಿಡಿದು ಹಿರಿಯರವರೆಗೆ ಎನ್ನುವಂತೆ ಪುಗ್ಗಾ–ಪುಂಗಿಗಳಿಂದ, ಭಜನೆ ಹಾಡುಗಳಿಂದ, ಧ್ವನಿವರ್ಧಕಗಳಿಂದ ಜಾತ್ರೆ ಕಿರುಗುಟ್ಟುತ್ತದೆ.

ಭಿಕ್ಷುಕರು ಕುರುಡರ ಸಾಲು ಗಟ್ಟಿರುತ್ತದೆ. ಅವರವರ ಬಾಯಿಂದ ದುಃಖದ ಹಾಡು ಹೊರಬರುತ್ತಿರುತ್ತದೆ. ಜಾತ್ರೆಗೆ ಬಂದ ಜನರು ಮನೆಗೆ ಹೋಗುವಾಗ ಮಾತ್ರ ದಾನ–ಧರ್ಮ ಮಾಡುವರು, ಶಿವರಾತ್ರಿಯ ಮೂರನೇ ದಿನದವರೆಗೆ ಅಖಂಡ ಭಜನೆ ನಡೆದಿರುತ್ತದೆ. ಅಂದು ಅನ್ನಸಂತರ್ಪಣೆ ಮಾಡುವರು. ಉತ್ಸವ ಸಂದರ್ಭದಲ್ಲಿ ಮದುವೆ ಮುಂಜಿಗಳು ನಡೆಯುತ್ತವೆ. ಜಾತ್ರೆ ಸಂದರ್ಭದಲ್ಲಿ ವಿವಾಹವಾದ ನವದಂಪತಿಗಳು ಉತ್ಸವಕ್ಕೆ ಬಂದು ತೀರ್ಥಕ್ಷೇತ್ರದಲ್ಲಿ ಮಿಂದು ದರ್ಶನ ಪಡೆದು ಆ ದಿನ ಶುಭರಾತ್ರಿ ಕಳೆಯುವ ಪರಂಪರೆ ಇದೆ. ತೀರ್ಥಕ್ಷೇತ್ರದಲ್ಲಿ ಮಿಂದರೆ ಜಾತ್ರೆಗೆ ಬಂದರೆ, ಮಾಡಿದ ಪಾಪ ಕರ್ಮಗಳೆಲ್ಲ ನಾಶವಾಗಿ ಹೋಗುತ್ತವೆಯೆಂಬ ನಂಬಿಕೆ ಇದೆ.

೩:೨:೫: ಮೈಲಾರ ಲಿಂಗನ ಜಾತ್ರೆ :

ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಮೈಲಾರ (ಖಾನಾಪೂರ ಹೆಸರಿನ) ಪ್ರಸಿದ್ಧವಾಗಿರುವ ಜನಪ್ರಿಯ ಕ್ಷೇತ್ರ, ಇದಕ್ಕೆ 'ದಕ್ಷಿಣ ಕಾಶಿ' ಎಂದು ಕರೆಯುತ್ತಾರೆ. ಇಲ್ಲಿ ಮೈಲಾರ ಲಿಂಗೇಶ್ವರ ದೇವಾಲಯವಿದೆ. ಪ್ರತಿವರ್ಷ ಡಿಸೆಂಬರ್–ಜನವರಿ ತಿಂಗಳಲ್ಲಿ ೩೦ ದಿನಗಳವರೆಗೆ ಜಾತ್ರೆ ನಡೆಯುತ್ತದೆ.

ಗ್ರಾಮದೇವತೆಗಳಲ್ಲಿ ವಿಶಿಷ್ಟ ಗುಣ ಲಕ್ಷಣ, ಪುರಾಣ, ಚರಿತ್ರೆ, ಪರಂಪರೆ ಹೊಂದಿದ ಸಂಕೀರ್ಣ ಗಂಡು ದೇವತೆ ಮೈಲಾರಲಿಂಗ. ಆದಿಕಾಲದ ಮಣಿಚೂಲ ಪರ್ವತ ಮುನಿಗಳ ತಪೋಭೂಮಿ, ಮಲ್ಲಾಸೂರ, ಮಾಣಿಕಾಸುರ ರಾಕ್ಷಸರು

ಬ್ರಹ್ಮದೇವನ ವರದ ಬಲದಿಂದ ಉನ್ಮತ್ತರಾಗಿ ಲೋಕಕಂಟಕರಾದರು. ಮಾಣಿತೂಟ ಬೆಟ್ಟದ ಪ್ರದೇಶ ಸಂತಾಪಕ್ಕೊಳಗಾಯಿತು. ಮುನಿಗಳು, ಇಂದ್ರ ವಿಷ್ಣು ಇತ್ಯಾದಿ ಪ್ರಮುಖರು ಕೂಡಿ ಶಿವನ ಹತ್ತಿರ ಹೋಗಿ ರಕ್ಕಸನ ಉಪದ್ರವ–ದೌರ್ಜನ್ಯಗಳ ಪರಿಹಾರಕ್ಕೆ ಪ್ರಾರ್ಥಿಸಿದರು. ಶಿವನು ಉಗ್ರನಾಗಿ ಜಡೆಯನ್ನು ಭೂಮಿಗೆ ಅಪ್ಪಳಿಸಿದನು. ಜಡೆಯಿಂದ ಅದ್ಭುತಾಕಾರದ ಮಹಾಮಾಯೆ ಮೂಡಿ ನಿಂತಳು. ಮುನಿಗಳು ಶಿವನ ಅಪ್ಪಣೆ ಪಡೆದು ತುಪ್ಪದಿಂದ ಅವಳಿಗೆ ಅಭಿಷೇಕ ಮಾಡಿದರು. ಅವಳನ್ನು 'ಘೃತವಂದಿ' ಎಂದು ಕರೆದು ಅವಳಿಂದ ರಾಕ್ಷಸ ಸಂಹಾರದ ಅಭಯ ಪಡೆದರು.

ಶಿವನು ಮಾರ್ತಾಂಡ ಭೈರವನಾದ. ಅವನ ವೇಷವಿಲಕ್ಷಣ ಹಳದಿ ಬಣ್ಣದ ಪಿತಾಂಬರ ಹುಲಿಚರ್ಮ, ಕಂಬಳಿಯ ನಿಲುವಂಗಿ ಕಂಬಳಿಯ ಟೊಪ್ಪಿಗೆ–ಕೀರಿಟ, ಕೈಯಲ್ಲಿ ಖಡ್ಗ, ತ್ರಿಶೂಲ, ಢಮರು, ಪಾನ ಪಾತ್ರೆ ಹಣೆಗೆ ಭಂಡಾರ: ಹುಬ್ಬುಗಳ ನಡುವೆ ಕುಂಕುಮ, ಬಿಳಿ ಕುದುರೆಯೇರಿ ರಭಸದಿಂದ ಮುನ್ನುಗ್ಗಿದ. ಮಾರ್ತಾಂಡ ಭೈರವ 'ಹೆಗ್ಗಯ್ಯ'ನಾಗಿ ಹರಿ, ಭೈರವನ ಕೋಪದಿಂದ ಹುಟ್ಟಿದ ನಾಯಿಗಳು ವೀರಭದ್ರ, ಜಯನಂದಿ ಇತ್ಯಾದಿ. ಪಾರ್ವತಿಯು ಗಂಗೆ ಮಾಳವ್ವಳಾಗಿ ರಕ್ಕಸರ ವಿರುದ್ಧ ಹೋರಾಡಲು ಅಣಿಯಾದಾಗ, ಚಂಡಿ, ರಣಚಂಡಿ, ಕಾಲದುರ್ಗಿ ಹೀಗೆ ಉಗ್ರ ರೂಪಧರಿಸಿ ಸೈನ್ಯವನ್ನು ಕೂಡಿದಳು. ಮಾರ್ತಾಂಡ ಭೈರವ ಉಗ್ರ ಕೋಪದಿಂದ ಡಮರು ಬಾರಿಸಿದರೆ ಮೂರು ಲೋಕ ನಡುಗಿದವು. ಮಲ್ಲಾಸುರ–ಮಾಣಿಕಾಸುರರು ಮತ್ತು ಶಿವಸೈನ್ಯದ ನಡುವೆ ಭೀಕರ ಕದನವಾಯಿತು. ಮಾಣಿಕಾಸುರ ಗಾಯಗೊಂಡು ಶಿವನ ಪಾದಗಳಲ್ಲಿ ಬಿದ್ದು ಶಿವನ ಕೃಪಾಭಿಕ್ಷೆ ಕೇಳುತ್ತಾನೆ.

ಪಶ್ಚಾತ್ತಾಪದಗ್ಧನಾದ ಅವನು ಶಿವನ ಪಾದ ಸೇರುತ್ತಾನೆ. ಅದರಂತೆ ಮಾರ್ತಾಂಡ ಭೈರವನ ಪಾಶುಪತಾಸ್ತ್ರ ಮಲ್ಲಾಸುರರನನ್ನು ಸೀಳುತ್ತದೆ. ಮಲ್ಲ ತಡ ಮಾಡದೆ ಭೈರವನ ಪಾದಗಳನ್ನು ಗಟ್ಟಿಯಾಗಿ ಹಿಡಿದಾಗ ಅವನಿಗೆ ಜ್ಞಾನೋದಯವಾಯಿತು. ಶಿವನೇ ಸದಾ ನಿನ್ನ ಪದತಲದಲ್ಲಿರುವಂತೆ ಕರುಣಿಸು ಎಂದು ಪ್ರಾರ್ಥನೆ ಮಾಡುತ್ತಾನೆ. ಮಲ್ಲರಕ್ಕಸನಿಗೆ ಶಿವನ ಕರುಣೆಯಿಂದ ಆಶ್ರಯವಿತ್ತು ಹರಸಲು ನೆರೆದ ಏಳು ಕೋಟಿ ಸೈನ್ಯವೂ "ಮಲ್ಲಾರಿ ಮಾರ್ತಾಂಡ ಉಘೇ ಉಘೇ ಮೈಲಾರ ಮಾರ್ತಾಂಡ ಉಘೇ ಉಘೇ ಏಳು ಕೋಟಿ ಏಳು ಕೋಟಿ ಉಘೇ ಉಘೇ" ಎಂದು ಉಗ್ಗಡಿಸಿದರು. ಮಲ್ಲಾರಿ ಮಣಿಚೂಲದ ಬೆಟ್ಟದ ತುದಿಯಲ್ಲಿ ನಿಂತು ಕೈಲಿದ್ದ ಶಿವಧನಸ್ಸನ್ನು ಠೇಂಕರಿಸಿ ಸದ್ದುಸದ್ದಲೇ ಪರಾಕ್, ಅಂದನಂತೆ, ಏಳು ಜನವೂ ಸ್ತಬ್ಧ ಮಲ್ಲಾಸುರನ ಬಯಕೆಯಂತೆ ಸದಾ ನಮ್ಮ ಚರಣದಲ್ಲಿರುವುದು. ನಾನು ಮಲ್ಲನಿಗೆ ಅರಿಯಾದರೂ ನನ್ನನ್ನು ಮಲ್ಲಾರಿ ಲಿಂಗ ಎಂದು ಕರೆಯಿರಿ ಎಂದಾಗ ಏಳು ಕೋಟಿ, ಏಳು ಕೋಟಿ ಕಂಠಗಳೂ "ಚಾಂಗು

ಉಘೇ ಮಲ್ಲಾರಿಲಿಂಗ ಏಳು ಕೋಟಿ ಏಳು ಕೋಟಿ, ಏಳು ಕೋಟಿಘೆ ಮೈಲಾರ ಲಿಂಗ, ಎಂಬ ಶಬ್ದ ನಭೋ ಮಂಡಲವನ್ನು ತುಂಬಿ ನಿನದಿಸಿತು ಮತ್ತೆ ಮಲ್ಲಾರಿಲಿಂಗ ಮತ್ತೆ ನುಡಿದ:

> **"ಪಾರ್ವತಿ ಮಾಲತಿ, ಶ್ರೀಹರಿ ಹೆಗ್ಗಯ್ಯ ಷಣ್ಮುಖ ಚಿಕ್ಕಯ್ಯ**
> **ಗಣಪತಿ ದೊಡ್ಡಯ್ಯ ದೇವರ ಗುಡ್ಡದಲ್ಲಿಯೇ ವಾಸ**
> **ಅಶ್ವೀಜ ಬಹುಳ ನವಮಿ ಮಾಣಿಕಾಸುರನ ಸ್ಮರಣೆಗೆ ತುರಗಪೂಜೆ,**
> **ತುರಗದೊಡನೆ ಮಲ್ಲಾರಿಲಿಂಗನ ಪೂಜೆ, ನಕ್ಷತ್ರ ರೂಪದಿಂದ**
> **ನನ್ನ ದರ್ಶನಗಿರಿಶಿಖರದಲ್ಲಿ – ಅದೇ ನನ್ನ ಕುರುಹು.**
> **ಆಲದ ಮರದ ನೆರಳು–ಅದೇ ನನ್ನ ಆಶ್ರಯ, ಭಕ್ತರಿಗೆ ನೆರವು.**
> **ಮಲ್ಲಾಸುರ ಹತನಾದ ಡೆಂಕನ ಮರಡಿ : ಅಲ್ಲಿ ಮಾಲತಿ ಪೂಜೆ**
> **ವಾಸ ಹತ್ತುದಿನ. ಹನ್ನೊಂದನೆಯ ದಿನ ತುಂಗಾನದಿ ದಾಟಿ ಪಯಣ,**
> **ಆಚೆದಡದಲ್ಲಿ ವಾಸ–ಮಾಘ ಪೂರ್ಣಿಮೆ ಉತ್ಸವ ಮಾಘ ಬಹುಳ ಬಿದಿಗೆ.**

ಭಕ್ತರ ಉದ್ಧಾರಕ್ಕಾಗಿ ಕಾರಣಿಕ. ಏಳು ಕೋಟಿಘೆ ಪರಾಕ್ ಎಂದು ಮೈಲಾರಲಿಂಗನ ಪುರಾಣಕಥೆ (ಹಕಾರಿ : ೧೯೮೩:೧–೨–೩). ಮೈಲಾರಲಿಂಗ ಕರ್ನಾಟಕದ ಧಾರವಾಡ ಜಿಲ್ಲೆಯ ರಾಣೆಬೆನ್ನೂರಿನ ದೇವರ ಗುಡ್ಡ; ಅಲ್ಲಿಂದ ಸಮೀಪ ತುಂಗಭದ್ರನದಿಯ ದಡದಲ್ಲಿರುವ ಮೈಲಾರ ಕ್ಷೇತ್ರ. ಗುಲ್ಬರ್ಗಾ ಜಿಲ್ಲೆಯಲ್ಲಿರುವ ಮೈಲಾರ ಎನ್ನುವ ಒಂದು ಕ್ಷೇತ್ರ. ಬೀದರ ಜಿಲ್ಲೆಯಲ್ಲೊಂದು ಹೀಗೆ ಕನ್ನಡ ನಾಡಿನ ಅನೇಕ ಕಡೆಗಳಲ್ಲಿ ಮೈಲಾರ ಲಿಂಗನ ದೇವಾಲಯಗಳು ಕಂಡು ಬರುತ್ತವೆ.

ಈ ಎಲ್ಲ ಕ್ಷೇತ್ರಗಳಲ್ಲೂ ಮೈಲಾರಲಿಂಗನ ಪೂಜೆ–ಉತ್ಸವಗಳು ಹೆಚ್ಚು–ಕಡಿಮೆ ಒಂದೇ ಸ್ವರೂಪದಿಂದ ಕೂಡಿವೆ. ನಮ್ಮ ನಾಡಿನಲ್ಲಿ ಮೈಲಾರಲಿಂಗ–ಲಿಂಗೇಶ್ವರ ಮಲ್ಲಣ್ಣ ಎಂದು ಹೆಸರು ಪಡೆದರೆ, ಮಹಾರಾಷ್ಟ್ರದಲ್ಲಿ 'ಖಂಡೋಬಾ' ನಾಗಿ ಹೆಸರು ಪಡೆದ ಜನಪ್ರಿಯ ದೇವತೆಯಾಗಿದ್ದಾನೆ.

ಬೀದರಿನಿಂದ ೨೦ ಕಿ.ಮೀ. ಭಾಲ್ಕಿ ತಾಲ್ಲೂಕಿನಿಂದ ೨೬ ಕಿ.ಮೀ. ಅಂತರದಲ್ಲಿರುವ ಮೈಲಾರ ಲಿಂಗೇಶ್ವರನ ದೇವಾಲಯದಲ್ಲಿ ಸ್ವಯಂಭೂಲಿಂಗವಿದೆ. ಈ ದೇವಾಲಯವನ್ನು ಪ್ರಕೃತಿಯ ಸುಂದರ ಪರಿಸರದ ಮಧ್ಯ ಕಟ್ಟಲಾಗಿದೆ. ದೇವಾಲಯದ ಸುತ್ತ ನೀರಿನ ಹೊಂಡಗಳು, ಝರಿಗಳು, ನೂರಾರು ಸ್ವಯಂಭೂ ಲಿಂಗಗಳು ಇವೆ. ೩೦ ದಿನಗಳವರೆಗೆ ನಡೆಯುವ ಈ ಜಾತ್ರೆಗೆ ಸಹಸ್ರಾರು ಕುರುಬರು ಲಿಂಗಾಯಿತರು ಬ್ರಾಹ್ಮಣರು ಇನ್ನಿತರ ವರ್ಗದ ಜನರು ಬರುತ್ತಾರೆ. ಜಾತ್ರೆಯ ದಿನಗಳಲ್ಲದೆ ಪ್ರತಿ ರವಿವಾರ ದೊಡ್ಡ ಪ್ರಮಾಣದ ದನಗಳ ಜಾತ್ರೆ ನಡೆಯುತ್ತದೆ.

ಜಾತ್ರೆಯಲ್ಲಿ ಪ್ರತಿ ದಿನದ ಆಚರಣೆಗಳೆಂದರೆ, ಮೈಲಾರಲಿಂಗೇಶ್ವರನಿಗೆ ಅರಿಸಿಣದಿಂದ ಪೂಜೆ, ಭಜನೆ, ಅರಿಸಿಣ ಹಾರಿಸುವುದು, ಕೊಬ್ಬರಿ ಹಾರಿಸುವುದು, ಉತ್ಸವದ ಕೊನೆಯಲ್ಲಿ ಪಲ್ಲಕ್ಕಿ ಮೆರವಣಿಗೆಯನ್ನು ಮಾಡುವರು. "ಏಳು ಕೋಟಿ ಏಳು ಕೋಟಿ ಉಘೇ ಉಘೇ ಎಂದು ಭಕ್ತರೆಲ್ಲರೂ ಉಗ್ಗಡಿಸುವರು.

ಜಾತ್ರೆಯಲ್ಲಿ ಕುರುಬ ವರ್ಗದವರೇ ಹೆಚ್ಚಾಗಿರುತ್ತಾರೆ. ನರಸಗೊಂಡ ಭೀಮಗೊಂಡ, ಶಾಮಗೊಂಡ, ಲಾಲಗೊಂಡ, ಬೀರಗೊಂಡ, ಯಲಗೊಂಡ ಮುಂತಾದ ಹೆಸರಿನವರೇ ಕಂಡು ಬರುತ್ತಾರೆ. "ಗೊಂಡ" ಎಂದರೆ ದ್ರಾವಿಡ ವರ್ಗಕ್ಕೆ ಸೇರಿದ ವಿಂಧ್ಯ ಪರ್ವತದ ಬಳಿಯಿರುವ ಒಂದು ಜನಾಂಗವಾಗಿತ್ತು. ಆ ಜನಾಂಗಕ್ಕೆ ಸೇರಿದ ವ್ಯಕ್ತಿ (ವೆಂಕಟಸುಬ್ಬಯ್ಯ:೧೯೭೭:೨೬೨೭೮) ಕಾಡುಗಳಲ್ಲಿ ಸಾಧಾರಣವಾಗಿ ವಾಸಿಸುವರು. ಆಡು-ಕುರಿಗಳನ್ನು ಕಾಯ್ದುಕೊಂಡು ಉಪಜೀವನ ನಡೆಸುವವರನ್ನು 'ಕಾಡು ಕುರುಬರೆಂದು' ಕರೆಯುವರು. ಈ ಕುರುಬರೇ ಗೊಂಡ ವರ್ಗಕ್ಕೆ ಸೇರಿದವರು. ಇವರ ವೇಷ-ಭೂಷಣ ವಿಶೇಷವಾಗಿದೆ. ಕಾಲಲ್ಲಿ ಚಡಾವಬೂಟು, ಹೆಗಲಮೇಲೆ ಕರಿಯ ಅಥವ ಬಿಳಿಯ ಕಂಬಳಿ, ತಲೆಗೆ ಕೆಂಪು ಅಥವಾ ಬಿಳಿ ರುಮಾಲು ಖಮೀಸ್ ಅಂಗಿ, ಕಾಟನ್ ಧೋತಿ, ಇತ್ಯಾದಿ ಧರಿಸಿಕೊಂಡು ಬರುತ್ತಾರೆ. ಮೈಲಾರಲಿಂಗನ ಜಾತ್ರೆಯಲ್ಲಿ ಏಳು ಕೋಟಿ ಏಳು ಕೋಟಿ ಉಘೇ ಉಘೇ ಎಂದು ಉದ್ಘೋಷ ಮಾಡುವ ಪದ್ಧತಿ ಇದೆ.

ಜಾತ್ರೆ ಐದು ದಿವಸ ವಿಶೇಷವಾಗಿ ಜರುಗಿದರೂ ೩೦ ದಿನಗಳವರೆಗೂ ಭಕ್ತರೂ ಬಂದು ಹೋಗುವ ಸಂಪ್ರದಾಯವಿರುವುದರಿಂದ ಮೈಲಾರಲಿಂಗನ ಜಾತ್ರೆ ಮೂವತ್ತು ದಿನಗಳದ್ದೇ ಎಂದು ಹೇಳುವ ವಾಡಿಕೆ ಇದೆ. ಪ್ರತಿವರ್ಷ ಈ ಉತ್ಸವಕ್ಕೆ ಕರ್ನಾಟಕದ ಮೂಲೆ ಮೂಲೆಯಿಂದ ಮಹಾರಾಷ್ಟ್ರದ ಕೆಲವು ಭಾಗಗಳಿಂದ ಸಾವಿರಾರು ಜನರು ಬರುತ್ತಾರೆ. ಸರ್ಕಾರ ಈ ಜಾತ್ರೆ ಯಾತ್ರೆಗಳ ವ್ಯವಸ್ಥೆ ದುರಸ್ಥಿಗಾಗಿ ಧನಸಹಾಯ ಮಾಡುತ್ತಿದೆ, ಭಕ್ತರಿಂದ ಚಂದಾ ಹಣ ಬರುತ್ತಿದೆ. ಬಂದ ಹಣದಿಂದ ಕಟ್ಟೆಗಳ ನಿರ್ಮಾಣ ಒಳಚರಂಡಿ ವ್ಯವಸ್ಥೆ ಮಾಡುತ್ತಿದ್ದಾರೆ.

ಜಾತ್ರೆಯಲ್ಲಿ ಬಣ್ಣ-ಬಣ್ಣದ ಉಡುಗೆ-ತೊಡುಗೆ ಮಣಿ-ಮುತ್ತುಗಳು, ಕರಿಕಂಬಳಿ, ಬಿಳಿಕಂಬಳಿಗಳು, ಕುರಿಗಳ ಉಣ್ಣೆ ಉಪಕರಣಗಳು, ಖಾನಾವಳಿ, ಹೋಟಲ್‌ಗಳು ವ್ಯಾಪಾರ ಭರಾಟೆಯಿಂದ ನಡೆಯುತ್ತದೆ. ಅಷ್ಟೇ ಪ್ರಮಾಣದಲ್ಲಿ ದನಗಳ ಸಂತೆಯೂ ಕೂಡಿರುತ್ತದೆ. ಅರಣ್ಯ ಇಲಾಖೆಯವರು ಸಸ್ಯಗಳ ಪ್ರದರ್ಶನ ಏರ್ಪಡಿಸಿ, ಯಾತ್ರಿಕರಿಗೆ ಸಸ್ಯಗಳು ಗಿಡ ಮರಗಳು ಬೆಳೆಸುವ, ಉಳಿಸುವ ಮಾಹಿತಿ ನೀಡುತ್ತಾರೆ. ವಾರ್ತಾ ಪ್ರಚಾರ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರು ರಾತ್ರಿ ಹೊತ್ತಿನಲ್ಲಿ ಸಿನೇಮಾ ತೋರಿಸುತ್ತಾರೆ. ಜಾತ್ರೆಗೆ ಬಂದು ಮೊದಲು ಧರ್ಮ ಶಾಲೆಗಳಲ್ಲಿ ಜಾಗ ಹಿಡಿದವರೇ ಜಾಣರು. ಕೆಲವರು ದೇವಾಲಯದ ಫರಶೀನ ಮೇಲೆ, ಮರಗಳ ಕೆಳಗೆ ಮಲಗುವರು. ಅಡಿಗೆ ಮಾಡುವರು. ಹರಟೆ ಹೊಡೆಯುವುದು ಮಾಡುತ್ತಾರೆ. ಉತ್ಸವದಲ್ಲಿ ಹಂಗಾಮಿ ಅಂಗಡಿಗಳು ಪ್ರಾರಂಭ

ಮಾಡುವವರು ಜಾತ್ರೆಗಿಂತ ಒಂದು ವಾರ ಮೊದಲೇ ಬರುವ ವಾಡಿಕೆ. ಪ್ರಮುಖ ಸ್ಥಳಗಳನ್ನು ಆರಿಸಿಕೊಂಡು ಅಂಗಡಿ ರಚನೆಗೆ ತೊಡಗುತ್ತಾರೆ. ಬಿದಿರು ಕಟ್ಟಿಗೆ, ತಾಡಪತ್ರಿ, ಬಣ್ಣ ಬಣ್ಣದ ಬಟ್ಟೆ ಮುಂತಾದವುಗಳನ್ನು ಅಂಗಡಿ ರಚನೆ ಮಾಡುವ ಸಲುವಾಗಿ ಬೇಕಾಗುತ್ತವೆ.

ಪೀ, ಪೀಪಿ, ಬಲೂನನು, ಇತರೆ ಆಟದ ಸಾಮನುಗಳನ್ನು ಬಗೆ-ಬಗೆಯ ತಿಂಡಿಗಳು, ಭಾಂಡೆ ಬುಟ್ಟಿ-ಮುಂತಾದ ಗೃಹೋಪಯೋಗಿ ವಸ್ತುಗಳು, ಬಳೆ, ಮುತ್ತಿನ ಸರ, ಕಿವಿಯೋಲೆ ಕಲಾತ್ಮಕ ಕುಸುರಿ ವಸ್ತುಗಳು ಸಣ್ಣ ಸರ್ಕಸ್, ಜಾದೂ, ಕಸರತ್ತು, ಏನುಂಟು ಏನಿಲ್ಲ. ಎಲ್ಲರನ್ನು ಆಕರ್ಷಿಸುವ ಈ ಜಾತ್ರೆ, ಹಂಗಾಮಿ ಅಂಗಡಿಗಳ ಮಾಲೀಕನಿಗೆ ನಿದ್ದೆ ಎಂಬುದು ಅಪರೂಪ. ದಿನಕ್ಕೆ ಎರಡು ತಾಸು ನಿದ್ರೆಯಾದರೆ ಸಾಕು, ಭರಾಟೆ ವ್ಯಾಪಾರ ಮಾಡುವುದರಿಂದ ನಿದ್ರೆ ಮಾಯವಾಗುತ್ತದೆ. ಶರೀರ ಬಗ್ಗಿ ಹೋಗುತ್ತದೆ. ಗಿರಾಕಿಗಳು ವಿಚಿತ್ರ, ಇವನು ಕೇಳಿದ ಬೆಲೆಗೆ ಕೊಡುವುದಿಲ್ಲ. ಹೀಗೆ ನಡೆದು ವ್ಯಾಪಾರ ಕುದುರಬಹುದು. ಇಲ್ಲವೆ ಕಮರಬಹುದು. ಇಂಥದರಲ್ಲಯೇ ಲಾಭ ಗಿಟ್ಟಿಸುತ್ತಾರೆ. ಭದ್ರ ಗೋಡೆಗಳು, ಬಾಗಿಲುಗಳು ಇಲ್ಲದ ಅಂಗಡಿಗಳು ಸದಾ ಕಾಯುವುದೆಂದರೆ ಎಂಥ ಕಾವಲುಗಾರನಿಂದಲೂ ಸಾಧ್ಯವಿಲ್ಲದ ಕೆಲಸ. ಜನ ಸಂದಣಿ ಹೆಚ್ಚಿದಾಗ ಇವರ ಮೈಯೆಲ್ಲ ಕಣ್ಣಾಗಿ ವ್ಯವಹಾರ ಮಾಡುತ್ತಾರೆ. ಇವರಿಗೆ ಯಾವುದೇ ಕಾರಣಗಳಿಂದ ಹಣಬೇಕೆಂದರೆ ಕೊಡುವವರು ಯಾರೂ ಇಲ್ಲ. ಬ್ಯಾಂಕುಗಳು, ಸಹಕಾರಿ ಸಂಘ ಸಂಸ್ಥೆಗಳು ಇವುಗಳ ಅಂಗೀಕಾರ ಇರುವುದಿಲ್ಲ. ಸಾಗಾಣಿಕೆಯ ವೆಚ್ಚವು ಕಡಿಮೆ ಇಲ್ಲ. ಕೆಲವು ಸಲ ಸಾವಿರದ ಅಂಕಿ ತಲುಪುತ್ತದೆ.

ಈ ಜಾತ್ರೆಯಲ್ಲಿ ದಿಲ್ಲಿ ಹೋಟಲ್, ಸಣ್ಣ ಜಾತ್ರೆಗಳಲ್ಲಿ ದೊಡ್ಡ ಅಂಗಡಿ ನೂರಾರು, ಐನೂರು ಚದರ ಅಡಿಗಳಷ್ಟು ಜಾಗದಲ್ಲಿ ಹೋಟಲ್‌ಗಳು. ಅಲ್ಲಿಯದೆಲ್ಲ ದಿಲ್ಲಿಯಿಂದ ಬಂದುದು. ಉತ್ತರದ ತಿಂಡಿ ತಿನಿಸುಗಳನ್ನು ದಕ್ಷಿಣದವರಿಗೆ ಪರಿಚಯಿಸುವ ರಾಯಭಾರಿ ಜಾತ್ರೆ, ಜಾತ್ರೆ ನಾಲ್ಕೈದು ದಿನಗಳಿದ್ದರೂ ೨೦-೩೦ ದಿನಗಳ ಠಿಕಾಣಿ ಇವರದು. ಅಂಗಡಿಯ ಮುಂಭಾಗದ ಮೇಲ್ಗಡೆ ಒಂದು ನಾಮ ಫಲಕ. ಅದರಲ್ಲಿ ಪ್ರದರ್ಶನ ಮಿರ್ಚಿ. ಪಕೋಡ, ಶೇರಲಾ ತಾಜಾ ತಾಜಾ ಜಾಮೂನು, ಕಲಾಜಾಮೂನು. ರಸಮಲಾಯಿ, ಚಣಾ, ಭಟ್ಟೂರ, ಆಗ್ರದಾಲ್, ಮಿಲ್‌ಪೂರಿ. ಇಡ್ಲಿ, ತರತರ ಆಕಾರದ ತಿಂಡಿಗಳು, ಬಾಯಲ್ಲಿ ನೀರೂರಿಸುತ್ತವೆ. ಹದಿನೈದು ಜನ ದಿಲ್ಲಿಯ ತರುಣರು ಹುಟ್ಟುಹಾಕಿದ ಯೋಜನೆಯದು. ದಿಲ್ಲಿಯ ಚಾಂದನಿ ಚೌಕದಲ್ಲಿ ತಮ್ಮದೇ ಆದ ಹೋಟಲ್ ಇದೆಯಂತೆ ಆದರೂ ಅದರ ಜೊತೆಗೆ ಈ ಸಂಚಾರಿ ಜೀವನ. ಎರಡು ಲಾರಿ ಸಾಮಾನು ಸರಂಜಾಮು ಐವತ್ತು ಸಾವರಿ ರೂಪಾಯಿಗಳಷ್ಟು ಬಂಡವಾಳ ಈ ವಿಶಾಲ ಅಂಗಡಿ, ರಚಿಸುವುದು. ಅಂದಗೊಳಿಸುವುದು, ತಿಂಡಿ ತಯಾರಿಸುವುದು, ವ್ಯಾಪಾರ ಮಾಡುವುದು ಊಟ-ನಿದ್ರೆಗಳ ಪರಿವೆಯಿಲ್ಲದೆ

ದುಡಿದರೂ ಸಾಲದು. ಮತ್ತೆ ಎಂಟು ಹತ್ತು ಜನ ಸ್ಥಳೀಯರನ್ನು ಕೂಲಿಯವರನ್ನಾಗಿ ನೇಮಿಸಿಕೊಳ್ಳುತ್ತಾರೆ. ಹಿಂದಿ ಮತ್ತು ಪಂಜಾಬಿ ಭಾಷೆ ಮಾತ್ರ ಬಲ್ಲ ಇವರು ವ್ಯವಹಾರ ಚತುರರು.

ಅಲೆಮಾರಿ ಜೀವನಕ್ಕೆ ಜಗ್ಗಿದ ಇವರು ಪಾಳಿ ಪ್ರಕಾರ ೫-೬ ತಿಂಗಳಿಗೊಮ್ಮೆ ದಿಲ್ಲಿಗೆ ಹೋಗಿ ಬರುತ್ತಾರೆ. ದಸರಾ ಹಬ್ಬಕ್ಕೊಮ್ಮೆ ಮಾತ್ರ ಎಲ್ಲರೂ ಸೇರಿ ದೆಹಲಿಯಲ್ಲಿ ಹಬ್ಬ ಆಚರಿಸುವ ರೂಢಿ. ಅವರು ಹೋಗಿ ಬರುವುದು ಸರಳ. ಆದರೆ ಧೈತ್ಯಾಕಾರದ ಅಂಗಡಿಯನ್ನು ದೆಹಲಿಗೆ ಹೊತ್ತೊಯ್ಯುವವರಾರು? ಅಂಥ ಸಮಯದಲ್ಲಿ ಜನ ಪರಿಚಯವಿರುವ ಸ್ಥಳದಲ್ಲಿ ಸಾಮಾನುಗಳನ್ನು ಗುಡ್ಡೆ ಹಾಕಿ ಹೋಗುವರು.

೩:೨:೬: ಕೊರಟೇಶ್ವರ ಜಾತ್ರೆ :

ಗುಲ್ಬರ್ಗಾ ಜಿಲ್ಲೆ ಆಳಂದ ತಾಲ್ಲೂಕು ಖಜೂರಿ ಎಂಬ ಗ್ರಾಮದಲ್ಲಿ ನಡೆಯುವ ಒಂದು ಜಾತ್ರೆ. ಪ್ರತಿ ವರ್ಷದ ವೈಶಾಖ ಮಾಸದ ಅಮವಾಸ್ಯೆಯಲ್ಲಿ ನಡೆಯುತ್ತದೆ. ಐದು ದಿನಗಳ ಕಾಲ ನಡೆಯುವ ಈ ಜಾತ್ರೆಯ ಮೊದಲನೆಯ ದಿನ ಮಹಾಪೂಜೆ, ರುದ್ರಾಭಿಷೇಕ, ಮಠದ ಸ್ವಾಮಿಗಳನ್ನು ಪಲ್ಲಕ್ಕಿಯ ಮೇಲೆ ಮೆರವಣಿಗೆ ಮಾಡುವುದು ಇತ್ಯಾದಿ ಕಾರ್ಯಕ್ರಮಗಳ ಜೊತೆಗೆ ಕೀರ್ತನೆ, ಭಜನೆ, ಡಪ್ಪಿನ ಹಾಡುಗಳು ಇರುತ್ತವೆ.

ಎರಡನೆಯ ದಿನ ಅಗ್ಗಿ ಎಂಬ ಕಾರ್ಯಕ್ರಮವಿರುತ್ತದೆ. ಪುರವಂತರು, ಮಠದ ಸ್ವಾಮಿಗಳು ಇವರೊಂದಿಗೆ ಉಳಿದವರು ಪುರೋಹಿತರು, ಬಸವಣ್ಣ ಕಟ್ಟೆಗೆಯ ಮೇಲೆ ಅಗ್ನಿ ತುಳಿಯುತ್ತಾರೆ. ಆ ದಿನ ತೇರಿನ ಉತ್ಸವ ಇರುತ್ತದೆ. ಸಂಜೆ ಆರು ಗಂಟೆಗೆ ರಥೋತ್ಸವವಿರುತ್ತದೆ. ತೇರಿಗೆ ತೆಂಗನ್ನು ಒಡೆಯುತ್ತಾರೆ. ಬಾಳೆಹಣ್ಣನ್ನು ಎಸೆಯುತ್ತಾರೆ. ತೇರಿನ ಮುಂದೆ ದೀವಟಿಗೆ ಹಚ್ಚಿ ಜನರು ಹಿಡಿದು ಕೊಂಡಿರುತ್ತಾರೆ. ತೇರನ್ನು ಸಾಮಾನ್ಯವಾಗಿ ಐವತ್ತು ನೂರು ಮೀಟರ್ ಉದ್ದ ಎಳೆಯುವ ರೂಢಿ ಇದೆ. ಅಂದು ರಾತ್ರಿಯೂ ಕೀರ್ತನೆ, ಭಜನೆ, ನಾಟಕ, ಡಪ್ಪಿನ ಆಟಗಳು, ಮನರಂಜನೆ ಕಾರ್ಯಕ್ರಮಗಳು ಜರುಗುತ್ತವೆ.

ಮೂರನೆಯ ದಿನ ಹೆಂಗಸರು ಹೊಸ ಬಳೆಗಳನ್ನು ತೊಟ್ಟುಕೊಳ್ಳುವ ಸಂಪ್ರದಾಯವಿದೆ. ದೇವರ ತೀರ್ಥವನ್ನು ಅಂದು ಜನ ಜಾತ್ರೆಯಲ್ಲಿ ಕೊಳ್ಳುತ್ತಾರೆ.

ಐದನೆಯ ದಿನ (ಕೊನೆಯ ದಿನ) ಜಾತ್ರೆಯ ಕಮೀಟಿಯ ವತಿಯಿಂದ ಮಠದ ಸ್ವಾಮಿಗಳು ಕಲಾಕಾರರಿಗೆ ಕುಸ್ತಿ ಪಂದ್ಯಗಳನ್ನು ಗೆದ್ದವರಿಗೆ ಉಡುಗೊರೆಗಳನ್ನು ನೀಡಿ ಗೌರವಿಸುತ್ತಾರೆ. ಅಂದು ಸಂಜೆ ತೇರಿನ ಕಳಸವನ್ನು ಇಳಿಸುವುದರೊಡನೆ ಜಾತ್ರೆಯ ಎಲ್ಲ ಕಾರ್ಯಕ್ರಮಗಳು ಮುಕ್ತಾಯಗೊಳ್ಳುತ್ತದೆ.

೩:೨:೭: ಮಾರಿ ಜಾತ್ರೆ :

ರಾಜಗೀರಾ ಬೀದರ ತಾಲ್ಲೂಕಿನ ಒಂದು ಚಿಕ್ಕ ಹಳ್ಳಿ. ಈ ಗ್ರಾಮದ ನಡುವೇ ಮಾರಿ ದೇವತೆಯ ಚಿಕ್ಕ ದೇವಾಲಯವಿದೆ. ಮರಗಮ್ಮ, ಮಾರಮ್ಮಾ 'ಮಾರಿ' ಎನ್ನುವ ವಿವಿಧ ಹೆಸರುಗಳು ಈ ದೇವತೆಗಿದೆ. ಈ ಅಮ್ಮನ ಜಾತ್ರೆ ಮೂರು ವರ್ಷಕ್ಕೊಮ್ಮೆ ಜರುಗುತ್ತದೆ. ವರ್ಷದ ಬ್ಯಾದಾಮಿ ಅಮವಾಸ್ಯೆಯಾಗಿ ಬರುವ ಮೊದಲನೆಯ ಮಂಗಳವಾರ ದಿವಸದಿಂದ ಉತ್ಸವ ಪ್ರಾರಂಭವಾಗುತ್ತದೆ. ಜಾತ್ರೆಗೆ ರಾಜಗೀರಾ ಸುತ್ತಮುತ್ತಲಿನ ಗ್ರಾಮಸ್ಥರು ಬರುತ್ತಾರೆ. ಉತ್ಸವದ ದಿನಗಳಲ್ಲಿ ಮರುಗಮ್ಮನಿಗೆ ಒಂದು ಕೋಣ. ನೂರಾರು ಕುರಿಮರಿಗಳು, ಬಲಿಕೊಡುವ ಪದ್ಧತಿ ಇದೆ.

ಮಾನವ ಸಂಸ್ಕೃತಿಯ ಪ್ರಾಥಮಿಕ ಹಂತದಲ್ಲಿ ಜನಸಾಮಾನ್ಯರು ಊರನ್ನು ಕಬಳಿಸುವ ಸಾಂಕ್ರಮಿಕ ರೋಗಗಳು ಕ್ಷಾಮ, ಮುಂತಾದವುಗಳ ಪ್ರಕೃತಿಯ ರುದ್ರ ಮುಖಗಳನ್ನು ಕಮಡು ಭಯದಿಂದ ತತ್ತರಿಸಿದರು. ಆ ಘೋರ ಶಕ್ತಿಗೆ ಭಯ ಭಕ್ತಿಯಿಂದ ತಲೆಬಾಗಿದರೆ ಪೂಜೆ ಬಲಿಗಳಿಂದ ಸಂತೃಪ್ತಿಗೊಳಿಸಿದರೆ ತಮ್ಮ ಬದುಕಿಗೆ ನೆಮ್ಮದಿಯೆಂದು ಬಗೆದರು. ತಮ್ಮ ಭಯ ಭಕ್ತಿ ಭಾವವನ್ನು ಪ್ರತ್ಯಕ್ಷವಾಗಿ ವ್ಯಕ್ತಪಡಿಸಲು ಆ ಶಕ್ತಿಗೊಂದು ಉಗ್ರ ಸ್ವರೂಪ ಸೃಷ್ಟಿಸಿ ಅದಕ್ಕೊಂದು ಅದ್ಭುತ ಕಥೆ ಕಟ್ಟಿ ಭಯ–ಭಕ್ತಿಯಿಂದ ತಲೆಬಾಗಿದರು. ತಮ್ಮ ಪ್ರಭಾವಲಯದಲ್ಲಿದ್ದ ಜನತೆಯೂ ತಲೆಬಾಗುವಂತೆ ಮಾಡಿದರು. ಹೀಗೆ ಸಂಸ್ಕೃತಿಯ ಮೊದಲ ಹಂತದಲ್ಲಿ ಉಗ್ರಸ್ವರೂಪದ ದೇವತೆಗಳಲ್ಲಿ ಮಾರಮ್ಮಾ ಒಬ್ಬಳು. ಎನ್ನುವ ನಂಬಿಕೆ ಜನಪದರಲ್ಲಿದೆ.

ಹೈದ್ರಾಬಾದ ಕರ್ನಾಟಕ ಭಾಗದ ಪ್ರತಿಯೊಂದು ಹಳ್ಳಿಯಲ್ಲಿ ಒಂದಾದರೂ ಗ್ರಾಮ ದೇವತೆ ಇದ್ದೇ ಇದೆ. ಸಣ್ಣ ಅಥವಾ ದೊಡ್ಡ ಪ್ರಮಾಣದಲ್ಲಿ ಜಾತ್ರೆ ನಡೆದೇ ಇರುತ್ತದೆ. ರಾಜಗೀರಾ ಹಳ್ಳಿಯ ಮಾರಮ್ಮನ ಜಾತ್ರೆ ಮಾತ್ರ ವಿಶೇಷವಾಗಿದೆ. ಉತ್ಸವಕ್ಕೆ ತಗಲುವ ವೆಚ್ಚ ಗ್ರಾಮಸ್ಥರೆ ವಹಿಸಿಕೊಳ್ಳುತ್ತಾರೆ. ಹಣ ಹೊರೆಯೆಂದು ಭಾವಿಸದೇ ಗೌರವದಿಂದ ಹಣ ಕೊಡುತ್ತಾರೆ. ಚಂದಾ ಮಾಡುತ್ತಾರೆ. ದವಸ ಧಾನ್ಯಗಳು ಸಂಗ್ರಹಿಸಿಕೊಡುತ್ತಾರೆ. ಈ ಜಾತ್ರೆಯ ಸ್ವರೂಪ ಈ ರೀತಿಯಾಗಿದೆ.

ಕೋಣ ಕುರಿ ಮೇಕೆಗಳ ಬಲಿ. ಅಂಕೆ ಹಾಕುವುದು, ಮೇಲೆ ದೀಪ, ಲಗ್ನಮಾತಂಗಿ ಸೇವೆ, ಹಲಸು ಗಾವ, ಭೂಮಿತಾಯಿಗೇ ಹೆಪ್ಪು ಕೊಡುವುದು. ದೇವಿಗೆ ವಿಧವೆಯ ವೇಷ ತೊಡಿಸುವುದು. ಕನ್ಯೆಯಾಗಿ ದೇವಿಯನ್ನು ನೆಲೆಗೊಳಿಸುವುದು. ಇತ್ಯಾದಿ ಲಕ್ಷಣ ಪಡೆದಿರುತ್ತದೆ. ಉತ್ಸವ ಸಂಪೂರ್ಣವಾಗಿ ಜಾನಪದ ಐತಿಹಾಸದ ರೀತಿಯಲ್ಲಿ ಜರುಗುತ್ತದೆ. ಅಂದು ಆಸಾದಿಗಳಿಗೆ ಪ್ರಮುಖ

ಸ್ಥಾನ ಪಟ್ಟದ ಕೋಣನಿಗೆ ಊರ ಪ್ರಮುಖರಿಗೆ ಅಗಾದಿಗಳು ಕಂಕಣವನ್ನು ಕಟ್ಟಿ ತಾವು ಕಂಕಣ ಬದ್ಧರಾಗುತ್ತಾರೆ. ಮಾರಮ್ಮಾಳಿಗೆ ಲಗ್ನ ಮಾಡುವರು.

ಅವಳ ಮಾದಿಗ ಪತಿಯ ಪ್ರತೀಕವಾದ ಕೋಣನ ಜೊತೆಗೆ ಹಿಂದಕ್ಕೆ ಕೋಣನಿಗೆ ಬಾಸಿಂಗ ಕಟ್ಟುತ್ತಿದ್ದರಂತೆ. ಇಂದು ಆ ಪದ್ಧತಿ ಇಲ್ಲ. ಶ್ರೀದೇವಿಯನ್ನು ಧಾರೆಯೆರೆದು ಕೊಡುವವರು ನಾಡಿಗ ಬ್ರಾಹ್ಮಣರು. ಲಗ್ನವಾದ ಮಗಳನ್ನು ಪತಿ ಗೃಹಕ್ಕೆಕಳಿಸುವ ಕಾರ್ಯಕ್ರಮದಂತಿದೆ. ಬಲಿ ಶೇಷಕ್ಕೆ ಹಲಸೆನ್ನುತ್ತಾರೆ. ಜಾತ್ರೆಯ ಕೊನೆಯ ದಿನದಂದು ದೇವಿಗೆ ಹಲಸು ಹಂಚುವ ಕಾರ್ಯ ನಡೆಯುತ್ತದೆ. ರೈತರು ಹಲಸನ್ನು ತಮ್ಮ ಗದ್ದೆಗಳಲ್ಲಿ ಹುಗಿಯುತ್ತಾರೆ. ಇದರಿಂದ ಅವರ ಬೆಳೆಗಳ ರಕ್ಷಣೆಯಾಗುತ್ತದೆಂಬ ನಂಬಿಕೆಯಿದೆ.

ಶ್ರೀ ದೇವಿಯ ವಿಸರ್ಜನೆಯ ಕಾಲಕ್ಕೆ ಭೂಮಿ ತಾಯಿಗೆ ಹೆಪ್ಪುಕೊಡುವ ಕಾರ್ಯಕ್ರಮವಿರುತ್ತದೆ. ತಾಯಿ ಮಾರಿಯನ್ನು ಕಳೆದುಕೊಂಡು ತಬ್ಬಲಿಗಳಾದ ಅನಾದಿಗಳಿಗೆ ಮೊಸರು ಕುಡಿಯಲು ಕೊಡುತ್ತಾರೆ. ಕೊಡುವಾಗ ಅವರ ಮೈಮೇಲೆಲ್ಲಾ ಚೆಲ್ಲಿ ಭೂಮಿಗೆ ಧಾರೆಯಾಗಿ ಇಳಿಯುವಂತೆ ಹೊಯ್ಯಲಾಗದು. ಆಗ ಭೂಮಿಯು ಸಂತೃಪ್ತಳಾಗಿ ಫಲಿಸಿ ಅನ್ನಪೂರ್ಣೇಯಾಗುವಳೆಂಬ ಸಂಪ್ರದಾಯ ಇಲ್ಲಿದೆ.

ಮಾರಮ್ಮನ ಜಾತ್ರೆ ಆಚರಿಸುವುದಕ್ಕೆ ಒಂದು ಕಥೆಯಿದೆ. ಮಾರಮ್ಮಾ ಬ್ರಾಹ್ಮಣರ ಹುಡುಗಿ. ಮಾದಿಗರ ಹುಡುಗನೊಬ್ಬನು ಮೋಸದಿಂದ ಆಕೆಯನ್ನು ಮದುವೆಯಾದನು. ಕೆಲವು ಕಾಲ ಸುಖ ಸಂತೋಷದಿಂದ ಕಾಲ ಕಳೆದರು. ಒಂದು ಸಲ ಮಾದಿಗರ ಹುಡುಗ ಹೆಂಡತಿ ಸಮೇತ ತನ್ನ ತಾಯಿಯ ಊರಿಗೆ ಹೋದನು. ಬಹಳ ದಿನಗಳ ನಂತರ ತನ್ನ ಮಗ ಮನೆಗೆ ಬಂದಿರುವುನೆಂದು ಸಂತೋಷಗೊಂಡು ತಾಯಿ ಕೋಣನ ಕಾಲು ಮತ್ತು ನಾಲಗೆಯ ರುಚಿಯಾದ ಅಡಿಗೆ ಮಾಡಿ ಮಗ ಮತ್ತು ಸೊಸೆಗೆ ಬಡಿಸಿದಳು. ಆಗ ಹೆಂಡತಿಗೆ ಗಂಡನ ಜಾತಿ ತಿಳಿಯಿತು. ಇಷ್ಟು ಕಾಲ ತನ್ನನ್ನು ವಂಚಿಸುತ್ತಾ ಸಂಸಾರ ಮಾಡಿದ ತಪ್ಪಿಗಾಗಿ ಆಕೆ ಶಾಪಕೊಟ್ಟಳು. ಇನ್ನು ಮುಂದೆ ತಾನು ಮಾರಿಯಾಗಿ ಬಂದು , ಕೋಣನಾದ ನಿನ್ನನ್ನು ಬಲಿತೆಗೆದುಕೊಳ್ಳುವೆ. ನೀನು ಕೋಣನಾಗಿ ತಳವಾರ ಕೋಣವನ್ನು ಕಡಿಯಲಿ. ನೀನು ಕೋಣದ ಕಾಲಿನ ರುಚಿಯನ್ನು ಬಯಸಿದ ಕಾರಣ ಕೋಣನನ್ನು ಕಡಿದ ತಕ್ಷಣ ಅದರ ಕಾಲನ್ನೇ ಕಡಿದು ಕೋಣನ ಬಾಯಿಗೆ ಇಡಲಿ, ಮೋಸ ಮಾಡಿ ನನ್ನ ಕರುಳನ್ನು ಉರಿಸಿದ ಹಾಗೆ ನಿನ್ನ ಕರಳನ್ನು ಉರಿಸಲಿ, ಪಾಪದ ಪ್ರಾಯಶ್ಚಿತ್ತಕ್ಕಾಗಿ ಬಾಂದರವಿಯ ಅನ್ನವನ್ನು ಎಲ್ಲರಿಗೆ ಹಂಚಲಿ, ಮಾದಿಗರು ಗಟಿಯ ಹೆಂಡವನ್ನು ಕುಡಿದು ಪರಸ್ಪರ ಹೊಡೆದಾಡಿ ಸಾಯಲಿ ಎಂದು ಶಾಪ ಕೊಟ್ಟಳು. ಅಂದಿನಿಂದ ಈ ಜಾತ್ರೆ ರೂಢಿಗೆ ಬಂತೆಂದು ಜನಪದರ ನಿಲುವಾಗಿದೆ.

ಗ್ರಾಮದವರೆಲ್ಲರೂ ಒಟ್ಟಾಗಿ ಈ ಜಾತ್ರೆಯನ್ನು ಮಾಡಬೇಕು. ಒಂದೊಂದು ಕುಲದವರಿಗೆ ಒಂದೊಂದು ಕಾರ್ಯವು ವಂಶಪಾರಂಪತ್ಯವಾಗಿ ಬಂದಿರುತ್ತದೆ. ಊರಿನ ಮುಖ್ಯಸ್ಥ ಪಟೇಲ, ಕುಲಕರ್ಣಿ ಇವರೆಲ್ಲರೂ ಸೇರಿ, ಮಂಗಳವಾರ ಅಥವಾ ಶುಕ್ರವಾರ ಜಾತ್ರೆ ಮಾಡಬೇಕೆಂದು ತೀರ್ಮಾನಿಸಿ, ಒಂದು ವಾರದ ಮುಂಚೆ ತೂಟಿಯಿಂದ ಸಾಡಿಕ್ಕಿಸುತ್ತಾರೆ. ಊರವರೆಲ್ಲರೂ ಅಕ್ಕ ಪಕ್ಕದ ಊರುಗಳಿಂದ ತಮ್ಮ ನೆಂಟರಿಷ್ಟರನು ಬರಮಾಡಿಕೊಂಡು ಜಾತ್ರೆಯ ಸಿದ್ಧತೆ ಮಾಡಿಕೊಳ್ಳುವರು.

ಮಾರಮ್ಮನ ಜಾತ್ರೆಯು ದಿನವೇ ಗುಡಿಯಲ್ಲಿದ್ದ ಮಾರಮ್ಮನ ಮೂರ್ತಿಯನ್ನಾಗಲಿ ಅಥವಾ ಮರದಿಂಗ ್ಮಾರಮ್ಮನ ವಿಗ್ರಹವನ್ನು ತಯಾರಿಸುವರು,

ಒಂದು ಜಾತಿಯ ಮರವನ್ನು ತಂದು ಅಕ್ಕಸಾಲಿಗರಿಗೆ ಕೊಡುವರು. ಅಕ್ಕ ಸಾಲಿಗರು ಮಡಿಯಿಂದ ಉಪವಾಸಮಾಡಿ ಸಂಜೆಯ ವೇಳೆಗೆ ಕುಳಿತ ಭಂಗಿಯ ಮಾರಮ್ಮನ ರೌದ್ರರೂಪದ ವಿಗ್ರಹವನ್ನು ಕೆತ್ತಿ ಬಣ್ಣಗಳಿಂದ ಅಲಂಕರಿಸುವರು.

ರಾತ್ರಿ ತಮಟೆ, ಹಲಗೆ, ಕೊಂಬು, ಕಹಳೆ ಇತ್ಯಾದಿ ವಾದ್ಯಗಳೊಂದಿಗೆ, ಮೆರವಣಿಗೆಯಲ್ಲಿ ಮಾರಮ್ಮನ ವಿಗ್ರಹವನ್ನು ತೆಗೆದುಕೊಂಡು ಸ್ನಾನ ಮಾಡಿಸಿ ಅರಿಸಿನ ಕುಂಕುಮ ಹಚ್ಚಿ ಸರ್ವ ವಿಧದ ಅಲಂಕಾರ ಮಾಡಿ ಹಣ್ಣು ಕಾಯಿಗಳಿಂದ ಪೂಜೆ ಮಾಡುವರು. ಅನಂತರ ಮಡಿವಾಳರು ನಡೆಮಡಿಯನ್ನು ಹಾಸುವರು. ಅದರ ಮೇಲೆ ಮಾರಮ್ಮನ ವಿಗ್ರಹವನ್ನು ಮೆರವಣಿಗೆ ಮಾಡುತ್ತಾ ದೇವಸ್ಥಾನಕ್ಕೆ ತರುವರು. ತಂದೆ ಗಟಿಯನ್ನು ದೇವಸ್ಥಾನಕ್ಕೆ ತರುವರು. ಇದಾದ ಮೇಲೆ ಊರವರೆಲ್ಲರೂ ಮಾರಮ್ಮನ ವಿಗ್ರಹವನ್ನು ಮೆರವಣಿಗೆ ಮಾಡುತ್ತಾ ದೇವಸ್ಥಾನಕ್ಕೆ ತರುವರು. ಇದಾದ ಮೇಲೆ ಊರವರೆಲ್ಲರೂ ಕ್ರಮವಾಗಿ ಆರತಿ ತಂದು ಬೆಳಗುವರು. ಉಪವಾಸವಿದ್ದು ಮಡಿಯಲ್ಲಿ ತಂಬಿಟ್ಟನ್ನು ಮಾಡಿ ಅದರಲ್ಲಿ ದೀಪ ಹಚ್ಚಿ ಅವುಗಳನ್ನು ತಟ್ಟೆಯಲ್ಲಿ ಇರಿಸಿಕೊಂಡು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ತರುವರು. ಇದಾದ ಮೇಲೆ ಊರವರೆಲ್ಲರೂ ಕ್ರಮವಾಗಿ ಆರತಿ ತಂದು ಬೆಳಗುವರು. ಉಪವಾಸವಿದ್ದು ಮಡಿಯಲ್ಲಿ ತಂಬಿಟ್ಟನ್ನು ಮಾಡಿ ಅದರಲ್ಲಿ ದೀಪ ಹಚ್ಚಿ ಅವುಗಳನ್ನು ತಟ್ಟೆಯಲ್ಲಿ ಇರಿಸಿಕೊಂಡು ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಬಂದು ಮಾರಮ್ಮನಿಗೆ ಆರತಿ ಬೆಳಗುವುದು ರೂಢಿ. ವಂಶ ಪಾರಂಪರ್ಯವಾಗಿ ಬಂದ ಕ್ರಮದಲ್ಲೇ ಆರತಿಯನ್ನು ಬೆಳಗಬೇಕೆಂಬುದು ನಿಯಮ. ಮೊದಲು ಊರಿನ ಪಟೇಲರು. ದಳಪತಿ, ಗೌಡರು, ಕುಲಕರ್ಣಿ ಅನಂತರ ಉಳಿದವರು.

ಆರತಿ ಬೆಳಗಿದ ಮೇಲೆ ಹರಕೆ–ಹೊತ್ತವರು ಕುರಿಯನ್ನು ಬಲಿ ಕೊಡುವರು. ಅನಂತರ ಕೋಣವನ್ನು ಬಲಿಕೊಡುವರು. ಮಾರಮ್ಮನಿಗೆ ಬಲಿಕೊಡುವ ಕೋಣ ವಿಶಿಷ್ಟ ಲಕ್ಷಣವನ್ನು ಹೊಂದಿರುತ್ತದೆ. ಕೋಣಕ್ಕೆ ಯಾವುದೇ ರೀತಿಯ ಐಬು

ಇರಬಾರದು. ಬೆನ್ನು ಮತ್ತು ಹಣೆಯ ಮೇಲೆ ಮಾತ್ರ ಸುಳಿ ಇರಬೇಕು. ನಾಲ್ಕು ಕಾಲುಗಳ ಮೇಲೆ ಬಿಳುಪು ಇರಬಾರದು. ಇಂಥ ಕೋಣವನ್ನು ಕೆಲವು ಕಡೆ ಹರಕೆ ಹೊತ್ತವರು ಬಲಿಗಾಗಿ ಇಟ್ಟಿರುತ್ತಾರೆ. ಇಲ್ಲವಾದರೆ ಜಾತ್ರೆ ನಡೆಸುವವರೇ ಚಂದಾ ಹಣ ಹಾಕಿಕೊಂಡು ತಂದಿರುತ್ತಾರೆ. ಜಾತ್ರೆ ಒಂದುವಾರ ಇರುವಾಗಲೇ ಕೋಣಕ್ಕೆ ಬೇವಿನ ಹಾರ ಹಾಕಿ ಮಾದಿಗರು ಕ್ರಮವಾಗಿ ಶಾನುಭೋಗರ ಮನೆಯಿಂದ ಹೊರಟು ಊರಲ್ಲಿ ಮೆರವಣಿಗೆ ಮಾಡುವರು. ಮನೆಯವರು ಕೋಣಕ್ಕೆ ಅರಿಸಿನ ಕುಂಕುಮ ಹಚ್ಚಿ ಎಣ್ಣೆ ಹಾಕಿ ಪೂಜೆ ಮಾಡಿ ಕಾಳು ಕಡ್ಡಿಕೊಡುವರು. ಹೀಗೆ ಸಿದ್ಧಮಾಡಿದ ಕೋಣವನ್ನು ಮಂಗಳ್ವಾರ ರಾತ್ರಿ ಬೆಳಗಿನ ಜಾವದ ಮೊದಲೇ ಮಾರಮ್ಮನಿಗೆ ಬಲಿಕೊಡುವರು. ಆ ವರ್ಷದ ಬಾರಿ ಇರುವ ನಾಯಕ ಅಥವಾ ತಳವಾರ ದೇವರಿಗೆ ಪೂಜೆ ಮಾಡಿ. ಅದರ ತೀರ್ಥವನ್ನು ಕೋಣಕ್ಕೆ ಚಿಮುಕಿಸಿ ಒಂದೇ ಏಟಿಗೆ ಕಡಿಯುವನು. ತಲೆ ಕೆಳಗೆ ಬಿದ್ದ ತಕ್ಷಣ ಅದರ ಬಲಗಾಲನ್ನು ಕತ್ತರಿಸಿ ಕೋಣದ ಬಾಯೊಳಗೆ ಇರಿಸಿ, ಹೊಟ್ಟೆ ಸೀಳಿ ಕರುಳನ್ನು ತೆಗೆದು ಬತ್ತಿ ಮಾಡಿ ಅದರ ಹಣೆಯ ಮೇಲೆ ದೀಪ ಉರಿಸುವರು. ತಟ್ಟೆಯಲ್ಲಿ ಕೋಣನ ರಕ್ತ ಹಿಡಿದು ಬೂದಿಯನ್ನು ಕಲೆಸಿ ಊರ ಗುಡಿಯ ಸುತ್ತ ಚರಗ ಚೆಲ್ಲುವರು. ಆಗ ತಳವಾರ ದೀಪ ಹಚ್ಚಿದ ಕೋಣನ ತಲೆಯನ್ನು ತನ್ನ ತಲೆಯ ಮೇಲೆ ಹೊತ್ತು ಕಚ್ಚಿದ ಮಚ್ಚನ್ನು ಕೈಯಲ್ಲಿ ಹಿಡಿದು ಬೂದಿ ಚೆಲ್ಲುವ ಮಾದಿಗರ ಹಿಂದೆ ಸುತ್ತುವನು. ಕೋಣವನ್ನು ಬಲಿಕೊಡುವಾಗ ಬೇರೆ ಊರಿನವರನ್ನು ಸೇರಿಸುವುದಿಲ್ಲ. ಒಂದು ವೇಳೆ ಕೋಣದ ರಕ್ತವನ್ನು ಮುಟ್ಟಿದರೆ ತಮ್ಮ ಪುಣ್ಯವೆಲ್ಲ ಅವರಿಗೆ ಸೇರಿ ಹೋಗುತ್ತದೆ, ಎನ್ನುವ ನಂಬಿಕೆ ಇದೆ. ಕೋಣದ ಬಲಿ ಮುಗಿದ ನಂತರ ಬಾಂದರಿ ಹೊತ್ತವರು, ಬಾಂದರವಿ ಅನ್ನವನ್ನು ಹನ್ನೆರಡು ಭಾಗ ಮಾಡಿ ಹನ್ನೆರಡು ಅಯಾಗಾರರಿಗೆ ಕ್ರಮವಾಗಿ ಹಂಚುವರು. ಅನುಕ್ರಮವಾಗಿ ಕುಲಕರ್ಣಿ, ಗೌಡ, ರೆಡ್ಡಿ, ಅಕ್ಕಸಾಲಿಗ, ಕುಂಬಾರ, ತಳವಾರ, ಅಗಸ, ಮಾದಿಗರಿಗೆ ದೊರೆವುದು. ಕೊಣದ ಮಾಂಸವನ್ನು ಹನ್ನೆರಡು ಪಾಲು ಮಾಡಿ ಹನ್ನೆರಡು ಅಯಗಾರರಿಗೆ ಹಂಚುವರು. ಎಲ್ಲರಿಗೂ ಹೀಗೆ ಹಂಚಿದ ಅನ್ನ ಮತ್ತು ಮಾಂಸವನ್ನು ಮಾದಿಗರೇ ತೆಗೆದುಕೊಂಡು ಹೋಗುವರು. ಇಷ್ಟೆಲ್ಲಾ ನಡೆಯುವ ಹೊತ್ತಿಗೆ ಬೆಳಗಿನ ಜಾವ ಆಗಿರುತ್ತದೆ. ಗ್ರಾಮದವರೆಲ್ಲರೂ ಮನೆಗೆ ತೆರಳಿ ಹಬ್ಬದ ಅಡಿಗೆ ಮಾಡಿ ಊಟ ಮಾಡುವರು. ಮರುದಿನ ಮಾರಮ್ಮನನ್ನು ಊರ ಗಡಿ ದಾಟಿಸುವ ಕಾರ್ಯ ನಡೆಯುತ್ತದೆ. ಮೊದಲಿನ ಸಂಪ್ರದಾಯದಂತೆ ಪುನಃ ದೇವಾಲಯಕ್ಕೆ ತಂದು ಹಳ್ಳಿಯ ಜನರೆಲ್ಲ ಸೇರಿ ಮೆರವಣಿಗೆಯಲ್ಲಿ ಮಾರಮ್ಮನ ವಿಗ್ರಹವನ್ನು ಕೆರೆ ಅಥವಾ ಹಳ್ಳ-ಕೊಳ್ಳ ಬಾವಿ ಹತ್ತಿರ ತಂದು ಪೂಜೆ ಮಾಡಿ ಅಲ್ಲಿಯೇ ಇಟ್ಟು ಬರುವರು. ಬರುವಾಗ ವಿಗ್ರಹದ ತಲೆಯನ್ನು ತಿರುಗಿಸುವರು. ಅವಳ ತಾಳಿ ಹಾಗೂ ಇತರ ಒಡವೆಗಳನ್ನು ಆಸಾದಿ(ಚಪ್ಪಲಿ ಹೊಲಿಯುವವನು)ಕಿತ್ತುಕೊಳ್ಳುವನು ಇಲ್ಲಿಗೆ ಜಾತ್ರೆ

ಮುಕ್ತಾಯವಾಗುತ್ತದೆ. ಹೀಗೆ ಮೂರು ವರ್ಷಕ್ಕೊಮ್ಮೆ ಜಾತ್ರೆ ನಡೆಸುವುದುರಿಂದ ಮಾರಮ್ಮಳಿಗೆ ತೃಪ್ತಿಯಾಗಿ ಬೇಡಿದ ವರವನ್ನು ಗ್ರಾಮಕ್ಕೆ ತಂದು ಕೊಡುತ್ತಾಳೆಂದು ಜನರ ನಂಬಿಕೆ.

೩:೨:೮: ಚೌಡೇಶ್ವರ ಜಾತ್ರೆ :

ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮಳ್ಳಿ ಗ್ರಾಮದಲ್ಲಿ ಪ್ರತಿ ಎರಡು ವರ್ಷಕ್ಕೊಮ್ಮೆ ನಡೆಯುವ ಗ್ರಾಮದೇವತೆಯಾದ ಚೌಡೇಶ್ವರಿದೇವಿ ಜಾತ್ರೆ ಫಬ್ರವರಿ–ಮಾರ್ಚ್ ತಿಂಗಳಲ್ಲಿ ಆರಂಭವಾಗುತ್ತದೆ. ಊರ ಪ್ರಮುಖರು ಹಾಗೂ ಹರಿಜನರು ಒಟ್ಟಾಗಿ ಚೌಡೇಶ್ವರಿದೇವಿಯ ಮುಖವಾಡಗಳನ್ನು ಧರಿಸಿದ ವ್ಯಕ್ತಿಗಳೊಂದಿಗೆ ಆಡುವ ಬಡಿಗೆ ಆಟ ಹಾಗೂ ಇನ್ನಿೀತರ ಹಲವಾರು ವೈಶಿಷ್ಟ್ಯಗಳಿಂದ ಈ ಜಾತ್ರೆ ತನ್ನದೇ ಆದ ಮಹತ್ವವನ್ನು ಪಡೆದಿದೆ.

ಮಳ್ಳಿಗ್ರಾಮದ ದೇವಸ್ಥಾನದಲ್ಲಿ ಚೌಡೇಶ್ವರ ದೇವಿಯರ ಎರಡು ಮುಖವಾಡಗಳಿವೆ. ಜನರು ಸಣ್ಣ ಚೌಡಮ್ಮ, ದೊಡ್ಡ ಚೌಡಮ್ಮ ಎಂದು ಕರೆಯುವ ವಾಡಿಕೆ. ಈ ಮುಖವಾಡಗಳು ನೀಳನಾಸಿಕ ದೊಡ್ಡಕಂಗಳಿಂದ ಕೂಡಿದ್ದು ಭವ್ಯವಾಗಿದೆಯಲ್ಲದೇ ಕಿರೀಟದಿಂದ ಶಿರೋಭಾಗವು ಅಲಂಕೃತವಾಗಿ ನೋಡಲು ಮನೋಹರವಾಗಿ ಕಾಣಿಸುತ್ತವೆ. ಜಾತ್ರೆ ಇನ್ನು ಹಲವು ದಿನಗಳಿರುವಾಗಲೇ ಒಳ್ಳೆಯ ಮೂಹರ್ತ ನೋಡಿ ದೇವಿಯರ ಮುಖವಾಡಗಳಿಗೆ ಬಣ್ಣ ಮಾಡಲು ಕಲಾಕಾರರನ್ನು ಆಮಂತ್ರಿಸುತ್ತಾರೆ. ಮುಖಕ್ಕೆ ಕೆಂಪುಬಣ್ಣ ಹಚ್ಚುವರು. ಹಣೆಗೆ ಬಂಗಾರದಿಂದ ಕೂಡಿದ ವಿಭೂತಿ ನಾಮ ಕೆಂಪನೆಯ ಹರಳಿನ ಕುಂಕುಮವಿರುತ್ತದೆ. ಹಾಗೂ ನಾಸಿಕಕ್ಕೆ ನತ್ತು ಇರುತ್ತದೆ. ಕಿರೀಟದ ಭಾಗದಲ್ಲಿ ಸುಂದರವಾದ ಚಿತ್ರಗಳನ್ನು ಬಿಡಿಸಿರುತ್ತಾರೆ. ಜಾತ್ರೆಯ ಹಿಂದಿನ ದಿನದ ರಾತ್ರಿ ದೇವಿಯರನ್ನು ರಂಗಸ್ಥಳವೆಂದು ಕರೆಯಲಾಗುವ ಉಸುಕಿನ ತೋಟ ಎಂಬಲ್ಲಿಂದ ಊರ ಪ್ರಮುಖರು ಡೊಳ್ಳು, ಬಾಜಾಬಜಂತ್ರಿ, ಕಹಳೆ, ಬ್ಯಾಂಡು ಮುಂತಾದ ವಾದ್ಯಗಳೊಂದಿಗೆ, ಊರ ಸಮೀಪ ಹಳ್ಳದ ಪಕ್ಕದ ಕಟ್ಟೆಗೆ ಕರೆದುಕೊಂಡು ಬರುತ್ತಾರೆ. ಈ ಕಟ್ಟೆಗೆ 'ಚೌಡಮ್ಮನ ಕಟ್ಟೆ' ಎಂದು ಕರೆಯುತ್ತಾರೆ. ಕಟ್ಟೆಯ ಮೇಲೆ ದೇವಿಯರ ಮುಖಗಳನ್ನು ಪೂಜೆ ಮಾಡುತ್ತಾರೆ. ಆಗಲೇ ಊರಜನರೆಲ್ಲ ಜಮಾಯಿಸುತ್ತಾರೆ. ನಂತರ ಪ್ರಮುಖರಿಬ್ಬರು ದೇವಿಯರ ಮುಖಗಳನ್ನು ಕೈಗಳಲ್ಲಿ ಹಿಡಿದುಕೊಂಡು ಪಕ್ಕದಲ್ಲಿ ಬಿಡುಗತ್ತಿಯವರೊಂದಿಗೆ ಮೆರವಣಿಗೆಯಲ್ಲಿ ದೇವಿಯರ ದೇವಸ್ಥಾನದತ್ತ ಸಾಗುತ್ತಾರೆ. ಜೊತೆಯಲ್ಲಿ ಆಯಾ ಜಾಜ(ಹಕ್ಕು)ದವರು ದೀವಟಿಗೆ ಲಾಠಿ ಇತ್ಯಾದಿ ಹಿಡಿದಿರುತ್ತಾರೆ. ಅಗಸೆ–ಬಾಗಿಲು ಹತ್ತಿರ ಬಂದಾಗ ಎಲ್ಲ ಜನರನ್ನು ಅಗಸೆಯ ಒಳಗೆ ಕಳಿಸುತ್ತಾರೆ.

ನಂತರ ಈ ದೇವಿಯ ಮುಂದೆ ಕುರಿ ಮರಿಯನ್ನು ಬಲಿ ಕೊಡುತ್ತಾರೆ. ಆ ವೇಳೆಯಲ್ಲಿ ಪರ ಊರಿನವರನ್ನು ಹತ್ತಿರಕ್ಕೆ ನಿಲ್ಲಿಸಿಗೊಡುವುದಿಲ್ಲ. ಏಕೆಂದರೆ ಬಲಿಕೊಡುವಾಗ ಅವರಿಗೆ ನೆತ್ತರ ಹನಿ ಸಿಡಿದರೆ ಊರಲ್ಲಿ ಜಗಳವಾಗುತ್ತದೆ ಎಂಬ ನಮಬಿಕೆ ಇದೆ. ಬಲಿಯಾದ ತಕ್ಷಣ ದೇವಿಯನ್ನು ಹಿಡಿದವರು ನಾಮುಂದು ತಾಮುಂದು ಎಂದು ರಭಸದಿಂದ ಮುನ್ನುಗ್ಗುತ್ತಾರೆ. ಆ ಕಾಳರಾತ್ರಿಯಲ್ಲಿ ದೀವಟಿಗೆಯ ಬೆಳಕಿನಲ್ಲಿ ಉಗ್ರರೂಪದಿಂದ ರುದ್ರರಮಣಿಯವಾಗಿ ಕಾಣುವ ದೇವಿಯರ ಕೆಂಪು ಬಣ್ಣದ ಮುಖ್ಗಳು ಅಳ್ಳೆದೆಯವರ ಎದೆ ನಡಗಿಸುತ್ತವೆ.

ಮೆರವಣಿಗೆ ಗುಡಿಯತ್ತ ಸಾಗಿ ಗುಡಿಯಲ್ಲಿ ದೇವಿಯರನ್ನು ಯುದ್ಧಸ್ಥಾನಕ್ಕೆ ಪ್ರತಿಷ್ಠಾಪಿಸುತ್ತಾರೆ. ಆಗಲೇ ರಾತ್ರಿ ಮೀರಿರುತ್ತದೆ. ಮರುದಿನ ಮುಂಜಾನೆ ಸೂರ್ಯ ಹುಟ್ಟುವದರೊಂದಿಗೆ ಜಾತ್ರೆಯ ಸಡಗರ ಆರಂಭವಾಗುತ್ತದೆ. ಊರಿನ ಎಲ್ಲ ಜನ ತಮ್ಮ ಮಡದಿ ಮಕ್ಕಳೊಂದಿಗೆ ಗುಡಿಗೆ ಬಂದ ಪೂಜೆ ಸಲ್ಲಿಸಿ ನೈವೇದ್ಯ ಕಾಯಿ ಕರ್ಪೂರ ಅರ್ಪಿಸಿ ಉಡಿ ತುಂಬಿ ಹೋಗುತ್ತಾರೆ. ಕೆಲವರು 'ದಿಂಡು' ನಮಸ್ಕಾರ ಹಾಕುತ್ತಾರೆ. ಆಗ ಗುಡಿಯಲ್ಲಿ ವಿಪರೀತ ಜನ ಜಂಗುಳಿ. ಮಧ್ಯಾಹ್ನದ ಹೊತ್ತಿಗೆ 'ಬಡಿಗೆ ಆಟ' ಆಡಲು ದೇವಿಯರನ್ನು ಸಿದ್ಧಮಾಡತೊಡಗುತ್ತಾರೆ. ದೇವಿಯರ ಕಿರೀಟಕ್ಕೆ ಹೂವಿನ ಮಾಲೆಗಳಿಂದ ಅಲಂಕರಿಸುತ್ತಾರೆ.

ಕಿರೀಟದ ಹಿಂದುಗಡೆಯಿಂದ ರೇಷ್ಮೆ ಜರೀ ವಸ್ತ್ರ ನೇತಾಡುತ್ತಿರುತ್ತದೆ. ಅಕ್ಕ ತಂಗಿಯರನ್ನು ಬೇಗನೆ ಗುರುತಿಸಲು ಬೇರೆ–ಬೇರೆ ಬಣ್ಣದ ರೇಷ್ಮೆ ವಸ್ತ್ರಗಳನ್ನು ಹಾಕಿರುತ್ತಾರೆ. ಆದರೆ ಮುಖವಾಡಗಳು ಮುಖಕ್ಕೆ ಸುಲಭವಾಗಿ ಧರಿಸಲು ಬರುವಂತೆ ಇವೆ. ಮುಖವಾಡಗಳು ದೊಡ್ಡದಿರುವುದರಿಂದ ಧರಿಸುವ ವ್ಯಕ್ತಿಯ ತಲೆಗೆ ಸರಿ ಹೊಂದಿಸಲು ಅಗತ್ಯವಿರುವಷ್ಟು ರುಮಾಲು ಸುತ್ತುತ್ತಾರೆ. ಕಿರೀಟದ ಹಿಂದಿರುವ ಮೊಳೆಗಳ ಸಹಾಯದಿಂದ ಸ್ವಲ್ಪ ದಪ್ಪನೆ ಹಗ್ಗದಿಂದ ತಲೆಗೆ ಬಿಗಿಯಾಗಿ ಕಟ್ಟುತ್ತಾರೆ.

ಈ ಜಾತ್ರೆಯಲ್ಲಿ ಮುಖವಾಡ ಧರಿಸಿ ಬಡಿಗೆ ಆಟ ಆಡಲು ಎಲ್ಲರಿಗೂ ಅವಕಾಶವಿರುವುದಿಲ್ಲ. ಹೆಚ್ಚಾಗಿ ವಿಶ್ವಕರ್ಮ(ಬಡಿಗ)ಜನಾಂಗಕ್ಕೆ ಸೇರಿದ ಪುರುಷರಿಗೆ ಮಾತ್ರ ಈ ಅವಕಾಶವಿದೆ. ಈ ಮುಖವಾಡ ಧರಿಸುವ ವ್ಯಕ್ತಿಗಳು ಕೆಲವು ವ್ರತ ನಿಯಮಗಳನ್ನು ಪಾಲಿಸುತ್ತಾರೆ.

ಮುಖವಾಡ ಧರಿಸಿದ ವ್ಯಕ್ತಿಗೆ ಹಲವಾರು ಸೀರೆಗಳನ್ನು ಉಪಯೋಗಿಸಿ ನಿರಿಗೆ ಮಾಡಿ ವಿಶೇಷವಾಗಿ ತಯಾರಿಸಿದ ಉಡುಪನ್ನು ಸಣ್ಣ ಹಗ್ಗಕ್ಕೆ ಜೋಡಿಸಿ ಸೊಂಟದ ಸುತ್ತ ಕಟ್ಟುತ್ತಾರೆ. ಇದು ಸರಳವಾಗಿ ಬಿಚ್ಚಿ ಬೇರೊಬ್ಬರಿಗೆ ವರ್ಗಾಯಿಸಲು ಬರುತ್ತದೆ. ಕೈಯಲ್ಲಿ ಬೆಳ್ಳಿಯ ಕಡಗಗಳನ್ನು ಹಾಕಿ ಕೊಂಡಿರುತ್ತಾರೆ. ದೇವಿಯ ಮುಖವಾಡ ಧರಿಸಿದ ವ್ಯಕ್ತಿಯನ್ನು ಈ ಸಂದರ್ಭದಲಲಿ 'ದೇವಿಯೆಂದು' ತಿಳಿದು ಪೂಜ್ಯ ಭಾವನೆಯಿಂದ ಕಾಣುವುದು ಇಲ್ಲಿನ ವಿಶೇಷ.

ಅಲಂಕೃತವಾದ ದೇವಿಯರನ್ನು ಮೊದಲು ಗುಡಿಯಿಂದ ಸಕಲ ಪ್ರಮುಖರು ಮಂಗಳವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ 'ಗೌಡರ ಕಟ್ಟೆ' ಎಂಬಲ್ಲಿಗೆ ಕರೆತಂದು ಕೂಡ್ರಿಸುತ್ತಾರೆ. ಆಗಲೇ ಜನ ಆಟ ನೋಡಲು ಈ ಕಟ್ಟೆಯಿಂದ ಅಗಸೆಬಾಗಿಲಿನವರೆಗೆ ವಿಶಾಲ ಬೀದಿಯ ಪಕ್ಕ ಹಾಗೂ ಮಾಳಿಗೆಯ ಮೇಲೆ ಅಗಾಧ ಪ್ರಮಾಣದಲ್ಲಿ ನೆರೆದಿರುತ್ತಾರೆ. ಸುತ್ತಲಿನ ಹಲವು ಹತ್ತು ಹಳ್ಳಿಗಳ ಜನ ಊರ ಜನರು ಅವರ ಬೀಗರು ಬಗ್ಗರು ಇತ್ಯಾದಿ ಜನರಿಂದ ಜಾತ್ರೆಗೆ ಗದ್ದಲವೋ ಗದ್ದಲ, ಕಡು ಬಿಸಿಲನ್ನು ಯಾರೂ ಲೆಕ್ಕಿಸುವುದೇ ಇಲ್ಲ.

ದೇವಿಯರ ಜೊತೆ 'ಬಡಿಗೆ ಆಟ' ಆಡಲು ಹರಿಜನರಿಗೆ ಆಹ್ವಾನ ಕೊಡಲು ಕೆಲವು ಪ್ರಮುಖರು ಸೇರಿ, ವಾಲೀಕಾರರು ಮತ್ತು ವಾದ್ಯದ ಮೇಳದವರೊಂದಿಗೆ ಅವರ ಓಣಿಗೆ ಹೋಗುತ್ತಾರೆ. ಹರಿಜನ ಜನಾಂಗಕ್ಕೆ ಸೇರಿದ ಎರಡು ಪಂಗಡದವರು ಇಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಆಹ್ವಾನ ಕೊಡುತ್ತಲೇ ನೂರಾರು ಜನ ಹರಿಜನರು ಆಗಲೇ ಸಿದ್ಧಪಡಿಸಿಟ್ಟುಕೊಂಡು ಬಡಿಗೆಗಳನ್ನೆತ್ತಿಕೊಂಡು ಓಡುತ್ತಾ, ಕೂಗು ಹಾಕುತ್ತಾ ಯುದ್ಧಕ್ಕೆ ಬರುವ ಹೋರಾಟದ ಸಿಪಾಯಿಗಳಂತೆ ಆವೇಶದಿಂದ ನುಗ್ಗಿ ಬರುವ ದೃಶ್ಯ ನೋಡಲು ಭಯಂಕರವಾಗಿರುತ್ತದೆ. ಅವರು ಹಣೆಗೆ ಹಳದಿ ಭಂಡಾರ ಬಳಿದುಕೊಂಡಿರುತ್ತಾರೆ. ಆಗ ಎರಡನೆಯ ಅಗಸೆ ಬಾಗಿಲು ಬಳಿ ಊರ ಗೌಡ ಕುಲಕರ್ಣಿಯವರ ಮನೆತನಕ್ಕೆ ಸೇರಿದವರು ಗಂಧದ ಬಟ್ಟಲನ್ನು ಹಿಡಿದು ನಿಂತವರನ್ನು ಮುಟ್ಟುವರೋ ಆ ಪಂಗಡದವರು ತಮ್ಮವರೊಂದಿಗೆ ಅಕ್ಕ ಚೌಡಮ್ಮನ ಜೊತೆ ಬಡಿಗೆ ಆಟ ಆಡುತ್ತಾರೆ.

ಇನ್ನೊಂದು ಪಂಗಡ ಸಣ್ಣ ಚೌಡಮ್ಮನ ಜೊತೆ ಆಡುವುದು ಬಡಿಗೆ ಆಟಕ್ಕೆ ಉಪಯೋಗಿಸುವ ಬಡಿಗೆಗಳು ಜಾಲಿಯದಾಗಿರುತ್ತವೆ. ಮುಳ್ಳುಗಳನ್ನು ತೆಗೆದು ಹೆಚ್ಚು ಕಡಿಮೆ ಒಂದೇ ಎತ್ತರಕ್ಕೆ ಕಡಿದು ಅದಕ್ಕೆ ಕೆಮ್ಮಣ್ಣು ಅಥವಾ 'ಹುರಮಂಜು' ಬಳಿಯುತ್ತಾರೆ. ಹೀಗಿರುವ ಬಡಿಗೆಗಳನ್ನು 'ಬಡಿಗೆ ಆಟ' ಆಡಲು ಬರುವ ಹರಿಜನರು ತಯಾರಿಸುತ್ತಾರೆ.

ಊರಿನ ಗೌಡ ಕುಲಕರ್ಣಿಯವರಲ್ಲದೆ, ಇನ್ನಿತರ ಕೆಲವು ಮನೆತನಗಳ ಜನರಿಗೆ ಮಾತ್ರ ದೇವಿಯರ ಎಡಬಲದಲ್ಲಿ ನಿಂತು ದೇವಿಯನ್ನು ಹಿಡಿದುಕೊಂಡು ಅಡಿಗೆ ಬಡಿಗೆ ಆಟ ಆಡಲು ಅಧಿಕಾರವಿರುತ್ತದೆ.

ಬಡಿಗೆ ಆಟ :

ನಿಯಮಕ್ಕನುಗುಣವಾಗಿ ಆಯಾ ಗುಂಪಿನ ಹರಿಜನರು ದೊಡ್ಡ ಮತ್ತು ಸಣ್ಣ ಚೌಡಮ್ಮನ ಸುತ್ತ ಜಮಾಯಿಸುತ್ತಾರೆ. ಚೌಡಮ್ಮ ದೇವಿಯ ಎದುರುಗಡೆ ನಿಂತ ಬಡಿಗೆ ಹಿಡಿದವರು ವರ್ತುಳಾಕಾರದಲ್ಲಿ ಜಮಾಯಿಸಿಕೊಂಡು ನಿಂತು

ಬಡಿಗೆಗಳನ್ನು ಗಟ್ಟಿಯಾಗಿ ಕೈಯಲ್ಲಿ ಹಿಡಿದುಕೊಂಡು ಅವುಗಳನ್ನು ಒಂದರ ಮೇಲೊಂದು ಒಟ್ಟಾಗಿ ಹಂದರದಂತೆ ರಚಿಸುತ್ತಾರೆ. ಬಡಿಗೆಯ ಹಂದರಕ್ಕೆ ಆಧಾರ ಒದಗಿಸಲು ಒಂದಿಬ್ಬರು ವ್ಯಕ್ತಿಗಳ ದೊಡ್ಡ ಬಡಿಗೆಗಳ ಸಹಾಯಪಡೆದುಕೊಂಡು ಅದರ ಕೆಳಗೆ ಬಗ್ಗಿ ನಿಂತಿರುತ್ತಾರೆ.

ಹಿಂದೆ ನಿಂತವರು ಬಡಿಗೆಗಳನ್ನು ಮೇಲೆತ್ತಿಕೊಂಡು ಕೂಗು ಹಾಕುತ್ತಾ ಹಿಂಬಾಲಿಸುತ್ತಾರೆ. ಆಗ ದೇವಿಯರ ಎಡಬಲದಲ್ಲಿ ದೇವಿಯ ಜೊತೆಗೆ ಬಡಿಗೆ ಇತರ ಆಡುವ ಗೌಡ ಕುಲಕರ್ಣಿಯವರಲ್ಲದೇ ಇತರ ಪಂಗಡದ ಇಬ್ಬರು ತಾವು ಬಂದು ಬಡಿಗೆಯನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ದೇವಿಯ ವಿಶೇಷ ಉಡುಪನ್ನು ಕಟ್ಟಿದ ಹಗ್ಗಕ್ಕೆ ಬಿಗಿಯಾಗಿ ಹಿಡಿದಿರುತ್ತಾರೆ. ದೇವಿಯ ಕೈಗೆ (ಮುಖವಾಡ ಧರಿಸಿದ ವ್ಯಕ್ತಿಯ ಕೈಗೆ) ಒಂದು ಬಡಿಗೆ ಕೊಟ್ಟಿರುತ್ತಾರೆ.

ಬಡಿಗೆ ಆಟ ಆರಂಭವಾದಾಗ ಹಲಿಗೆಗಳ ನಾದಕ್ಕೆ ತಕ್ಕಂತೆ ದೇವಿಯ ಮುಖ ಧರಿಸಿದವರು ಎಡಬಲದವರು ಎದುರಿನ ಬಡಿಗೆಯ ಹಂದರಕ್ಕೆ ಏಟು ಹಾಕುತ್ತಾರೆ. ಏಟಿನ ರಭಸಕ್ಕೆ ಬಡಿಗೆ ಹಂದರ ಕೆಳಕ್ಕೆ ಕುಸಿದಂತೆ ಕಂಡು ಬರುತ್ತದೆ. ಆಗ ಕೂಡಲೆ ಎಲ್ಲರೂ ಇಡೀ ಹಂದರ ಮೇಲಕ್ಕೊತ್ತುತ್ತಾರೆ. ಕೆಳಗೆ ಆಧಾರ ಕೊಟ್ಟುಕೊಂಡು ಬಗ್ಗಿ ನಿಂತವರು ಇದಕ್ಕೆ ಸಹಾಯ ಮಾಡುತ್ತಾರೆ. ಕೆಳಗಿನಿಂದ ಹಂದರ ಮೇಲಕ್ಕೇಳುತ್ತಲೇ ಮತ್ತೇ ಅದಕ್ಕೆ ಏಟು ಬೀಳುತ್ತದೆ. ಅದು ಕೆಳಗೆ ಕುಸಿಯುತ್ತದೆ. ಇದೇ ರೀತಿ ಆಟ ಆಡುತ್ತ ಮುಂದೆ ಸಾಗುವ ಮುಖವಾಡದಾರಿಗಳು ಆಚೆ–ಇಚೆ ತಲೆಯನ್ನು ಲಯಬದ್ಧವಾಗಿ ಹೊಯ್ದಾಡಿಸುತ್ತಾರೆ. ಜೊತೆಗೆ ಎಡ ಬಲಕ್ಕಿರುವವರು ಕಾಲು ಮೇಲೆತ್ತಿ ತಾಳಕ್ಕೆ ತಕ್ಕಂತೆ ಕಾಲೆತ್ತಿ ಕುಣಿಯುತ್ತ ಶಕ್ತಿಯಿಂದ ಏಟು ಹಾಕುವುದು ಕಲಾತ್ಮಕವಾಗಿರುತ್ತದೆ.

ಬಡಿಗೆಯವರ ಹರ್ಷ ಮಿತಿಮಿರಿರುತ್ತದೆ. ಹೀಗೆ ಆಡುತ್ತ ಬಂದು ತುದಿ ಮುಟ್ಟಿದಾಗ ದೇವಿಯ ಮುಖದವರು ವಿರುದ್ಧ ದಿಕ್ಕಿಗೆ ತಿರುಗುತ್ತಾರೆ. ಆಗ ಹಿಂದೆ ಬಡಿಗೆ ಎತ್ತಿಕೊಂಡು ಬಂದವರು ಕೂಡಲೇ ಹಂದರ ರಚಿಸಿ ಆಟಕ್ಕೆ ಅಣಿಯಾಗುತ್ತಾರೆ. ಒಂದು ತುದಿಯಲ್ಲಿ ಅಕ್ಕ ಚೌಡಮ್ಮ, ಆಟ ಆಡುತ್ತಾ ಚಲಿಸತ್ತ ಮತ್ತೊಂದು ತುದಿಗೆ ಬರುವಾಗ ಇನ್ನೊಂದು ತುದಿಯಲ್ಲಿದ್ದ ತಂಗಿ ಚೌಡಮ್ಮ ಆಡುತ್ತ ಈ ಕಡೆಗೆ ಬರುತ್ತಾಳೆ. ಹೀಗೆ ಇಬ್ಬರು ಸಹೋದರಿಯರ ಆಟ ಪ್ರತ್ಯೇಕ ವಾದ್ಯಗಳೊಂದಿಗೆ ದೂರ ಅಂತರದಲ್ಲಿ ನಡೆಯುತ್ತದೆ. ಆಡುತ್ತ ಆಡುತ್ತ ಎರಡು ಗುಂಪುಗಳು ಎದುರು ಬದುರಾಗಿ ಒಂದು ಗುಂಪು ಸರಿದು ಇನ್ನೊಂದು ಗುಂಪು ಮುಂದೆ ಹೋಗಲು ಅನುವುಮಾಡುತ್ತದೆ. ಮುಖವಾಡ ಧರಿಸಿದ ವ್ಯಕ್ತಿಗಳಿಗೆ ದಣಿವಾಧಾಗ ಅವರು ಮುಖವಾಡವನ್ನು ಬೇರೆಯವರಿಗೆ ವರ್ಗಾಯಿಸಿ ವಿಶ್ರಮಿಸಿಕೊಳ್ಳುತ್ತಾರೆ. ಸುಮಾರು ಎಳೆಂಟು ಜನ ಮುಖವಾಡ ಧರಿಸಲು ಸಿದ್ಧರಾಗಿ ನಿಂತಿರುತ್ತಾರೆ,

ದೇವಿಯ ಎಡಬಲದಲ್ಲಿರುವವರು ಸಹ ಬದಲಾಗುತ್ತ ಇತರರಿಗೆ ಅವಕಾಶ ಮಾಡಿಕೊಡುತ್ತಾರೆ. ದಣಿದ ಬಡಿಗೆಯಾಟದವರಿಗೆ ಅವರವರ ಕಡೆಯವರು ನೀರಿನ ವ್ಯವಸ್ಥೆ ಮಾಡಿರುತ್ತಾರೆ. ರುದ್ರರಮಣೀಯವಾದ ವರ್ಣರಂಜಿತವಾದ ಈ ದೃಶ್ಯಗಳನ್ನು ಮಾಡುತ್ತಾ ಕುಳಿತ ಸಾವಿರಾರು ಜನ ತದೇಕಚಿತ್ತದಿಂದ ದೇವಿಯರನ್ನು ದಿಟ್ಟಿಸಿದರೆ ದೃಷ್ಟಿ ತಾಗುತ್ತದೆ ಎಂದು ನಂಬಿಕೆ ಇದೆ. ಅದರಿಂದ ಇದನ್ನು ತಪ್ಪಿಸಲು ಒಂದು ವ್ಯವಸ್ಥೆ ಇದೆ. ಅದೇನೆಂದರೆ ತಳವಾರ ಜನಾಂಗಕ್ಕೆ ಸೇರಿದವರಲ್ಲಿ ಒಂದಿಬ್ಬರು ಬುಟ್ಟಿಗಳಲ್ಲಿ ಕಿಚಡಿಯನ್ನು ಮತ್ತೊಬ್ಬನು ಸಗಣಿಯನ್ನು ತುಂಬಿಕೊಂಡು ಆಗಾಗ ಜನರತ್ತ ಎಸೆಯುತ್ತ ಅಡ್ಡಾಡಿಕೊಂಡಿರುತ್ತಾರೆ.

ಆಗ ತಾನಾಗಿಯೇ ದೃಷ್ಟಿ ಬೇರೆ ಕಡೆ ಹರಿಯುತ್ತದೆ. ಆಟ ನಡೆದಿರುವಾಗ ಆಟಕ್ಕೆ ಅಡಚಣೆಯಾಗದಿರಲೆಂದು ಅಗಸರ ಪೈಕಿಯವನ್ನೊಬ್ಬನು ಕೆಸರಿನಲ್ಲಿ ಅದ್ದಿದ ರಾಡಿಯನ್ನು ಮೈಗೆ ಸುತ್ತಿಕೊಂಡು ರಸ್ತೆಗಡ್ಡವಾಗಿ ಬರುವ ಇತರೇ ಜನರನ್ನು ಒರೆಸುತ್ತಾ ಸಾಗುತ್ತಾನೆ. ಆಗ ಜನ ತಮ್ಮ ಬಟ್ಟೆ ಎಲ್ಲ ಹೊಲಸಾದಿತ್ತೋ ಎಂದು ಅಂಜಿ ದೂರಕ್ಕೆ ಸರಿಯುತ್ತಾರೆ. ಅದರಂತೆ ಕ್ಷೌರಿಕ ಜನಾಂಗಗಕ್ಕೆ ಸೇರಿದವನೊಬ್ಬ ಬೋರೆಗಿಡದ ಕಂಟಿಯನ್ನು ಕಟ್ಟಿಗೆಯ ಕುದುರೆ ಮುಖಾಕೃತಿಗೆ ಸಿಕ್ಕಿಸಿಕೊಂಡು ಬಂದು ಆ ಕಡೆ ಈ ಕಡೆ ಸರಿಸುತ್ತಾ ಜನರನ್ನು ನಿಯಂತ್ರಿಸುತ್ತಾನೆ, ಸಮೀಪಕ್ಕೆ ಬಂದವರ ಬಟ್ಟೆ ಸಿಕ್ಕಿ ಹರಿಯುವ ಸಂಭವವಿರುವುದರಿಂದ ಜನ ರಸ್ತೆಗೆ ಅಡ್ಡಲಾಗಿ ಬರುವುದಿಲ್ಲ. ಈ ದೃಶ್ಯಗಳು ನೋಡಲು ತಮಾಷೆಯಾಗಿರುತ್ತವೆ. ಆಟವು ಹೊತ್ತು ಕಳೆದಂತೆ ಊರ ಬಾಗಿಲು ದಾಟಿ ಸೂರ್ಯ ಮುಳುಗುವವರೆಗೆ ಮುಂದುವರೆಯುತ್ತದೆ. ನಂತರ ಚೌಡಮ್ಮ ದೇವಿಯರು ಚೌಡಮ್ಮನ ಕಟ್ಟೆಗೆ ಬರುತ್ತಾರೆ. ಅಲ್ಲಿಗೆ 'ಬಡಿಗೆ ಆಟ' ಮುಕ್ತಾಯವಾಗುತ್ತದೆ. ನಂತರ ಆ ಬಡಿಗೆಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಜೋಪಾನವಾಗಿ ಜಂತಿಗೆ ಸೇರಿಸುತ್ತಾರೆ. ಕಟ್ಟೆಯ ಮೇಲೆ ಸ್ವಲ್ಪ ಹೊತ್ತು ವಿಶ್ರಾಂತಿಯಾದ ನಂತರ ರಾತ್ರಿಯ ಹೊತ್ತು ಜನ ಮತ್ತೆ ಇಲ್ಲಿ ಸೇರುತ್ತಾರೆ. ಡೊಳ್ಳಿನ ಕುಣಿತ, ಹಾಡು, ಕೊಳಲನಾದ ದೇವರ ಹೇಳಿಕೆಗಳು ನಡೆಯುತ್ತವೆ.

ಮಧ್ಯರಾತ್ರಿಯು ಶಾಂತ ವಾತಾವರಣ–ವನ್ನು ಬೇಧಿಸಿಕೊಂಡು ಬಹುದೂರದವರೆಗೂ ಡೊಳ್ಳಿನ ಕೊಳಲಿನನಾದ ಕೇಳುತ್ತಿರುತ್ತದೆ. ಅಕ್ಕ, ತಂಗಿ ಚೌಡಮ್ಮ ದೇವಿಯರು ಸಕ್ಕಾಸರಿಗೆ, ಮಜ್ಜಿಗೆ ಕಡೆಯುವುದು ಕಡ ಪಲ್ಲೆ ಉಡಿಯುವುದು. ಇತ್ಯಾದಿ ಆಟ ಆಡುತ್ತಾರೆ. ಮಧ್ಯರಾತ್ರಿ ಮೀರಿದ ನಂತರ ದೇವಿಯರನ್ನು ಕರೆದುಕೊಂಡು ಎಲ್ಲರೂ ಸಕಲವಾದ್ಯಗಳೊಂದಿಗೆ ಅಗಸರ ಮನೆಗೆ ಹೋಗುತ್ತಾರೆ.

ಅಲ್ಲಿ ದೇವಿಯವರು ಹೊಸ ವಸ್ತ್ರಧರಿಸುವ ಶಾಸ್ತ್ರ ಮುಗಿಸುತ್ತಾರೆ. ನಂತರ ಅವರು ತಮ್ಮ ತವರುಮನೆ ಎಂದು ಕರೆಯಲಾಗುವ ಕೋರವಾರ ಎಂಬುವರ

ಮನೆಗೆ ಹೋಗುತ್ತಾರೆ. ಅಲ್ಲಿ ಪಾಯಸದ ಊಟ ವಸ್ತ್ರ, ಮುಗಿಸಿ, ನಂತರ ಗೌಡರ ಮನೆಗೆ ತೆರಳುತ್ತಾರೆ. ಅಲ್ಲಿಯೂ ಸಹ ಪೂಜೆ ನೈವೇದ್ಯ ಇತ್ಯಾದಿ ಶಾಸ್ತ್ರಗಳನ್ನು ಮಾಡಲಾಗುತ್ತದೆ. ಮುಖವಾಡಗಳನ್ನು ಬಿಚ್ಚಿ ನೈವೇದ್ಯವನ್ನು ಸ್ವೀಕರಿಸುತ್ತಾರೆ. ಇಷ್ಟೋತ್ತಿಗೆ ನಸುಕು ಹರಿಯಲು ತೊಡಗಿರುತ್ತದೆ. ಕೊನೆಯದಾಗಿ ಕುಲಕರ್ಣಿಯವರ ಮನೆಗೆ ಬರುತ್ತಾರೆ. ತಲೆಬಾಗಿಲಲ್ಲಿ ಕಾಲು ತೊಳೆದು, ಆರತಿಯೂ ಮಾಡಿ, ಈಡುಗಾಯಿ ಒಡೆದು ದೇವಿಯರನ್ನು ಸ್ವಾಗತಿಸಲಾಗುತ್ತದೆ. ಅವರಿಗೆ ಕುಳಿತುಕೊಳ್ಳಲು ಗೋದಿಯ ಚೀಲವೇ ಆಗಬೇಕು. ನಂತರ ಪೂಜೆ ನೈವೇದ್ಯ, ಕಾಯಿ ಕರ್ಪೂರ ಉಡಿ ತುಂಬುವುದು ನಡೆಯುತ್ತದೆ. ಇದೆಲ್ಲ ಮುಗಿದ ನಂತರ ದೇವಿಯರನ್ನು ಗುಡಿಯ ಕಡೆಗೆ ಕರೆದುಕೊಂಡು ಬರುತ್ತಾರೆ.

ಹಿಂದೆ ಕಳಿಸಿದವರು ಹಿಂಬಾಲಿಸುತ್ತಾರೆ. ದಾರಿಯಲ್ಲಿ ಭಕ್ತಾದಿಗಳು ನಿಂತುಕೊಂಡು ಕಾಳು ತೊಳೆದು ಪೂಜಿಸುತ್ತಾರೆ. ದೇವಿಯರೊಂದಿಗೆ ಎಲ್ಲ ಜನ ಗುಡಿಗೆ ಬರುವಷ್ಟರಲ್ಲಿ ಚುಮ–ಚುಮ ಬೆಳಕು ಹರಿದಿರುತ್ತದೆ. ಗುಡಿಯ ಅಂಗಳದಲ್ಲಿ ಸ್ವಲ್ಪ ಹೊತ್ತು ಡೊಳ್ಳಿನವರ ಕುಣಿತವಾದ ನಂತರ ಧರಿಸಿದ ಮುಖವಾಡಗಳನ್ನು ತೆಗೆದು ಎಂದಿನಂತೆ ಮತ್ತೆ ದೇವಸ್ಥಾನದಲ್ಲಿ ಸ್ವಸ್ಥಾನದಲ್ಲಿ ಪ್ರತಿಷ್ಠಾಪಿಸುತ್ತಾರೆ. ಇದೆಲ್ಲ ಮುಗಿದ ನಂತರ ಊರಿನ ಎಲ್ಲ ಪ್ರಮುಖರಿಗೆ ಕಾಯಿ ಪ್ರಸಾದ ವಿತರಣೆಯಾಗುತ್ತದೆ. ಎಲ್ಲ ಜಾಜ(ಹಕ್ಕು)ದವರಿಗೆ ಕಾಯಿ ಪ್ರಸಾದ ಕೊಡಲ್ಪಡುತ್ತದೆ. ಊರ ಪ್ರಮುಖರು ಕಳಸ ಹಿಡಿದುಕೊಂಡು ಬಂದ ಹೆಣ್ಣು ಮಕ್ಕಳು ವಾದ್ಯದವರೊಂದಿಗೆ ತಮ್ಮ ತಮ್ಮ ಮನಗೆ ಹೋಗುತ್ತಾರೆ. ಆವಾಗಲೇ ಜಾತ್ರೆ ಮಂಗಲವಾಗುತ್ತದೆ. ಗ್ರಾಮದ ಎಲ್ಲ ಜನಾಂಗಕ್ಕೆ ಸೇರಿದವರಿಗೆ ಈ ಜಾತ್ರೆಯಲ್ಲಿ ಒಂದೊಂದು ಹಕ್ಕಿರುತ್ತದೆ. ಅದನ್ನು ಎಲ್ಲರೂ ಚಾಚು ತಪ್ಪದೇ ಪಾಲಿಸುತ್ತಾರೆ. ಚೌಡೇಶ್ವರಿ ಜಾತ್ರೆ ಭಾವೈಕ್ಯತೆಯ ಪ್ರತೀಕ ಅಲ್ಲದೇ ಬಡಿಗೆ ಆಟ ದುಷ್ಟಶಕ್ತಿಗಳ ಮರ್ದನ, ಶಿಷ್ಟ ಶಕ್ತಿಗಳ ಅಭಯವನ್ನು ಸಂಕೇತಿಸುತ್ತದೆ. ಈ ಜಾತ್ರೆ ಜನಪದ ಸೊಗಡನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿದೆ.

೩:೨:೯: ಎಲ್ಲಮ್ಮ ಜಾತ್ರೆ :

"ಶಕ್ತಿ ದೇವತೆಯಾದ ಪಾರ್ವತಿಯ ಒಂದು ರೂಪವೇ (ಎಲ್ಲ + ಅಮ್ಮ) ಎಲ್ಲಮ್ಮ. ಎಂಬ ಅರ್ಥದ ವಿವರಣೆ ನಿಘಂಟದಲ್ಲಿದೆ. (ನರಸಿಂಹಚಾರ: ೧೯೭೦:೧೧೧೦೭)ಬೀದರ ತಾಲ್ಲೂಕಿನ ಬೆನಕನಹಳ್ಳಿಯಲ್ಲಿ ಈ ಅಮ್ಮನ ಹಳೆಯ ದೇವಾಲಯವಿದೆ. ಕರ್ನಾಟಕದಲ್ಲಿ ಅಲ್ಲದೆ ಮಹಾರಾಷ್ಟ್ರ, ಆಂಧ್ರಪ್ರದೇಶದ ಭಕ್ತಾದಿಗಳಿಗೆ ಇಷ್ಟಾರ್ಥಗಳನ್ನು ಕೊಡುವವಳೆಂದು ಹೆಸರಾಗಿರುವ ಎಲ್ಲಮ್ಮಗಳಿಗೆ ಎಲ್ಲ ಜಾತಿ ಮತ ಪಂಥದಲ್ಲೂ ಭಕ್ತರ ವರ್ಗವಿದೆ. ಪ್ರತಿ ಮಂಗಳವಾರ, ಶುಕ್ರವಾರಗಳಂದು

ಜಾತ್ರೆ ಜರುಗುತ್ತದೆ. ಅಂದು ವಿಶೇಷ ಪೂಜೆ ಪುರಸ್ಕಾರಗಳಾಗುವುದರಿಂದ ಜನಸಂದಣಿಯು ಹೆಚ್ಚುತ್ತದೆ. ಕುರಿ–ಕೋಳಿ ಆಡು ಹೋತಗಳ ಬಲಿ ಪದ್ಧತಿ ಇಲ್ಲಿದೆ.

ಎಲ್ಲಮ್ಮ ತಾಯಿ
ಎಲ್ಲರಕ್ಕಿಂತ ದೊಡ್ಡಾಕಿ
ಬೇಡಿದ ವರವ ಕೊಡಾಕಿ

ಎನ್ನುವ ನಂಬಿಕೆ ಜನಪದರದು. ಪ್ಲೇಗು, ಸಿಡುಬು, ಕಾಲರಾ ಮುಂತಾದ ರೋಗಗಳು ಕಾಣಿಸಿಕೊಂಡರೆ, ಭಕ್ತರು ಎಲ್ಲಮ್ಮಳಿಗೆ ಹರಕೆಗೈದು ಮಂಗಳವಾರ ಅಥವಾ ಶುಕ್ರವಾರದಂದು ತಾಯಿಯ ದರ್ಶನ ಪಡೆದು ಹರಕೆ ಕಾರ್ಯ ಮುಗಿಸಿ ಕೊಳದಲ್ಲಿ ಮಿಂದು ತಮ್ಮ ತಮ್ಮ ಮನೆಗೆ ಹೋಗುವ ವಿಶಿಷ್ಟ ಪರಿಪಾಠ ಇಲ್ಲಿದೆ.

ಪ್ರತಿ ಶುಕ್ರವಾರ, ಮಂಗಳವಾರ, ಅರೆಕಾಲಿಕ ಚಿಕ್ಕಪುಟ್ಟ ಅಂಗಡಿಗಳು ತಲೆ ಎತ್ತುತ್ತವೆ. ಸಾವಿರಾರು ಜನರು ತಮ್ಮ ತಮ್ಮ ಹರಕೆ–ಅರ್ಚನೆ ಮುಂತಾದ ಧಾರ್ಮಿಕ ವಿಧಿಗಳಲ್ಲಿಯೇ ತೊಡಗಿರುತ್ತಾರೆ. ಕೆಲವರು ತಾಯಿಯ ದೇಗುಲ ಎದುರಿನಲ್ಲಿಯೇ ಅನ್ನ, ಚಪಾತಿ, ಸಾರು ಅಡಿಗೆ ಮಾಡಿ ತಾಯಿಗೆ ಅರ್ಪಿಸಿ ಊಟ ಮಾಡುತ್ತಾರೆ. ಇನ್ನುಳಿದವರು ಮನೆಯಿಂದ ತಂದ ಬುತ್ತಿಯನ್ನು ಬಿಚ್ಚಿ ಊಟ ಮಾಡುವರು.

ಸಾಮಾಜಿಕ, ಧಾರ್ಮಿಕ, ನೈತಿಕ ದೃಷ್ಟಿಯಿಂದ ಎಲ್ಲಮ್ಮ ತುಂಬಾ ಪ್ರಭಾವ ಬೀರಿದ ಶಕ್ತಿದೇವತೆಯಾಗಿದ್ದಾಳೆ. ಅನೇಕ ಜಾತಿಯವರು ಪೂಜಿಸುತ್ತಾರೆ. ವೀರಶೈವರು, ಹರಿಜನರು, ಮರಾಠಿಗಳು ಎಲ್ಲಮ್ಮ ತಾಯಿಯ ಭಕ್ತರಾಗಿ ಜೋಗಯ್ಯ (ಭೂತೇರ) ಆಗಿ ದೀಕ್ಷೆ ಪಡೆದುಕೊಳ್ಳುತ್ತಾರೆ. ಅವರು ಶಾಸ್ತ್ರೋಕ್ತವಾಗಿ ಮದುವೆಯಾಗುವಂತಿಲ್ಲ. ದೇವದಾಸಿಯರಂತೆ ನಡೆದುಕೊಳ್ಳಲು ಅವಕಾಶವಿದೆ.

೩:೨:೧೦: ಮಾಪೂರಿ ತಾಯಿಯ ಜಾತ್ರೆ :

ಆಳಂದ ತಾಲ್ಲೂಕಿನ ಚಿಂಚನಸೂರ ಹಳ್ಳಿ ನೋಡಬೇಕಾದ ಸ್ಥಳ. ಇದಕ್ಕೆ ಮೊದಲು 'ಚೊಂಚುರು' ಎನ್ನುತ್ತಿದ್ದರಂತೆ, ಮಹಿಷಾಸುರ ಮರ್ದಿನಿ ಅಸುರನ ಕೈ ಕತ್ತರಿಸಿದುದರಿಂದ ಚೊಂಚ ಅಸೂರಿನ ಊರು ಚಿಂಚನಸೂರಾಗಿದೆಯಂತೆ. ಊರಿನಿಂದ ಒಂದೂವರೆ ಕಿ.ಮೀ. ಅಂತರದಲ್ಲಿ ಮಾಪುರಿ ತಾಯಿಯ ದೇವಾಲಯವಿದೆ. ಈ ತಾಯಿಯ ಪುರಾಣ ಕಥೆ ಹೀಗಿದೆ.

'ತಾಯಿ ಭಾಯಿ ಎಂಬ ಬ್ರಾಹ್ಮಣ ಶರಣೆಯ ಮತದ್ವೇಷವನ್ನುಳಿಸಲು ಕುಷ್ಠರೋಗಿಯನ್ನಾಗಿ ಮಾಡಿ, ಮರಳಿ ಪಶ್ಚಾತ್ತಾಪದಿಂದ ಶರಣು ಬಂದ ಶರಣೆಗೆ

ವಿದೇಹತ್ವದ ಬೋಧಾಮೃತವನ್ನುಣಿಸಿ ಶಾಂತಳನ್ನಾಗಿ ಮಾಡಿ ಕೊನೆಗೆ ನೀನು ಇಲ್ಲಿಯೇ 'ಮಾಪುರಿ ತಾಯಿ' ನಾಮದಿಂದ ಜಗಜ್ಯೋತಿದೇವಿಯರಾಗಿ ಮೆರೆ' ಎಂದು ಶಿವನು ಹರಸಿದನಂತೆ (ಶಿವಾಚಾರ್ಯ:೧೯೫೬:೯೪–೯೭) ಅವಳೇ (ತಾಯಿಭಾಯಿ) ಮಾಪುರಿತಾಯಿ. ಈಗ ಮಾಪುರಿ ತಾಯಿಯ ದೇವಾಲಯ ಆಧುನಿಕ ಮಾದರಿಯಲ್ಲಿ ಕಟ್ಟುವ ಕೆಲಸ ನಡೆದಿದೆ. ಪಂಥ ಮತ ಧರ್ಮ, ಭೇಧ ಮಾಡದೇ ಎಲ್ಲರ ತಾಯಿಯೇ ಆದುದರಿಂದ ಭಕ್ತಿಯ ಮಹಾಪೂರವೇ ಹರಿಯುವುದರಿಂದ "ಮಹಾ ಪೂರ ತಾಯಿ" ಎಂದು ಕರೆಯುತ್ತಾರೆ.

ಈಗ ಗರ್ಭಗುಡಿಯಲ್ಲಿಯೇ ಹುಣಸೆ ಮರವಿದೆ, ದೇವಿ ಮುಖವಿದೆ. ಮುಂದೆ ಐದು ಮಕ್ಕಳ ಮೂರ್ತಿ ಇದೆ. ಗುಡಿಯ ಮುಂದೆ ಹೋಮದ ಕಟ್ಟೆ ಇದ್ದು ಅಲ್ಲಿ ಬೆರಳಿನಿಂದ ಎತ್ತುವ ಕಲ್ಲು ಇಟ್ಟಿದ್ದಾರೆ. ಕಾರ್ಯಗಳು ಬೇಗ ಆಗುವಂತಿದ್ದರೆ, ಆ ಕಲ್ಲು ಹಗುರವಾಗಿ ಮೇಲಕ್ಕೆ ಏಳುತ್ತದೆ. ಇಲ್ಲದಿದ್ದರೆ ಭಾರವಾಗಿರುತ್ತದೆಂದು ಜನರು ನಂಬಿ, ತಮ್ಮ ಅದೃಷ್ಟವನ್ನು ಪರೀಕ್ಷಿಸುತ್ತಾರೆ. ಬಸವಿ ಬಿಡುವ, ಜೋಗತಿ ಬಿಡುವ ಸಂಪ್ರದಾಯ ಈ ದೇವಿಯ ಹೆಸರಿನ ಮೇಲೆ ನಡೆದು ಬಂದಿದೆ.

ಅಕ್ಷತ್ತದಿಗೆ ಅಮವಾಸ್ಯೆಯಿಂದ ಬಾದಾಮಿ ಅಮವಾಸ್ಯೆಯವರೆಗೆ ಮಾಪೂರಿ ತಆಯಿಯ ಗುಡಿಯ ಮುಂದೆ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಜಾತ್ರೆ ನಡೆಯುತ್ತದೆ. ಹರಕೆ ಹೊತ್ತು ಬಂದ ಸ್ತ್ರೀ–ಪುರುಷರ ಜಾತ್ರೆಯೇ ಅಲ್ಲಿ ನೆರೆದಿರುತ್ತದೆ. ಜಾತ್ರೆಯ ಸಮಯದಲ್ಲಿ ಹರಕೆ ಹೊತ್ತು ಬಂದ ಸ್ತ್ರೀ–ಪುರುಷರು ಬೇವಿನ ಅಥವಾ ಲಕ್ಕಿಯ ತಪ್ಪಲನ್ನು ನಯವಾಗಿ ಜೋಡಿಸಿ ದಾರ–ಹಗ್ಗದಿಂದ ಕಟ್ಟಿ ಅಂಗಾಂಗಗಳನ್ನು ಮುಚ್ಚಿಕೊಂಡು ಅನುಕೂಲಕರ ವಸ್ತ್ರದ ಸಾಧನೆಯನ್ನಾಗಿ ಮಾಡಿಕೊಂಡು ಸಲ್ಲಿಸುವ ಸೇವೆಗೆ "ಊಟಗಿ ಸೇವೆ" ಎಂದು ಮೈ ಮೇಲೆ ಒಂದು ಚೂರು ಬಟ್ಟೆಯನ್ನಿಡದೇ ದಿಟ್ಟ–ದಿಗಂಬರವಾಗಿ ಮೈ ತುಂಬಾ ಭಂಡಾರ ಬಳಿದುಕೊಂಡು ಸಲ್ಲಿಸುವ ಸೇವೆಗೆ 'ಬತ್ತಲೆ ಸೇವೆ" ಎಂದು ಕರೆಯುವ ಸಂಪ್ರದಾಯವಿದೆ. ಇದು ಅವರವರ ಹರಕೆ, ಸ್ವ–ಇಚ್ಛೆ ಅಭಿರುಚಿಗಳಿಗನುಗುಣವಾಗಿ ನಡೆಯುತ್ತದೆ. ಇದನ್ನು ನೋಡಲು ಸಾವಿರಾರು ಜನ ಭಕ್ತರು ಬಂದಿರುತ್ತಾರೆ. ಜಾತ್ರೆಯ ಸಮಯದಲ್ಲಿ ಹರಕೆಯವರು ಕುರಿ, ಆಡು, ಕೋಳಿ ಬಲಿ ಅರ್ಪಿಸುವ ಪದ್ಧತಿ ಇದೆ.

ಅರಿಸಿಣ ಹಾಗೂ ಕುಂಕುಮದಿಂದ ಅರ್ಚನೆ ನಡೆಯುತ್ತದೆ. ತಾಯಿ ಕುರಿತು ಹಾಡುಗಳನ್ನು ಹಾಡುವರು. ಕಲುಬುರ್ಗಿ ಜಿಲ್ಲೆಯ ಗ್ರಾಮ ದೇವತೆಗಳಲ್ಲಿಯೇ ಅತ್ಯಂತ ಪ್ರಮುಖ ಜಾತ್ರೆ ಎನಿಸಿದೆ. ಬೀದರ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಇತರೆ ಸ್ಥಳಗಳಿಂದ ಭಕ್ತರು ಅಪಾರ ಸಂಖ್ಯೆಯಲ್ಲಿ ಆಗಮಿಸುವ ಪರಿಪಾಠವಿದೆ. ಹರಕೆಯವರು ಬಟ್ಟೆಯನ್ನು ತೊಡದೆ ಮೈ ತುಂಬ ಭಂಡಾರ ಬಳಿದುಕೊಂಡು, ಬೇವಿನ ಸೊಪ್ಪನ್ನು ಸೊಂಟಕ್ಕೆ ಕಟ್ಟಿಕೊಂಡು ಮೆರವಣಿಗೆ ಮಾಡುತ್ತಾರೆ. ಹೊಟ್ಟೆ

ಹೊರೆಯಲು ಅಲ್ಲಲ್ಲಿ ಚದುರಿ ಹೋದ ಜೋಗತಿಯರು ಜಾತ್ರೆಯ ಕಾಲಕ್ಕೆ ತಪ್ಪದೇ ಬಂದು ಸೇವೆ ಸಲ್ಲಿಸುತ್ತಾರೆ. ಮಾಪೂರ ತಾಯಿ ಕುರಿತು ಜೋಗತಿಯರು ಹಾಡುಗಳನ್ನು ಹಾಡಿ ನಲಿದಾಡುವರು.

ಹಲವಾರ ವರ್ಷಗಳಿಂದ ನಡೆದು ಬಂದ ಈ ಜಾತ್ರೆ ತನ್ನದೇ ಆದ ಪರಂಪರೆ ಪದ್ಧತಿ ಉಳಿಸಿಕೊಂಡಿವೆ. ಉತ್ಸವ ತಾಂತ್ರಿಕ ಹಿನ್ನಲೆಯಲ್ಲಿ ನಡೆಯದೆ ಜಾನಪದ ಐತಿಹ್ಯದ ಪುನರಾವರ್ತನೆಯೆನ್ನುವ ರೀತಿಯಲ್ಲಿ ನಡೆಯುತ್ತದೆ.

೩:೨:೧೧: ಹುಲಿಗೆಮ್ಮ ಜಾತ್ರೆ :

ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಮುನಿರಾಬಾದ ಹಿಂದೆ ಹಲಗಿ ಗ್ರಾಮವೆಂದೇ ಪ್ರಸಿದ್ಧ ಪಡೆದಿತ್ತು. ಇಲ್ಲಿರುವ ಪೌರಾಣಿಕ ದೇವತೆ ಹುಲಿಗೆಮ್ಮ ದೇವಸ್ಥಾನ ಸುಮಾರು ಎಂಟುನೂರು ವರ್ಷ ಪ್ರಾಚೀನವೆಂದು ಹೇಳಲಾಗುತ್ತಿದೆ. ಈ ಪುಣ್ಯ-ಕ್ಷೇತ್ರ ತುಂಗಭದ್ರ ನದಿ ತಟದಲ್ಲಿದ್ದು ಹುಲಿಗೆಮ್ಮ ದೇವಿಯ ದೇವಸ್ಥಾನದ ಹೊರನಾಡು ಬಾವುಕರನ್ನು ಆಕರ್ಷಣೆ ಜೊತೆಗೆ ಪರಮ ಪವಿತ್ರವೆನಿಸಿದೆ. ಪ್ರತಿವರ್ಷ ವೈಶಾಖ ಮಾಸದಲ್ಲಿ ಮೂರು ದಿವಸ ಹುಲಿಗೆಮ್ಮ ದೇವಿಯ ಉತ್ಸವ ಅತ್ಯಂತ ವೈಭವದಿಂದ ನಡೆಯುತ್ತದೆ. ತಂಡೋಪ ತಂಡವಾಗಿ ಸಹಸ್ರಾರು ಭಕ್ತರು ಸೇರಿ ತಮ್ಮ ಕಾಣಿಕೆ ಹರಕೆ ಸೇವೆ ಸಲ್ಲಿಸಿ ಧನ್ಯರಾಗುತ್ತಾರೆ.

ಜಾತ್ರೆ ಪ್ರಾರಂಭ ದಿನದಂದು ಸಂಜೆ ಎಂಟು ಗಂಟೆ ಸುಮಾರಿಗೆ ಕಂಕಣಧಾರಣ ಕೊಂಡದ ಪೂಜೆ ರಾತ್ರಿ ಮೂರು ಗಂಟೆಗೆ ಗಂಗಾದೇವಿಯ ಅರ್ಚನೆ ಅನಂತರ ಶ್ರೀ ದೇವಿಯ ಪ್ರಸಾದ ಕಟ್ಟುವ ಕಾರ್ಯಕ್ರಮ ಅನಂತರ ಬಾಳಿದಂತೆ ಆರೋಹಣವಿರುತ್ತದೆ. ಮುಂಜನೆ ಪಾಯಸದ ದಾಸೋಹ ಇದಾದನಂತರ ಅಗ್ನಿಕೊಂಡ ಏರ್ಪಡಿಸುತ್ತಾರೆ. ರಾತ್ರಿ ಹೊತ್ತು ಸಾಲಾಗ ಅನ್ನೋ ಮಠದಲ್ಲಿ ಪಡಗದ ಪೂಜೆ ನಡೆಯುತ್ತದೆ. ಹಿಂದಿನಂತೆ ಗಂಗಾದೇವಿಯ, ಪೂಜೆ, ಪ್ರಸಾದ ಕಟ್ಟುವುದು, ಪಾಯಸದ ನಿವೇದನೆ ಅಗ್ನಿಕೊಂಡಾ ಮುಂತಾದ ಪದ್ಧತಿಗಳು ಯಥಾ ಪ್ರಕಾರವಾಗಿರುತ್ತದೆ.

ಜಾತ್ರೆಯ ಕೊನೆಯ ದಿವಸ ಸಂಜೆ ರಥೋತ್ಸವ ಮತ್ತು ಅಕ್ಕಿಪಡಿ, ಬಾಳಿದಂಡಿಗೆ ಪಾಯಸ, ಅಗ್ನಿಕೊಂಡ ಮುಂತಾದ ಕಾರ್ಯಗಳು ಜರುಗುತವೆ. ನೋಡಲು ಬಹು ಆಕರ್ಷಣೀಯ ಎನಿಸಿದೆ. "ಅಕ್ಕಿ-ಪಡಿ" ಪದಕ್ಕೆ ಅತಿಥಿ ಮುಂತಾದವರಿಗೆ ಅಡಿಗೆ ಮಾಡಿಕೊಂಡು ಊಟಮಾಡುವುದಕ್ಕಾಗಿ ಕೊಡುವ ಅಕ್ಕಿ ಬೇಳೆ ಮುಂತಾದ ಪದಾರ್ಥಗಳು, ಸ್ವಯಂ ಪಾಕದ ಸಾಮಗ್ರಿ ಸೀದಾ ಎನ್ನುವ ಅರ್ಥ ವಿವರಣೆ ಕನ್ನಡ ನಿಘಂಟಿನಲ್ಲಿದೆ. (ನರಸಿಂಹಚಾರ:೧೯೭೦:೬೧) ಜಾತ್ರೆಗೆ ಬಂದ ಭಕ್ತರಿಗೆ ಈ ವ್ಯವಸ್ಥೆ ಉಂಟು.

ಉತ್ಸವದ ಮೇಲ್ವಿಚಾರಣೆ ಸ್ಥಳೀಯ ತಹಶಿಲ್ದಾರರು ಹಾಗೂ ಸಹಾಯಕ ಆಯುಕ್ತರು ನೋಡಿಕೊಂಡು ಹೋಗುವರು. ಜಾತ್ರೆ ಇನ್ನು ಹತ್ತು ಹದಿನೈದು ದಿನಗಳ ಪೂರ್ವದಲ್ಲಿಯೇ ಕುಶಲ ಕರ್ಮಿಗಳನ್ನು ನಿಯಮಿಸಿ ವರ್ಣಮಯವಾಗಿ ಕಾಣುವಂತೆ ದೇವಾಲಯ ಅಲಂ˜ ,ಸುತ್ತಾರೆ. ಜಾತ್ರೆಗೆ ಬಂದ ಭಕ್ತರಿಗಾಗಿ ಛತ್ರ ತುಂಬ ವಿಶಾಲವಾಗಿದೆ. ಶ್ರೀದೇವಿಯ ಪೂಜೆ ಪ್ರತಿವರ್ಷ ಒಂದು ದಿನ ನೆರವೇರಿಸಿ ಪ್ರಸಾದ, ಅಂಚೆ ಮುಖಾಂತರ ಕಳಿಸುವ ನಿಯಮ ಇದೆ. ಇಚ್ಛೆಯುಳ್ಳ ಭಕ್ತರಿಗಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಶ್ರೀದೇವಿಯ ಜಾತ್ರೆಗೆ ಒಂದೇ ಸಲ ಭಕ್ತ ಕಾಣಿಕೆ ರೂ. ೩೦೧-೦೦ ಜಮಾ ಮಾಡುವ ಅವಕಾಶ ಕಲ್ಪಿಸಿದ್ದಾರೆ. ಜಾತ್ರೆ ಮುಗಿದ ನಂತರ ಪ್ರಸಾದ ಮನೆಗೆ ಕಳಿಸುತ್ತಾರೆ.

೩:೨:೧೨: ಕರೆಮ್ಮ ಜಾತ್ರೆ :

ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನಲ್ಲಿ ವರ್ಷಕ್ಕೊಂದು ಬಾರಿ ಜನವರಿ ತಿಂಗಳಲ್ಲಿ ಕರೆಮ್ಮ ಜಾತ್ರೆ ಅತಿ ಭರಾಟೆಯಿಂದ ನೆರವೇರುತ್ತದೆ. ಗಾಳಿ ಪೀಡೆ ಮಾಟ ಇವುಗಳ ನಿವಾರಣೆಗಾಗಿ ಪೂಜಿಸುವ ಒಂದು ಪೌರಾಣಿಕ ದೇವತೆಯ ಕಥೆಯಾಗಿದೆ.

ದೇವತೆಯಾದ ಕರೆಮ್ಮ ಬ್ರಾಹ್ಮಣ ಹುಡುಗಿ. ಮದುವೆಗೆ ಮುಂಚೆ ಋತುಮತಿಯಾಗಿದ್ದರಿಂದ ಅವರ ಕಾಲ ಸಂಪ್ರದಾಯದಂತೆ, ಕಣ್ಣು ಕಟ್ಟಿ ಕಾಡಿಗೆ ಬಿಟ್ಟರು. ಕಾಡಿನಲ್ಲಿ ಯುವಕನ ಪರಿಚಯವಾಗಿ ಅವನಲ್ಲಿಯೇ ಅನುರಕ್ತಳಾದಳು. ಅವರಿಗೆ ಒಂದು ಗಂಡು ಮಗು ಹುಟ್ಟಿತು. ಮಗುವು ಪ್ರತಿದಿನವೂ ಮುತ್ತುಗದ ಎಲೆಯಲ್ಲಿ ಚಪ್ಪಲಿ ಹೊಲೆದು ಆಡುವುದನ್ನು ಕರೆಮ್ಮ ಗಮನಿಸಿದಳು. ನಿಜಸ್ಥಿತಿಯನ್ನು ತಿಳಿಯಲು ಈ ಬಗ್ಗೆ ಗಂಡನನ್ನು ವಿಚಾರಿಸಿದಳು. ಆತ ತಾನು ಹರಿಜನನೆಂದು ಚಪ್ಪಲಿ ಹೊಲಿಯುವುದು ತನ್ನ ಕುಲ ಕಸುಬು ಎಂದು ಹೇಳಿದನು. ಇದನ್ನು ತಿಳಿದ ಕರಿಯಮ್ಮ ಪಶ್ಚಾತ್ತಾಪದಿಂದ ಬೆಂಕಿಗೆ ಬಿದ್ದು ಪ್ರಾಣ ಬಿಟ್ಟಳು. ತನ್ನ ಮಗನನ್ನು ಕುರಿತು ತಾನು ಇಲ್ಲಿಯೇ ನೆಲೆಸುವೇನೆಂದು, ಹೇಳಿ ನಿನ್ನ ಹರಿಜನ ವಂಶಸ್ಥರೆ ನನ್ನನ್ನು ಪೂಜಿಸಲಿ ತನ್ನದೇ ತನಗೆ ನಿಜಸ್ಥಿತಿಯನ್ನು ತಿಳಿಸದೆ ಮೋಸಮಾಡಿದ ನಿನ್ನ ತಂದೆ ಸೋಮನಾಗಿ ಹುಟ್ಟಿ ನನಗೆ ಬಲಿಯಾಗಲಿ ಎಂದು ಶಾಪ ಕೊಟ್ಟಳಂತೆ ಇದು ದಂತ ಕಥೆ.

ಚೈತ್ರ ಶುದ್ಧ ದಶಮಿಯ ದಿನ ಈಕೆಯ ಜಾತ್ರೆ ಪ್ರಾರಂಭವಾಗುತ್ತದೆ. ಮೊದಲು ಬ್ರಾಹ್ಮಣರ ಗುಡಿಯಲ್ಲಿ ಕಲಶ ಸ್ಥಾಪಿಸಿ ಪೂಜೆ ಮಾಡಿ, ಅರತಿ ಬೆಳಗಿ, ಹರಿಜನ ಅರ್ಚಕರ ಸುಪರ್ದಿಗೆ ಗುಡಿಯನ್ನು ಬಿಟ್ಟು ಕೊಡುವರು. ಅಂದಿನ ಬೆಳಿಗ್ಗೆ ದೇವತೆಗೆ

ವಜ್ರದ ಅಂಗಿ ತೋಡಿಸಿ ಅಲಂಕಾರ ಮಾಡುವರು. ಇದಕ್ಕೆ 'ದರ್ಬಾರ್' ಅಲಂಕಾರವೆಂದು ಹೇಳುವರು. ಸುಮಾರು ೩೦ ಹಳ್ಳಿಗಳಿಂದ ಜನರು ಹೊಸ ಮಡಿಕೆಯಲ್ಲಿ ಅನ್ನ ಮಾಡಿ (ಬಾನ) ಹೊತ್ತುಕೊಂಡು ಬರುವರು. ಬೇವಿನ ಮರದ ತಪ್ಪಲಿಂದ ದೇವತೆಯನ್ನು ಪೂಜಿಸುತ್ತಾರೆ.

ಸಂಜೆ ಸಮಯದಲ್ಲಿ ಮನೋರಂಜನೆಗೆ ಮರದ ಆನೆಯ ಉತ್ಸವ ನಡೆಯುತ್ತದೆ. ಮೂರನೇ ದಿನ ಮಧ್ಯಾಹ್ನ ಎರಡು ಗಂಟೆಗೆ ನಡೆಮುಡಿಯಿಂದ ವಾದ್ಯ ಸಮೇತ ಪಕ್ಕದ ನೀರಿನ ಬಾವಿಯ ಹತ್ತಿರ ಹೋಗಿ ಗಂಗೆ ಪೂಜೆ ಮಾಡುವರು. ನಂತರ ಪೂಜಾರಿ ಸ್ವಲ್ಪ ದೂರದಲ್ಲಿರುವ ಒಂದು ಸ್ಥಳದ ಹತ್ತಿರ ಅರೆಡೋಲು, ಕಹಳೆ, ಕೊಂಬು, ಜಾಗಟೆಗಳ ಸಮೇತ, ಹೊಗುವನು. ಆ ಜಾಗಕ್ಕೆ 'ಪವಾಡ' ಬೀಳುವ ಜಾಗವೆಂದು ಹೇಳುವರು. ಶಾಂತಿಗೋಸ್ಕರ ಆ ಜಾಗದ ಮತ್ತು ಅರಿಶಿಣದ ಅನ್ನ ಹಾಕಿ ಪೂಜೆ ಮಾಡುವಾಗ ಅರ್ಚಕನು ಜ್ಞಾನತಪ್ಪಿ ಅಲ್ಲಿ ಬೀಳುವನು. ನಂತರ ನೀರಿನ ಬಾವಿಯಿಂದ ದೇವರನ್ನು ಹೊತ್ತು ತಂದು ಅರ್ಚಕರಿಗೆ ಜ್ಞಾನ ಬರುವಂತೆ ಮಾಡಿ ಅಲ್ಲಿಯೇ ಗದ್ದುಗೆ ಮಾಡುವರು. ಗುಡಿಗೌಡರು ಮಂತ್ರ ಹೇಳಿಕೊಂಡು ದೇವತೆಯ ಎದುರು ಬೆತ್ತದ ಕೋಲಿನಿಂದ ಗುಂಡಾಗಿ ಗೆರೆ ಎಳೆಯುವರು. ಇದಕ್ಕೆ 'ಚಕ್ರಸ್ಥಾಪನೆ' ಎಂದು ಹೇಳುವರು.

ಒಬ್ಬ ಹರಿಜನ ವ್ಯಕ್ತಿಯಾದ ಹಲಗೆ ಬಾರಿಸುವ ವಾದ್ಯಗಾರನಿಗೆ (ಚೋಮನ ಮುಖವಾಡವಿಟ್ಟು) ದೇವತೆಯ ಮುಂದೆ ನಿಲ್ಲಿಸುವರು. ನಂತರ ದೇವತೆಯು ತನ್ನ ಗಂಡ ಸೋಮನನ್ನು ಚಕ್ರಸ್ಥಾಪನೆಗೆ ನೂಕುವಂತೆ ಅದರೊಳಗೆ ಬಿದ್ದು ಸತ್ತಂತೆ ಮತ್ತೆ ಕೋರಿಕೆಯಂತೆ ಮತ್ತೆ ಪ್ರಾಣದಾನ ನೀಡುವಂತೆ ಮಾಡುವರು. ಇದಾದ ಮೆಲೆ ದೇವತೆಯನ್ನು ಅಲ್ಲಿಂದ ದೇವಸ್ಥಾನಕ್ಕೆ ವಾದ್ಯಗಳ ಸಮೇತ ಕರೆದುಕೊಂಡು ಹೋಗಿ ಗದ್ದುಗೆ ಮಾಡುವರು. ಅಂದು ಬೆಳಗ್ಗೆ ಹೆಚ್ಚಾಗಿ ಲಿಂಗಾಯಿತರು ತೇರನ್ನು ಸಿಂಗರಿಸಿ ಪೂಜಿಸಿ, ದೇವತೆಯನ್ನು ತೇರಿನಲ್ಲಿ ಕೂರಿಸುವರು; ಎಲ್ಲರೂ ಸೇರಿ ತೇರನ್ನು ಎಳೆದು ಜಾತ್ರೆ ನಡೆಸುವರು.

೩:೨:೧೩: ಅಂಬಾದೇವಿ ಜಾತ್ರೆ :

ಹೈದ್ರಾಬಾದ ಕರ್ನಾಟಕದಲ್ಲಿಯೇ ಸುಪ್ರಸಿದ್ಧವಾದ ಶ್ರೀಶಕ್ತಿ ಸ್ವರೂಪಿಣಿ ಅಂಬಾದೇವಿಯ ಜಾತ್ರೆಯ ಹುಟ್ಟು ಹಿನ್ನೆಲೆಗೆ ತಪ್ಪಸ್ಸು ಸಿದ್ದಿಯ ಇತಿಹಾಸವಿದೆ. ಸತತ ಯೋಗಸಿದ್ಧಿಯಿಂದ ಸಿದ್ಧಪರ್ವತದಲ್ಲಿ ಪ್ರತ್ಯಕ್ಷಳಾದ ಅಂಬಾದೇವಿಯ ಜಾತ್ರೆಗೆ ಭವ್ಯ ಪರಂಪರೆಯಿದೆ.

ಸಿಂಧನೂರು ತಾಲ್ಲೂಕಿನ ಸೋಮಲಾಪೂರ ಗ್ರಾಮದ ಸರಹದ್ದು ಗುಡ್ಡ ಪರ್ವತಗಳ ಸಾಲು. ಪ್ರಶಾಂತವಾದ ವಾತಾವರಣದಲ್ಲಿ ಶ್ರೀ ಚಿದ್ಘಾನಂದ ಅವಧೂತರೆಂಬ ಯೋಗಿಗಳು ಸುಮಾರು ೧೭೫೦ರಲ್ಲಿ ಸತತ ಯೋಗಾಭ್ಯಾಸ ಮಾಡಿ ಸಮಾಧಿ ಸಿದ್ಧಿಗೈದಾಗ ಶ್ರೀ ಭಗಲಾಂಬಿಕೆ ದೇವಿಯು ಪ್ರತ್ಯಕ್ಷಳಾದಳು. ಏನು ವರಬೇಕು ಬೇಡು ಎಂದಾಗ ಚಿದಾನಂದ ಅವಧೂತರು ನನಗೇನು ಬೇಡ. ಇಲ್ಲಿಯೇ ನೆಲೆಸಿ ಭಕ್ತರ ಕಷ್ಟ ಕಾರ್ಪಣ್ಯಗಳನ್ನು ಹೋಗಲಾಡಿಸು ಎಂದಾಗ ಅಲ್ಲಿಯೇ ನೆಲೆಸಿದಳೆಂದು ಹೇಳಲಾಗುತ್ತಿದೆ. ಅಂದಿನಿಂದ ಇಂದಿನವರೆಗೆ ಪುಷ್ಯ ಶುದ್ಧ ಪೌರ್ಣಿಮೆಯಲ್ಲಿ ಅದ್ದೂರಿಯಿಂದ ರಥೋತ್ಸವ, ಕುಂಭೋತ್ಸವ ನಡೆಯುತ್ತಿದೆ.

ಶ್ರೀ ಚಿದಾನಂದ ಅವಧೂತರು ಶೈವ ಬ್ರಾಹ್ಮಣರಾಗಿದ್ದು ; ಕರಣಿಕರ ಮನೆತನದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಅಸಾಧಾರಣ ವ್ಯಕ್ತಿತ್ವ ಹೊಂದಿದ ಶ್ರೀ ಚಿದಾನಂದ ಅವಧೂತರು ಉಪನಯನವಾದ ಕೂಡಲೆ ಗೃಹತ್ಯಜಿಸಿ ಶ್ರೀದೇವಿಯ ಸಾಕ್ಷಾತ್ಕಾರಕ್ಕಾಗಿ ಅರಸುತ್ತಾ ಹೊರಟರು.

ಗಂಗಾವತಿ ತಾಲ್ಲೂಕಿನ ಅಯೋಧ್ಯಾ ಗ್ರಾಮದಲ್ಲಿಯ ಯೋಗಿ ಶ್ರೀ ಚಿದಾನಂದ (ಕೊಂಡಪ್ಪಯ್ಯ) ಎಂಬ ಗುರುಗಳ ಹತ್ತಿರ ಶಿಷ್ಯತ್ವ ಸ್ವೀಕರಿಸಿ ವೇದಾಭ್ಯಾಸ, ಯೋಗಾಭ್ಯಾಸ ಸಂಸ್ಕೃತ ಪಾರಾಯಣ ಪ್ರಾರಂಭಿಸಿದರು. ಇವರ ದೀಕ್ಷೆಯಿಂದಲೇ ಶ್ರೀ ಚಿದಾನಂದ ಅವಧೂತ ಎಂಬ ಹೆಸರು ಪ್ರಸಿದ್ಧಿಗೆ ಬಂದಿತು ಎಂದು ತಿಳಿದು ಬರುತ್ತದೆ.

ಶ್ರೀ ಅವಧೂತ ಚಿದಾನಂದರಲ್ಲಿದ್ದ ಅಸಾಧಾರಣ ದೈವಶಕ್ತಿಯನ್ನು ಕಂಡ ಗುರುಗಳು ಮಂತ್ರೋಪದೇಶ ಮಾಡಿ ಸಿದ್ದ ಪರ್ವತಕ್ಕೆ ಹೋಗಿ ಅಲ್ಲಿ ೧೨ ವರ್ಷಗಳ ತಪಸ್ಸು ಮಾಡು. ಶ್ರೀದೇವಿ ಪ್ರತ್ಯಕ್ಷಳಾಗುವಳು ಎಂದು ಗುರುಗಳು ಅಜ್ಞಾಪಿಸಿದರು.

ಗುರುಗಳ ಆಜ್ಞೆಯನ್ನು ಸ್ವೀಕರಿಸಿದ ಶ್ರೀ ಚಿದಾನಂದರು ಯಾವ ಪರ್ವತದಲ್ಲಿ ನಿನಗೆ ಸಮಾಧಿಯೋಗಸಿದ್ಧಿ ಹತ್ತುವುದೋ ಅದೇ ಸಿದ್ಧಪರ್ವತವೆಂದು ತಿಳಿ ಎಂದಾಗ ಶ್ರೀ ಚಿದಾನಂದರು ಆನೆಗುಂದಿ, ಹೇಮಕೂಟ, ಹಾಡುಕುಂದಿ ಹೀಗೆ ಎಲ್ಲಾ ಪರ್ವತವನ್ನು ಹತ್ತಿ ತಪಸ್ಸು ಮಾಡಿದರು. ಸಮಾಧಿ ಯೋಗ ಹತ್ತಲಿಲ್ಲ. ನಂತರ ಸೋಮಲಾಪೂರದಲ್ಲಿ ಪರ್ವತಕ್ಕೆ ಬಂದು ೧೨ ವರ್ಷಗಳ ಸತತ ಯೋಗ ತಪಸ್ಸು ಮಾಡಿ ಸಮಾಧಿಯೋಗದ ಸಿದ್ಧಿಯನ್ನು ಪಡೆದು ಶ್ರೀ ಭಗಲಾಂಬಿಕೆಯನ್ನು ಪ್ರತ್ಯಕ್ಷ ಮಾಡಿಕೊಂಡರು ಎಂದು ಪ್ರತೀತಿ ಇದೆ.

ಸೋಮಲಾಪೂರದಲ್ಲಿ ಸಮಾಧಿ ಯೋಗ ಸಿದ್ಧಿಯನ್ನು ಪಡೆದ ಶ್ರೀ ಚಿದಾನಂದ ಅವಧೂತರು ಸ್ವತಃ ಕವಿಗಳೂ ಹೌದು. ೧೭೫೦ರಲ್ಲಿ 'ಶ್ರೀದೇವಿ ಪುರಾಣ' ಎಂಬ ಭಾಗಲಾಂಬಿಕೆ ದೇವಿಯ ಪುರಾಣ ರಚಿಸಿದರು. ಇದು ಕಾರ್ತಿಕ ಮಾಸದಲ್ಲಿ ಕರ್ನಾಟಕದಾದ್ಯಂತ ಪಾರಾಯಣವಾಗುತ್ತಿದೆ.

'ಜ್ಞಾನಸಿಂಧು' ಎಂಬ ಗ್ರಂಥವನ್ನು ರಚಿಸಿದರು. ತಿರುಳ್ಗನ್ನಡದಲ್ಲಿ ಭಾಮಿನಿಷಟ್ಪದಿಯಲ್ಲಿ ಬರೆದ ಈ ಗ್ರಂಥವನ್ನು ಓದಿದ ವ್ಯಕ್ತಿಗಳು ಪಂಡಿತರೆಂಬ ಹೆಗ್ಗಳಿಕೆಗೆ ಪಾತ್ರರಾದರು. ಶ್ರೀ ಚಿದಾನಂದ ಅವಧೂತರು ಚಿದಾನಂದ ವಚನ ಪಂಚೀಕರಣ, ಭಾಗಲಾಂಬಿಕ ಸ್ತೋತ್ರ, ಭಗಳ ಶತಕ, ಬಗಲಾ–ಬ್ರಹ್ಮಾಖ್ಯ, ಚಿದಾನಂದ ರಗಳೆ ರಚಿಸಿದರು. ಇವುಗಳನ್ನು ಅಧ್ಯಯನ ಮಾಡುವುದರಿಂದ ಆತ್ಮವು ಆನಂದವಾಗುತ್ತದೆ. ಮಾನವನನ್ನು ಮುಕ್ತಿಯ ಸೋಪಾನದೆಡೆಗೆ ಕೊಂಡೊಯ್ಯುತ್ತದೆ. ಎಂದು ಅಂಬಾದೇವಿಯ ಅರ್ಚಕರು ಹೇಳುತ್ತಾರೆ. ಸುಪ್ರಸಿದ್ಧ ಸಿದ್ಧಪರ್ವತ ಶ್ರೀ ಅಂಬಾದೇವಿ ಜಾತ್ರೆಯ ರಥೋತ್ಸವ ಪ್ರತಿವರ್ಷ ಜನವರಿ ತಿಂಗಳಲ್ಲಿ ಜರುಗುತ್ತದೆ. ಕುಂಭೋತ್ಸವ ನಡೆಯುವುದು.

೩:೨:೧೪: ಎಲ್ಲಮ್ಮ ಜಾತ್ರೆ :

ರಾಯಚೂರು ಜಿಲ್ಲೆ ಅನೇಕ ಐತಿಹಾಸಿಕ ಮಹತ್ವದ ದೇವಾಲಯಗಳಿಗೆ ಪ್ರಸಿದ್ಧಿಯಾಗಿದೆ. ಅದರಲ್ಲೂ ಮಾನ್ವಿ ತಾಲ್ಲೂಕು ಪ್ರಸಿದ್ಧ ಕ್ಷೇತ್ರಗಳನ್ನು ಹೊಂದಿ ರಾಜ್ಯಾದ್ಯಂತ ಅಂಖ್ಯ ಭಕ್ತರನ್ನು ಆಕರ್ಷಿಸುವ ತಾಣವಾಗಿದೆ. ಈ ಪೈಕಿ ತಾಲ್ಲೂಕಿನ ನೀರಮಾನ್ವಿ ಗ್ರಾಮದ ಶ್ರೀ ಎಲ್ಲಮ್ಮ ದೇವಿ ದೇವಸ್ಥಾನ ಕೂಡ ಒಂದು. ಮಾನ್ವಿ ಪಟ್ಟಣದಿಂದ ಏಳು ಕಿ.ಮೀ. ಉತ್ತರಕ್ಕೆ ಹಾಗೂ ಜಿಲ್ಲಾ ಕೇಂದ್ರ ಸ್ಥಳವಾದ ರಾಯಚೂರಿನಿಂದ ೩೯ ಕಿ.ಮೀ. ಪಶ್ಚಿಮಕ್ಕೆ ರಾಜ್ಯ ಹೆದ್ದಾರಿ ಬಳಿ ಈ ದೇವಸ್ಥಾನವಿದೆ.

ಸದ್ಯ ಪ್ರಸಿದ್ಧ ಯಾತ್ರಾ ಕ್ಷೇತ್ರವಾಗಿರುವ ಈ ದೇವಸ್ಥಾನಕ್ಕೆ ಪ್ರಾಚೀನ ಇತಿಹಾಸವಿದ್ದರೂ ಅದು ಈ ಭಾಗದ ಜನರಿಗೆ ಸರಿಯಾಗಿ ತಿಳಿದಿಲ್ಲ. ಆದರೆ ಕೆಲವು ಹಿರಿಯರ ಅಭಿಪ್ರಾಯದಂತೆ ಈಗ ದೇವಸ್ಥಾನವಿರುವ ಯಲ್ಲಮ್ಮನ ಗುಡಿಯ ಪಕ್ಕದಲ್ಲಿ ಒಂದು ಸಣ್ಣ ಕೆರೆ ಇತ್ತಂತೆ. ವ್ಯಾಪಾರಕ್ಕಾಗಿ ಈ ಗುಡಿಯ ಮುಂದಿನಿಂದ ಹೋಗುವ ಎತ್ತಿನ ಬಂಡಿಗಳು ತಮ್ಮ ಎತ್ತುಗಳಿಗೆ ಈ ಕೆರೆಯಲ್ಲಿ ನೀರಿನ ದಾಹ ತಣಿಸಿ ಸ್ವಲ್ಪ ಸಮಯ ಗಿಡದ ನೆರಳಲ್ಲಿ ವಿಶ್ರಾಂತಿ ತೆಗೆದುಕೊಂಡು ಹೋಗುವ ರೂಢಿ ಇತ್ತಂತೆ. ಹೀಗೆ ಒಂದು ದಿನ ವ್ಯಾಪಾರಕ್ಕಾಗಿ ಹೊರಟ ಒಬ್ಬ ಎತ್ತಿನ ಬಂಡಿಯ ಚಾಲಕ ತನ್ನ ಎತ್ತುಗಳಿಗೆ ನೀರು ಕುಡಿಸಿ ರಾತ್ರಿ ಸಮಯವಾಗಿದ್ದರಿಂದ ತನ್ನ ಪ್ರಯಾಣ ಮುಂದುವರೆಸದೇ ಎತ್ತುಗಳನ್ನು ಯಲ್ಲಮ್ಮ ಮೂರ್ತಿ ಇರುವ

ಗುಂಡಿಗೆ ಕಟ್ಟಿ ಹಾಕಿದನಂತೆ. ಆದರೆ ಮರುದಿನ ಬೆಳಿಗ್ಗೆ ಏಳುವಾಗ ಆತನಿಗೆ ದೃಷ್ಟಿಯೇ ಇರಲಿಲ್ಲವಂತೆ. ನಂತರ ಗ್ರಾಮದ ಹಿರಿಯರು ಬಂದು ನೋಡಲಾಗಿ ಈತನಿಂದ ಯಲ್ಲಮ್ಮದೇವಿಗೆ ಆದ ಅಪಚಾರದಿಂದ ಹೀಗಾಗಿದೆ ಎಂದು ತಪ್ಪಿಗೆ ಕ್ಷಮೆಯಾಚಿಸಿದ್ದರಿಂದ ಕರುಣಾಮಯಿಯಾದ ತಾಯಿ ಯಲ್ಲಮ್ಮ ಆತನಿಗೆ ದೃಷ್ಟಿ ನೀಡಿ ಅನುಗ್ರಹಿಸಿದ್ದರಿಂದ ಭಕ್ತನೇ ದೇವಾಲಯ ನಿರ್ಮಿಸಿದನೆಂದು ಗ್ರಾಮದ ಹಿರಿಯರು ಹೇಳುವ ಇತಿಹಾಸವಿದೆ.

ಕಳೆದ ೨೦ ವರ್ಷಗಳಿಂದ ದೇವಾಲಯದ ಅತ್ಯಂತ ಭರದಿಂದ ಅಭಿವೃದ್ಧಿಯನ್ನು ಹೊಂದಿದೆಯಲ್ಲದೆ ಅಪಾರ ಭಕ್ತರನ್ನು ಆಕರ್ಷಿಸುತ್ತಿದೆ. ಈ ದೇವಾಲಯಕ್ಕೆ ವಂಶ ಪಾರಂಪರ್ಯ ಅರ್ಚಕರು ಇದ್ದು ನಿತ್ಯ ಪೂಜೆ ಹಾಗೂ ವರ್ಷಕ್ಕೊಮ್ಮೆ ನಡೆಯುವ ವೈಭವದ ಜಾತ್ರೆ ಜಿಲ್ಲೆಯಲ್ಲಿಯೇ ದೊಡ್ಡ ಜಾತ್ರೆ ಎನ್ನುವಂತಾಗಿದೆ. ಪ್ರತಿವರ್ಷ ಮಾಘ ಬಹುಳ ಪಂಚಮಿಯಂದು ದೇವಿಯ ರಥೋತ್ಸವ ಜರುಗುತ್ತದೆ. ಈ ಜಾತ್ರೆಗೆ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಿಂದ ಅನೇಕ ಭಕ್ತರು ಬಂದು ತಮ್ಮ ಸೇವೆಯನ್ನು ಸಲ್ಲಿಸುತ್ತಾರೆ.

ಜಾತ್ರೆಯ ಕುರಿತಂತೆ ಇನ್ನೊಂದು ವಿಶೇಷವನ್ನು ಇಲ್ಲಿಯ ಭಕ್ತರಿಂದ ತಿಳಿದುಬರುತ್ತದೆ, ಜಾತ್ರೆಯ ದಿನ ದೇವಾಲಯ ಪಕ್ಕದಲ್ಲಿರುವ ಸಣ್ಣ ಗುಡ್ಡದ ಮೇಲೆ ದೊಡ್ಡದಾದ ಕಲ್ಲುಬಂಡೆಯ ಮೇಲೆ ಹಚ್ಚಲಾಗುವ ದೀಪ, ಆಂಧ್ರದ ಆದವಾನಿ ತಾಲ್ಲೂಕಿನ ಕೋಸಿಗೆ ಗ್ರಾಮದಲ್ಲಿ ಕಂಡು ಬರುತ್ತದೆಯಂತೆ. ಅನಂತರ ಅಲ್ಲಿಯ ಗ್ರಾಮದ ಎಲ್ಲಮ್ಮ ದೇವಿಯ ರಥೋತ್ಸವ ಪ್ರಾರಂಭವಾಗುತ್ತದೆ ಎನ್ನುವರು.

* * *

ಅಧ್ಯಾಯ–೪

ಹೈದ್ರಾಬಾದ ಕರ್ನಾಟಕದ ಜಾತ್ರೆಗಳ ಸಾಂಸ್ಕೃತಿಕ ನೋಟ :

ಕರ್ನಾಟಕದ ನಾಲ್ಕು ಪ್ರಾಂತಗಳಲ್ಲಿ ಹೈದ್ರಾಬಾದ ಕರ್ನಾಟಕ ಒಂದು. ಇಲ್ಲಿ ಹಿಂದು, ಮುಸ್ಲಿಂ, ಸೀಖ, ಕ್ರೈಸ್ತ ಮುಂತಾದ ಜನರು ವಾಸವಾಗಿದ್ದಾರೆ. ಕನ್ನಡ ಹಿಂದಿ, ತೆಲುಗು ಮತ್ತು ಮರಾಠಿಯಲ್ಲಿ ಮಾತನಾಡುವರು. ಹಬ್ಬ ಹರಿದಿನಗಳು ಮಾಡುವರು. ಜಾತ್ರೋತ್ಸವಗಳನ್ನು ನಡೆಸುವರು. ಹಿಂದುಗಳ ಜಾತ್ರೆಗಳಲ್ಲಿ ಮುಸ್ಲಿಂರು, ಸೀಖರು ಭಾಗವಹಿಸುವರು, ಮುಸ್ಲಿಂರ ಉತ್ಸವಗಳಲ್ಲಿ ಹಿಂದುಗಳು ಕ್ರೈಸ್ತರು ಪಾಲ್ಗೊಳ್ಳುವ ವಾಡಿಕೆ ಇದೆ. ಗುಲ್ಬರ್ಗಾ ಶರಣಬಸವೇಶ್ವರ, ಅಸ್ಪೂರ ಅಲ್ಲಮಪ್ರಭು, ಖಾಜಾಬಂದೇನವಾಜ. ಬೀದರಿನ ಬೆನಕನಳ್ಳಿ ಎಲ್ಲಮ್ಮ, ಗುರುನಾನಕ, ರಾಯಚೂರಿನ ಗವಿಸಿದ್ದೇಶ್ವರ, ನಾರದಗಡ್ಡೆ ಮತ್ತು ಕಲ್ಮಲಾ ಕರಿಯಪ್ಪ ಶಿವಯೋಗಿ ಮುಂತಾದ ಜಾತ್ರೆ ಉರುಸ್‌ಗಳಲ್ಲಿ ಎಲ್ಲ ವರ್ಗದ ವರ್ಣದ ಜನರನ್ನು ಕಾಣುತ್ತೇವೆ. ಹೆಚ್ಚಾಗಿ ಈ ಪ್ರದೇಶದ ಜಾತ್ರೆಗಳು ರಾಷ್ಟ್ರೀಯ ಭಾವೈಕ್ಯತೆಯ ಪ್ರತೀಕವಾಗಿವೆ.

ಈ ಪ್ರಾಂತದ ಯಾವುದೇ ಜಾತ್ರೆಗಳು ನಡೆಯಲಿ. ಆಯಾ ದೇವಾಲಯದ ಸುತ್ತ–ಮುತ್ತಲಿನ ಹಳ್ಳಿಯ ಮುಖಂಡರ, ಪೂಜಾರಿಗಳ, ಜಾತ್ರೆ ಸಮಿತಿಯವರ ಪಾತ್ರ ಮುಖ್ಯವಾಗಿರುತ್ತದೆ. ನಿರ್ದಿಷ್ಟ ಸಮಯದಲ್ಲಿ ಜಾತ್ರೆ ಜರುಗುವಂತೆ, ಎಲ್ಲ ಹಂತದ ವ್ಯವಸ್ಥೆ ನೋಡಿಕೊಳ್ಳುತ್ತಾರೆ. ಕರಪತ್ರ ಪ್ರಕಟಿಸಿ ಪ್ರಚಾರ ಮಾಡುತ್ತಾರೆ. ಚಂದ ಹಣದೊಂದಿಗೆ ದವಸ ಧಾನ್ಯಗಳು ಸಂಗ್ರಹಿಸುತ್ತಾರೆ. ದೇವಾಲಯಕ್ಕೆ ದುಂಬು–ಧೂಳು ಹೊಡೆದು, ಸುಣ್ಣ ಬಣ್ಣ ಬಳಿಯುತ್ತಾರೆ. ತಳಿರು ತೋರಣ ಕಟ್ಟುತ್ತಾರೆ. ದ್ವಾರಗಳು ಹಾಕುತ್ತಾರೆ. ವಿದ್ಯುತ್ ದೀಪಗಳು, ಧ್ವನಿವರ್ಧಕಗಳು ಅಳವಡಿಸಿ ಜಾತ್ರೆ ನಡೆಸುತ್ತಾರೆ. ಈ ಪ್ರದೇಶದ ಜಾತ್ರೆಗಳು ಜರುಗುವಾಗ ಈ ಕೆಳಕಂಡ ಪ್ರಮುಖ ಪದ್ಧತಿಗಳು ಸಾಮಾನ್ಯ ಸ್ವರೂಪ ಪಡೆದುಕೊಳ್ಳುತ್ತವೆ.

೪:೧: ಜಾತ್ರೆ ಜರುಗುವ ಸಮಯ :

ತಮ್ಮ ತಮ್ಮ ಕುಟುಂಬದ ಸದಸ್ಯರೊಂದಿಗೆ ಕ್ಷೇತ್ರ ದರ್ಶನ ಮಾಡುವುದು ಇಷ್ಟದೇವರಿಗೆ ಹರಕೆ ಸಲ್ಲಿಸುವುದು ಮನರಂಜನೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದು, ದನಕರುಗಳನ್ನು ಕೊಂಡು ಮಾರುವುದು, ಗೃಹ ಬಳಕೆಗೆ ಅಗತ್ಯವಾದ ವಸ್ತು ಸಾಮಗ್ರಿಗಳನ್ನು ಖರೀದಿಸುವುದು, ಬಂಧು ಮಿತ್ರರನ್ನು ಭೆಟ್ಟಿಯಾಗುವುದು. ಇವೇ ಮೊದಲಾದ ಚಟುವಟಿಕಗಳಿಗೆ ಉತ್ತಮ ಅವಕಾಶ ಜಾತ್ರೆಗಳಲ್ಲಿ ದೊರಕುವುದು.

ಜಾತ್ರೆ ನಡೆಯುವ ಕಾಲ ಮತ್ತು ಸ್ಥಳ ಹೆಚ್ಚು ಪ್ರಶಸ್ತವಾಗಿರಬೇಕಾದ್ದು ಅತ್ಯವಶ್ಯಕ. ಸಂಕ್ರಾಂತಿ ಹಬ್ಬದ ವೇಳೆಗೆ ಕೊಯಿಲು ಕಾಲ ಮುಗಿದಿರುವುದು. ಆ ವೇಳೆಗೆ ಧಾನ್ಯ ಸಂಗ್ರಹಣೆಯ ಕೆಲಸವೂ ಬಹುಮಟ್ಟಿಗೆ ಪೂರ್ಣಹೊಂದಿರುತ್ತದೆ. ಅಲ್ಲಿಂದಾಚೆಗೆ ಮುಂದಿನ ಮಳೆಯ ಪ್ರಾರಂಭವಾಗುವವರೆಗೂ ಜನರಿಗೆ ಸಾಕಷ್ಟು ವಿರಾಮವಿರುವುದು, ದುಡಿಯುವ ರಾಸುಗಳಿಗೂ ಕೆಲಸದ ಹೊರೆ ಹೆಚ್ಚಾಗಿರುವುದಿಲ್ಲ. ಚಳಿಗಾಲ ಮುಕ್ತಾಯದ ಹಂತದಲ್ಲಿರುವುದರಿಂದ ಹವಾಗುಣ ಹಿತಕರವಾಗಿರುವುದು. ಆ ಕಾಲದಲ್ಲಿ ನೀರಿನ ಸೌಕರ್ಯವೊಂದಿದ್ದರೆ ಬಯಲು ಪ್ರದೇಶದಲ್ಲೇ ಬೀಡು ಬಿಡಬಹುದು. ಮರಳ ನೆರಳಿನಲ್ಲೋ, ಗುಡಾರಗಳಲ್ಲೋ, ಏಳೆಂಟು ದಿನಗಳು ಕಳೆಯುವುದು ಕಷ್ಟವಾಗಲಾರದು. ಜಾತ್ರೆಗಳು ನಡೆಸಲು ಬೇಸಿಗೆಯು ಹೆಚ್ಚು ಪ್ರಶಸ್ತವಾದ ಕಾಲವಾಗಿರುವುದು. ಇದನ್ನರಿತ ನಮ್ಮ ಪೂರ್ವಿಕರು ಜಾತ್ರೆಗಳನ್ನು ಹಾಗೂ ರಥೋತ್ಸವಗಳನ್ನು ಬಿಸಿಲು ಕಾಲದಲ್ಲಿ ನಡೆಸುವ ಪದ್ಧತಿಯನ್ನು ರೂಢಿಗೆ ತಂದಿರಬೇಕು. ಈ ನಾಡಿನಲ್ಲಿ ಚಳಿಗಾಲದಿಂದ ಮಳೆಗಾಲ ಪ್ರಾರಂಭದವರೆಗೆ ಜಾತ್ರೆಗಳು ಜರುಗುತ್ತವೆ.

೪:೨: ಕಾಣಿಕೆ :

ಇಚ್ಛೆಗೆ ತಕ್ಕಂತೆ ಜಾತ್ರೆಗೆ ಹೋಗುವುದು. ಪೂಜೆ ಮಾಡುವುದು ಪ್ರತಿಯೊಂದು ಜನಾಂಗದಲ್ಲಿರುವ ಸಾಮಾನ್ಯ ಪದ್ಧತಿ. ಪೂಜೆ ಮಾಡಿದ ಮೇಲೆ ತೀರ್ಥ ಪ್ರಸಾದವನ್ನು ಹಂಚುವುದು ಪೂಜಾರಿಯ ಕೆಲಸ. ಈ ಕೆಲಸಕ್ಕೆ ತಕ್ಕ ಪ್ರತಿಫಲ ಕೊಡಬೇಕಾದ್ದು ಅಗತ್ಯ. ಪೂಜಾರಿಯ ಜೀವನದ ನಿರ್ವಹಣೆಗೆ ಹಣ ಬೇಕು. ಆ ಹಣ ಭಕ್ತಾದಿಗಳಿಂದ ಪಾವತಿಯಾಗಬೇಕು. ಹೀಗಾಗಿ ಮಂಗಳಾರುತಿ ತಟ್ಟೆಗೆ ಸಂಭಾವನೆಯ ರೂಪದಲ್ಲಿ ಯೋಗ್ಯತಾನುಸಾರ ದಕ್ಷಿಣೆ ಹಾಕುವ ಪದ್ಧತಿ ಈ ಪ್ರದೇಶದ ಎಲ್ಲ ಜಾತ್ರೆಗಳಲ್ಲಿ ಇದೆ.

೪:೩: ಉಪವಾಸ :

ನ್ಯಾಯವಾದ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ದೇವರ ಮನಸ್ಸನ್ನು ಒಲಿಸಿಕೊಳ್ಳಲು ಪ್ರಯೋಗಿಸುವ ಒಂದು ಮಾರ್ಗವೇ ಉಪವಾಸ. ಬೀದರಿನ ಪಾಪನಾಶಿನಿ ಜಾತ್ರೆ ಜರುಗುವಾಗ ಉಪವಾಸ ವೃತ ಮಾಡುತ್ತಾರೆ. ಈ ಜಾತ್ರೆ ಪ್ರತಿವರ್ಷ ಶಿವರಾತ್ರಿ ಹಬ್ಬದಂದು, ಮೂರು ದಿನಗಳ ಕಾಲದವರೆಗೆ ಜರುಗುತ್ತದೆ. ಉಪವಾಸ ವೃತ ಇದು ನೈತಿಕ ಪ್ರಯೋಗವಾದ ಸತ್ಯಾಗ್ರಹದ ಒಂದು ರೂಪ. ತನ್ನಲ್ಲಿರುವ ಕೇಡು ಗುಣಗಳನ್ನು ಸುಟ್ಟು ಹಾಕಲು ನಡೆ ನುಡಿಯಲ್ಲಿ ಬದಲಾಣೆ ತಂದುಕೊಳ್ಳಲು, ಆತ್ಮ ಶುದ್ಧಿಮಾಡಿಕೊಳ್ಳಲು ಈ ಮಾರ್ಗವನ್ನು ಕೈಕೊಳ್ಳುತ್ತಾರೆ. ಉಪವಾಸ ಇರುವವರು ಪ್ರಾಮಾಣಿಕರು, ನಿಷ್ಠಾವಂತರೂ, ಇರಬೇಕೆಂಬ ನಿಯಮವಿದೆ. ಹೀಗೆ ಮಾಡುವವರಿಗೆ ದೇವರು ಹೆಚ್ಚಿನ ಫಲ ಕೊಡುತ್ತಾನೆಂಬ ನಂಬಿಕೆ ಇದೆ.

ಮನಸ್ಸಿನ ನೈರ್ಮಲ್ಯ, ಧಾರ್ಮಿಕ ಸತ್ಯ, ನೈತಿಕ ಬಲ ಶಿಸ್ತು, ನಮ್ರತೆ ಹೆಚ್ಚಿಸಿಕೊಳ್ಳಲು ಈ ಮಾರ್ಗ ಹೆಚ್ಚು ಉಪಯುಕ್ತ ಎನಿಸಿದೆ. ಇತ್ತಿತ್ತಲಾಗಿ ಇದರ ಮಹತ್ವ ಕಡಿಮೆಯಾಗುತ್ತಿದೆ. ಹಣ್ಣು ಹಂಪಲು ಹೊಟ್ಟೆ ತುಂಬ ತಿಂದು ಉಪವಾಸ ಮಾಡುವವರ ಸಂಖ್ಯೆ ಹೆಚ್ಚಾಗಿರುವದರಿಂದ ಇದರ ಅಂತಸ್ಸತ್ವ ಸವಕಲಾಗಿ ಹಾಸ್ಯಾಸ್ಪದವಾಗಿದೆ.

೪:೪: ಕುಂಭಮೇಳ :

ಸುಮಂಗಲೆಯರು ತಲೆಯ ಮೇಲೆ ಜಲಪಾತ್ರೆಯನ್ನು ಇಟ್ಟುಕೊಂಡು ಮೆರವಣಿಗೆ ಮಾಡುವುದೇ ಕುಂಭಮೇಳ. ಬಿತ್ತನೆ ಕಾಲದಲ್ಲಿ ಒಳ್ಳೆಯ ಫಸಲು ಪಡೆಯಲು ಒಂದು ಫಲೋತ್ಪಾದಕ ಉತ್ಸವವನ್ನಾಗಿ ಬೀದರಿನ 'ಮಡಿವಾಳೇಶ್ವರ' ಮತ್ತು 'ಪಾಪನಾಶನಿ' ಜಾತ್ರೆಯಲ್ಲಿ ಕುಂಭಮೇಳ ನಡೆಸುತ್ತಾರೆ. ೧೦೧ ಹೆಣ್ಣು ಮಕ್ಕಳು ಮೇಳದಲ್ಲಿ ಪಾಲ್ಗೊಳ್ಳುತ್ತಾರೆ. ತಲೆಯ ಮೇಲಿನ ನೀರಿನ ಕೊಡ, ಅದರಲ್ಲಿ ಬಿತ್ತನೆಯ ಧಾನ್ಯಗಳನ್ನು ಹಾಕಿ ಟೆಂಗು ಇಟ್ಟುಕೊಳ್ಳುವರು. ಹಲಗೆ, ಡೊಳ್ಳು, ಮುಂತಾದ ಕಲಾತಂಡಗಳು ಮೆರವಣಿಗೆಯಲ್ಲಿ ಭಾಗವಹಿಸುತ್ತವೆ. ಮೆರವಣಿಗೆ ಶುಕ್ಲತೀರ್ಥ ಝರಿ ಹತ್ತಿರ ಬಂದು ತಲೆಯ ಮೇಲಿದ್ದ ಕೊಡ ಕೆಳಗಿಟ್ಟು ಅದರೊಳಗಿನ ಧಾನ್ಯಗಳನ್ನು ನೀರಿನಲ್ಲಿ ಅದ್ದಿ ಮನೆಗೆ ತೆಗೆದುಕೊಂಡು ಬರುವರು. ನೀರಿನಲ್ಲಿ ಅದ್ದಿದ ಧಾನ್ಯಗಳು ಬಿತ್ತುವಾಗ ಇತರೆ ಬೀಜಗಳೊಂದಿಗೆ ಬೆರೆಸಿ ಬಿತ್ತನೆ ಮಾಡುವರು. ಹೀಗೆ ಮಾಡುವುದರಿಂದ ಹೆಚ್ಚಿನ ಬೆಳೆ ಬೆಳೆಯಬಹುದೆಂಬ ನಂಬಿಕೆಯುಂಟು.

ಈ ಮೇಳದಲ್ಲಿ ಸುತ್ತಲಿನ ಜನರು, ವಿರಕ್ತರು ಭಾಗವಹಿಸುತ್ತಾರೆ. ಸಂಜೆ ಹೊತ್ತಿಗೆ ಆಧ್ಯಾತ್ಮಿಕ ವಿಷಯಗಳ ಮಂಥನ ನಡೆಯುತ್ತದೆ. ಈ ಬಗೆಯ ಮೇಳ ಉತ್ತರ ಭಾರತದ ಹರಿದ್ವಾರ, ಪ್ರಯಾಗದಲ್ಲಿ ಕೂಡ ಜರುಗುವುದು.

೪:೫: ಕೋಳಿ ಅಂಕ :

ಕೋಳಿಗಳ ಕಾಳಗಕ್ಕೆ ಕೋಳಿ ಅಂಕ, ಕೋಳಿ ಕಾಳಗ, ಕೋಳಿ ಕಟ್ಟ, ಎಂದು ಕರೆಯುತ್ತಾರೆ. ಎರಡು ಹುಂಜಗಳ ನಡುವೆ ಸ್ಪರ್ಧೆಯನ್ನು ಏರ್ಪಡಿಸಿ ಅವುಗಳ ಸೆಣಸಾಟವನ್ನು ಸೋಲು ಗೆಲುವುಗಳನ್ನು ನೋಡಿ ನಲಿಯುವ ಒಂದು ಜನಪದ ಮನೋರಂಜನೆ ಕಾರ್ಯಕ್ರಮ ಇದಾಗಿದೆ. ಬೆನಕನಹಳ್ಳಿ ಎಲ್ಲಮ್ಮ, ಫತ್ತೆಪುರದ ಮಾರಮ್ಮ ಮುಂತಾದ ಜಾತ್ರೆಗಳಲ್ಲಿ ಕೋಳಿ ಕಾಳಗದ ಸ್ಪರ್ಧೆ ಏರ್ಪಡಿಸುತ್ತಾರೆ. ಕೋಳಿ ಕಾಳಗವನ್ನು ಜನಪದರು ಯಾವ ಉದ್ದೇಶದಿಂದ ಪ್ರಾರಂಭಿಸಿದರು ಎಂದು ನಿರ್ಧಿಷ್ಟವಾಗಿ ಹೇಳಲು ಸಾಧ್ಯವಾಗದಿದ್ದರೂ ಪ್ರಾಣಿ–ಪ್ರಾಣಿಗಳ ನಡುವೆ ಮನುಷ್ಯ, ಕಾಳಗವನ್ನೇರ್ಪಡಿಸಿ ನೋಡುವ ಹವ್ಯಾಸ ಸಾಕಷ್ಟು ಹಳೆಯದು.

ಈ ನಾಡಿನಲ್ಲಿ ಕೋಳಿ ಅಂಕ, ಜಾತ್ರೆ ಸಂದರ್ಭದಲ್ಲಿ ಮಾತ್ರ ಜರುಗುತ್ತದೆ. ಏಕೆಂದರೆ ಸಾಕಷ್ಟು ಜನ ಸೇರಿರುತ್ತಾರೆ. ಕಾಳಗದ ಆಟವನ್ನು ನೋಡಿ ಆನಂದಿಸುತ್ತಾರೆ. ಪ್ರಾಣಿ ಪಕ್ಷಿಗಳನ್ನು ಚನ್ನಾಗಿ ಬೆಳೆಸುವುದಕ್ಕೆ ಇಂಥ ಸ್ಪರ್ಧೆಗಳು ಅವಶ್ಯವೆಂದು ತಿಳಿದು ಮೂರು ಅಥವಾ ಐದು ದಿನಗಳ ಕಾಲ ನಡೆಸುತ್ತಾರೆ. ಸುಮಾರಾಗಿ ಮಧ್ಯಾಹ್ನದಿಂದ ಮಧ್ಯರಾತ್ರಿ ತನಕ ನಡೆಯುವ ಅಂಕದ ಸ್ಥಳ ಸಾಮಾನ್ಯವಾಗಿ ವಿಶಾಲವಾದ ಬಯಲು ಜಾಗ ಬೇಕಾಗುತ್ತದೆ. ಈ ಕಾರ್ಯಕ್ರಮಕ್ಕೆ ಹೆಚ್ಚಾಗಿ ಜನ ಸೇರಲು ಕರಪತ್ರ ಹಂಚುತ್ತಾರೆ. ಕೋಳಿ ಅಂಕದಲ್ಲಿ ಎರಡು ಬಗೆ ಒಂದು ಸಮ. ಇನ್ನೊಂದು ಓಡಿ. ಸಮ ಕಾಳಗದಲ್ಲಿ ಬಿಟ್ಟ ಎರಡು ಕೋಳಿಗಳಲ್ಲಿ ಯಾವುದಾದರೊಂದು ಸತ್ತರೆ ಅಥವಾ ಸೋತು ಓಡಿಹೋದರೆ ಅದು ಗೆದ್ದ ಕೋಳಿಯವನಿಗೆ ದಕ್ಕುತ್ತದೆ. ಕಾಳಗದಲ್ಲಿ ಸತ್ತರೆ ಮಾತ್ರ ಅದು ಗೆದ್ದ ಕೋಳಿಯವನಿಗೆ ದೊರೆಯುತ್ತದೆಯೇ ಹರತು ಕೇವಲ ಓಡಿ ಹೋದರೆ ಅಲ್ಲ. ಓಡಿ ಹೋದ ಅಥವಾ ಸತ್ತ ಕೋಳಿಯನ್ನು 'ಬಿಟ್ಟಿ' ಎಂದು, ಗೆದ್ದದ್ದನ್ನು 'ಬಂಟ' ಎಂದು ಕರೆಯುತ್ತಾರೆ. ಗೆದ್ದ ಕೋಳಿಯ ಯಜಮಾನನಿಗೆ ಬಹುಮಾನ ಕೊಡುವ ಪದ್ಧತಿ ಇದೆ.

೪:೬: ಎಡೆಯೊಪ್ಪಿಸುವುದು :

ದೇವರುಗಳಲ್ಲಿ ಸಾತ್ತ್ವಿಕ ಮತ್ತು ಉಗ್ರದೇವತೆಗಳೆಂಬ ಎರಡು ಪ್ರಕಾರ ಉಂಟು ಸತ್ತ್ವಗುಣವೇ ಮುಖ್ಯವಾಗಿರುವ ಬಸವಣ್ಣ, ವೀರಭದ್ರ, ಮಾಣಿಕಪ್ರಭು, ಗವಿಸಿದ್ದೇಶ್ವರ ಮುಂತಾದ ದೇವರುಗಳು ಈ ಗುಂಪಿಗೆ ಸೇರುತ್ತಾರೆ. ಈ ದೇವರಿಗೆ ಸಸ್ಯಾಹಾರಿಯ ಉಪಹಾರಬೇಕು. ಸ್ವರೂಪದಲ್ಲಿ ಭಯವನ್ನು ಹುಟ್ಟಿಸುವ ಗ್ರಾಮದೇವತೆಗಳಾದ ಮಾರಮ್ಮ, ಕರಿಯಮ್ಮ, ನರಸಿಂಹ, ಅವಕ್ಕೆ ಸಾತ್ತ್ವಿಕ ಉಪಹಾರ (ಸಸ್ಯಹಾರಿ) ಸಾಕಾಗದೆಂಬ ನಂಬಿಕೆಯಿಂದ ಕುರಿ ಕೋಳಿಯ ಮಾಂಸದ ಅಡುಗೆಯೇ ನೈವೇದ್ಯ ಮಾಡುತ್ತಾರೆ. ಅದಕ್ಕೆ 'ಎಡೆ' ಇನ್ನೊಂದು ಹೆಸರು. ಬೀದರಿನ ವಾರಕ್ಕೊಮ್ಮೆ ಜರುಗುವ ನರಸಿಂಹನ ಜಾತ್ರೆಯಲ್ಲಿ ಮಾಂಸದ ನೈವೇದ್ಯ ಮಾಡುವರು. ಹರಕೆ ಹೊತ್ತ ಭಕ್ತರು ಮಾತ್ರ ಎಡೆಯೊಪ್ಪಿಸುತ್ತಾರೆ. ಇಂಥ ಅನಿಷ್ಟ (ಎಡೆಯೊಪ್ಪಿಸುವ) ಪದ್ಧತಿ ಭಕ್ತರ ನಾಲಿಗೆ ರುಚಿಗೋಸ್ಕರ ಹೊರತು ಮತ್ತೊಂದಿಲ್ಲ ಎನಿಸುತ್ತದೆ.

೪:೭: ಅಭಿಷೇಕ :

ಇದಕ್ಕೆ ಸ್ನಾನ, ಮಂತ್ರ, ಪ್ರೇಕ್ಷಣೆ ಎನ್ನುವ ಅರ್ಥ ಇದೆ. ಮಂಗಳಕರವಾದ ಜಲ, ಹಾಲು ಮುಂತಾದ ದ್ರವವನ್ನು ದೇವರಿಗೆ ಎರೆಯುವುದಕ್ಕೆ **'ಅಭಿಷೇಕ'** ಎಂದು ಕರೆಯಲಾಗುತ್ತದೆ. ಬೀದರಿನ 'ಪಾಪನಾಶನಿ' 'ಹುಮನಾಬಾದ ವೀರಭದ್ರೇಶ್ವರ' ಹಾರ ಕೂಡದ ಚನ್ನಬಸವೇಶ್ವರ, ಇಟಗಾ ಭದ್ರೇಶ್ವರ, ಬಕ್ಕಪ್ರಭು, ಮಡಿವಾಳೇಶ್ವರ

ಕಲ್ಮಲ ಕರಿಯಪ್ಪ, ಮುಂತಾದ ಜಾತ್ರೆಗಳಲ್ಲಿ 'ಅಭಿಷೇಕ' ಮಾಡುವ ಪರಿಪಾಠವಿದೆ. ಹರಕೆ ಹೊತ್ತ ಭಕ್ತರು ಜಾತ್ರೆ ಸಮಯದಲ್ಲಿ ಅಭಿಷೇಕ ಮಾಡಿಸುತ್ತಾರೆ. (ಇತರೆ ಸಂದರ್ಭದಲ್ಲಿ ಅಂದರೆ ವಾರದ ತಿಥಿ ನೋಡಿಯು ಅಭಿಷೇಕ ಮಾಡಿಸುವ ಸಂಪ್ರದಾಯವಿದೆ). ಹೀಗೆ ಮಾಡುವುದರಿಂದ ಅವರವರ ಮನೆಯಲ್ಲಿ ಮಂಗಳಕರವಾದ ಕಾರ್ಯ ಜರುಗುವುದಲ್ಲದೆ ಅಹಿತಕರ ಘಟನೆ ನಡೆಯುವುದಿಲ್ಲವೆಂಬ ನಂಬಿಕೆ ಇದೆ.

೪:೮: ಘಟಸ್ಥಲ ಧ್ವಜಾರೋಹಣ :

ವೀರಶೈವ ಧರ್ಮಾಚಾರದ ಆರು ಸ್ಥಲಗಳಿಂದ ಕೂಡಿದ (ಧರ್ಮ ಸಂಕೇತವಾದ ಧ್ವಜ) ಬಾವುಟವನ್ನು ಹಾರಿಸುವುದೇ ಘಟಸ್ಥಲ ಧ್ವಜಾರೋಹಣ. ಬಸವಕಲ್ಯಾಣದ ಬಸವಣ್ಣನ ಜಾತ್ರೆಯ ಪ್ರಥಮ ದಿನದಂದು, ಘಟಸ್ಥಲ ಧ್ವಜ ಹಾರಿಸುವ ನಿಯಮವಿದೆ. ವೀರಶೈವ ಧರ್ಮಾಚಾರದ ಪ್ರತೀಕವಾದ ಈ ಧ್ವಜದ ಕುರಿತು ಹಾಡು ಇದಾಗಿದೆ.

"ಏರುತಿದೆ ..... ಹಾರುತಿದೆ ..... ಘಟಸ್ಥಲ ಧ್ವಜವು ಮರೆಯುತಿದೆ
ವಿಶ್ವಜೀವರನು ತನ್ನಯ ಗರ್ಭಾಧಿ
ಹೊತ್ತ ಬಸವಧ್ವಜ ಹಾರುತಿದೆ.

ಸಮತಾತತ್ವದ ಜಗದಲ್ಲಿ ಸಾರಿದ
ಸತ್ಯದ ಅಹಿಂಸೆಯ ನಡೆಯಲಿ ತೋರಿದ
ದಯವೇ ಧರ್ಮದ ಮೂಲವೆಂದುಲಿದ
ಕಲ್ಯಾಣ ಧ್ವಜವು ಹಾರುತಿದೆ.

ಮೋಳಿಗೆ ಮಾರಯ್ಯ ಮಡಿವಾಳ ಮಾಚಯ್ಯ
ಮಾದರ ಚನ್ನಯ್ಯ ಡೋಹರ ಕಕ್ಕಯ್ಯ
ಹರಳಯ್ಯ ಮೊದಲಾದ ಭಕ್ತರನ್ನೆಲ್ಲ
ಜಂಗಮ ಸ್ಥಲಕೆ ಎತ್ತಿದ ಧ್ವಜವು :

ವ್ಯೋಮ ಕಾಯ ಸಿದ್ಧ ಅಲ್ಲಮಪ್ರಭುವು
ವೀರ ಗಣಾಚಾರಿ ಅಂಬಿಗ ಚೌಡಯ್ಯ
ಕಾಯಕ ಜ್ಯೋತಿ ನುಲಿಯ ಚಂದಯ್ಯ
ಅಗಣಿತ ಮಹಿಮರ ಪ್ರೀತಿಯ ಧ್ವಜವು

ಕ್ರಾಂತಿಯ ಗಂಗೋತ್ರಿ ಅಕ್ಕನಾಗಾಯಿ
ನಿರಂಜನ ಜ್ಯೋತಿ ನೀಲಮ್ಮ ತಾಯಿ
ಸತ್ಯಕ್ಕ, ಲಿಂಗಮ್ಮ, ಶರಣ ಮುಕ್ತಾಯಿ
ಜ್ಞಾನಗುರು ಅಕ್ಕಮಹಾದೇವಿ ಧ್ವಜವು :

ವಚನ ಸಾರದ ಹಾಲ್ಹೊಳು ಹರಿಸಿದ
ವಾದ ಭೇದವನು ಕಾಲಲಿ ಮೆಟ್ಟಿದ
ಕಾಯಕ ಕೈಲಾಸ ಮಂತ್ರ ಭೋದಿಸಿದ
ಕರುಣಾಳು ಗುರು ಚೆನ್ನಬಸವನ ಧ್ವಜವು"(ಜವಳಗಿ:೧೯೮೬:೧೬)

ಈ ಹಾಡು ಮುಗಿದ ನಂತರವೇ ಜಾತ್ರೆಯ ಮುಂದಿನ ಚಟುವಟಿಕೆಗಳು ಜರುಗುವವು.

೪:೯: ವಟುಗಳ ಅಯ್ಯಾಚಾರ :

ಸಣ್ಣ ಸಣ್ಣ ಮಕ್ಕಳಿಗೆ ಧಾರ್ಮಿಕ ಸಂಸ್ಕಾರ ನೀಡುವುದಕ್ಕೆ ವಟುಗಳ ಅಯ್ಯಾಚಾರವೆನ್ನುವರು. ಹೀಗೆ ಮಾಡುವುದರಿಂದ ಚಿಕ್ಕ ಮಕ್ಕಳು ಆ ಧರ್ಮದ ಚೌಕಟ್ಟಿನಲ್ಲಿಯೇ ಇದ್ದು, ವ್ರತವನ್ನು ಮುಂದುವರಿಸಿಕೊಂಡು ಬರುವರು. ಅವರಲ್ಲಿ ಭಕ್ತಿ ಭಾವ ಎದ್ದು ಕಾಣುವುದೆಂದು ತಿಳಿದು ಈ ಪದ್ಧತಿ ನಡೆಸುತ್ತಾರೆ. ಹೆಚ್ಚು ಹೆಚ್ಚು ಹೆಣ್ಣು ಮಕ್ಕಳು ಜಾತ್ರೆಗೆ ಬರುವುದರಿಂದ ಸಾಮೂಹಿಕವಾಗಿ ವಟುಗಳ ಅಯ್ಯಾಚಾರ ಮಾಡಿದರೆ ನೂರಾರು ಮಕ್ಕಳಿಗೆ ಏಕ ಕಾಲದಲ್ಲಿ ದೀಕ್ಷೆ ಕೊಡಬಹುದೆಂದು ಈ ಪದ್ಧತಿ ಅನುಸರಿಸುತ್ತಾರೆ. ಜಾತ್ರೆಗೆ ಬಂದ ಹಿರಿಯ ಜಂಗಮ ದೀಕ್ಷೆ ಕೊಡುವನು. ವಿಭೂತಿ, ಲಿಂಗ,, ರುದ್ರಾಕ್ಷಿ, ಬಿಲ್ವಪತ್ರಿ, ಕುಂಕುಮ ,ಸಕ್ಕರೆ, ಬಾಳೆಹಣ್ಣು, ಟೆಂಗು, ಹಾಲು, ಅಗರಬತ್ತಿ, ಹೂ, ಹಣ್ಣು ದೀಕ್ಷೆ ಕಕೊಡುವಾಗ ಬೇಕಾಗುವ ಪ್ರಮುಖ ವಸ್ತುಗಳು. ಬಸವಕಲ್ಯಾಣ ಬಸವಣ್ಣನ ಜಾತ್ರೆ, ಹಾರಕೂಡದ ಚನ್ನಬಸವೇಶ್ವರ ಜಾತ್ರೆ ಮತ್ತು ಅಲಿಯಂಬರ ವೀರಭದ್ರೇಶ್ವರ ಜಾತ್ರೆಯಲ್ಲಿ ಈ ಪದ್ಧತಿ ಜರುಗುತ್ತದೆ.

೪:೧೦: ನಂದಿಧ್ವಜ ಕುಣಿತ :

ವಿಜಯ ಘೋಷದ ಶಿವಭಕ್ತರ ಧರ್ಮದ ಪ್ರತೀಕವೇ ನಂದೀ ಧ್ವಜ. ಸುಮಾರು ೨೫ ರಿಂದ ೩೦ ಅಡಿ ಉದ್ದದ ಬಿದಿರಿನ (ಕಟ್ಟಿಗೆ) ಕಪ್ಪು ಅಥವಾ ನೀಲಿ ಬಣ್ಣ ಬಳಿದಿರುತ್ತಾರೆ. ಕೋಲಿಗೆ ಅಲ್ಲಲ್ಲಿ ಬೆಳ್ಳಿಯ ಕಟ್ಟುಗಳನ್ನು ಹೋಲುವಂತೆ, ಬಿಳಿಯ ಬಣ್ಣದ ಸುತ್ತ ಪಟ್ಟಿಗಳಿರುತ್ತವೆ. ತುದಿಯಲ್ಲಿ ಒಂದು ಸಣ್ಣ ಮಂಟಪ ಗೋಪುರ ರಚಿಸಿ, ಅದಕ್ಕೆ ಹೂವಿನ ಸಿಂಗಾರ ಮಾಡಿರುತ್ತಾರೆ. ಗಂಡಸರು ಧೋತ್ರ ಕಸೆಯಂಗಿ ತಲೆಗೆ ರುಮಾಲು ಹಣೆಗೆ ವಿಭೂತಿ ಹಚ್ಚಿಕೊಂಡು ನಂದೀ ಧ್ವಜ ಹಿಡಿದು ಕುಣಿಯುತ್ತಾರೆ. ಹಲಗೆಯ ನಾದಕ್ಕೆ ನಂದೀ ಧ್ವಜ ಹಿಡಿದು ಹೆಜ್ಜೆ ಹಾಕಬೇಕು. ಈ ಸಂಪ್ರದಾಯ ಬಸವಕಲ್ಯಾಣದ ಬಸವಣ್ಣನ ಜಾತ್ರೆಯ ಮೆರವಣಿಗೆಯಲ್ಲಿ ಪ್ರತಿವರ್ಷ ನಡೆದೇ ಇರುತ್ತದೆ. ಹೀಗೆ ಮಾಡುವುದು ಘನತೆ ಗೌರವಗಳ ಸಂಕೇತ ಅಲ್ಲದೆ ಆತ್ಮಾಭಿಮಾನದ ಪ್ರತೀಕವೆಂದು ತಿಳಿದು ನಂದೀ ಧ್ವಜ ಹಿಡಿದುಕೊಂಡು ಕುಣಿಯುವರು.

೪:೧೧: ಗಡ್ಡೆ ತೇರು :

ತೇರುಗಳಲ್ಲಿರುವ ಒಂದು ಪ್ರಕಾರವೇ ಗಡ್ಡೇ ತೇರು. ಕೊಪ್ಪಳದ ಗವಿಸಿದ್ಧೇಶ್ವರ ಮಠದಲ್ಲಿ ಗಡ್ಡೆ ತೇರಿದೆ. ಪ್ರತಿವರ್ಷ ಗಡ್ಡೆ ತೇರಿಗೆ ಬಣ್ಣ–ಬಳಿದು ಪ್ರದರ್ಶನಕ್ಕಾಗಿ ಇಟ್ಟು ಜಾತ್ರೆಯ ಕೊನೆ ದಿನ ತೇರನ್ನು ಎಳೆಯುತ್ತಾರೆ. ವಾಸ್ತವವಾಗಿ ಎಳೆಯ ಮಕ್ಕಳು, ರೋಗಿಗಳು, ಬಾಣಂತಿಯರು, ಮೈನೆರೆದವರು ಇಂಥ ಕೆಲವೇ ಜನರನ್ನು ಬಿಟ್ಟು ಮಿಕ್ಕ ಭಕ್ತರು ರಥೋತ್ಸವದಲ್ಲಿ ಪಾಲ್ಗೊಳ್ಳುವ ಪರಿಪಾಠ ಇದೆ. ಎಳೆಯ ಮಕ್ಕಳು ಮತ್ತು ರೋಗಿಗಳು ರಥೋತ್ಸವದಲ್ಲಿ ಭಾಗವಹಿಸುವುದರಿಂದ ತುಳಿತಕ್ಕೆ ಒಳಗಾಗುವರು. ಬಾಣಂತಿಯರು, ಮೈನೆರೆದವರು ಭಾಗವಹಿಸುವುದರಿಂದ ಮೈಲಿಗೆಗೆ ಕಾರಣರಾಗುತ್ತಾರೆಂಬ ನಂಬಿಕೆಯಿಂದ, ಈ ರಥೋತ್ಸವದಲ್ಲಿ ಪಾಲ್ಗೊಳ್ಳಬಾರದೆಂದು ಮುನ್ಸೂಚನೆ ಕೊಟ್ಟಿರುತ್ತಾರೆ. ಹೀಗಾಗಿ ಪಾಲ್ಗೊಳ್ಳುವುದಿಲ್ಲ.

ತೇರು ಮಾನವನ ದೇಹದ ಪ್ರತೀಕ. ಹೀಗೆಂದು ನಂಬಿದ್ದ ಮುಗ್ಧ ಜನಪದರು ದೇವರ ತೇರು ಎಳೆದರೆ ತಮ್ಮ ತೇರು ಎಳೆದುಕೊಂಡಂತೆ, ಪಾಪ ಕರ್ಮಗಳಿಂದ ಮುಕ್ತರಾದಂತೆ ಎಂದು ತಿಳಿದು ತೇರಿನ ಹಗ್ಗಕ್ಕೆ ಜಾತ್ರೆಗೆ ಬಂದ ಭಕ್ತರು ತಪ್ಪದೇ ಕೈ ಹಚ್ಚುವ ಪರಿಪಾಠ ಬೆಳೆಸಿಕೊಂಡಿದ್ದಾರೆ.

೪:೧೨: ಬಂಜೆ ಹೆಣ್ಣು ಮಕ್ಕಳು :

ರಾಯಚೂರಿನಿಂದ ಪೂರ್ವಕ್ಕೆ ೨೦ ಮೈಲು ಅಂತರದಲ್ಲಿರುವ 'ನಾರದಗಡ್ಡೆ' ಪವಿತ್ರ ಸ್ಥಳ. ಪ್ರತಿವರ್ಷ ಶಿವರಾತ್ರಿ ಸಮಯದಲ್ಲಿ ಜಾತ್ರೆ ಜರುಗುತ್ತದೆ. ಅಂದು ಭಜನೆ ಕೀರ್ತನೆ ನಡೆಯುತ್ತದೆ. ಬಂಜೆ ಹೆಣ್ಣು ಮಕ್ಕಳು ಜಾತ್ರೆಗೆ ಬಂದು ತೇರಿಗೆ ಕಳಸ ಏರಿಸುವರು. ನಂತರ ನಾರದಗಡ್ಡೇಶ್ವರನ ತೊಟ್ಟಿಲು ತೂಗುವರು. ಹೀಗೆ ಮಾಡುವುದರಿಂದ ಮಕ್ಕಳಾಗುತ್ತವೆಂಬ ನಂಬಿಕೆ ಇದೆ, ಹೀಗಾಗಿ ಜಾತ್ರೆ ಸಮಯದಲ್ಲಿ ಬಂಜೆ ಹೆಣ್ಣು ಮಕ್ಕಳು ಹೆಚ್ಚಾಗಿ ಕಂಡುಬರುತ್ತಾರೆ.

೪:೧೩: ಉರುಳು ಸೇವೆ :

ಗಲಬರ್ಗಾ ಜಿಲ್ಲೆಯ ಅಫಜಲಪೂರ ತಾಲ್ಲೂಕಿನ ಮಾಶ್ಯಾಳದ ಚೌಡೇಶ್ವರಿ ಜಾತ್ರೆಯಲ್ಲಿ ಚೌಡಮ್ಮನ ಮುಖವಾಡವನ್ನು ತಲೆಯ ಮೇಲೆ ಹೊತ್ತು ಜನರ ಗುಂಪಿನ ನಡುವೆ ನುಗ್ಗುವ ಗುಡ್ಡವನ್ನು ನೂರಾರು ಜನರು ಹಿಂಬಾಲಿಸುತ್ತಾರೆ. ಬೇವಿನ ಮರದ ಸೊಪ್ಪಿನಿಂದ ಚಾಮರ ಬೀಸುತ್ತಾರೆ. ಹರಕೆ ಹೊತ್ತ ಭಕ್ತರು ಅಡ್ಡ ಅಡ್ಡ ನೆಲದ ಮೇಲೆ ಊರುಲು ಸೇವೆ ಮಾಡುತ್ತಾರೆ. ಕೆಲವರಂತೂ ನೇಗಿಲು ಹೊತ್ತುಕೊಂಡು ಪೂಜೆ ಗೈಯ್ಯುತ್ತಾರೆ. ಹೀಗೆ ಮಾಡುವುದರಿಂದ ಇಡಿ ಹಳ್ಳಿಯಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸುವುದಿಲ್ಲ. ಮಳೆ–ಬೆಳೆ ಏಕಕಾಲದಲ್ಲಿ ಬರುತ್ತದೆಂಬ ನಂಬಿಕೆ ಅಲ್ಲಿಯ ಜನರದಾಗಿದೆ.

೪:೧೪: ಗಾವು :

ಬೀದರಿನ ಬಗ್ದಲ್ ಗ್ರಾಮದ ಮಾರಮ್ಮನ ಜಾತ್ರೆ ಸ್ವರೂಪ ಹೀಗಿದೆ. ೩ ಇಲ್ಲವೇ ೭ ವರ್ಷಕ್ಕೊಮ್ಮೆ ಜಾತ್ರೆ ಈ ಗ್ರಾಮದಲ್ಲಿ ಜರುಗುತ್ತದೆ. ಈ ಉತ್ಸವದಲ್ಲಿ ಗಾವು ಪದ್ಧತಿ ಇದೆ. ಗಾವು ಎಂದರೆ ಮೇಕೆ, ಹೊಂಡವೊಂದರಲ್ಲಿ ನಿಲ್ಲಿಸಿದ ಕುರಿಯ ಕುತ್ತಿಗೆಯನ್ನು ಪೋತರಾಜನು ಹಲ್ಲಿನಿಂದ ಕಡಿದು ಹೊಂಡದಲ್ಲಿ ಕೆಡುವಿ ಅದನ್ನು ಮೆಟ್ಟಿ ಕುಣಿದು ಮಣ್ಣು ಹಾಕಿ ಹುಗಿದು ಬಿಡುತ್ತಾನೆ. ನೆಲದ ಮೇಲೆ ಬಿದ್ದ ರಕ್ತದ ಮಣ್ಣನ್ನು ಹೊಲದಲ್ಲಿ ಹಾಕುತ್ತಾನೆ. ಹೀಗೆ ಮಾಡುವುದರಿಂದ ಮಳೆ-ಬೆಳೆ ಏಕ ಕಾಲದಲ್ಲಿ ಬರುತ್ತದೆಂಬ ನಂಬಿಕೆ.

೪:೧೫: ತೇರಿನ ರಚನೆ-ವಿಧಾನ :

ಹುಮನಾಬಾದ ವೀರಭದ್ರೇಶ್ವರ, ಕೊಪ್ಪಳದ ಗವಿಸಿದ್ದೇಶ್ವರ, ಕಲ್ಬುರ್ಗಿ ಶರಣಬಸವೇಶ್ವರ ರಥಗಳು ನೋಡಲು ಆಕರ್ಷಕವಾಗಿವೆ. ತೇರುಗಳ ವಿನ್ಯಾಸ-ಕಲಾ ಕೌಶಲ್ಯ ಅಲಂಕೃತವಾದ್ದರಿಂದ ಕಣ್ಮನಗಳನ್ನು ಸೆಳೆಯುತ್ತವೆ. ತೇರು ಕೆತ್ತುವ ಮತ್ತು ಕಟ್ಟುವ ಶಿಲ್ಪಿಯ ಕೆಲಸ ಲಲಿತ ಕಲೆಗಳಲ್ಲಿ ಒಂದು. ಶಕುನ ಅಪ-ಶಕುನಗಳಲ್ಲಿ ನಂಬಿಕೆಯಿದ್ದು ಸಮಯದಲ್ಲಿ ತೇರು ರಚನೆಯ ಅವಧಿಯಲ್ಲಿ ಯಾವುದೇ ಅನಿಷ್ಟ ಘಟನೆಗಳು ನಡೆಯದೇ ಇರುವಂತೆ ನೋಡಿ ಕೋಳುತ್ತಾರೆ. ದೇವರ ಮಹಿಮೆ ಪರಾಕ್ರಮ ಹಾಗೂ ಐಶ್ವರ್ಯಕ್ಕೆ ಅನುಗುಣವಾಗಿ ಆಕಾರ ಮತ್ತು ಗಾತ್ರ ಭವ್ಯತೆಯಲ್ಲಿ ವ್ಯತ್ಯಾಸ ಇರುವುದು ಈ ನಾಡಿನ ವೈಶಿಷ್ಟ್ಯ.

ಗಂಜಲ. ಗಂಧ, ತೇಗ, ಹೊನ್ನಿ, ಹಲಸು, ತಾರಿ ಬೇವು, ಚಂದನ, ಕಟ್ಟಿಗೆಗಳಲ್ಲದೆ ಕಬ್ಬಿಣದಿಂದ ಮಾಡಿದ ರಥಗಳು ಈ ನಾಡಿನಲ್ಲಿವೆ. ಕಟ್ಟಿಗೆಯಿಂದ ಹೊಸ ರಥ ಸಿದ್ಧಪಡಿಸಬೇಕಾದರೆ, ಅರಣ್ಯವನ್ನು ಸುತ್ತಾಡಿ ಯೋಗ್ಯ ಮರಗಳನ್ನೇ ಚುನಾಯಿಸಿ ಶಾಸ್ತ್ರೋಕ್ತ ವಿಧಿ-ವಿಧಾನಗಳಿಂದ ಪೂಜೆ ನೆರವೇರಿಸಿ ಮರ ಕಡಿಯುತ್ತಾರೆ. ರಥ ರಚನೆ ಮಾಡುವ ಮುಖ್ಯ ಬಡಿಗ ಅಥವಾ ಶಿಲ್ಪಿ, ಪ್ರತಿಮಾ ಶಿಲ್ಪಿ, ಆಗಮಗಳಲ್ಲಿನ ಎಲ್ಲ ವಿವರವನ್ನು ಬಲ್ಲವನಾಗಿರಬೇಕು. ಅವನ ಸಲಹೆಯಂತೆ ಇನ್ನುಳಿದ ಶಿಲ್ಪಿಗಳು ರಥದ ರಚನೆಯಲ್ಲಿ ನೆರವಾಗುತ್ತಾರೆ.

ತೇರುಗಳಲ್ಲಿ ಚೌಕ, ಅಷ್ಟ, ಕಮಲ, ನಕ್ಷತ್ರ, ದ್ವಾದಶ-ವರ್ತುಲಾಕೃತಿ, ಇತ್ಯಾದಿ ಬಗೆಯ ತೇರುಗಳಿವೆ. ತೇರಿನ ರಚನಾ ಕಾರ್ಯ ಕೆಳಭಾಗದಿಂದ ಮೇಲಕ್ಕೆ ಅಂತಸ್ತುಗಳಲ್ಲಿ ನಡೆಯುತ್ತದೆ. ತೇರಿನ ಗಾಲಿಗಳು ದಪ್ಪವಾದ ಹಲಗೆಗಳಿಂದ ಮಾಡಿದ್ದಾಗಿರುತ್ತದೆ. ಅವು ಆಕೃತಿಯಲ್ಲಿ ಒಡ್ಡರ ಬಂಡಿಯ ಗಾಲಿಗಳಂತೆ ಹೋಲುತ್ತವೆ. ತೇರಿನ ಗಡ್ಡೆಯ ಸುತ್ತಲೂ ವಿವಿಧ ಆಕೃತಿಯ ಚಿತ್ರಗಳು ಕೆತ್ತುವರು. ಅವುಗಳಲ್ಲಿ ಪಂಚ ತಂತ್ರ ಕಥೆ,

ನವಗ್ರಹ ದಶವತಾರ, ಪುರಾಣೇತಿಹಾಸ, ಕಾಮಶಾಸ್ತ್ರ, ಕಿನ್ನರದ್ವಾರಪಾಲಕ, ಗಂಧರ್ವ ದೇವತೆ, ಮನುಷ್ಯ ಸ್ತ್ರೀ ಮೂರ್ತಿ, ಗಜಸಿಂಹ, ಕುಂಜರಸಿಂಹ, ಮೊಸಳೆ ಮಕರನಾಗ, ಹನುಮಂತ, ಗರುಡ, ನಂದಿ ಮತ್ತು ಪ್ರಾಣಿ ಪಕ್ಷಿಗಳು ಹೀಗೆ ಹಲವಾರು ಬಗೆಯ ಕುಸುರಿ ಕೆತ್ತನೆ ಕಂಡುಬರುತ್ತದೆ. ಹೊರ ಮೈಯಲ್ಲಿ ಕೊರೆದ ನಕ್ಷೆಗೆ ಸರಿಹೊಂದುವಂತೆ ಬೆಳ್ಳಿಯ ತಗಡುಗಳನ್ನು ಜೋಡಿಸುವ ವಿಧಾನ ಬಳಕೆಯಲ್ಲಿದೆ. ಚಕ್ರಗಳ ಪರಧಿ ರಂಧ್ರಗಳಿಗೆ ಹಾಗೂ ಜೋಡಣೆಯ ಭಾಗಗಳಿಗೆ ಲೋಹದ ಪಟ್ಟಿಯನ್ನು ಸೇರಿಸಿ ಹೆಚ್ಚು ಕಾಲ ಬಾಳುವಂತೆ ಮಾಡುತ್ತಾರೆ. ತೇರನ್ನು ಸುಗಮವಾಗಿ ಜಗ್ಗಲು ಎರಡು ಮಿಣಿ ಹಗ್ಗ ಅಥವಾ ಸೊಲುಹಗ್ಗ ಬಳಸುವ ಪದ್ಧತಿ ಈ ನಾಡಿನಲ್ಲಿದೆ.

೪:೧೬: ರಥೋತ್ಸವಗಳು :

ಈ ಪ್ರದೇಶದ ರಥೋತ್ಸವಗಳು ತನ್ನದೇ ಆದ ವಿಶಿಷ್ಟತೆಯನ್ನು ಪಡೆದಿವೆ. ಉತ್ಸವ ಇನ್ನೂ ಒಂದೆರಡು ವಾರ ಮುಂದಿರುವಾಗಲೇ ತೇರನ್ನು ತೊಳೆದು ಅದರ ಮೇಲ್ಭಾಗದಲ್ಲಿ ಗೋಪನ್ನು ಕಟ್ಟುತ್ತಾರೆ. ಬಿದಿರು ಪಟ್ಟೆಗೆಳಿಂದ ಗೋಪುರ ತಯಾರಿಸಿ ವಿವಿಧ ಬಣ್ಣದ ಪಟ್ಟಿಯ ಪತಾಕೆಗಳನ್ನು ಸುತ್ತಲೂ ಸೇರಿಸುತ್ತಾರೆ. ಮಾವಿನ ತೋರಣ ಕಬ್ಬು, ಹೂಗಳು ಮಾಲೆ ಕಟ್ಟುತ್ತಾರೆ. ಸಣ್ಣ ವಿದ್ಯುತ್ ದೀಪಗಳಿಂದ ಅಲಂಕರಿಸುತ್ತಾರೆ. ಈ ನಾಡಿನ ತೇರುಗಳು ೨೦' ರಿಂದ ೭೮' ಅಡಿ ಎತ್ತರವಾಗಿರುತ್ತವೆ. ಹಿತ್ತಾಳೆಯ ಕಳಸವನ್ನು ಹೊಂದಿದ ತೇರುಗಳೇ ಹೆಚ್ಚು ಜಾತ್ರೆಯ ಕೊನೆಯ ದಿನ ರಥೋತ್ಸವವಿರುತ್ತದೆ. ಬಡವ ಶ್ರೀಮಂತರು ಆಸ್ತಿಕರೆಲ್ಲರು ರಥೋತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ರಥ ಎಳೆಯುವಾಗ ಆಯಾ ದೇವರ ಕುರಿತು ಜಯ ಘೋಷಣೆಗಳು ಮೊಳಗುತ್ತವೆ. ತೇರು ಸಾಗುತ್ತಿದ್ದಂತೆ ಭಕ್ತರು ಉತ್ತತ್ತಿ. ಅಡಿಕೆ, ಬಾಳೆಹಣ್ಣು ರಥದತ್ತ ಎಸೆಯುತ್ತಾರೆ. ಎಸೆದ ಹಣ್ಣುಗಳು ಭಕ್ತರು ಪ್ರಸಾದವೆಂದು ಬುತ್ತಿ(ನೆಲಕ್ಕ ಬೀಳದಂತೆ) ಹಿಡಿದು ಮನೆಗೆ ತರುತ್ತಾರೆ. ತಂದ ಹಣ್ಣು ಮನೆ ಮಂದಿಗೆಲ್ಲ ಕೊಡುವರು. ಹೀಗೆ ಕೊಡುವುದರಿಂದ ಯಾರಿಗೂ ಯಾವ ರೋಗ ಬರುವುದಿಲ್ಲವೆಂಬ ನಂಬಿಕೆಯಿದೆ.

೪:೧೭: ಗುದ ಪೂಜೆ :

ಪ್ರತಿ ಶನಿವಾರ ಬೀದರಿನಲ್ಲಿ ನರಸಿಂಹ ದೇವರ ಜಾತ್ರೆ ಜರುಗುತ್ತದೆ. ಈ ದೇವರಿಗೆ ಗುದ ಪೂಜೆ ಮಾಡುವ ವಿಶಿಷ್ಟ ಪರಿಪಾಠಇದೆ, ನರಸಿಂಹ ಕುರುಬ ಜನಾಂಗಕ್ಕೆ ಸೇರಿದ ಒಬ್ಬ ಶಿವಭಕ್ತ. ಕುರಿ ಕಾಯುವುದು ಇವನ ವೃತ್ತಿ. ಒಂದು ದಿನ ಕುರಿ ಕದಿಯಲು ಕಳ್ಳರು ಮನೆಗೆ ಬಂದಾಗ, ನರಸಿಂಹ ಎಚ್ಚರಗೊಳ್ಳುತ್ತಾನೆ. ಎಚ್ಚರಗೊಂಡದ್ದನ್ನು ನೋಡಿ ಕಳ್ಳರು ಹೊಡೆಯಲು ಹೋದಾಗ ನರಸಿಂಹ ಓಡು ಹೋಗುತ್ತಾನೆ. ಕಳ್ಳರು ಬೆನ್ನಟ್ಟುತ್ತಾರೆ. ಓಡಿ ದಣಿದ ನರಸಿಂಹ ಬಂದು ಗುಹೆಯೊಳಗೆ

ಕಾಣೆ ಆಗಿ ತನ್ನ ಸಿದ್ಧಿಮಂತ್ರ ಸಾಧನೆಯಿಂದಾಗಿ ಕಳ್ಳರು ಗುಹೆಯೊಳಗೆ ಬಾರದಂತೆ ನೀರನ್ನು ಬಿಡುತ್ತಾನೆ. ನೀರು ಗುಹೆ ತುಂಬೆಲ್ಲ ಹರಿಯುತ್ತದೆ. ಕಳ್ಳರು ಗುಹೆಯೊಳಗೆ ಹೊಗದೆ ಹಿಂದಕ್ಕೆ ಬಂದು ಕುರಿ ಕಳುವು ಮಾಡಿಕೊಂಡು ಹೋಗುತ್ತಾರೆ. ಅಂದೆ ನರಸಿಂಹ ಒಳ ಗುಹೆಗೆ ಎದುರಾಗಿ ಲೀನವಾದ ಎನ್ನುವುದು ದಂತ ಕಥೆ.

ಅಂದಿನಿಂದ ಇಂದಿನವರೆಗೂ ಭಕ್ತರು ಗುಹಾಂತರ ನರಸಿಂಹ ದರ್ಶನಕ್ಕೆ ನೀರಿನಲ್ಲಿಯೇ ಹೋಗಿ ಗುದ ಪೂಜೆ ಮಾಡಿ ನೈವೇದ್ಯ ಅರ್ಪಿಸಿ ದರ್ಶನ ಪಡೆದುಕೊಂಡು ಮರಳಿ ನೀರಿನಲ್ಲಿಯೇ ಬರುತ್ತಾರೆ. ವಾರಕ್ಕೊಂದು (ಶನಿವಾರ)ಜಾತ್ರೆ ಜರುಗುತ್ತದೆ. ಕುರಿ–ಕೋಳಿ ಕಂದೂರಿ (ಬಲಿ) ಸಂಪ್ರದಾಯ ಇಲ್ಲಿದೆ. ಮದುವೆಯಾದ ನವದಂಪತಿಗಳು ಶುಭರಾತ್ರಿ ಮೊದಲು ನರಸಿಂಹನ ಗುದ ಪೂಜೆ ಮಾಡಿ ಶುಭರಾತ್ರಿ ನಡೆಸಿದರೆ ಬೇಗ ಮಕ್ಕಳಾಗುತ್ತವೆ. ಸಂಸಾರ ಸುಖಮಯವಾಗುತ್ತದೆ ಜೀವನದಲ್ಲಿ ಯಾವ ತಾಪತ್ರಯ ಬರುವುದಿಲ್ಲ ಎಂಬ ನಂಬಿಕೆ ಇದೆ.

೪:೧೮: ಮಾರಾಟ ಮಳಿಗೆಗಳು :

ಬಸವಕಲ್ಯಾಣ ಬಸವಣ್ಣನ ಜಾತ್ರೆ, ಉತ್ಸವದ ಸಮಯದಲ್ಲಿ ಹತ್ತಾರು ಶಿವಶರಣರು ರಚಿಸಿದ ಸಾಹಿತ್ಯದ ಪುಸ್ತಕ ಪ್ರದರ್ಶನ ಮಾರಾಟ ಮಳಿಗೆ ಹಾಕುತ್ತಾರೆ. ಮಳಿಗೆಯಲ್ಲಿ ವಚನ ಸಾಹಿತ್ಯದ ಪುಸ್ತಕಗಳು, ವಚನಗಳ ಕ್ಯಾಸೇಟ್, ಬಸವಣ್ಣನ ಫೋಟೋ, ವಿಭೂತಿ, ರುದ್ರಾಕ್ಷಿ, ಮುಂತಾದ ವಸ್ತುಗಳು ಲಭ್ಯವಾಗಿರುತ್ತವೆ. ಜಾತ್ರೆಗೆ ಬಂದ ಭಕ್ತರು ತಪ್ಪದೇ ವಚನ ಸಾಹಿತ್ಯದ ಪುಸ್ತಕ ಕ್ಯಾಸೇಟ್ ಇತರೆ ವಸ್ತುಗಳು ಖರೀದಿಸುತ್ತಾರೆ. ಇದರ ಉದ್ದೇಶ ಪ್ರತಿಯೊಬ್ಬ ಭಕ್ತನ ಮನೆಯಲ್ಲಿ ವಚನ ಸಾಹಿತ್ಯದ ಪ್ರಭಾವ ಬೀರಿ, ಅವನ ನಡೆನುಡಿ ಶಿವಶರಣರಂತೆ ಆಗಲಿ, ಮುಕ್ತಿ ಪಡೆಯಲಿ ಎಂಬುದೇ ಆಗಿರುತ್ತದೆ.

೪:೧೯: ವಿಷ ಜಂತು :

ರಾಯಚೂರಿನಿಂದ ೧೭ ಕಿ.ಮೀ. ದೂರದಲ್ಲಿ ಕಲ್ಮಲಾ ಎಂಬ ಗ್ರಾಮವಿದೆ. ಅಲ್ಲಿ ಕರಿಯಪ್ಪ ಶಿವಯೋಗಿಯ ಗದ್ದುಗೆ ಇದೆ. ಪ್ರತಿವರ್ಷ ಶ್ರಾವಣ ಮಾಸದಲ್ಲಿ ೩೦ ದಿನಗಳ ಕಾಲ ಜಾತ್ರೆ ಜರುಗುತ್ತದೆ. ಸಹಸ್ರಾರು ಭಕ್ತರು ಜಾತ್ರೆಗೆ ಬರುತ್ತಾರೆ. ಟೆಂಗು–ಕಾಯಿ–ಕರ್ಪೂರ ಅರ್ಪಿಸುವರು. ಒಂದು ಟೆಂಗು ಒಡೆದರೆ ೫೦ ಪೈಸೆಯಂತೆ ಕಾಣಿಕೆ ಅರ್ಚಕರು ಪಡೆಯುತ್ತಾರೆ. ಇದರಿಂದ ಪ್ರತಿವರ್ಷ ಒಂದು ಲಕ್ಷ ರೂಪಾಯಿ ಆದಾಯ ಮಠಕ್ಕೆ ಬರುತ್ತದೆಂದು ಹೇಳುತ್ತಾರೆ. ಭಕ್ತರು ಜಾತ್ರೆಗೆ ಬರುವುದರಿಂದ ಮಕ್ಕಳಿಲ್ಲದವರಿಗೆ ಮಕ್ಕಳಾಗುತ್ತವೆ. ಯಾವುದೇ ವಿಷ ಜಂತು ಕಡಿಸಿಕೊಂಡು ಬಂದವರಿಗೆ ತಕ್ಷಣ ವಿಷ ಮಾಯವಾಗಿ ಹೋಗುತ್ತದೆಂಬ ನಂಬಿಕೆ ಸುತ್ತಮುತ್ತಲಿನ ಭಕ್ತರದಾಗಿದೆ.

೪:೨೦: ಕುರಾನ್ ಧರ್ಮಗ್ರಂಥ ಪಠಣ :

ರಂಜಾನ್ ಹಬ್ಬ ಮುಸ್ಲಿಂರು ಮಾತ್ರ ಆಚರಿಸುತ್ತಾರೆ. ಹಬ್ಬದ ದಿನಗಳಲ್ಲಿ ನರಕದ ಬಾಗಿಲು ಮುಚ್ಚಿ ಸ್ವರ್ಗದ ಬಾಗಿಲು ತೆರೆದಿರುತ್ತದೆಂಬ, ನಂಬಿಕೆಯಿಂದ ಖುರಾನ್ ಧರ್ಮಗ್ರಂಥ ಪಠಣ ಮಾಡುವುದು ಅದರ ಮಹತ್ವದ ಕುರಿತು ಉಪನ್ಯಾಸನ ನಡೆಸುವುದು ಮಾಡುತ್ತಾರೆ. ಇಸ್ಲಾಂ ಧರ್ಮಕ್ಕಾಗಿ ದುಡಿದು ಲೀನರಾದ ನಂತರ ಸವಿನೆನಪಿಗಾಗಿ ಉರುಸ್‌ಗಳು ಏರ್ಪಡಿಸುತ್ತಾರೆ. ರಂಜಾನ್ ಹಬ್ಬದ ಅಂಗವಾಗಿ ಬೀದರಿನಲ್ಲಿ ಮುಲ್ತಾನಿ ಪಾಶಾ ಉರುಸ್ ಜರುಗುತ್ತದೆ, ಅಂದು ಮುಸ್ಲಿಂರು ಸ್ನಾನ ಮಾಡಿಕೊಂಡು ಹೊಸ ಬಟ್ಟೆ ಧರಿಸಿ, ಈತರ ಎಣ್ಣೆ, ಹೊಸ ಬಟ್ಟೆಯ ಮೇಲೆ ಸಿಂಪಡಿಸಿಕೊಂಡು ಸಡಗರದಿಂದ ಉರುಸ್‌ದಲ್ಲಿ ಭಾಗವಹಿಸುವರು. ಸಾಯಂಕಾಲ ಯಾರೆ ಇರಲಿ, ಒಬ್ಬರಿಗೊಬ್ಬರು ಸಹೋದರ ಭಾವದಿಂದ ಹರ್ಷೋದ್ಗಾರ ಮಾಡುತ್ತ ಕೈಕೂಡಿಸಿ ಪರಸ್ಪರ ಆಲಂಗಿಸುವರು. ಉರುಸ್ ಮತ್ತು ಹಬ್ಬದ ಮುಬಾರಕ್ ಎನ್ನುತ್ತಾ, ಶುಭ ಕೋರುವರು. ಮನೆಗೆ ಬಂದು ಕುರಾನ್ ಧರ್ಮಗ್ರಂಥ ಪಠಣ ಮಾಡುವರು. ಹೀಗೆ ಮಾಡುವುದರಿಂದ ಸತ್ತ ಮೇಲೆ ಕೈಲಾಸ ಸಿಗುತ್ತದೆಂಬ ನಂಬಿಕೆ.

೪:೨೧: ಉಟಗಿ ಸೇವೆ :

ಕಲ್ಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಮಾಪುರಿನಲ್ಲಿ (ತಾಯಿ-ಬಾಯಿ) ಮಾಪೂರಿ ತಾಯಿಯ ಜಾತ್ರೆ ಪ್ರತಿವರ್ಷ ಅಕ್ಷಯತಿದಿಗೆ ಅಮವಾಸ್ಯೆಯಿಂದ ಬಾದಾಮಿ ಅಮವಾಸ್ಯೆಯವರೆಗೆ ನಡೆಯುತ್ತದೆ. ಹರಕೆ ಹೊತ್ತ ಸ್ತ್ರೀ ಪುರುಷರು ಬೇವಿನ ಅಥವಾ ಲಕ್ಕಿಯ ತಪ್ಪಲನ್ನು ನಯವಾಗಿ ಜೋಡಿಸಿ ಅದರ ಹಗ್ಗದಿಂದ ಅಂಗಾಂಗಳಿಗೆ ಕಟ್ಟಿಕೊಂಡು ಮೈ-ಮೇಲೆ ಒಂದು ತುಂಡು ಬಟ್ಟೆ ಇರದೆ ದಿಟ್ಟ ದಿಗಂಬರೆಯಾಗಿ ಮೈ ತುಂಬ ಭಂಡಾರ ಬಳಿದುಕೊಂಡು ಮಾಡುವ ಪೂಜೆಗೆ ಉಟಗಿ ಸೇವೆ ಎನ್ನುತ್ತಾರೆ. ಹೀಗೆ ಮಾಡುವುದರಿಂದ ಮನೆಯಲ್ಲಿ ಯಾವುದೇ ಪಿಡುಗು ಸಂಭವಿಸುವುದಿಲ್ಲವೆಂಬುದೇ ಆಗಿದೆ.

೪:೨೨: ಭಿಕ್ಷುಕರ ಸರಪಳಿ :

ಪುಣ್ಯಪ್ರದ-ಬಲ-ವಿಶೇಷವೇ 'ಪಾಪನಾಶಿನಿ' ತೀರ್ಥಕ್ಷೇತ್ರ. ಬೀದರ ನಗರದಿಂದ ೨ ಕಿ.ಮೀ. ಅಂತರದಲ್ಲಿ ಸ್ವಯಂಭೂ ಲಿಂಗವಿದೆ. ಸುತ್ತಲೂ ಗಿಡ ಗಂಟೆಗಳು ಹೊತ್ತ ಈ ತೀರ್ಥಸ್ಥಳ 'ಪಾಪನಾಶಿನಿ' ಎಂದೆ ಹೆಸರಾಗಿದೆ. ಪ್ರತಿವರ್ಷ ಮಹಾ ಶಿವರಾತ್ರಿ ಹಬ್ಬದಂದು ಮೂರು ದಿನಗಳ ಕಾಲ ಜಾತ್ರೆ ಜರುಗುತ್ತದೆ. ತಂಡ-ಉಪತಂಡವಾಗಿ ಭಿಕ್ಷುಕರು ವಿವಿಧ ಕಡೆಗಳಿಂದ ಬಂದು ಸರಪಳಿ ಹಾಗೆ ಕೊಡುತ್ತಾರೆ. ವೃತ್ತಿ ಭಿಕ್ಷುಕರಾದ ಬುರ್‌ಬುರ್ ಪೋಚಮ್ಮ ಮತ್ತು ಪೋತರಾಜರು ವಿಶಿಷ್ಟವಾಗಿ ಕಾಣಿಸಿಕೊಳ್ಳುತ್ತಾರೆ. ಚಬುಕಾದಿಂದ(ಚಾಟಿ) ಘೋತರಾಜನು ಮೈಮೇಲೆ

ರಕ್ತ ಬರುವ ಹಾಗೆ ಹೊಡೆದುಕೊಂಡು ಜಾತ್ರೆಗೆ ಬಂದ ಭಕ್ತರಿಂದ ಭಿಕ್ಷೆ ಪಡೆದುಕೊಳ್ಳುತ್ತಾನೆ. ಅವ್ವ-ಅಪ್ಪ ಧರ್ಮರಾಯ, ದಾನಧರ್ಮ ಕೊಡು ಎನ್ನುತ್ತಾನೆ. ಇನ್ನು ಸರಪಳಿಯಾಗಿ ಕುಳಿತವರಲ್ಲಿ ಕುರುಡರು, ಕುಂಟರು, ಕೈಯಲ್ಲಿ ತಾಳ ದಮಡಿ ಡೋಲಕ ಹಿಡಿದು ಹಾರ್ಮೋನಿಯಂ ನುಡಿಸುತ್ತ ಹಾಡು ಹೇಳುತ್ತಾರೆ.

ಏ ಅವ್ವ ಏ ಅಪ್ಪ
ಧರ್ಮವ ಕೊಡು ತಂದೆ
ದಾನವ ನೀಡು ಇಂದೆ

ಈ ರೀತಿ ಹಾಡು ಹೇಳುವಾಗ ಜಾತ್ರೆಗೆ ಬಂದ ಭಕ್ತರು ಮರಳಿ ಮನೆಗೆ ಹೋಗುವಾಗ ಭಿಕ್ಷುಕರಿಗೆ ಐದು ಪೈಸೆಯಿಂದ ಒಂದು ರೂಪಾಯಿಯವರೆಗೆ ದಾನ ಕೊಡುವರು. ದಾನ ಮಾಡುವುದರಿಂದ, ಪಾಪವೆಲ್ಲ ಪರಿಹಾರವಾಗುವುದೆಂದು ಭಕ್ತರು ಹೇಳುತ್ತಾರೆ.

೪:೨೩: ಭಾನಾಮತಿ ಗಮ್ಮತ್ತು :

ಗುಲ್ಬರ್ಗಾ ಜಿಲ್ಲೆಯ ಗಾಣಗಾಪೂರದಲ್ಲಿ ಪ್ರತಿವರ್ಷ ಫೆಬ್ರವರಿಯಲ್ಲಿ ದತ್ತಾತ್ರೇಯ ಜಾತ್ರೆ ಜರುಗುತ್ತದೆ. ಉತ್ಸವದ ಸಂದರ್ಭದಲ್ಲಿ ಶ್ರೀ ಗುರುವಿನ ಚರಿತ್ರೆ ಪಾರಾಯಣ, ಸಪ್ತಾಹ ಮತ್ತು ಭಜನೆ ಇರುತ್ತದೆ.

'ದಿಗಂಬರ್ ದಿಗಂಬರ್ ಶ್ರೀ ಪಾದವಲ್ಲಭ ದಿಗಂಬರ್
ದಿಗಂಬರ್ ದಿಗಂಬರ್ ಶ್ರಿ ಪಾದವಲ್ಲಭ ದಿಗಂಬರ್

ಹೀಗೆ ಹಾಡು ಹೇಳುತ್ತ ಚಪ್ಪಾಳೆ ತಟ್ಟುತ್ತಾ, ಜಾತ್ರೆಗೆ ಬಂದ ಭಕ್ತರೆಲ್ಲರೂ ಸಾಮೂಹಿಕವಾಗಿ ಹಾಡುತ್ತಾರೆ. ಆ ಸಮಯದಲ್ಲಿ ದೆವ್ವ-ಪಿಶಾಚಿ ಹಿಡಿದವರು (ಹಿಡಿಸಿಕೊಂಡವರು) ಭಾನಾಮತಿ ಇದ್ದವರು ಸಾಮೂಹಿಕ ಭಜನೆಯಲ್ಲಿ ಸೇರುತ್ತಾರೆ. ಆಗ ಅವರವರ ಮೈಯಲ್ಲಿರುವ ದೆವ್ವ ಬಾನಾಮತಿ ದೂರವಾಗುತ್ತದೆಂಬ ನಂಬಿಕೆಯಿಂದ ಉತ್ಸವದಲ್ಲಿ ಭಾಗವಹಿಸುತ್ತಾರೆ. ಭಾನಾಮತಿ ದೆವ್ವಗಳೆಲ್ಲವು ಮಾಯವಾಗುತ್ತವೆ. ಹೀಗಾಗುವುದು ಸ್ಥಳದ ಮಹಿಮೆ ಎನ್ನಬಹುದು.

೪:೨೪: ಸಾಂಕ್ರಾಮಿಕ ರೋಗ ನಾಶ :

ಬೀದರ ನಗರದಿಂದ ೯ ಕಿ.ಮೀ. ಅಂತರದಲ್ಲಿ ಬೆನಕನ-ಹಳ್ಳಿಯಲ್ಲಿ ಪ್ರಾಚೀನ ಕಾಲದ (ಜನಪದ ದೇವತೆ) ಎಲ್ಲಮ್ಮ ತಾಯಿಯ ದೇವಾಲಯವಿದೆ. ಪ್ರತಿ ಮಂಗಳವಾರ ಮತ್ತು ಶುಕ್ರವಾರ ವಾರದ ಜಾತ್ರೆ ನಡೆಯುತ್ತದೆ. ಸಾಂಕ್ರಾಮಿಕ ರೋಗಕ್ಕೆ ಒಳಗಾದವರು ತಾಯಿಗೆ ಹರಕೆ ಮಾಡುತ್ತಾರೆ. ಬೆಳ್ಳಿಯ ಕಣ್ಣು, ಬಳೆ ಸೀರೆ, ಬೆಳ್ಳಿಯ ರೂಪ ಮಾಡಿಸಿ ಎಲ್ಲಮ್ಮ ತಾಯಿಗೆ ಅರ್ಪಿಸುವರು. ಅನ್ನ-ಉದ್ದಿನ ಬ್ಯಾಳಿಯ ನೈವೇದ್ಯ ಮಾಡುವರು. ಹೀಗೆ ಮಾಡುವುದರಿಂದ ಸಾಂಕ್ರಾಮಿಕ ರೋಗ ನಾಶವಾಗುತ್ತದೆ. ಹೀಗಾಗಿ ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಕರ್ನಾಟಕ

ಜನರು ಸಾಂಕ್ರಾಮಿಕ ರೋಗಕ್ಕೆ ತುತ್ತಾದವರು ಹರಕೆ ಸಲ್ಲಿಸಿ, ಸಾಂಕ್ರಾಮಿಕ ರೋಗದಿಂದ ಮುಕ್ತರಾಗುವರು.

೪:೨೫: ಬಡಿಗೆ ಆಟ :

ಗುಲ್ಬರ್ಗಾ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಮಳ್ಳಿ ಗ್ರಾಮದಲ್ಲಿ ಎರಡು ವರ್ಷಕ್ಕೊಮ್ಮೆ ಫೆಬ್ರವರಿ ಮಾರ್ಚ್ ತಿಂಗಳಲ್ಲಿ ಜನಪದ ದೇವತೆ ಚೌಡೇಶ್ವರಿ ದೇವಿಯ ಜಾತ್ರೆ ನಡೆಯುತ್ತದೆ. ಉತ್ಸವದ ಸಂಜೆ ಚೌಡೇಶ್ವರಿ ಮೆರವಣಿಗೆ ಪ್ರಾರಂಭವಾದಾಗ ದೇವಿಯ ಮುಖವಾಡಗಳು ಭಕ್ತರಿಬ್ಬರು ಹಾಕಿಕೊಂಡು ಕೈಯಲ್ಲಿ ಉದ್ದನೆಯ ಬಡಿಗೆ ಹಿಡಿದು ಬಡಿಗೆ ಆಟ ಆಡುವರು. ಎದುರು-ಬದುರಾಗಿ ಒಬ್ಬರ ಬಡಿಗೆಗೆ ಒಬ್ಬರ ಏಟು ಹಾಕುತ್ತಾ ಕುಣಿಯುತ್ತಾ ಮುನ್ನುಗ್ಗುತ್ತಾರೆ. ಮೆರವಣಿಗೆ ಮುಂದೆ ಮುಂದೆ ಸಾಗಿದಂತೆ, ಮುಖವಾಡ ಧಾರಿಗಳು ಆಚೆ-ಇಚೆ ಲಯಬದ್ಧವಾಗಿ ಹೊಯ್ದಾಡುತ್ತಾರೆ. ತಾಳಕ್ಕೆ ತಕ್ಕಂತೆ ಕುಣಿಯುತ್ತಾ ತಮ್ಮ ಶಕ್ತಿಯಿಂದ ಬಡಿಗೆ ಆಟ ಆಡುವರು. ಹೀಗೆ ಆಡುತ್ತಾ ಬಂದು ತುದಿ ಮುಟ್ಟಿದಾಗ ದೇವಿಯ ಮುಖದವರು ವಿರುದ್ಧ ದಿಕ್ಕಿಗೆ ತಿರುಗಿ ಚೌಡೇಶ್ವರಿ ದೇವಾಲಯಕ್ಕೆ ಮರಳುತ್ತಾರೆ. ಅಲ್ಲಿಗೆ ಬಡಿಗೆ ಆಟ ಆಡುತ್ತಾರೋ ಅವರಲ್ಲಿ ಯಾವುದೇ ರೋಗಗಳು ಕಾಣಿಸಿಕೊಳ್ಳುವುದಿಲ್ಲವೆಂದು ತಿಳಿಯುತ್ತಾರೆ.

೪:೨೬: ಸ್ವಯಂ ಪಾನದ ಪದ್ಧತಿ :

ರಾಯಚೂರು ಜಿಲ್ಲೆಯ ಕೊಪ್ಪಳ ತಾಲ್ಲೂಕಿನ ಹುಲಗಿ ಗ್ರಾಮದಲ್ಲಿ ಪ್ರತಿ ವರ್ಷ ವೈಶಾಖ ಮಾಸದಲ್ಲಿ ಮೂರು ದಿನಗಳ ಕಾಲ ಜನಪದ ದೇವತೆ ಹುಲಿಗೆಮ್ಮ ದೇವಿಯ ಜಾತ್ರೆ ಜರುಗುತ್ತದೆ. ಜಾತ್ರೆಗೆ ಬಂದ ಎಲ್ಲ ಭಕ್ತರಿಗೆ ಊಟಕ್ಕಾಗಿ ಸ್ವಯಂ ಪಾನದ ಪದಾರ್ಥಗಳು (ಬೆಲ್ಲ ಸಕ್ಕರೆ ಬೇಳೆ-ಕಾಳು) ಕೊಡುವ ಪದ್ಧತಿ ಈ ಜಾತ್ರೆಯದು. ಇಲ್ಲಿ ಖಾಂಡ್[೨] ವ್ಯವಸ್ಥೆ ಇರದೇ ಇದ್ದುದರಿಂದ ಈ ವ್ಯವಸ್ಥೆ ಮಾಡಲಾಗಿದೆ. ಜಾತ್ರೆಗೆ ಬಂದ ಪ್ರತಿಯೊಬ್ಬ ಭಕ್ತ ಈ ಪದ್ಧತಿ ಅನುಸರಿಸುತ್ತಾನೆ. ಹೀಗೆ ಮಾಡಿ ಪ್ರಸಾದ ಸ್ವೀಕರಿಸುವುದರಿಂದ ಮನೆಯಲ್ಲಿ ಯಾವುದೇ ಅಹಿತಕರ ಘಟನೆಗಳು ಸಂಭವಿಸುವುದಿಲ್ಲವೆಂಬ ನಂಬಿಕೆ ಇದೆ.

೪:೨೭: ಬರಗಾಲ ಮಾಯವಾಗುವುದು :

ಬರಗಾಲ ಬರಬಾರದೆಂದು ಪ್ರತಿವರ್ಷ ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನಲ್ಲಿ ಕರೆಮ್ಮ ದೇವಿಯ ಜಾತ್ರೆ ಚೈತ್ರ ಶುದ್ಧ ದಶಮಿಯಂದು ನಡೆಯುತ್ತದೆ. ಜಾತ್ರೆ ಪ್ರಾರಂಭದಲ್ಲಿ ಬ್ರಾಹ್ಮಣ ವರ್ಗದವರು ಗುಡಿಯಲ್ಲಿ ಕಲಶ (ಪೂಜೆಯಲ್ಲಿ

ನೀರು ತುಂಬಿ ಇಡುವ ಚೆಂಬು) ಸ್ಥಾಪಿಸಿ ಪೂಜೆ ಮಾಡಿ ಆರುತಿ ಬೆಳಗಿಸಿ ಪೂಜಾರಿಗಳಿಗೆ ಮುಂದಿನ ಜವಾಬ್ದಾರಿಗಳು ವಹಿಸಿಕೊಡುತ್ತಾರೆ. ದೇವಿಗೆ ವಜ್ರದ ಅಂಗಿ ಹಾಕಿ ಅಲಂಕಾರ ಮಾಡುವರು. ಇದಕ್ಕೆ 'ದರ್ಬಾರ್ ಅಲಂಕಾರ' ಎನ್ನುತ್ತಾರೆ. ಮೂವತ್ತು ಹಳ್ಳಿಗಳಿಂದ ಭಕ್ತಾದಿಗಳು ಹೊಸ ಹೊಸ ಗಡಿಗೆಯಲ್ಲಿ ಅನ್ನ ಕುದಿಸಿಕೊಂಡು ಬಂದು, ಬೇವಿನ ತಪ್ಪಲಿನೊಂದಿಗೆ ನೈವೇದ್ಯ ಅರ್ಪಿಸುವರು. ಹೀಗೆ ಮಾಡುವುದರಿಂದ ಬರಗಾಲ ಸಂಭವಿಸುವುದಿಲ್ಲ ಎಂದು ಬಲವಾಗಿ ನಂಬುತ್ತಾರೆ.

೪:೨೮: ದಿಂಡಿ–ಮೊಸರು ಗಡಿಗೆಯಾಟ :

ಬೀದರಿನ ವಿಠ್ಠಲ ದೇವರ ಜಾತ್ರೆಯಲ್ಲಿ 'ದಿಂಡಿ' ಕಾರ್ಯಕ್ರಮವಿರುತ್ತದೆ. ದಿಂಡು ಎಂದರೆ ಭಜನಾ ಮೇಳ ಎಂದರ್ಥ. ದೇವಾಲಯದ ಪೂಜಾರಿ ಸಣ್ಣ ಗಡಿಗೆಯ ತುಂಬ ಮೊಸರು ತುಂಬಿಕೊಂಡು ಅದಕ್ಕೆ ಪೂಜಿಸಿ ಹೂಗಳಿಂದ ಅಲಂಕಾರ ಮಾಡಿ ತನ್ನ ತಲೆಯ ಮೇಲಿಟ್ಟುಕೊಂಡು ಭಜನಾ ಮೇಳದಲ್ಲಿ (ಮೆರವಣಿಗೆಯಲ್ಲಿ) ಪಾಲ್ಗೊಳ್ಳುತ್ತಾನೆ. ದಿಂಡಿ ದೇವಾಲಯದಿಂದ ನಗರದ ಶಹಾಗಂಜ ಕಮಾನ(ಕೋಟೆ ದ್ವಾರ)ವರೆಗೆ ಬರುತ್ತದೆ. ಕೋಟೆ ದ್ವಾರದ ಮೇಲೆ ಮೊಸರು ಗಡಿಗೆ ಹೊತ್ತ ಅರ್ಚಕ (ಶಹಾಗಂಜ ಕಮಾನಿನ ಮೇಲೆ ನಿಂತು) ಮೊಸರು ಗಡಿಗೆ ಕೆಳಗೆ ಇಳಿಬಿಡುತ್ತಾನೆ. ದ್ವಾರದ ಕೆಳಗೆ ನಿಂತ ದಿಂಡಿ ಮೇಳದವರು ತಮ್ಮ ತಮ್ಮ ಕೈಯಲ್ಲಿದ್ದ ತಾಳಗಳಿಂದ ಮೊಸರು ಗಡಿಗೆ ಒಡೆದು ಹಾಕುತ್ತಾರೆ. ಮೊಸರು ಭಕ್ತರ ಮೇಲೆ ಚೆಲ್ಲುತ್ತದೆ. ಭಕ್ತರು ಸೋರುತ್ತಿರುವ ಮೊಸರು ಕುಡಿಯಲು ಆಶೆ ಪಟ್ಟು ನೂಕು–ನುಗ್ಗಲುಗೊಳ್ಳುತ್ತಾರೆ, ಈ ದಿಂಡಿಯ ಮೊಸರು ಕುಡಿಯುವದರಿಂದ ಮನೆಯಲ್ಲಿ ಮಂಗಳಕರವಾದ ಕಾರ್ಯ ಜರುಗುತ್ತದೆಂದು ತಿಳಿದು ಬರುತ್ತದೆ.

೪:೨೯:ದನಗಳ ಜಾತ್ರೆ :

ಗ್ರಾಮೀಣ ಜನರ ಬದುಕಿನ ಅವಿಭಾಜ್ಯ ಅಂಗ ಕೃಷಿ. ಅವರ ಜೀವನಾಡಿಯೂ ಹೌದು. ರೈತರಿಗೆ ಎತ್ತುಗಳು ಹಾಗೂ ಸಾಕು ಪ್ರಾಣಿಗಳು ಅವಶ್ಯಕ. ಶೇಕಡಾ ೯೦ರಷ್ಟು ಕೃಷಿಕರಿಗೆ ಒಕ್ಕಲುತನ ಭಾರವನ್ನು ಹಗುರ ಮಾಡುವ ನಿಸ್ವಾರ್ಥ ಪ್ರಾಣಿಗಳಿವು. ಒಬ್ಬ ರೈತ ಎಷ್ಟು ಎತ್ತು ಸಾಕಿದ್ದಾನೆ ಎಂಬುದನ್ನು ಅವಲಂಬಿಸಿ ಆತ ಕೃಷಿಗೆ ಎಷ್ಟು ಪ್ರಾಮುಖ್ಯತೆ ಕೊಟ್ಟಿದ್ದಾನೆ ಎಂಬುದು ನಿರ್ಧಾರವಾಗುತ್ತದೆ. ಎತ್ತಿನ ಪ್ರಸ್ತಾಪ ಬಂದಾಗ ಗ್ರಾಮೀಣ ಜನರು ಎಷ್ಟು ಎತ್ತಿನ ರೇಟ ಆದ ಎಂಬ ಪ್ರಶ್ನೆ ಸರ್ವೇ ಸಾಮಾನ್ಯ. ಕೃಷಿ ಎಷ್ಟೇ ಆಧುನೀಕರಣಗೊಂಡಿದ್ದರೂ ಎತ್ತುಗಳಿಲ್ಲದೆ ಒಕ್ಕಲುತನ ಮಾಡುವುದು ಅಸಾಧ್ಯ. ಪ್ರತಿ ರೈತನೂ ಸದೃಢ ಹಾಗು ಬಲಶಾಲಿ ಎತ್ತುಗಳು ನಿರೀಕ್ಷೆಯಲ್ಲಿರುವುದು ಸ್ವಾಭಾವಿಕ. ಹೀಗಾಗಿ ರೈತರೆಲ್ಲರೂ ಎತ್ತಿಗಾಗಿ ಆಕರ್ಷಿಸುವ ಹೈದ್ರಾಬಾದ ಕರ್ನಾಟಕ ಪ್ರದೇಶದ ಪ್ರಮುಖ ದನಗಳ ಜಾತ್ರೆಗಳೆಂದರೆ

ಹುಮನಾಬಾದ ವೀರಭದ್ರೇಶ್ವರ, ಇಟಗಾ ಭದ್ರೇಶ್ವರ, ರಾಯಚೂರು ನಾರದಗಡ್ಡೆ, ಔರಾದ್ ಅಮರೇಶ್ವರ, ಕಲಬುರ್ಗಿ ಶರಣ ಬಸವೇಶ್ವರ ದನದ ಜಾತ್ರೆ ಮುಂತಾದವುಗಳು. ದನಗಳ ಜಾತ್ರೆಗಳ ಜೊತೆಯಲ್ಲಿಯೇ ದೇವರುಗಳ ಜಾತ್ರೆ ಜರುಗುತ್ತದೆ.

ದಾರಿಯುದ್ದಕ್ಕೂ ಎತ್ತು ಎಮ್ಮೆ ಹಸುಗಳ ಸಾಲು ಕಣ್ಣೋಟದುದ್ದಕ್ಕೂ ಬಂಡಿಗಳ ಸಾಲು, ಹಲ್ಯಾ ಹಲ್ಯಾ ಹೊಯ್ಯ, ಹೊಯ್ಯ, ಚೀರಿ (ಹೊಳಾಗ್ರೀ) ಎಪ್ಪ ಎಂದು ಎತ್ತಿನ ಬಾಲ ಮುದುಡಿ ಹುರುಪಿನಿಂದ ಸಾಗುವ ಒಕ್ಕಲಿಗರ ಸಾಗರ.

ಜಾತ್ರೆಯ ಒಂದು ದಿನ ಮುಂಚಿತವಾಗಿಯೇ ಎತ್ತು ಎಮ್ಮೇ ಆಕಳಗಳಿಗೆ ಸಾಬೂನಿನಿಂದ ತೊಳೆದು, ಎಣ್ಣೆಯಿಂದ ಒರಿಸಿ, ಥಳ-ಥಳ ಹೊಳಿಯುವಂತೆ ಮಾಲಿಸ ಮಾಡಿ ಕೊರಳಲ್ಲಿ ಚೈನ ಗಂಟಗಳ ಸರಪಳಿ ಕಟ್ಟಿ, ಹಣೆಗೆ ಬಣ್ಣ ಬಣ್ಣದ ಹಗ್ಗ ಮತ್ತು ಬಾಸಿಂಗ ಹಾಕಿ ಕೋಡುಗಳಿಗೆ ಬಣ್ಣ ಬಳಿದು ಬೆನ್ನಿಗೆ ಕರಿದಾರ ಬಿಗಿದು ಜಾತ್ರೆಗೆ ತರುವ ಸಂಪ್ರದಾಯ. ಇದರ ಉದ್ದೇಶ ಬೇಗನೆ ಪ್ರಾಣಿಗಳು ಮಾರಲೆಂಬುದೇ ಆಗಿರುತ್ತದೆ. ದನಗಳ ಜಾತ್ರೆ ಇಷ್ಟೊಂದು ಪ್ರಸಿದ್ಧಿ ಪಡೆಯಲು ಪ್ರಮುಖ ಕಾರಣವೆಂದರೆ ಆಯಾ ಒಕ್ಕಲಿಗರ ಅಭಿಲಾಷೆಯನ್ನು ಈಡೇರಿಸಬಲ್ಲಂಥ ಹಲವು ಬಗೆಯ ಎಮ್ಮೆ-ಎತ್ತು ಆಕಳುಗಳು ಈ ಜಾತ್ರೆಯಲ್ಲಿ ಲಭ್ಯವಿರುತ್ತವೆ. ಗುಜರ್ ಜಾತಿಯ ಎಮ್ಮೆ ಆಕಳಿಕೆಗೆ ವ್ಯಾಪಕ ಬೇಡಿಕೆ. ಬಲಶಾಲಿ ಹಾಗೂ ಚುರುಕುತನ ಪ್ರಾಣಿಗಳಿಗೆ ಸಾಕಷ್ಟು ಕಿಮ್ಮತ್ತು.

ಗುಜರ ಬೆಲೆಯಷ್ಟೇ ಬೇಡಿಕೆಯುಳ್ಳ ಮತ್ತೊಂದು ತಳಿ ಎಂದರೆ ಗುಜ್ಜ ಮಹಲ್, ನಾಗಮಲ್ಲಿಗೆ ಹಾಗೂ ಹರಳು ಮಲ್ಲಿಗೆ ಎಂಬ ತಳಿಗಳು. ಈ ಜಾತಿಯ ಪ್ರಾಣಿಗಳು ಬೆಲೆ ನಾಲ್ಕೂ ಸಾವಿರ ರೂಪಾಯಿಂದ ಹದಿನೈದು ಸಾವಿರದಷ್ಟು ಇರುತ್ತದೆ. ಗ್ರಾಮೀಣಾಭಿವೃದ್ಧಿ ಯೋಜನೆಯನ್ವಯ ರಾಷ್ಟ್ರೀಕೃತ ಬ್ಯಾಂಕುಗಳ ಸಣ್ಣ ಹಾಗೂ ಅತೀ ಸಣ್ಣ ಹಿಡುವಳಿಗಾರರಿಗೆ ಎತ್ತಿನ ಮೇಲೆ ಸಾಲ ನೀಡುತ್ತಲಿವೆ. ಫಲಾನುಭವಿಗಳಿಗೆ ಎತ್ತು ಕೊಡಿಸಲು ಬ್ಯಾಂಕುಗಳ ಅಧಿಕಾರಿಗಳು ಜಾತ್ರೆಗೆ ಬರುತ್ತಾರೆ.

ಕೆಲವೊಂದು ಸಲ ಒಂದೇ ಬೇಡಿಕೆಯ ಎತ್ತುಗಳು ಇಬ್ಬರು ಮೂವರು ಬಯಸುವುದರಿಂದ ಮಾರಾಟದ ಬೆಲೆಯಲ್ಲಿ ಗೊಂದಲವೇಳುತ್ತದೆ. ಅಂಥ ಸಮಯದಲ್ಲಿ 'ಸವಾಲ್'ನಲ್ಲಿ ಎತ್ತುಗಳನ್ನು ಮಾರಲಾಗುತ್ತದೆ. ಎತ್ತು ಖರೀದಿಸುವಾಗ ಹಲವು ಜನರು ಹಲವು ರೀತಿಯಲ್ಲಿ ಪರೀಕ್ಷಿಸಿ ನೋಡುತ್ತಾರೆ. ಒಂದು ಎತ್ತಿನ ಜೋಡಿ ತನಗೆ ಹಿಡಿಸಿತೆಂದರೆ ಆ ವ್ಯಕ್ತಿ ಅಷ್ಟಕ್ಕೆ ಸುಮ್ಮನಾಗುವುದಿಲ್ಲ. ಆ ಎತ್ತನ್ನು ನಡೆಸಿ ಓಡಾಸಿಸಿ, ಎತ್ತಿನ ಬೆನ್ನಿನ ಮೇಲೆ ಗರಿಷ್ಟ ಪ್ರಮಾಣದ ಭಾರವನ್ನು ಹೊರಸಿ ನೋಡುವವರೂ ಉಂಟು. ಇಷ್ಟು ಮಾತ್ರಕ್ಕೆ ಎತ್ತಿನ ಗುಣಮಟ್ಟವನ್ನು ಸರಿಯಾಗಿ ಪರೀಕ್ಷಿಸಿದಂತಾಗಲಿಲ್ಲ. ಎತ್ತಿನ ಬಾಲ ಹಿಡಿಯುವುದು. ಬೆನ್ನಿನ ಮೇಲೆ ಕೈ ಇಡುವುದು

ಮಾಡುತ್ತಾರೆ. ಇದರಿಂದ ಅದರ ಚುರುಕುತನ ಗೊತ್ತಾಗುತ್ತದೆ. ಚುರುಕಿದ್ದರೆ ಬಾಲ ಬಡಿಯುತ್ತದೆ. ಕಾಲು ಹಾರಿಸುತ್ತದೆ. ಎಂಬುದೇ ರೈತರ ನಿಲುವು. ಎತ್ತಿನ ಮುಖದ ಲಕ್ಷಣ ಹಾಗೂ ಅದರ ಮೈ ಮೇಲೆ ಅನಿಷ್ಟದ ಸುಳಿ ಯಾವುದೂ ಇಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಲಾಗುತ್ತದೆ.

ಎತ್ತು ಖರೀದಿಸುವಾಗ ರೈತರ ಮೂಢನಂಬಿಕೆಗಳು ಹೆಚ್ಚಿನಪಾತ್ರ ವಹಿಸುತ್ತವೆ. ಕಾಗೆ–ಸುಳಿ ಹಾಗೂ ಕಸಬರಿಗೆ–ಸುಳಿ ಇರುವ ಎತ್ತನ್ನು ಯಾವ ರೈತರೂ ಕೊಳ್ಳುವುದಿಲ್ಲ. ಎತ್ತಿನ ಇಣಿಯ ಬಳಿ ಇರುವ ಕಾಗೆ ಸುಳಿ ಮನೆತನವನ್ನು ಒಡೆಯುತ್ತದೆ. ಎನ್ನುವ ಹಾಗೆಯೇ ಮೊಳಕಾಲ ಬಳಿ ಇರುವ 'ಬೇಡಿಸುಳಿ' ಅಪರಾಧಕ್ಕಿಳಿಸುತ್ತದೆಂದು ಇನ್ನೊಂದು ನಂಬಿಕೆ. ಹೀಗಾಗಿ ರೈತರೆಲ್ಲರದಾಗಿರುತ್ತದೆ. 'ಬಾಸಿಂಗ ಸುಳಿ' ಇರುವ ಎತ್ತು ಮನೆಗೆ ಬಂದರೆ ಮನೆಯಲ್ಲಿ ಮಂಗಳ ಕಾರ್ಯ ಮೊಳಗುತ್ತದೆಂಬ ನಂಬಿಕೆ.

ಈ ಪ್ರದೇಶದ ಜಾತ್ರೆಯಲ್ಲಿ ಎತ್ತು–ಎಮ್ಮೆ–ಆಕಳುಗಳಲ್ಲದೆ, ಆಡು ಕುರಿಗಳು ಬೃಹತ್ ಪ್ರಮಾಣದಲ್ಲಿ ಮಾರಾಟವಾಗುತ್ತವೆ. ದನಗಳ ಖರೀದಿಯಲ್ಲಿ ದಲ್ಲಾಳಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ಖರೀದಿದಾರರನ್ನು ಎದುರಿಗೆ ನಿಲ್ಲಿಸಿಕೊಂಡು ದನದ ಮೂಲಕ ತಾನು ಕೈ ಮೇಲೆ ಟವೆಲ್ ಹಾಕಿಕೊಂಡು ಬೆರಳು ನಾಟಕದ ಮೂಲಕ ತನ್ನದೇ ಆದ ಸಾಂಕೇತಿಕ ಭಾಷೆ ಬಳಸುತ್ತಾರೆ. ದನದ ಮಾಲೀಕ ತನ್ನ ಎತ್ತಿನ ವರ್ಣನೆ ಮಾಡಿದರೆ ದಲ್ಲಾಳಿಗಳು ಎತ್ತಿನ ದೋಷಗಳನ್ನು ಹೇಳತೊಡಗುತ್ತಾರೆ. ಇದರ ಮಧ್ಯೆಯೇ ಎತ್ತಿನ(ದನಗಳ)ಬೆಲೆ ನಿರ್ಧಾರವಾಗುತ್ತದೆ. ಖರೀದಿದಾರ ಹಿಡಿ ಹುಲ್ಲು ತಿನಿಸಿ ಎತ್ತನ್ನು ತನ್ನದಾಗಿ ಮಾಡಿಕೊಳ್ಳುತ್ತಾನೆ. ಮನೆಗೆ ತಂದು ರೊಟ್ಟಿಯ ಮೇಲೆ ಖಾರ ಎಣ್ಣೆ ಹಾಕಿ ತಿನ್ನಲು ಕೋಡುತ್ತಾನೆ.

ಈ ಪ್ರದೇಶದ ಜಾತ್ರೆಗಳು ಧರ್ಮಗಳ ಸಮನ್ವಯ ಕೂಟ ಜನಪದ ಜಾತ್ರೆಗಳಿಂದ ವೈವಿಧ್ಯಕ್ಕೆ ಕನ್ನಡಿ ಹಿಡಿದಿದೆ. ಕೊಪ್ಪಳ ಗವಿಸಿದ್ಧೇಶ್ವರ, ಅಷ್ಟೂರ ಅಲ್ಲಮಪ್ರಭು, ಖಾಜಾ ಬಂದೇನವಾಜ, ಶರಣ ಬಸವೇಶ್ವರ ಮತ್ತು ಹುಮನಾಬಾದ ವೀರಭದ್ರೇಶ್ವರ ಉತ್ಸವಗಳಲ್ಲಿ ಪೂಜೆ–ಪುನಸ್ಕಾರಗಳು, ಪುರವಂತಿಕೆ, ನಂದೀಧ್ವಜ, ಡೊಳ್ಳು, ಭಜನೆ, ಭೂತೇರ, ಕುಣಿತ, ದನಗಳ ಜಾತ್ರೆ, ಒಂದೇ ಎರಡೆ ಇಲ್ಲಿ ವೈವಿಧ್ಯಮಯದಿಂದ ಕೂಡಿವೆ. ಇವು ಜನಪದರಲ್ಲಿ ಧಾರ್ಮಿಕ ಚೇತನ ಚಿಮ್ಮಿಸುವ ಝುರಿಗಳಾಗಿವೆ.

ಈ ನಾಡಿನ ಜಾತ್ರೆಗಳನ್ನು ಮುಖ್ಯವಾಗಿ ಗಮನದಲ್ಲಿಟ್ಟುಕೊಂಡು ಮೂರು ವಿಭಾಗಗಳಾಗಿ ಮಾಡಬಹುದಾಗಿದೆ.

೧. ಗರ್ಭ ಗುಡಿ
೨. ಗರ್ಭ ಗುಡಿಯ ಹೊರಗಿನ ಸುತ್ತ (ಕಟ್ಟೆ ಅಂಗಳ)
೩. ದೇವಸ್ಥಾನ ಪೂರ್ಣ ಹೊರಭಾಗ.

ಗರ್ಭ ಗುಡಿಯಲ್ಲಿ ವಿಶಿಷ್ಟ ಬಗೆಯ ಕ್ರಿಯಾ ಪದ್ಧತಿಗಳು ಜರುಗುತ್ತವೆ. ಪೂಜೆ ಪುನಸ್ಕಾರ ಉಡಿಗೆ-ತೊಡಿಗೆ ಅಭಿಷೇಕ, ರುದ್ರಾಭಿಷೇಕ ಇತ್ಯಾದಿಗಳು. ಗರ್ಭಗುಡಿಯ ಹೊರಸ್ಥಳದಲ್ಲಿ (ಅಂದರೆ ದೇವಾಲಯಗಳ ಒಳ ಆವರಣದೊಳಗೆ) ಭಕ್ತರು ತಮ್ಮ ಜವಾಬ್ದಾರಿ ಕೆಲಸ ಕಾರ್ಯಗಳು ನಿರ್ವಹಿಸುವ ಮೂಲಕ ಜಾತ್ರೆ ಯಶಸ್ವಿಗೊಳಿಸಲು ಸಹಕರಿಸುತ್ತಾರೆ. ಇನ್ನು ದೇವಾಲಯದ ಪೂರ್ಣ ಹೊರಸ್ಥಳಕ್ಕೆ ರಥ ಬೀದಿ ಅಥವಾ ಸಂತೆ ಎನ್ನಬಹುದು. ಇಲ್ಲಿ ದನಗಳ ಜಾತ್ರೆ, ವ್ಯಾಪಾರ ಮೋಜು, ಮನರಂಜನೆ, ಭರ್ಜರಿಯಾಗಿರುತ್ತದೆ. ಉಳಿದೆರಡು ಅದರ ಪರಿಧಿಯಲ್ಲುಂಟಾಗುವ ವಿಭಾಗಗಳು. ಈ ಮೂರು ವಿಭಾಗಗಳು ಜಾತ್ರೆಯ ಒಟ್ಟು ಅಡಚಣೆಯಲ್ಲಿ ಮುಖ್ಯವಾಗಿವೆ. ಈ ಮೂರು ವಿಭಾಗಗಳು ತಮ್ಮ ಯತ್ನದಲ್ಲಿ ಸಫಲವಾದಾಗ ಮಾತ್ರ ಜಾತ್ರೆಗೆ ಮೆರಗು ಬರುತ್ತದೆ.

ಆಕರಗಳು :

ಜವಳಗಿ ಶಾಮಲಿಂಗ(ಸಂ) : ೧೯೮೬ 'ಸಾಮೂಹಿಕ ಪ್ರಾರ್ಥನೆ'
ಜಿಲ್ಲಾ ಬಸವದಳ, ಗುಲಬರ್ಗಾ

ಟಿಪ್ಪಣಿಗಳು :

೧. **ಭಾನಾಮತಿ :** ಇದಕ್ಕೆ ಯಕ್ಷಿಣಿ, ಮಾಟ, ಜಾದುಗಾರಿಕೆ ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಒಬ್ಬ ವ್ಯಕ್ತಿಗೆ ಕಾಡಿಸುವ-ಪೀಡಿಸುವ ಸಲುವಾಗಿ ಈ ವಿದ್ಯೆಯನ್ನು ಬಳಸುತ್ತಾರೆ. ಭಾನಾಮತಿ ಮಾಡುವ ವ್ಯಕ್ತಿ ರಹಸ್ಯವಾಗಿ ತರಬೇತಿ ಪಡೆದು ತನಗಾಗದವರ ಮೇಲೆ ಭಾನಾಮತಿ ಮಾಡಿ ಪೀಡಿಸುತ್ತಾನೆ. ಇದರಿಂದ ಜಿವಕ್ಕೆ ಅಪಾಯವಿರುತ್ತದೆ. ಭಾನಾಮತಿಯಿಂದ ಮುಕ್ತನಾಗಬೇಕಾದರೆ, ದೇವ ದೇವತೆಯ ಅನುಗ್ರಹವಾದರೂ ಬೇಕು. ಇಲ್ಲವಾದರೆ ಭಾನಾಮತಿಯಲ್ಲಿ ಪಳಗಿದ ಒಳ್ಳೆ ಗುರು ದೊರೆಯಬೇಕು. ಇಲ್ಲವಾದರೆ ಜೀವನ ನರಕವಾಗುತ್ತದೆ. ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿ ಇದೇನೂ ಹೊಸ ವಿಷಯವಲ್ಲ.

೨. **ಖಾಂಡ :** ದೇವ ದೇವತೆಗಳ ಉತ್ಸವ ಜರುಗುವಾಗ ಜಾತ್ರೆಗೆ ಬಂದ ಭಕ್ತರಿಗಾಗಿ ಸಾಮೂಹಿಕ (ಉಚಿತ) ಊಟ ಬಡಿಸುವ ವ್ಯವಸ್ಥೆಗೆ 'ಖಾಂಡ' ಎನ್ನುವರು ಈ ಪ್ರದೇಶದ ಪ್ರಮುಖ ಜಾತ್ರೆಗಳಲ್ಲಿ ಈ ವ್ಯವಸ್ಥೆ ಇದೆ. ಕೆಲವೊಂದು ಚಿಕ್ಕ-ಪುಟ್ಟ ಉತ್ಸವಗಳಲ್ಲಿ ಊಟ(ಖಾಂಡ ಮಾಡುವ) ಹಾಕುವ ಪರಿಪಾಠವೂ ಇದೆ. ಪಾಯಸ, ಅನ್ನ ಮತ್ತು ಹುಳಿ ಈ ನಾಡಿನ ಜಾತ್ರೆಗಳಲ್ಲಿ ಮಾಡುತ್ತಾರೆ.

* * *

ಅಧ್ಯಾಯ-೫

ಕನ್ನಡ ಸಾಹಿತ್ಯ – ಜಾತ್ರೆಗಳು

೫:೧: ಕನ್ನಡ ಶಿಷ್ಟ ಜನಪದ ಕಾವ್ಯಕೃತಿಗಳಲ್ಲಿ ಜಾತ್ರೆಗಳು :

ಕನ್ನಡ ಕಾವ್ಯ ಕೃತಿಗಳಲ್ಲಿ ಜಾತ್ರೆ ಕುರಿತಾದ ಉಲ್ಲೇಖಗಳು ಅಲ್ಲಲ್ಲಿ ಕಾಣಸಿಗುತ್ತವೆ. ಚಂಡಿ ಜಾತ್ರೆಯ ಅಂಗವಾಗಿ ನೆರವೇರುತ್ತಿದ್ದ ಪಶುಬಲಿ, ಶಿಶುಬಲಿ, ನರಬಲಿ ಸಿರಿದಾಳ ಸಿರಿ, ಉರಿಯ ಉಯ್ಯಾಲೆ ಮುಂತಾದ ವಿವರಗಳನ್ನು ಜನ್ನನ ಯಶೋಧರ ಚರಿತೆ (ರಾಘವಾಚಾರ :೧೯೮೩:೨) ದಾಖಲೆಗೊಳಿಸುತ್ತದೆ.

‘ಅಂತು ದೊರೆವೆತ್ತು ಬಂದವ
ಸಂತದೊಳಾ ಮಾರಿದತ್ತನುಂ ಪುರಜನಮುಂ
ತಂತಮಗೆ ಚಂಡಮಾರಿಗೆ
ಸಂತಸಮಂ ಮಾಡಲೆಂದು ಜಾತ್ರೆಗೆ ನೆರೆದರೆ’

ಗ್ರಾಮ ದೇವತೆ ಚೆಂಡಿಯ ಸಂತೃಪ್ತಿಗಾಗಿ ಜಾತ್ರೆ ಜರುಗುತ್ತಿದ್ದುದು ಸ್ಪಷ್ಟವಾಗಿದೆ.

ಎಸ್.ಕೆ. ರಾಮಚಂದ್ರರಾವ ಅವರು ಜಾತ್ರೆಯ ಇತಿಹಾಸಕ್ಕೂ ಸಂಬಂಧವಿದೆ ದೇವಾಲಯಗಳ ಜಾನಪದ ಮೂಲ ಅವುಗಳ ನೆಲೆ-ಹಿನ್ನೆಲೆ, ವಿಕಾಸ ಹೊಂದಿದ ಬಗೆಯನ್ನು ತಿಳಿಸಿ, ದೇವಾಲಯಗಳ ರಚನೆಯಾದ ಮೇಲೆ ಜಾತ್ರೋತ್ಸವಗಳು ವೈಭವವಾಗಿ ಜರುಗುತ್ತಾ ಬಂದವು ಎನ್ನುತ್ತಾರೆ. (೧೯೮೧:೪೧) ಇಲ್ಲಿ ವೈಚಾರಿಕ ವೈರುದ್ಯ ಸ್ಪಷ್ಟವಿದೆ.

ಕಾಳಿದಾಸನ ಸಂಸ್ಕೃತ ನಾಟಕಗಳಲ್ಲಿ ಉತ್ಸವಗಳಿಗೆ ಸಂಬಂಧಪಟ್ಟಂತೆ ವರ್ಣನೆಗಳಿವೆ. ‘ಭಗವತಿಯೇರುವೇಳ್ವತೆರದಿಂ” ಎಂಬ ಪಂಪನ ಮಾತು ‘ಭಗವತಿಯ ಆವೇಶ’ವನ್ನು ಕುರಿತಾಗಿದ್ದು ನಿಷ್ಠಾವಂತ ವ್ಯಕ್ತಿಯೊಬ್ಬನಿಗೆ ದೈಹಿಕವಾಗಿ ಆವಾಹನೆಯಾಗುವ ದೈವಿಶಕ್ತಿಯು ವೃತ್ತಾಂತವನ್ನು ಪ್ರಸ್ತಾಪಿಸುತ್ತದೆ. (ಗೌಡ:೧೯೮೫:೧೮) ದೇವರು ಧರ್ಮಗಳ ವಾರ್ಷಿಕೋತ್ಸವಗಳಾದ ಜಾತ್ರೆಗಳು ಈ ಹಿಂದೆ ಓದು ವಿದ್ಯೆಗಳು ಇಲ್ಲದ ಹೊತ್ತಿನಲ್ಲಿ ಜನಜೀವನನ್ನು ರೂಪಿಸುವಲ್ಲಿ ತುಂಬ ಸಹಕಾರಿಗಳಾಗಿವೆ. ಬೇರೆ ಬೇರೆ ಭಾಷೆಯ ವೇಷದ ಕಾಲದ ಜನತೆಯನ್ನು ದೈವತ್ವದ ಒಂದು ಸಂಕೇತದಲ್ಲಿ ತಂದು ಭಾವೈಕ್ಯತೆಯಿಂದ ಬಾಳಿಸಿದ್ದು, ಜಾತ್ರೆಗಳ

ಗ್ರಾಮದೇವತಗಳ ಕಾಣಿಕೆಯಾಗಿದೆ. ಈ ಜಾತ್ರೆಗಳನ್ನು ಗ್ರಾಮ ದೇವತೆಗಳನ್ನು ಸೃಷ್ಟಿಸಿರುವ ಪುರಾಣ ಕಥೆಗಳು ಅಂದಿನ ಮನುಷ್ಯನ ಮನಸ್ಸನ್ನು ತೃಪ್ತಿಪಡಿಸುವಲ್ಲಿ ತಿದ್ದಿ ಬೆಳೆಸುವಲ್ಲಿ ಮಾಡಿದ ಕಾರ್ಯ ಅಪಾರ ಎಂದು, ಸಮರ್ಪಕವಾಗಿ ಜಾತ್ರೆಯ ಹಿನ್ನೆಲೆಯನ್ನು ವಿವರಿಸಿದ್ದಾರೆ. (ವಾಲೇಕಾರ:೧೯೯೩:೩೭)

ಜಾತ್ರೆಯ ಸ್ವರೂಪದ ಬಗ್ಗೆ ಸ್ವಾಮಿಯವರ ವಿಚಾರಗಳು ಮನನೀಯವಾಗಿವೆ. 'ಜಾತ್ರೆಯಲ್ಲಿ ಭಕ್ತರು ಶ್ರದ್ಧೆ ಭಕ್ತಿಗಳಿಂದ ಪೂಜೆಯನ್ನು ಸಲ್ಲಿಸುತ್ತಾರೆ. ವ್ಯಾಪಾರಿಗಳು ಅಂಗಡಿ ಮುಂಗಟ್ಟು ಇಟ್ಟು ಮಾರುವರು. ಹೋಟೆಲು, ಸಿನೇಮಾ, ಆಟಗಳು, ಕುಸ್ತಿ, ದೊಣ್ಣೆವರಸೆ, ಕೈಚಳಕದ ಪ್ರದರ್ಶನಗಳು, ಸರ್ಕಸ್ಸು ನರ್ತನ ಕೂಟಗಳು, ವಾದ್ಯಗೋಷ್ಠಿಗಳು, ನಡೆಯುವವು. ಅನೇಕ ಕಲಾವಿದರು ಬಂದು ತಮ್ಮ ಕಲೆಯನ್ನು ಪ್ರದರ್ಶನ ಮಾಡಿ ಜನರ ಮನರಂಜಿಸುತ್ತಾರೆ. ಬಡವ ಬಲ್ಲಿದ ಗಂಡು ಹೆಣ್ಣು ಮಕ್ಕಳು–ದೊಡ್ಡವರು, ಜಾತಿ ಮತ ಭೇದವಿಲ್ಲದೆ ಎಲ್ಲಾ ರೀತಿಯ ಜನರು ಸೇರುವುದನ್ನು ನೋಡಿದರೆ ಇದೊಂದು ಭಾವೈಕ್ಯದ ತಾಣವೆಂದು ಹೇಳಬಹುದು. ಜಾತ್ರೆಗಳಲ್ಲಿ ದನಗಳ ವ್ಯಾಪರವೂ ನಡೆಯುವುದು. (ಸ್ವಾಮಿ:೧೯೯೩:೩೩೧)

ತಮಿಳು ಕಾವ್ಯ 'ಶಿಲಪ್ಪದಿಕಾರಂ'ನಲ್ಲಿ ವಸಂತೋತ್ಸವ, ಇಂದ್ರೋತ್ಸವಗಳ ವರ್ಣನೆಯಿದ್ದು, 'ಬಲಿಚ್ಚಟ್ಟೆ' ಧಾರಣೆ ಮಾಡಿ 'ಪೆದೋರ್ಲ್' ಮೊಳಗಿಸಿ ನಿರ್ವಹಿಸುವ ವೀರ ನೃತ್ಯ ಭಯಾನಕ ನರ್ತನಗಳ ಪ್ರಸ್ತಾಪವಿದೆ. "ಗೃಹ ಪೀಡಾದಿಗಳ ಶಾಂತಿಗಾಗಿ ವಿಶೇಷವಾದ ನೃತ್ಯವಿಧಿಗಳನ್ನು ಬಲ್ಲವರಾಗಿದ್ದರು. ಶಾಂತಿಕೊತ್ತರು ಸಂತೆಮಾಳದ ಮಧ್ಯಭಾಗದಲ್ಲಿ ಹಿಂದಕ್ಕೆ ದೇವೇಂದ್ರನ ಆಜ್ಞೆಯಂತೆ ಈ ನಾಡಿನ ರಕ್ಷಣಾರ್ಥವಾಗಿ ದೇವಲೋಕದಿಂದ ಇಳಿದು ಬಂದಿರುವ ಮುಚುಕುಂದನ ಸಹಾಯಕ್ಕಾಗಿ ಇಂದ್ರನೇ ಕಳುಹಿಸಿದ ಕಾಪಿನ 'ಭೂತಕ್ಷೇತ್ರ' (ಭೂತಗುಡಿ) ದ್ವಾರದಲ್ಲಿರುವ ಉನ್ನತವಾದ ಬಲಿಪೀಠದ ಮೇಲೆ ಅವಲಕ್ಕಿ, ರಕ್ತಾನ್ನ, ಪೊಂಗಲು, ಗಂಧ, ಪುಷ್ಪ, ಧೂಪ ದೀಪಾದಿ ತಂದಿಟ್ಟು, ಸುಂದರಾಂಗಿಯರಾದ ಮರವತ್ತಿಯರು (ಮರವ ಯುವತಿಯರು) ಭಕ್ತ್ಯಾವೇಶದಿಂದ 'ಸಿಂಹಕ್ಕೊತ್ತು' 'ಕುರವಕ್ಕೊತ್ತು' ಮೊದಲಾದ ಸೇವಾ ನೃತ್ಯಗಳನ್ನು ಕುಣಿದು ದಣಿದು ನಮ್ಮೊಡೆಯನಾದ ಚೋಳರಾಜನ ಕೊಡೆಯಡಿಯ ವಿಶಾಲವಾದ ಈ ಭೂಮಂಡಲವು ಮಳೆಬೆಳೆಗಳಿಂದ ಸಮೃದ್ಧಿಗೊಂಡು ನಾಡಿನ ಮಕ್ಕಳಾದ ನಮ್ಮಲ್ಲರ ಸುಖೈಶ್ವರ್ಯಗಳು ವೃದ್ಧಿಯಾಗಲಿ ಎಂದು ಪ್ರಾರ್ಥಿಸಿ ಬಲಿವಾಯನಗಳನ್ನೆಲ್ಲ ಕಟ್ಟೆಯ ಮೇಲೆ ಸುರಿದು ಮಣಿದು ಕುಣಿದು ಹಿಂತೆರಳಿದರು . . . ವೀರಾಳುಗಳು ಆವೇಶದಿಂದ ನೆಗೆದುಬಂದು ಗರಿಗೆದರಿದ ಹುಂಜಗಳಂತಿದ್ದ ತಮ್ಮ ತಲೆಗಳನ್ನು ಬಲಿಪೀಠದ ಮೇಲೆ ಒರಗಿಸಿದರು. ನರಬಲಿಯಿಂದ ಮಹಾಭೂತವು ಸಂತೃಪ್ತವಾಗಲಿ, ಚೋಳಮ್ಮಳಿಗೆ ಜಯವಾಗಲಿ ಎಂದು ಕಡಿತಲೆಗಳಿಂದಲೇ ತಲೆಗಳನ್ನು ಕಡಿದರು . . . . ಮಹಿಮೆಯುಳ್ಳ ಬೆಳ್ಳಿಮಂಟಪ ದಿವ್ಯ ತೇಜಸ್ಸಿನ 'ಇಲಂತಿ ಮಂಟಪ' ನಂಜಿನ ಭಾದೆ ಪರಿಹಾರಕ

'ನೆಡುಂಕಲ್ ಮಂಟಪ' ಆಷಾಢಭೂತಿತನ, ಕಪಟ, ಮೋಸ, ನೀತಿಭ್ರಷ್ಟ, ಸ್ವಾಮಿ ದ್ರೋಹ, ಸ್ವಾರ್ಥ ಸಾಧನೆಯಲ್ಲಿ ಪ್ರವೃತ್ತರಾಗುವ ಕಪಟಿಗಳನ್ನು ಪಾಶದಿಂದ ಬಂಧಿಸಿ ನೆಲಕ್ಕಪ್ಪಳಿಸಿ ಮಣ್ಣು ತಿನ್ನಿಸುವುದೆಂಬ ವಿಶೇಷ ಪ್ರತಾಪವುಳ್ಳ 'ಭೂತ ವಾಸದ' 'ಚಾಕಿಸ್ಥಾನ' ಅನ್ಯಾಯವಾದಲ್ಲಿ ಕಣ್ಣುಗಳಿಂದ ನೀರುಗುಳುವ ಕಾರಣಿಕದ ಬೊಂಬೆಗಳನ್ನು ನಿಲ್ಲಿಸಿದ 'ಪಾಪಮಂಟಪ' ಇವ್ವೈದು ಮಂಟಪಗಳ ಮುಂದೆ ವಿಧಿಪ್ರಕಾರ ಕಾಲ ಕಾಲಕ್ಕೆ ಬಲಿ ತೂಗುವುದೇ ಮೊದಲಾದ ನಿತ್ಯೋತ್ಸವ ಅನವರತ ನಡೆಯುತ್ತಿದ್ದವು . . . ವಜ್ರಗೋಷ್ಠದಲ್ಲಿದ್ದ ಮಂಗಳ ಮುರಜವನ್ನು ಅಲಂಕರಿಸಿ ಆನೆಯ ಮೇಲೇರಿಸಿ ಐರಾವತ ಗೋಷ್ಠಕ್ಕೆ ಕೊಂಡೊಯ್ದು ಉತ್ಸವದ ಮುನ್ಸೂಚನೆಯನ್ನು ಮೊಳಗಿಸಿದ ಮೇಲೆ ಹಿಂದಕ್ಕೆ ದೇವಲೋಕದಿಂದ ತಂದು ಸ್ಥಾಪಿಸಿದ ಕಲ್ಪತರು ಶಾಖೆಯಿರುವ ಕಲ್ಪಕ ಗೋಷ್ಠದ ಮುಂದೆ ಮುಗಿಲೆತ್ತರದ 'ಇಂದ್ರ ಧ್ವಜವು ಅಷ್ಟಮಂಗಲ ಸಮಾರಂಭದೊಡನೆ ಏರಿಸಲ್ಪಟ್ಟಿತು. ಮರಕತ ವಜ್ರ ವೈಢೂರ್ಯಗಳಿಮದ ಸಮಲಂಕೃತವಾದ ಹವಳದ ತೂಣಗಳನ್ನು ಸುತ್ತಲೂ ನೆಟ್ಟು ನಿರ್ಮಿಸಿದ ಸುವರ್ಣ ವೇದಿಕೆಗಳುಳ್ಳ ಮಣಿಮೇಡಕಗಳ ದ್ವಾರಪ್ರದೇಶಗಳನ್ನು ಚಿತ್ರವಿಚಿತ್ರವಾದ ಮಕರ ತೋರಣಗಳಿಂದ ಅಲಂಕರಿಸಲಾಯಿತು. ಸ್ವರ್ಣನಿರ್ಮಿತವಾದ ಪೂರ್ಣಕುಂಭಗಳನ್ನು ದಳಿದೀಪ, ಬೊಂಬೆಗಳ ಕೈದೀಪ, ತೆಕ್ಕೆ ಪಕ್ಕೆ ಪತಾಕೆ ಚಾಮರ ಮೊದಲಾದ ರಾಜ ಮರ್ಯಾದೆಗಳೊಡನೆ ಗುಡಿ ತೋರಣಗಳಿಂದ ರಂಜಿಸುವ ರಾಜಬೀದಿಯಲ್ಲಿ ಮೆರವಣಿಗೆಯಿಂದ ಕೊಂಡುಹೋಗಲಾಯಿತು . . . ಅನಾದಿ ಕಾಲದಿಂದ ಈ ನಾಡನ್ನಾಳಿದ ಸಾವಿರದ ಎಂಟು ಮಮದಿ ರಾಜರ ಅಭಿಷೇಕವನ್ನು ನಿರ್ವಹಿಸಿದ ಕಾವೇರಿ ನದಿಯ ಮಹಾ ಸಂಗಮಸ್ಥಾನವನ್ನು ಸೇರಿ ೧೦೦೮ ಹೇಮಕಲಶಗಳಲ್ಲಿ ಆ ಪವಿತ್ರ ಜಲವನ್ನು ತಂದು ಆಕಾಶದಲ್ಲಿ ದೇವದುಂದುಭಿ ಮೊಳಗುತ್ತಿರಲಾಗಿ ಆ ಇಂದ್ರಧ್ವಜಕ್ಕೆ ಮಹಾಮಸ್ತಕಾಭಿಷೇಕವನ್ನು ಮಾಡಲಾಯಿತು. ತದನಂತರ ಸ್ವಯಂಭೂತನಾದ ಮಹೇಶ್ವರನ ದೇವಾಲಯದಲ್ಲಿ ಅಗ್ನಿಜ್ವಾಲೆಯಂತೆ ಉಜ್ವಲವಾದ ಆರುಮುಖಗಳಿಂದ ಶೋಭಿಸುವ ಮುರುಗನ ದೇವಾಲಯದಲ್ಲಿಯೂ, ಹೊಳೆಯುತ್ತಿರುವ ಬಳಿಶಂಖದ ಪ್ರಭೆಯನ್ನುಳ್ಳ ಬಲರಾಮನ ದೇವಸ್ಥಾನದಲ್ಲಿಯೂ, ನೀಲಮಣಿವರ್ಣನಾದ ಮಹಾವಿಷ್ಣುವಿನ ದೇವಾಲಯದಲ್ಲಿಯೂ ಶ್ವೇತಚ್ಛತ್ರದಿಂದ ವಿರಾಜಿಸುತ್ತಿರುವ ದೇವರಾಜನ ಕ್ಷೇತ್ರದಲ್ಲಿಯೂ ವೇದೋಕ್ತವಿಧಿ ಪ್ರಕಾರ ಹೋಮ ನೇಮಗಳನ್ನು ಆಚರಿಸಿದರು. ಈ ಮೊದಲಾದ ಸಂಗತಿಗಳ ವಿವರಗಳಿರುವುದನ್ನು ಕೆ. ಚಿನ್ನಪ್ಪಗೌಡರು (೧೯೮೫:೧೮:೨೦) ಸಂಗ್ರಹಿಸಿದ್ದಾರೆ.

ತಾಯಿಬೇರು ಭೂತಕಾಲದ ಗರ್ಭದಲ್ಲಿ ಹೊತ್ತುಕೊಂಡಿದ್ದರೂ ಅವು ಆದಿ ಮಾನವನ ಕಾಲದಿಂದಲೇ ಧಾರ್ಮಿಕಾಚರಣೆಗಳ ಒಂದು ಪ್ರಮುಖ ಭಾಗವಾಗಿ ರೂಢಿಯಲ್ಲಿದ್ದಿರಬೇಕೆಂದು ತೋರುತ್ತದೆ. ಸಾಮಾನ್ಯವಾಗಿ ಆದಿಮಾನವನ ಕಾಲದ

ದೇವತಾರಧನೆಯೇ ಮೊದಲಾದ ಧಾರ್ಮಿಕಾಚರಣೆಗಳು ಸಾಮೂಹಿಕವಾಗಿಯೇ ನಡೆಯುತ್ತಿದ್ದಿರಬೇಕು. ಅವನು ನಿರಂತರವಾದ ತಲೆಮಾರಿತನದಿಂದ ಪಾರಾಗಿ ತಾತ್ಕಾಲಿವಾಗಿಯಾದರೂ ನೀರು ನೆರಳು ಹೊರವಾದ ನೆಲಕಂಡ ಕಡೆ ನೆಲೆಯೂರಿದ ನಂತರ, ತಲೆ–ಮಾರಿ ಜನ ಬುಡಕಟ್ಟಿನ ಜನರಿಗಾಗಿ ಪರಿವರ್ತನೆಗೊಂಡ ಸಂದರ್ಭದಲ್ಲಿ ಜಾತ್ರೆಗಳು ಸರಳ ಮೂಲಾವಸ್ಥೆಯಲ್ಲೊ ಕಾಣಿಸಿಕೊಂಡಿರಬೇಕು. ಎನ್ನುವಲ್ಲಿ ಜಾತ್ರೆಗಳ ಹುಟ್ಟಿನ ಬಗ್ಗೆ ದೇ.ಜ.ಗೌ. ಅವರ ವಿಚಾರಗಳು ಮನನಿಯವಾಗಿದೆ. (೧೯೮೬–೬೬) ಜಾತ್ರೆಗೆ ಆರ್ಥಿಕ, ಐತಿಹಾಸಿಕ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮುಖಗಳಿವೆ. (೬–೧೭) ಎನ್ನುವ ಹಂಪನಾ ಹಳೆ ಚರಿತ್ರೆಯನ್ನು ಭಕ್ತರು ಪ್ರತಿ ಜಾತ್ರೆಯಲ್ಲಿ ಅಭಿನಯಿಸಿ ಪುನರಾವೃತ್ತಿ ಮಾಡುತ್ತಾರೆ. ಎಂದು ಸರಿಯಾಗಿಯೇ ಗ್ರಹಿಸುತ್ತಾರೆ.

ವಿಶೇಷವಾದ ಸಂದರ್ಭದಲ್ಲಿ ದೇವರಿಗೆ ವಿಶೇಷ ಪೂಜೆ ಜರುಗುತ್ತಿದ್ದವು. ಉತ್ಸವ ನಡೆಯುತ್ತಿದ್ದ ಉಲ್ಲೇಖವು ಅಲ್ಲಮ ಪ್ರಭುದೇವರ ವಚನದಲ್ಲಿದೆ. (ಮಲ್ಲಾಪುರ: ೧೯೮೩–೨೮) ಜಾತ್ರೆಯ ದಿನಗಳಲ್ಲಿ ದೇವರ ಮೂರ್ತಿಯನ್ನು (ವಿಗ್ರಹ) ರಥದಲ್ಲಿ ಕೂರಿಸಿ ಊರಿನಲ್ಲಿ ಮೆರವಣಿಗೆ ಮಾಡುತ್ತಿದ್ದ ಸಂಪ್ರದಾಯವು ಆಗಲೂ ಇತ್ತು ಪೂಜಾರಿ ಮತ್ತು ಆಗಮಿಕರು ದೇವರ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸುತ್ತಿದ್ದರು. ರಥಗಳ ಮೇಲೆ ಧ್ವಜಗಳನ್ನು ಹಾರಿಸುತ್ತಿದ್ದರು. ಮೊಳೆಗಳನ್ನು ಹೊಡೆದು ಜಲ್ಲಿಪಟ್ಟಿಯನ್ನು ಕಟ್ಟಿ ರಥವನ್ನು ಅಲಕರಿಸುತ್ತಿದ್ದರು. ಅನೆ ಕುದುರೆಗಳನ್ನು ರಥಕ್ಕೆ ಕೆಲವು ವೇಳೆ ಹೂಡುತ್ತಿದ್ದರು. ರಥದೊಡನೆ ಭೇರಿವಾದ್ಯ ನರ್ತಕಿಯರು, ಮೇಳದಾರತಿ, ಚಾಮರಧಾರಿಗಳು ಸಾಗುತ್ತಿದ್ದರು, ರಥಕ್ಕೆ ಕಟ್ಟುವ ಹಗ್ಗ ಕಾಲಾಳ್ಗಳು ಎಳೆಯುತ್ತಿದ್ದರು. (ಮಲ್ಲಾಪುರ:೧೯೮೩:೨೬೧)

'ಕೆಂಪಣ್ಣ ಗೌಡ ವಿರಚಿತ ಯಕ್ಷಗಾನ ಕರೀಭಂಟನ ಕಥೆಯಲ್ಲಿ
ಬಲ್ಲಾಳರಾಯ ಕಳುಪಿದ
ಪಲ್ಲಕ್ಕಿಯ ಜಾತಿಹಯವ ಕಾಣಿಕೆಯನುತಂ
ಸೊಲ್ಲಿಸಿ ಸಿಂಹಾಸನವಿ
ರ್ದಲ್ಲಿಗೆ ಕರಸಿದನು ಕರಿಯಭೂತವರನವರಂ'

ಮಗನಾದ ಬಲ್ಲಾಳರಾಯ ಕಳುಹಿಸಿದ ಪಲ್ಲಕ್ಕಿ ತಂದೆ ತನ್ನ ಸಿಂಹಾಸನದ ಕಡೆಗೆ ಬರಮಾಡಿ ಕೊಂಡನೆಂಬ ಉಲ್ಲೇಖ ಇದಾಗಿದೆ. (ಯಶೋಧರಾ: ೧೯೮೪:೧೨)

'ಗಂಡುಮಕ್ಕಳಿರಾ ಗಂಡಾದ ಮಿನುಬನ್ನೊ, ಉಂಡು ಬಿಳಿ ಎಲೆಯ ಅಕ್ಕೊಂಡು, ಜೋರಾಯ್ನ ಕೊಂಡಕ್ಕೆ ಸೌದೆ ಬಸ್ಟರೋ, ಕೊಂಡ ಬಂಡಿ ಬಂಡೋಕೊಂಡಕ್ಕಿ ವಾದ್ಬಂದೂ ಕೂಡ ಅಯುನ್ನ ಮಗ್ಬಂದ : ಬೋರಾಯ್ನ

ಕೊಂಡೆದ, ಸೌದೆ ಮುಗುಲದ್ದ, ಕೊಂಡ ಅಂದೆ ಕಣ್ಣಾನು ಬಂಡಿ ಅಂದ್ರೆ ಮೆಕ್ಕಾನು ಮುಂಗೊಂಡ ಅಂದರೆ ಮುಂದ ಬಂದ ಬೋರಾಯ್ಯ ಮುಡಲ ಆರತಿ ತನಗಂಡ ಕೊಂಡಕ್ಕೆ ಕುಡಿ ಬಂದೊ ಇಂದು ಇಡುಗಾಯಿ; ಬೋರಾಯ್ಮ ತಕ್ಕೊಸಿ ಬಂದೊ ಕೈ ಪಂಪು' (ಲಿಂಗಯ್ಯ:೧೯೭೩:೮೪) ಜಾತ್ರೆಗೆ ಸೇರಿದ ಸುತ್ತ-ಮುತ್ತಲಿನ ಗಂಡು ಮಕ್ಕಳು ಕೊಂಡದ ಸೌದೆ ತೆಗೆದುಕೊಂಡು ಅನ್ನಿರಿ ಬೋರಾಯ್ನ ಕೊಂಡ ಮುಗಿಲುದ್ದ ಉರಿಯಿತು. ಕಣ್ಣಿಗೆ ಬೆಳಕನು ತಂತೆಂದು ಸಂತೋಷದಿಂದ ಹಾಡಿ ಹೋಗಳಿದ್ದಾರೆ ನಮ್ಮ ಜನಪದರು.

'ತೀರ್ಥಯಾತ್ರೆ ಲಿಂಗದ ದರುಶನಕ್ಕೆ ಹೋಗಿ, ಕರ್ಮವ ಹಿಂಗಿಸಿಕೊಂಡನೆಂಬ ಭಂಗಿತರ ಮಾತ ಕೇಳಲಾಗದು. ಅದೇನು ಕಾರಣವೆಂದರೆ ತೀರ್ಥವಾವುದು ಯಾತ್ರೆ ಯಾವುದು, ಬಲ್ಲರೆ ನೀವುಹೇಳಿರೆ ಇಲ್ಲದಿದ್ದರೆ ಕೇಳಿರಿ, ಮಹಾಘನ ಗುರುಪಾದ ತೀರ್ಥದಿಂದ, ವೆಗ್ಗಳ ತೀರ್ಥ ಉಂಟೆ, ಜಗತ್ಪಾವನ ಜಂಗಮ ದರುಶನದಿಂದ ಬೇರೆ ಯಾತ್ರೆ ಉಂಟೆ? ಇಂಗಿತನವನರಿದ ಬಳಿಕ ತನ್ನ ಲಿಂಗದ ಮೇಲಿರ್ಪ, ಲಿಂಗವಲ್ಲದೆ ಬೇರೆ ಲಿಂಗ ಉಂಟೆ? ಇದನರಿಯದ ಇನ್ನು ತೀರ್ಥಯಾತ್ರೆ ಲಿಂಗ ದರುಶನ ಲಿಂಗಹೀನರ ಮುಖವ ನೋಡಲಾಗದು, ಬಸವಪ್ರಿಯ ಕೂಡಲ ಚನ್ನಬಸವಣ್ಣ (ಹಿರೇಮಠ:೧೯೯೩:೩೧೮) ತೀರ್ಥಯಾತ್ರೆ ಕುರಿತು ಹಡಪದ ಅಪ್ಪಣ್ಣನವರು ನೊಂದುಕೊಂಡು ಹೇಳಿದ ವಚನವಿದು. ತೀರ್ಥಯಾತ್ರೆಯಿಂದ ಗುರುಪಾದ ತೀರ್ಥದಿಂದ ಪಾಪಕರ್ಮಗಳು ಮುಕ್ತವಾಗುತ್ತವೆಂಬುದು, ಹೀನರ ನಂಬಿಕೆ. ಲಿಂಗದ ಮೇಲಿರುವ ಲಿಂಗದಿಂದಲೇ ತೀರ್ಥಯಾತ್ರೆ ಸಾಧ್ಯ. ಯಾರು ಲಿಂಗದ ಇಂಗಿತವನ್ನು ತಿಳಿಯದೆ ಹುಚ್ಚರಂತೆ ತೀರ್ಥಯಾತ್ರೆಯನ್ನು ಮಾಡುವರ ಮುಖ ನೋಡಲು ನಾಚಿಕೆಯಾಗಿತ್ತದೆಂದು ಕಟುವಾಗಿ ನುಡಿದಿದ್ದಾನೆ ಶರಣ ಹಡಪದ ಅಪ್ಪಣ್ಣ.

'ರಾತ್ರಿಯೊಳು ಶಿವರಾತ್ರಿ, ಜಾತ್ರೆಯೊಳು ಶ್ರೀಶೈಲ
ಕ್ಷೇತ್ರದೊಳಧಿಕ ಶ್ರೀ ಕಾಶಿ ಶಿವತತ್ವ
ಸ್ತೋತ್ರದೊಳ ಅಧಿಕ ಸರ್ವಜ್ಞ'

ಶಿವರಾತ್ರಿ ಮತ್ತು ಶ್ರೀಶೈಲ ಜಾತ್ರೆ ಹಾಗೂ ತೀರ್ಥಕ್ಷೇತ್ರ ಸ್ಥಳ ಕಾಶಿಯ ಬಗ್ಗೆ ಸರ್ವಜ್ಞ ಕವಿ ಅವುಗಳ ಮಹತ್ವ ಕುರಿತು ಅಭಿಮಾನದಿಂದ ಕೊಂಡಾಡಿದ್ದಾನೆ. ಶ್ರೀಶೈಲ ಜಾತ್ರೆ ಸುಮಾರು ವರ್ಷಗಳಿಂದ ಆಚರಣೆ ಮಾಡಲಾಗುತ್ತಿದೆ ಎಂಬುದಕ್ಕೆ ಈ ಸರ್ವಜ್ಞನ ತ್ರಿಪದಿಯೇ ಸಾಕ್ಷಿಯಾಗಿದೆ (ಶಾಬಾದಿಮಠ ಗದಗ : ಪುಸ್ತಕದಿಂದ)

ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ಚರಿತಾಮ್ರತ ವಚನಗಳಲ್ಲಿ ನಿನ್ನ ಜಾತ್ರೆಗೆಂದು ಯಾತ್ರಿಕನು ತಾನಾಗೆ ಅವತಾರ ಪುರುಷನೊಬ್ಬ ತಾ ಬರುತಿರುವನಯ್ಯಾ, ಸಿದ್ದೇಶ್ವರ ಎಂಬುಸಿರಾಟವೆ ತನ್ನದಾಗಿಸಿಕೊಂಡು ದಿಟಪುರುಷನಾಗಿ ತಾ ಬರುತಿರುವನಯ್ಯಾ,

ವೈರಾಗ್ಯ ನಿಧಿಯಾಗಿ ಜನಮನದ ಸುಧೆಯಾಗಿ ಬೆನಕಕೊಪ್ಪ ಶಿವಶರಣ ತಾ ಬರುತಿರುವನಯ್ಯಾ, ನೀ ಶಕ್ತಿರೂಪಕನೆಂದು ಭಕ್ತಿ ರೂಪಕವು ತಾನಾಗಿ ಚನ್ನವೀರಸ್ವಾಮಿ ತಾ ಬರುತಿರುವನಯ್ಯಾ ಎಂದು ಆದಯ್ಯ ಸ್ವಾಮಿಯವರು (೧೯೮೦:೨೩) ಗವಿಸಿದ್ದೇಶ್ವರನ ಜಾತ್ರೆಗೆ ಬರುವ ಭಕ್ತರ ಅಂತರಂಗವನ್ನು ತೆರೆದಿಟ್ಟಿದ್ದಾರೆ.

ಜಾತ್ರೆಗಳನ್ನು ಕುರಿತು ರಚನೆಗೊಂಡಿರುವ ತಾರಾವಳಿಗಳಲ್ಲಿ ಜಾತ್ರೆಯ ಅಂಗವಾಗಿ ಜರುಗುತ್ತಿದ್ದ ಇತರ ಶಕ್ತಿಶೌರ್ಯ ಪ್ರದರ್ಶನ, ರಂಗಕಲೆಗಳ ವಿಶೇಷ ಉಲ್ಲೇಖ ಬರುವುದಿಲ್ಲ. ಇದು ತಾರಾವಳಿಗಳ ಸ್ವರೂಪ ರಚನೆಯ ಪರಿಮಿತಿಗೂ ಸೂಚಿಯಾಗಿದೆ. ಇಂಥವುಗಳನ್ನು ಒಬ್ಬರೆ ಕೆಲವು ಹಾಡು ಲಾವಣಿಗಳಲ್ಲಿಯೂ ಶ್ರೀಶೈಲ, ಶರಣಬಸವೇಶ್ವರ ಸಿದ್ಧರಾಮ ಮುಂತಾದ ಜಾತ್ರೆಗಳ ಉಲ್ಲೇಖ ದೊರೆಯುತ್ತದೆ. ಇಂಥ ಲಾವಣಿಗಳಲ್ಲಿ ಆಯಾ ದೇವತೆಯ ಮಹಮೆ ಜಾತ್ರೆಗೆ ಹೋಗುವವರಲ್ಲಿರಬೇಕಾದ ಭಕ್ತಿಭಾವ ಧಾರ್ಮಿಕ ಶ್ರದ್ದೆ ನೀತಿಗಳಿಗೆ ಒತ್ತುಕೊಡಲಾಗಿದೆ.

'ಅಲ್ಲೇ ಇಲ್ಲೇ ಯಾಕ ಹುಡಕತೀರಿ, ನಮಲ್ಲಿ ಹಾನ ಮಲ್ಲಿಕಾರ್ಜುನ'

ಬ್ರಹ್ಮಾಂಡದೊಳಗಿನ ಆಹಾರ ಎಲ್ಲಾ, ಪಿಂಡಾಂಡದೊಳಗದ ನೋಡಣ್ಣ, ಪರ್ವತಕ್ಕೋದವರು ಹಾಗೆ ಬರ್ತಾರೊ ಆದವು ಬೆಳ್ಗ ತಲೇ . . . ಮನಸ್ಸಿನ ಮ್ಯೆಲಿಗೆ ತೊಳಿಯಾಲಾರ್ದ ಹುಡಕತೀರಿ ಅತ್ತ ಇತ್ತ, ಮನಸ್ಸಿನಂತೆ ಮಲ್ಲಿಕಾರ್ಜುನನದಾನಂತ, ಕೂಗತಾವೂ ಶಾಸ್ತ್ರಾ ಜಾತ್ರೆಗೆ ಬರಬೇಕೊ ನಿವಾರ' (ಕಲ್ಲುಗಡಿ:೧೯೮೯:೭೪) ಹೀಗೆ ಹೇಳುವ ಲಾವಣಿಕಾರ ವಸ್ತಾದ ಮೋದಿನಸಾಬ ಈ ರಚನೆಯ ಕೊನೆಯಲ್ಲಿ ಹೇಳುವ ಮಾತು ಜಾತ್ರೆಯನ್ನು ಕುರಿತು ಜನಪದರ ಮನೋಧರ್ಮವನ್ನು ಸ್ಪಷ್ಟಪಡಿಸುತ್ತದೆ.

ಬಸವಪುರಾಣದಲ್ಲಿ ಬರುವ 'ವೀರಭದ್ರನ ಜಾತ್ರೆಗೆಲ್ಲಾ ನಾರಿಯರು ಹೋಗುತ ಮಿರಲು ತಮ್ಮ ಒಡವೆ ವಸ್ತುಗಳನ್ನು ವಾರಿಯಾದರು ಸಾಂಪ್ರದಾಯಿಕವಾಗಿ ನಡೆದು ಬಂದ ಕೆಲವು ಧಾರ್ಮಿಕ ಆಚರಣೆಗಳನ್ನು ನಡೆಸುತ್ತಿದ್ದರು ಎಂಬುದಕ್ಕೆ (ಪಾವಟೆ:೧೯೬೯:೨೩) ಈ ಉಲ್ಲೇಖ ದಾಖಲೆ ಒದಗಿಸುತ್ತದೆ. ಜಾತ್ರೆಗಳಲ್ಲಿ ಪಾಲುಗೊಳ್ಳುವುದರಿಂದ ಜನರ ಧರ್ಮಶ್ರದ್ಧೆ ಜಾಗೃತಗೊಳ್ಳುತ್ತಿದ್ದುದೊಂದೆ ಅಲ್ಲದೆ ಜನರಿಗೆ ದೈನಂದಿನ ಏಕತಾನ ಬೇಸರವು ಹೋಗುತ್ತಿತ್ತು. ಹಳ್ಳಿಗಳ ಮೂಲಕ ಯಾತ್ರಾರ್ಥಿಗಳ ತಂಡ ಹಾದು ಹೋಗುವಾಗ ಜನರು ಆದರಾತಿಥ್ಯಗಳಿಂದ ಅವರನ್ನು ಸತ್ಕರಿಸಿ ಬೀಳ್ಕೊಡುತ್ತಿದ್ದರು. ವಾಹನ ಸೌಕರ್ಯಗಳಿಲ್ಲದಿದ್ದ ಆಗಿನ ಕಾಲದಲ್ಲಿ ಯಾತ್ರಾರ್ಥಿಗಳು ಅಲ್ಲಲ್ಲಿ ಬಿಡಾರ ಮಾಡಿಕೊಂಡು ಎಷ್ಟೋ ದಿನಗಳ ಮೇಲೆ ಸೇರುತ್ತಿದ್ದರು. ಕಾಲು ನಡಿಗೆಯಲ್ಲಿ ಹೊರಟ ಯಾತ್ರಾರ್ಥಿಗಳು ತಂಡದ ಒಂದು ರಮ್ಯ ಚಿತ್ರವನ್ನು ಪುರಂದರದಾಸರು (ಕುಷ್ಟಗಿ ಮತ್ತು ಮಂದಾಕಿನಿ:೧೯೮೩:೨೯) ಕೊಡುತ್ತಾರೆ. 'ಅಲ್ಲಲ್ಲಿ ತೋಪಿನ ತಂಪು,

ಅಲ್ಲಲ್ಲೆ ಸೊಗಸಿನ ಇಂಪು. ಮತ್ತಲ್ಲಲ್ಲಿ ಪರಿಮಳದಿಂಪು, ಅಲ್ಲಲ್ಲಿ ಜನಗಳ ಕೂಟ, ಮತ್ತಲ್ಲಲ್ಲಿ ಬ್ರಾಹ್ಮಣಕೂಟ, ಅಲ್ಲಲ್ಲಿ ಹಿಡಿದ ಕೋಲಾಟ, ಮತ್ತಲ್ಲಿಂದ ಊರಿಗೆ ಓಟ' ಹೀಗೆ ಪುರದಂದರದಾಸರು ಜಾತ್ರೆಯ ಹಿನ್ನೆಲೆ ಮತ್ತು ಸನ್ನಿವೇಶ ಹಾಗೂ ಸಂದರ್ಭ ಕುರಿತಾದ ಚಿತ್ರಣ ನೀಡಿದ್ದಾರೆ.

ಜಾತ್ರೆ ಎಂದರೆ ಜನ ಜಂಗುಳಿ. ಅವರುಗಳ ಊಟ ವಸತಿ ಎಲ್ಲೆಂದರಲ್ಲೆ ನಡೆದು ಹೋಗುತ್ತದೆ. ಪರಿಷೆಗೆ ಸೇರಿದ ಜನ ಹೇಗೆ ಕಿಕ್ಕಿರಿದು ಅಲ್ಲಿ ಇಲ್ಲಿ ಹಂಚಿ ಹೋಗಿದ್ದಾರೆಂಬುದನ್ನು ಸಿದ್ದೇಶ್ವರ ಪುರಾಣದಲ್ಲಿ ಬರುವ ಪರಿಷೆಯ ಚಿತ್ರಣವನ್ನು ಕಾಣಬಹುದು. ಗುಡಿಗಳೊಳು ಗೋಪುರಗಳೊಳು, ಪುರಬೀದಿ, ಅಂಗಡಿಗಳೊಳಿ, ಮಠಗಳೊಳು, ಅರವೇ(ತೋಟ)ಗಳೊಳು, ಕೆರೆಯ ತಡಿಗಳೊಳಗೆ, ಎಡೆಯುಲ್ಲವೆಂಬಂತೆ, ಬೀಡುಗಳ ಬಿಟ್ಟು ಪರಿಷೆಯ ಮನುಜರು ಸಡಗರಗೊಂಡು ರಿಂಗಣಕುಣಿಯುತ್ತ ಆಡುತ್ತ ಬಿಡದೆ ಪಾಡುತ್ತ ಒಪ್ಪಿದುದು ಹರಿಸವೆನಿಪ್ಪ ಕಡಳೊಳಾಳುತೆಸಿದ್ದೇಂದ್ರ ಸಿದ್ದೇಂದ್ರ ಎಂದೆನುತ ಒಸೆದು ಕೀರ್ತಿಸುತೆ, ಜಾತ್ರೆಯಲ್ಲಿ ಸೇರುವ ಅಸಂಖ್ಯಾತ ಜನ ಹೀಗೆ ಕಲೆತು ಹಾಡುತ್ತ ಕುಣಿಯುತ್ತ ಭಕ್ತಿ ಪರವಶರಾಗಿ ಆನಂದ ಸಾಗರದಲ್ಲಿ ಮುಳುಗಿರುತ್ತಿದ್ದರು ಎಂಬುದರ ಸ್ಪಷ್ಟ ಚಿತ್ರ ಇದಾಗಿದೆ.

ಜನ ಜಾತ್ರೆ ಸೇರುವುದಕ್ಕೆ ಕೇಲವ ದೇವರ ಸೇವೆಯೇ ಆಗಬೇಕೆಂದಿಲ್ಲ. ಒಬ್ಬ ವ್ಯಕ್ತಿ ಮಹಿಮಾವಂತನಾಗಿ ತನ್ನ ವರ್ಚಸನ್ನು ಎಲ್ಲರ ಮೇಲೂ ಬೀರಿ ಜೊತೆಗೆ ಪವಾಡಗಳನ್ನೂ ಮೆರೆದರೆ ಅವನನ್ನು ಸಂದರ್ಶಿಸಲು ಜಾತ್ರೆ ನೆರೆಯುತ್ತದೆ. ಬಸವಣ್ಣನವರು ಕಲ್ಯಾಣಕ್ಕೆ ಬಂದಾಗ ಅವರ ಕೀರ್ತಿ ಆಗಲೇ ಎಲ್ಲ ಕಡೆಯೂ ವ್ಯಾಪಿಸಿತು. ಅವರ ಜಂಗಮ ಸೇವೆ, ಕಾಯಕ, ಮನೆಯ ಮಾತಾಗಿತ್ತು. ಜನ ಬಸವಣ್ಣನವರನ್ನು ಕಂಡು ಪುನೀತರಾಗಬೇಕೆಂದು ತವಕಪಟ್ಟರು. 'ಆತನಂ ನೋಡಿದಡೆ ಸಾಕು ಪುನಿತ ಭಕ್ತಿ ಗುಣತ್ವವಹುದೆಂಬ ಆತುರದೊಳೆ ಐತಪ್ಪವರ್ಗಗಳು ಬಸವ ತೀರ್ಥಕ್ಕೆ ಪ್ರೀತಿಯೆಂದೆಯ್ದುವ ಪುರುಷಯೆನೆ ಭೂತಳಂ ಬಿಸಲಾದುದೆಂಬ ವಿಖ್ಯಾತಿಯಲಿ ನೆರೆತೀವಿಸಂದಣಿಸುತ್ತ ಬಪ್ಪವರು' ಬಸವ ತೀರ್ಥಕ್ಕೆ ಪ್ರೀತಿಯಿಂದ ಬರುವ ಪರುಷೆಯ ಜನರ ಉಡಿಗೆ ತೊಡಿಗೆ ಅವರ ವಾಹನ ಸೌಕರ್ಯ ಅವರಲ್ಲಿದ್ದ ನಾನಾಬಗೆಯ ಕಲಾವಿದರು ಮುಂತಾದವುಗಳು ಒಂದು ಸೊಗಸಾದ ಚಿತ್ರವನ್ನು ಬಸವಪುರಾಣದಲ್ಲಿ ನೋಡಬಹುದಾಗಿದೆ. ಆ ಚಿತ್ರ ಸಮಕಾಲೀನ ಚಿತ್ರವಾಗಿರಲಿಕ್ಕೂ ಸಾಕು. ಜಾತ್ರೆಯಲ್ಲಿ ದೊಡ್ಡವರ ಸಂಭ್ರಮ. ಸಡಗರ ಒಂದು ಬಗೆಯಾದರೆ ಮಕ್ಕಳದು ಇನ್ನೊಂದು ಬಗೆ. ಮಕ್ಕಳಿಗೆ ಜಾತ್ರೆಯಲ್ಲಿ ದೊರೆಯುವ ಬಗೆ ಬಗೆಯ ಆಟಿಕೆಗಳು ತಿಂಡಿ ತಿನಿಸುಗಳು ಇವುಗಳ ಮೇಲೆ ಗಮನ. ಜಾತ್ರೆಯ ಅಂಗಡಿಗಳಲ್ಲಿ ದೊರೆಯುವ ಪದಾರ್ಥವಿಲ್ಲ. ಒಂದು ಸಾರಿ ದೇವಕಾರ್ಯಕ್ಕೆಂದು ತಂದೆ ತಾಯಿಗಳಿಬ್ಬರೂ ನೆರೆಯೂರಿಗೆ ಹೋಗಬೇಕಾದ ಸಂದರ್ಭ ಬರುತ್ತದೆ. ಆಗ ಅವರು ತಾವು ಜಾತ್ರೆಯಿಂದ ಮರಳುವಾಗ ಈ ಬಾಲೆಗೆ ಬಹುಪ್ರಿಯವಾದ ಈ ಎಲ್ಲ ಸಾಮಾನುಗಳನ್ನು

ತಂದು ಕೊಡುವುದಾಗಿ ಆಸೆ ಹುಟ್ಟಿಸುತ್ತಾನೆ. 'ಓಲೆ ಚಾಕಳಿ, ಕಡುಕು, ಮೂಕುತಿ, ತಆಲಿ, ಕಡಗು, ಬಣ್ಣಸರ, ತೋಳಬಂದಿಯೆನಿಪ್ಪ, ಬಿಲ್ವಿನ ಬಾಲದೊಡಿಗೆಗಳ ಬಾಲೆಯರು ಪಿಡಿದಾಡುವ ಬಳ್ಳಿಹ ವೀಲು ಬೊಂಬೆಯನ ಅದರಡುಗೆಯುಂ ಬಾಲೆ ತಂದೆವೆನುತ ಮೇಲಿನದು ಚಿಕ್ಕಮಕ್ಕಳು ಆಸೆ ಪಡುವ ವಸ್ತುಗಳಾದರೆ, ಮುಂದಿನದು ಜಾತ್ರೆಯಲ್ಲಿ ದೊರೆಯುವ ತಿಂಡಿ ತಿನಿಸುಗಳು ಇತ್ಯಾದಿ ಚಿಗುಳಿ, ಚಕ್ಕುಲಿ, ಹಾಲವುಗೆ, ಮಂಡಗೆ ಉಂಡೆ, ಲಡ್ಡುಗೆ ಮೊದಲಾದವುಗಳು. ಉಂಗುರ, ಗೆಜ್ಜೆ, ಪೊನ್ನಂದುಗೆ ತವಳಮಂ ಮತ್ತು ಮೊಸರವಿಕೆ, ಕಿರುಣಿಯಂ, ಬೊಂಬೆದೊಟ್ಟಿಲು ಮೊದಲಾದ ಇದೆಲ್ಲವಂ ತಂದೆಪೆವು. ಬಸವಪುರಾಣದಲ್ಲಿ ಬರುವ ಈ ಎರಡು ಪದ್ಯಗಳಲ್ಲಿ ಜಾತ್ರೆಗೆ ಹೋದವರು ಸಾಮಾನ್ಯವಾಗಿ ತಮ್ಮ ಮಕ್ಕಳಿಗೆ ತರುವ ನಾನಾ ವಿಧವಾದ ವಸ್ತುಗಳ ಚಿತ್ರವಿದೆ. ಕೋಳೂರು ಕೊಡಗೂಸಿನ ಕಥೆಯನ್ನು ಹೇಳ ಹೊರಟಿರುವ ಕವಿಗೆ ಶಿವನು ಮುಗ್ಧ ಬಾಲಕಿಯ ಭಕ್ತಿಯ ಪಾರಮ್ಯವನ್ನು ಮೆರೆಸಿದ್ದ ವಿಚಾರವನ್ನು ಹೇಳುವುದೇ ಪ್ರಧಾನ ಗುರಿಯಾಗಿದ್ದರೂ, ಮುಗ್ಧ ಬಾಲೆಗೆ ಸಹಜವಾಗಿ ಇರುವ ಆಸೆಗಳು ತಂದೆ ತಾಯಿ ದೇವರ ಕಾರ್ಯಕ್ಕೆಂದು ಹೋಗುವಾಗ ಮನೆಯಲ್ಲೇ ಬಿಟ್ಟು ಹೋಗಬೇಕಾದ ಆ ಹೆಣ್ಣು ಮಗುವಿನ ಆಶೋತ್ತರಗಳನ್ನರಿತು ಆ ವಸ್ತುವನ್ನೆಲ್ಲಾ ಎಂದು ಕೊಡುವೆ ಎಂದು ಹೇಳಿ ಹೋಗುವುದು ಇವೆಲ್ಲ ವಾಸ್ತವ ಸಂಗತಿಗಳು. ಕವಿಗೆ ಜೀವನದ ಪ್ರತ್ಯಕ್ಷ ಅನುಭವವಾಗಿರಲೂಬಹುದು.

ರಥೋತ್ಸವ ಮುಂತಾದ ಧಾರ್ಮಿಕ ಆಚರಣೆ ಅಂಗವಾಗಿ ದನದ ಜಾತ್ರೆ ನಡೆಯುವುದನ್ನು ಇಂದಿಗೂ ಕಾಣಬಹುದು. ಸಿಂಗಿರಾಜಪುರಾಣದಲ್ಲಿ (ದೇವೀರಪ್ಪ:೧೯೫೦:೪೯)ದನದ ಜಾತ್ರೆಯ ಉಲ್ಲೇಖ ಬರುತ್ತದೆ. ಎತ್ತುಗಳನ್ನು ಪೂಜಿಸುವ ರೈತರಿಗೆ ಪರಮ ಪೂಜ್ಯವಾದ ಕಾರಹುಣ್ಣಿಮೆಯಂದು ನಡೆಯುತ್ತಿದ್ದ ಎತ್ತುಗಳ ಓಟದ ಪಂದ್ಯದ ಸೊಗಸಾದ ವರ್ಣನೆ ಕಾಣಬಹುದು. ಕಾರಹುಣ್ಣಿಮೆ ದಿನ ಕಲ್ಯಾಣನಗರ ಜನರಿಗೆ ಎಲ್ಲೂ ಇಲ್ಲದ ಆನಂದ ಸಂಭ್ರಮ. ಎಲ್ಲರೂ ತಮ್ಮ ತಮ್ಮ ಎತ್ತುಗಳನ್ನು ಅಗಸೆ ಬಾಗಿಲಿಗೆ ಕರೆತಂದರು. ಎತ್ತುಗಳ ಅಲಂಕಾರವನ್ನು ವರ್ಣಿಸಲು ನನ್ನಿಂದ ಸಾಧ್ಯವೆ ಎಂದು ಬೆರಗು ಹೊಡೆದ ಕವಿ ಕೊಡುಬಳೆ, ಝಲ್ಲೆ, ಉರಗಜ್ಜೆ, ಹೊಕ್ಕೊಳ ಗಂಟೆ ಸುವರ್ಣಗನ್ನಡಿ, ಮೂಕ್ತಿ, ಕಾವಳಿ, ಜೋಡುನವರತ್ನ ಗಂದುಗೆ, ಕರ್ನಪತ್ರ, ಚಿತ್ರಂಗದಿಂದೆಸೆವ ಪೂವ, ತೀಡಿನ ಸುಗಂಧ ಪನ್ನೀರು, ಕುಂಕುಮ ದೊಳೊಕ್ಕಾಡಿ, ನಾನಾ ಪುಷಮಿಶ್ರಿತೋತ್ಸವ ಕಳೆಗೂಡಿ ಕಲ್ಯಾಣ ಮೊಕ್ಷಶ್ರೀಯ ಸೊಬಗ ನೆರೆ ಸೂರೆ ಗೊಂಬಂತಿರ್ದುವು ಎಂದು ಮನಮುಟ್ಟಿ ಬಣ್ಣಿಸುತ್ತಾನೆ. ಎತ್ತುಗಳೊಳಗೆ ಕೆಲವು ಕೇಸಿಗ, ನಿರೀವ, ಹಂಡಿ, ಹಾರುವ ಚಂಪ, ಪರಿವಕಾಲಿ. ಮೊದಲಾದವರೊಳು ಪಲವು ಪರಿ ಎತ್ತು ತೊಂಬತ್ತಾರು ಲಕ್ಷ ಮೇಳೈಸಿ ಪಿಡಿದವು. ಎಂದು ಎತ್ತುಗಳ ಹೆಸರು ಗುಣ ಸ್ವಭಾವಗಳನ್ನೂ ಕವಿ ಚರ್ಚಿಸಿದ್ದಾನೆ. ಮುಂದೆ ಪಂದ್ಯ ಪ್ರಾರಂಭವಾಗುತ್ತದೆ. ಆಗ ಎತ್ತುಗಳೆಲ್ಲವನ್ನೂ ಹುರಿದುಂಬಿಸಿ,

ಕೇಕೆ ಹಾಲಿ ಬಾಲವನ್ನು ಒಡೆಮುರಿದು ಓಡಿಸುವರು. ಬಿಜ್ಜಳನ ಹೋರಿ ಮಿಂಚಿನ ವೇಗದಿಂದ ಓಡಿ ಗುರಿಗಲ್ಲನ್ನು ಮುಟ್ಟುತ್ತದೆ. ಜನರು ಜಯಘೋಷ ಮಾಡುತ್ತಾರೆ ಹೆಬ್ಬೊಬ್ಬೆ ಘೋಷ ಪ್ರಭಾರ್ಭಟಾದಂಬರದೊಬ್ಬರಿಸಿ, ಬಿಜ್ಜಳೊರ್ವಿಪ ನೆತ್ತು ಕರುಗಲ್ಲ (ಗುರಿಯಕಲ್ಲು) ಹೆಬ್ಬೆಗದ್ದು ಗ್ರಮಾಗಲ್ ಇದು ಎತ್ತೋಟದ ಒಂದು ಸಾಕ್ಷ್ಯ ಚಿತ್ರದಂತಿದೆ. (ದೇವೀರಪ್ಪ:೧೯೫೦:೬೧) ಎತ್ತುಗಳ ಅಲಂಕಾರ ಬಣ್ಣ ಸ್ವಭಾವಕ್ಕನುಗುಣವಾಗಿ ಇಟ್ಟಿರುವ ನಾನಾ ಬಗೆಯ ಹೆಸರುಗಳು, ಪಂದ್ಯಕ್ಕೆ ಓಡಿಸುವಾಗ ಕೊಡುತ್ತಿದ್ದ ಪ್ರೋತ್ಸಾಹ ಪ್ರೇಕ್ಷಕರ ಕೋಲಾಹಲ ಇವೆಲ್ಲ ಕಾಲ್ಪನಿಕ ಚಿತ್ರಗಳಲ್ಲ. ಕವಿಕಂಡ ಅಥವಾ ಕೇಳಿರಬಹುದಾದ ಸಾಮಾನ್ಯವಾಗಿ ಇಂದಿಗೂ ನಾವು ಅನೇಕ ತರಹ ಪಂದ್ಯಗಳಲ್ಲಿ ಕಾಣುವ ಒಂದು ನೈಜ ಚಿತ್ರ ಇದಾಗಿದೆ. 'ಬೆಳುವಲದ ಮಡಿಲಲ್ಲಿ' ಎಂಬ ಕಾದಂಬರಿಯಲ್ಲಿ ಬರುವ ಎತ್ತಿನ ಪಂದ್ಯದ ಸೊಗಸಾದ ಚಿತ್ರವನ್ನು ಇಲ್ಲಿ ಸ್ಮರಿಸಬಹುದು (ದೇವೀರಪ್ಪ:೭೬:೭೮) ಇನ್ನೂ ಜನಪದ ಕವಿಗಳು ಹಾಗೂ ಶಿಷ್ಟ ಕವಿಗಳು ಬರಹಗಾರರು ತಮ್ಮ ಕಾವ್ಯಕೃತಿಗಳಲ್ಲಿ ಇಂಥ ಸಾಕ್ಷ್ಯಾಧಾರಗಳನ್ನಿತ್ತು ಜಾತ್ರೆಗಳ ಅಧ್ಯಯನಕ್ಕೆ ನೆರವಾಗಿದ್ದಾರೆ.

೫:೨: ಗಾದೆಗಳಲ್ಲಿ ಜಾತ್ರೆ :

ಕನ್ನಡಿಗರಲ್ಲಿ ಮನೆಮಾತಾಗಿರುವ ಅನೇಕ ಗಾದೆಗಳು ಸದ್ದಿಲ್ಲದೆ ಜನಪದರಲ್ಲಿ ಪಟ್ಟಕ್ಕೇರಿವೆ. ಗಾದೆಯಂತಹ ಮಾತುಗಳು ಹಾಸು ಹೊಕ್ಕಾಗಿ ತುಂಬಿಕೊಂಡು ಜನಪದರ ಅಭಿವ್ಯಕ್ತಿಗೆ ಒಂದು ಮಿಂಚನ್ನು ಒಂದು ಮೊನಚನ್ನು ಒದಗಿಸಿವೆ. ಜನಪದರ ಜೀವನದಲ್ಲಿ ಜಾತ್ರೆ, ತೇರು ಎಷ್ಟರ ಮಟ್ಟಿಗೆ ಹಾಸು ಹೊಕ್ಕಾಗಿ ಬೆರೆದುಕೊಂಡಿದೆಯೆಂದರೆ, ನಿತ್ಯ ಜೀವನದಲ್ಲಿ ಅಷ್ಟೇ ಸಂಬಂಧವಾದ ಗಾದೆಗಳು ಬಳಕೆಯಲ್ಲಿವೆ. ಗಾದೆಗಳು ಬದುಕಿನ ಭಾಗವಾಗಿ ಸಾಂಸ್ಕೃತಿಕ ಸಂಬಂಧವನ್ನು ಸ್ಥಾಪಿಸಿಕೊಂಡಿರುವ ಜಾತ್ರೆಗಳಿಗೆ ಸಂಬಂಧಿಸಿದ ವಿಪುಲ ಸಾಹಿತ್ಯವು ಉಪಲಬ್ದವಿದೆ. ಜನಪದ ಸಾಹಿತ್ಯದ ಪ್ರತಿಯೊಂದು ಪ್ರಕಾರಗಳಲ್ಲಿ ಜಾತ್ರೆಯ ಉಲ್ಲೇಖ ಹೆಣೆದುಕೊಂಡಿದೆ. ಅದರಂತೆ ಗಾದೆಗಳಲ್ಲಿಯೂ ಜಾತ್ರೆಯ ಪ್ರಸ್ತಾಪ ಬಂದಿರುತ್ತದೆ.

೧. 'ಮನುಷ್ಯನಿಗೆ ಗಾಳಿ ಮುಖ್ಯ
ಜಾತ್ರೆಗೆ ಕಾಂಚಣ ಮುಖ್ಯ'

೨. 'ಕುಲನೋಡಿ ಹೆಣ್ಣು ತರಬೇಕು
ಹಣನೋಡಿ ಜಾತ್ರೆಗೆ ಹೋಗಬೇಕು'

೩. 'ಅಕ್ಕನಿದ್ದರೆ ಭಾವ
ರೊಕ್ಕನಿದ್ದರೆ ಜಾತ್ರೆ'

೪. 'ಊಟಕ್ಕೆ ನೀರು ಬೇಕು
ಜಾತ್ರೆಗೆ ರೊಕ್ಕ ಬೇಕು'

ಈ ಗಾದೆಗಳು ಅರ್ಥಪೂರ್ಣವಾದ ನೀತಿಬೋಧಕವಾಗಿವೆ. ಮಾತಿನ ಅರ್ಥ ಎಷ್ಟು ವೈಜ್ಞಾನಿಕ ಸತ್ಯವೋ, ಇದರಿಂದ ಹೊರಡುವ ಲಕ್ಷ್ಯಾರ್ಥವೂ ಅಷ್ಟೇ ಮನೋಜ್ಞವಾಗಿದೆ. ಮಾನವನಿಗೆ ಗಾಳಿ ಎಷ್ಟು ಮುಖ್ಯವೋ ಅಷ್ಟೇ ಹಣವು ಮುಖ್ಯವಾಗಿ ಬೇಕು. ಪ್ರತಿಯೊಂದು ಕೆಲಸಕ್ಕೂ ಹಣ ಬೇಕು. ಇಲ್ಲವಾದರೆ ಹೆಣಕ್ಕೆ ಸಮ. ಹಣವಿಲ್ಲದಿದ್ದರೆ ಯಾರೂ ಹತ್ತಿರ ಸುಳಿದಾಡುವುದಿಲ್ಲ. (ಬೆಲ್ಲವಿದ್ದರೆ ಮಾತ್ರ ನೊಣ ಬರುತ್ತದೆ) ಮಾತನಾಡಿಸುವುದಿಲ್ಲ, ಇರಲಿ, ಉಪಜೀವನಕ್ಕಾದರೂ ಹಣ ಬೇಕಲ್ಲವೆ? ಹೀಗಾಗಿ ಹಣ ಬೇಕೆ ಬೇಕು. ಜಾತ್ರೆಗೆ ಹೋಗಬೇಕಾದರೂ ಹಣ ಬೇಕು. ಎಷ್ಟು ಇದೆ ಎನ್ನುವುದು ತಿಳಿದುಕೊಂಡು ಮುಂದಿನ ಯೋಜನೆ ಮಾಡಬೇಕು. ಬರಿಗೈಲಿ ಜಾತ್ರೆಗೆ ಹೋದರೆ ಹುಚ್ಚನ ಹಾಗೆ ಅಲೆದಾಡಿ ಮನೆಗೆ ಬರಬೇಕಾಗುತ್ತದೆ. ಜಾತ್ರೆಯಲ್ಲಿ ಏನದರೂ ಕೊಳ್ಳಬೇಕಾದರೆ ಹಣ ಬೇಕು. ಹೀಗಾಗಿ ಹಣವಿದ್ದರೆ ಮಾತ್ರ ಜಾತ್ರೆ ಮಾಡಬಹುದೆಂಬ ಮುನ್ನೆಚ್ಚರಿಕೆಯನ್ನು ಈ ಗಾದೆಗಳು ಸೂಚಿಸುತ್ತವೆ.

ಜನಪದರ ಬದುಕಿನಲ್ಲಿ ಜಾತ್ರೆಗಳು ಎಷ್ಟರ ಮಟ್ಟಿಗೆ ಹಾಸೊಹೊಕ್ಕಾಗಿ ಬೆರೆತುಕೊಂಡಿದೆಯೆಂದರೆ, ನಿತ್ಯ ಜೀವನದಲ್ಲಿ ಇವುಗಳ ಸಂಬಂಧವಾದ ಗಾದೆಗಳು ಹುಟ್ಟಿ ಬಳಕೆಯಲ್ಲಿವೆ. ಗಾದೆಗಳು ಒಂದು ಪ್ರದೇಶದ ಜನರ ಸಂಸ್ಕೃತಿಯನ್ನು ಬಿಂಬಿಸುತ್ತವೆ. ಭಾವೈಕ್ಯತೆಯನ್ನು ಸೂಚಿಸುತ್ತವೆ. ಜಾತ್ರೆಯ ಬಗೆಗೆ ನಾವು ಅನೇಕ ಮಾತುಗಳನ್ನು ಕೇಳುತ್ತೇವೆ. 'ಒಳ್ಳೆ ಜಾತ್ರೆ ಸೇರಿದಾಗ ಸೇರಿದ್ರು' ಅಂದರೆ ಅಷ್ಟೊಂದು ಜನ ಭಕ್ತರು ಸೇರುತ್ತಾರೆ ಎಂದು. 'ಜನಮರಳೋ, ಜಾತ್ರೆ ಮರಳೋ' ಎಂಬ ಗಾದೆ ಮಾತನ್ನು ಸೇರಿಸುತ್ತಾರೆ. ಜಾತ್ರೆ ಎಂದೂ ಮರಳಾಗುವುದಿಲ್ಲ. ಜನರು ಮಾತ್ರ ಮರಳಾಗುತ್ತಾರೆ ಎನ್ನುವ ಒಳಅರ್ಥ ಇದರಲ್ಲಿದೆ.

ಕೆಲವೊಂದು ಗಾದೆಗಳು ಪೂರ್ವಸೂಚನೆಯನ್ನು ಕೊಡುತ್ತವೆ. 'ಹೆಂಡತಿ ಕರ್ಕಂಡು ಜಾತ್ರೆಗೆ ಹೊಗಬೇಡ, ಮಕ್ಕಳ ಕರ್ಕಂಡು ಮದುವೆಗೆ ಹೋಗಬೇಡ' ಏಕೆಂದರೆ ಹೆಂಡತಿಯಾದವಳು ಜಾತ್ರೆಯಲ್ಲಿ ಆ ವಸ್ತು ಈ ವಸ್ತು ಖರೀದಿ ಮಾಡಿಸುವುದರಲ್ಲಿಯೇ ಗಂಡನಲ್ಲಿದ್ದ ಹಣ ವಸೂಲಿ ಮಾಡುತ್ತಾಳೆ. ಮದುವೆಗೆ ಮಕ್ಕಳನ್ನು ಕರೆದುಕೊಂಡು ಹೋದರೆ ಕಾಟ ಕೊಡುತ್ತವೆ. ಹೀಗಾಗಿ ಬರೀ ತಾನು ಮಾತ್ರ ಜಾತ್ರೆ ಅಥವಾ ಮದುವೆಗೆ ಹೋಗಬೇಕೆಂಬ ತಿಳುವಳಿಕೆಯನ್ನು ನೀಡುತ್ತದೆ.

'ಜಾತ್ರೆ ತಪ್ಪಿದರೂ ನೀತಿ ತಪ್ಪಬಾರದು' ಕೆಲವೊಂದು ಸಲ ಜಾತ್ರೆಗೆ ಹೋಗಲು ಹಣವಿರುವುದಿಲ್ಲ. ಸಮಯ ಸಿಗುವುದಿಲ್ಲ. ಹೀಗಾಗಿ ಜಾತ್ರೆಗೆ ಹೋಗುವುದು ತಪ್ಪಬಹುದು. ಆದರೆ ನೀತಿ ಮಾತ್ರ ತಪ್ಪಬಾರದು. ಅಕಸ್ಮಾತ್ ನೀತಿ ಬಿಟ್ಟು ನಡೆದರೆ ಸಮಾಜ ನಂಬುವುದಿಲ್ಲ. ಹತ್ತಿರವಿದ್ದವರೆಲ್ಲ ದೂರಾಗುತ್ತಾರೆ. ಹೀಗಾಗಿ 'ನೀತಿ'

ಬಿಡವಾರದೆಂಬ ಸೂಚ್ಯಾರ್ಥವನ್ನು ಈ ಗಾದೆಯಿಂದ ಮನವರಿಕೆ ಮಾಡಬೇಕು.

ಹಬ್ಬದ ದಿವಸ ಶಾವಿಗೆ, ಸೀಕರಣೆ, ಮಂಡಿಗೆ, ಹೋಳಿಗೆ, ತುಪ್ಪ, ಹಾಲು, ಪರಮಾನ್ನ ಮುಂತಾದ ಬಾಯಲ್ಲಿ ನೀರೂರಿಸುವ ಭಕ್ಷ್ಯಭೋಜ್ಯಗಳಿದ್ದರೆ, ಅದು ಹಬ್ಬವೆನಿಸುತ್ತದೆ. ಹಾಗೆಯೇ ಜಾತ್ರೆಯಲ್ಲಿ ರಥೋತ್ಸವ ಇಲ್ಲವಾದರೆ ಅದು ಸಂತೆಯ ಸ್ವರೂಪ ಪಡೆದುಕೊಳ್ಳುತ್ತದೆಂಬ ಗಾದೆ ಇದು. 'ಹೋಳಿಗೆ ಇಲ್ಲದ ಹಬ್ಬವಿಲ್ಲ, ರಥವಿಲ್ಲದ ಉತ್ಸವವಲ್ಲ'

ಜಾತ್ರೆಗೆ ಹೋಗಿ ಏನಾದರೂ ಖರೀದಿಸಲೇ ಬೇಕು. ಖರೀದ ಮಾಡಿದ ಮೇಲೆ ಕೈಖಾಲಿಯಾಯಿತು ಎನ್ನುವ ಗಾದೆಗಳು ಇವು 'ಜಾತ್ರೆಗೆ ಹೋದವರು ಪಾತ್ರೆ ತರದೆ ಬರಬಾರದು' 'ಜಾತ್ರೆಯೂ ಮುಗೀತು ಧೋತ್ರ ಹರಿತು' ಮುಂತಾದ ಗಾದೆಗಳು ಹಣದ ಕೊರತೆಯನ್ನು ತೋರಿಸುತ್ತದೆ.

ಜಾತ್ರೆಗೆ ಹತ್ತಾರು ಕಡೆಗಳಿಂದ ಹತ್ತಾರು ಜಾತಿಯ ಜನರು ಬರುವುದರಿಂದ ಜಾತ್ರೆಯಲ್ಲಿ ಜಾತಿ ಅನಬಾದರು, ಕಳ್ಳರು, ಸುಳ್ಳರು, ನೀತಿವಂತರು ಎಲ್ಲರೂ ಜಾತ್ರೆಯಲ್ಲಿರುತ್ತಾರೆ. ಹೀಗಾಗಿ 'ಜಾತ್ರೆಗೆ ಬಂದರು ಜಾಗೃತದಿಂದರಬೇಕು.

ಈ ಪ್ರದೇಶದ ಕೆಲವೊಂದು ಜಾತ್ರೆಗಳ ಜೊತೆಗೆ ದನಗಳ ಜಾತ್ರೆಗಳು ಸಹ ಜರುಗುತ್ತವೆ. ದೇವರು, ತೇರು, ಪ್ರಾರ್ಥನೆ, ಆರಾಧನೆ ಮುಂತಾದವುಗಳು ಜಾತ್ರೆ ಒಳಗೊಂಡಿರುತ್ತದೆ. ದನದ ಜಾತ್ರೆ ದನಗಳಿಂದ ಮಾತ್ರ ಕೂಡಿರುತ್ತದೆ. ಅಲ್ಲಿ ಖರೀದಿ–ಬಿಕರಿ ಮುಖ್ಯವಾಗಿ ನಡೆಯುತ್ತದೆ. ಆದುದರಿಂದ 'ದೇವರ ಜಾತ್ರೆ ದನಗಳ ಜಾತ್ರೆ ಬೇರೆ ಬೇರೆ' ಎಂಬ ಗಾದೆ ಹುಟ್ಟಿಕೊಂಡಿರಬೇಕು.

'ಕಿರಿ ಜಾತ್ರೆ ನೋಡದಕ್ಕಿಂತ
ಹಿರಿ ಜಾತ್ರೆ ನೋಡು'

ಕಿರಿ ಜಾತ್ರೆಯಲ್ಲಿ ನೋಡುವುದಕ್ಕೆ, ಖರೀದಿ ಮಾಡುವುದಕ್ಕೆ ಅವಕಾಶಗಳು ಕಡಿಮೆ ಹಿರಿ ಜಾತ್ರೆಯಲ್ಲಿ ನೋಡಲು, ಕೇಳಲು, ಖರೀದಿ ಮಾಡಲು ಎಲ್ಲ ವ್ಯವಸ್ಥೆಗಳು ಅಲ್ಲಿರುತ್ತವೆ.

ಜಾತ್ರೆ ಎಂದ ಬಳಿಕ ದೇವರ ಪೂಜೆ, ಉತ್ಸವ ಸಡಗರ ಸಂಭ್ರಮ, ಸಂತೋಷದ ವಾತಾವರಣ ಜಾತ್ರೆಯಲ್ಲಿ ಕಂಡುಬರುವುದು ಸಹಜ. ಹಳ್ಳಿಯ ಮತ್ತು ಪಟ್ಟಣದ ಜನ ಅಲ್ಲಿರುವುದರಿಂದ 'ಜಾತ್ರೆ ಜನ ಜಂಗುಳಿ'ಯ ಸ್ವರೂಪ ಪಡೆದುಕೊಳ್ಳುತ್ತದೆ.

ಒಂದು ಜಾತ್ರೆ ಜರುಗುತ್ತಿದ್ದರೆ ಸಹಸ್ರಾರು ಜನ ಬಂದು ಸೇರುತ್ತಾರೆ. ಅಲ್ಲಿ ಸಡಗರ ಸಂಭ್ರಮ ಎದ್ದು ಕಾಣುತ್ತದೆ. ಅಂಥದರಲ್ಲಿ ಜಾತ್ರೆಗೆ ಹೋದವರು 'ತುಸು

ತಿಂದು' ಸಂತೋಷದ ಸವಿಯನ್ನು ಉಣ್ಣಬೇಕು. ಇಲ್ಲವಾದರೆ ಹೆಚ್ಚು ತಿಂದು ಹೊಟ್ಟೆಗೆ ನೋವು ತಂದುಕೊಂಡರೆ ಜಾತ್ರೆಯಲ್ಲಿ ಏನು ನೋಡಲು, ಮಾಡಲು ಸಾಧ್ಯವಾಗುವುದಿಲ್ಲವೆಂಬ ಎಚ್ಚರಿಕೆ ಈ ಗಾದೆ (ಜಾತ್ರೆಯಲ್ಲಿ ತುಸು ತಿನ್ನು, ಮನೆಯಲ್ಲಿ ಎಷ್ಟಾದರು ತಿನ್ನು')ಕೊಡುತ್ತದೆ.

'ಜಾತ್ರೆಗೆ ಜನ ಬೇಕು
ಗಂಡಿಗೆ ಹೆಣ್ಣು ಬೇಕು'

ಸಂತೆ, ತೇರು, ಜಾತ್ರೆ–ಉತ್ಸವಗಳು ಜನಪದ ಸಮಾಜದ ಸಂಘಟಿತ ವ್ಯವಸ್ಥೆಯಾಗಿದೆ. ಹೀಗಾಗಿ ಜಾತ್ರೆ ಇದ್ದಲ್ಲೆ ಜನರು ಬೇಕು, ಪಲ್ಲಕ್ಕಿ ಮೆರವಣಿಗೆ ಮಾಡಲು ತೇರು ಜಗ್ಗಲು, ಊಟ ಬಡಿಸಲು ಒಬ್ಬರಿಂದ ಆಗದ ಕೆಲಸವಲ್ಲ, ಹೀಗಾಗಿ ಜಾತ್ರೆಗೆ ಜನರು ಬೇಕಾಗುತ್ತಾರೆ. ಜನರಿಂದಲೇ ಅಲ್ಲಿ ಜರುಗುವ ಆಚರಣೆಗಳಿಂದ ಜಾತ್ರೆಗೆ ಮೆರಗು ಬರುತ್ತದೆ. ಜಾತ್ರೆಗೆ ಜನರು ಮುಖ್ಯ ಒಂದೆಡೆಯಾದರೆ, ಗಂಡಿಗೆ ಹೆಣ್ಣು ಮುಖ್ಯ ಇನ್ನೊಂದೆಡೆ. ಗಂಡಿನ ಪಾಲನೆ ಪೋಷಣೆ ಹೆಣ್ಣಿನಿಂದ, ಹೆಣ್ಣಿನ ಪಾಲನೆ ಪೋಷಣೆ ಗಂಡಿನಿಂದ, ಕಾಮದ ಹಸಿವು ಪರಸ್ಪರ ಇಬ್ಬರು ಹಿಂಗಿಸಿಕೊಳ್ಳಲು, ಮಕ್ಕಳು ಹಡೆಯಲು, ಗಂಡಿಗೆ ಹೆಣ್ಣಿನ ಅವಶ್ಯಕತೆ, ಹೆಣ್ಣಿಗೆ ಗಂಡಿನ ಅವಶ್ಯಕತೆ ತುಂಬ ಜರೂರಿಯಾಗಿದೆ. ಎಂಬ ಗಾದೆ ಇದಾಗಿದೆ.

ಇಂತಹ ಎಷ್ಟೋ ಗಾದೆಗಳು ಜಾತ್ರೆಯ ಕುರಿತಾಗಿದೆ ಕೆಲವೊಂದು ಗಾದೆಗಳು ಜಾತ್ರೆಯ ಚಿತ್ರವೇ ಕಣ್ಣುಮುಂದೆ ಕಟ್ಟುತ್ತವೆ. ಎಚ್ಚರಿಕೆ ನೀಡುತ್ತವೆ. ಜಾತ್ರೆ ಎಷ್ಟು ದೊಡ್ಡದಾದರೇನು, ಚಿಕ್ಕದಾದರೇನು, ಅದರ ಕುಣಿಕೆ ನನ್ನ ಕೈಯಲ್ಲಿ ಎನ್ನುತ್ತವೆ ಜಾತ್ರೆ ಕುರಿತಾದ ಗಾದೆಗಳು.

೫:೩: ತ್ರಿಪದಿಗಳಲ್ಲಿ ಜಾತ್ರೆ :

ತ್ರಿಪದಿ ಜನಪದ ಸಾಹಿತ್ಯದ ಒಂದು ರೂಪ. ಜಾನಪದ ಹಾಡುಗಳ ಅಚ್ಚುಮೆಚ್ಚಿನ ಅಚ್ಚಗನ್ನಡ ತ್ರಿಪದಿ ಸಮುದ್ರದಂತಿದೆ. ತಿರುಳಗನ್ನಡದ ನೆಲೆಯಾದ ಈ ಸಾಹಿತ್ಯವು ಕನ್ನಡ ನರನಾರಿಯರ ಜೀವನದ ಒಳಗನ್ನಡಿ. ಅದು ಹೃದಯದ ಪದಗನ್ನಡಿ. ಜೀವನದ ಜೀವಾಳ ಜೊತೆಗೆ ಸುಖದ ನೆಲೆಯಾಗಿದೆ. ಸಂಸ್ಕೃತಿಯ ನೆಲೆಯಾಗಿದೆ. ಹಳ್ಳಿಗರ ತುದಿನಾಲಿಗೆಯ ಮೇಲಿಂದ ಸಹಜವಾಗಿ ನುಣುಚಿ ಬಂದಿರುತ್ತವೆ. ತ್ರಿಪದಿಗಳಲ್ಲಿ ಜಾತ್ರೆಗಳಿಗೆ ಸಂಬಂಧಪಟ್ಟಂತೆ ಅನೇಕ ಉಲ್ಲೇಖಗಳು ಕಂಡು ಬರುತ್ತವೆ.

ಮುಂಜಾನಿನಲ್ಲಿ ಏಳುತ್ತಿದ್ದಂತೆಯೇ ದೇವರನ್ನು ಸ್ಮರಿಸಿಕೊಂಡು ತಮ್ಮ ಕಾರ್ಯಕಲಾಪಗಳಲ್ಲಿ ತೊಡಗುವುದು ಜನಪದರ ಸಂಪ್ರದಾಯ.

'ಮುಂಗೋಳಿ ಕುಗೇದ ಮೂಡು ಕೆಂಪೇರ್ಯಾದ
ರವಿ ನಾರಾಯಣ ರಥವೇರಿ ಬರುವಾಗ
ನಾವೆದ್ದು ಕೈಯ್ಯ ಮುಗಿದೇವು'

ಎಂದು ರಥವೇರಿ ಬರುವ ಸೂರ್ಯನಾರಾಯಣನಿಗೆ ಕೈಮುಗಿಯುವ ಸನ್ನಿವೇಶವಿದೆ. ಇದಾದ ಮೇಲೆ ಜಾನಪದ ಗರತಿಯೊಬ್ಬಳು ತನ್ನ ಪತಿ ದೇವರನ್ನು ಎಚ್ಚರಿಸಲು ಪ್ರಯತ್ನಪಡುತ್ತಾಳೆ.

ಏಳಯ್ಯ ಎಳವು ಚಿನ್ನದಗಿರಿ
ಏಳಯ್ಯ ಏಳು ಬೆಳಗಾಮಾತೇ
ತಂದನ್ನಿ ತಾನು ತಂದೆ ನಾನೂ–ತಂದನ್ನಿ
ಏಳಯ್ಯ ಸ್ವಾಮಿ ಬೆಳಗಾದೂ ಮೂಡಲಿಂದ
ಸ್ವಾಮಿ ರಥವೇರಿ ಬರುತ್ತಾನೆ ಬಾ
ನಂದನ್ನಿ ತಾನು ತಂದೆ ನಾನೂ–ತಂದನ್ನಿ
ಸ್ವಾಮಿ ರಥವೇರಿ ಬರುತಾನೆ ಮೂಡಲಿಂದ
ನಂದನ್ನಿ ತಾನು ತಂದೆನಾನೂ–ತಂದೆನ್ನಿ

ಹಾಡಿನ ಮೂಲಕ ಗಂಡನನ್ನೆ ಎಚ್ಚರಿಸುವಳು. ಗಂಡನ ಸೇವೆಯಲ್ಲಿಯೇ ನಿರತಳಾದ ಗರತಿಗೆ ಜಾತ್ರೆಗೆ ಹೋಗಲು ಸಾಧ್ಯವಾಗುವುದಿಲ್ಲ. ಸಮಯ ಮುಗಿದಿರುತ್ತದೆ. ಆದರೂ ಗರತಿ ತನ್ನ ಮನದಲ್ಲಿಯೇ ದೇವರನ್ನು ಪ್ರಾರ್ಥಿಸುತ್ತಾಳೆ.

ತಾಯಿ ದ್ಯಾಮವ್ವನ ತೇರಳೆದ್ರ ಬರುವಾಗ
ತೀರಲಿಲ್ಲವ್ವ ಮನಿದಗದ ನಾನಿನಗ
ಇಲ್ಲಿಂದ ಕೈಯ್ಯ ಮುಗದೇನ

ಹಬ್ಬಗಳು ಮತ್ತು ರಥೋತ್ಸವಗಳು ನಮ್ಮ ಜನರ ಧಾರ್ಮಿಕ ಜೀವನವನ್ನು ರೂಪಿಸುವುದರಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸಿವೆ. ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಪ್ರಮುಖ ಹಬ್ಬಗಳಲ್ಲದೆ, ವರ್ಷದುದ್ದಕ್ಕೂ ದೇವರನ್ನು ಒಂದಲ್ಲ ಒಂದು ಬಗೆಯಲ್ಲಿ ಸ್ಮರಿಸಿಕೊಳ್ಳಲು ಅನುಕೂಲವಾಗುವಂತೆ, ಹಲವಾರು ಜಾತ್ರೆ ಹಬ್ಬಗಳಿವೆ, ನಾಗರ ಪಂಚಮಿ, ಗೌರಿ ಮೊದಲಾದ ಜಾತ್ರೆ ಹಬ್ಬಗಳಂತೂ ಹೆಣ್ಣು ಮಕ್ಕಳಿಗೆ ಪ್ರಧಾನವಾಗಿರುತ್ತವೆ. ಹೊಸದಾಗಿ ಗಂಡನ ಮನೆಗೆ ಹೆಣ್ಣು, ಹಬ್ಬ ಜಾತ್ರೆಗಳಿಗಾಗಿ ಕಾಯುತ್ತಿರುವ ಸಡಗರ ಹೇಳತೀರದು. ಹಬ್ಬವನ್ನಾಚರಿಸಲು ಜಾತ್ರೆ ನೋಡಲು ಸಂತೋಷದಿಂದ ತವರು ಮನೆಗೆ ಬರುತ್ತಾರೆ. ಆಗ ಅವಳ ಹಾಡಿಗೆ ಮೋಡಿ ಹೋಗಬೇಕಾಗುತ್ತದೆ.

ನಾಗಪ್ಪನ್ಹಾಲ ಹುಯೋಣ
ನಾಗರ ಹಿಡಿಯ್ಹಾಂಗ ಆಡೋಣ : ಪಲ್ಲ :
ನಾಗರ ಪಂಚಮಿ ನಾಡ ಹೆಣ್ಣಿಗೆ ಹಬ್ಬ
ನಾಗಪ್ಪನ್ಹಾಲ ಎರಿಯೋಣ : ನನಗೆಣತಿ
ನಾಗರ ಹಿಡಿಯ್ಹಾಂಗ ಆಡೋಣ
ಗುರುದೇವ ನಿಮಪಾಲ, ಹರಹರಿಸಿ ನಿಮಪಾಲ
ಶರಣರಿಗೆ ಹಾಲು ಹಿರಿಯರಿಗೆ : ಎರಿಯೋಣ
ಕಿರಿಯರಿಗೆ ಹಾಡಿ ಹರಿಸೋಣ
ಪಂಚಮಿ ಬರಲೆವ್ವ ಮಂಚಕಟ್ಟಲಿ ಮನೆಗೆ
ಕಂಚಿ ಗೆಳಗೇರಿ ಕೊಡಲಿ : ಸಮಜೀಕ
ಮಿಮಚ ಮುಗಲೀಗ ಎರಲಿ

ಎಂದು ನಾಗರ ಪಂಚಮಿ ಹಬ್ಬಕ್ಕೆ ಬಂದ ಹೆಣ್ಣು ಮಗಳು ತೇರಿನ ಕುರಿತು ಉತ್ಸಾಹದಿಂದ ಹಾಡಿದ್ದಾಳೆ. ಹಬ್ಬಗಳಂತೆಯೇ ಕಾಲಕಾಲಕ್ಕೆ ದೇವರ ಹೆಸರುಗಳಲ್ಲಿ ಸೇರುವ ಜಾತ್ರೆಗಳೂ ಮತ್ತು ಅಲ್ಲಿ ನಡೆಯುವ ರಥೋತ್ಸವಗಳೂ ಬೀರುವ ಪರಿಣಾಮ ಅಗಾಧವಾದ ಸುತ್ತಮುತ್ತಲಿನ ಹತ್ತು ಹಳ್ಳಿಯ ಜನಗಳೂ ಅಂತಹ ಜಾತ್ರೆ ಉತ್ಸವಗಳಲ್ಲಿ ಸೇರುತ್ತಾರೆ.

ತೇರಿಗೋಗ್ಹಾನ ಬನ್ನಿರೋ ಸ್ವಾಮಿ
ರಥಗೋಗ್ಹಾನ ಬನ್ನಿರೋ
ರಥಗೋಗ್ಹಾನ ಬನ್ನಿರೋ ಸ್ವಾಮಿ
ಜಾತ್ರೆಗ್ಹೋಗಾನ ಬನ್ನಿರೋ

ಎಂಬಂತಹ ಹಾಡುಗಳಲ್ಲಿ ತೇರಿಗೆ ಹೋಗುವ ಜನರ ಉತ್ಸಾಹ ಕಾಣುತ್ತೇವೆ. ರಥವನ್ನು ಕಟ್ಟುವುದೇ ಒಂದು ಕಲೆಗಾರಿಕೆ. ಅನೇಕ ಉತ್ತಮ ಕೆಲಸಗಾರರು ಅದಕ್ಕಾಗಿಯೇ ತಮ್ಮ ಕುಶಲತೆಯನ್ನು ವಿನಿಯೋಗಿಸುತ್ತಾರೆ.

ಬಾಗೂರು ಬಡಗೀಯ ಬೇಗನೆ ಬರಹೇಳಿ
ಭಾರಿ ಹುಳವಾಟಿ ಸರಿಯಾಗೀ ಶರಣಯ್ಯನ
ಭಾರಿಯ ತೇರ ಕಡೆದಾರು

ಭಾಲ್ಕಿಯ ಬಡಗೀಯ ಥಟ್ಟನೆ ಬರಹೇಳಿ
ಕಟ್ಟೇ ಎಳೆವಾಡಿ ಸಹಿಯಾಗಿ : ಶಿವನ
ಭಾರಿಯೂ ತೇರ ಕಡೆದಾರ.

ಈ ಬಗೆಯಲ್ಲಿ ರಥ ಸಿದ್ಧವಾಗಿತ್ತದೆ. ಅದರ ಮೇಲೆ ಸ್ವಾಮಿಯನ್ನು ಏರಿಸಿ ಮಿಣಿಗಳಿಂದ ಕಟ್ಟಿ–ನೂರಾರು ಜನ ಅದನ್ನು ಎಳೆದುಕೊಂಡು ಹೋಗುವ ಸಂಭ್ರಮ ಮತ್ತು ಜಯಘೋಷಗಳಿಗೆ ಭಗವಂತ ನಿಜವಾಗಿಯೂ ಮೆಚ್ಚಬೇಕು. ರಥ ಹರಿದು ಬರುತ್ತಿರುವಾಗ ರಥ ಬೀದಿಯ ಎರಡು ಪಕ್ಕದಲ್ಲಿ ಕಾದು ನಿಂತು ಜನ ಅದಕ್ಕೆ ವಂದಿಸುತ್ತಾ

ನಾಲ್ಕು ಮೂಲೆಗೆ ನಾಲ್ಕು ಚಿನ್ನದ ಕಂಬ
ಬೆಳ್ಳಿಯ ಗಂಟೆ ಸರಪಣಿ : ಲೋಕಾವು
ತಲ್ಲಣೀಸಿ ತೇರು ಹರಿದಾವು.

ಇಂತಹ ಉತ್ಸವದಲ್ಲಿ ಕುಟುಂಬದ ಸದಸ್ಯರೆಲ್ಲರೂ ಪಾಲ್ಗೊಳ್ಳುತ್ತಾರೆ. ನಲಿದಾಡುತ್ತಾರೆ: ಕುಣಿಯುತ್ತಾರೆ. ಪ್ರೀತಿ ಪ್ರಣಯದ ಮಾತುಗಳು ಆಡುತ್ತಿರುತ್ತಾರೆ. ಜಾತ್ರೆಗೆ ವಿವಿಧ ಮುಖದವರು ಬರುವುದುಂಟು. ಹೆಣ್ಣು ಮಗಳೊಬ್ಬಳು ತಾನು ಮೆಚ್ಚಿನ ರೂಪವಂತನನ್ನು

ಕಂಚಿನಂಗ ಹೊಳವುತಾನೆ
ಗೊಂಚಿನ ಬಾವಲಿ ಕಿವಿಯೋಳಿಟ್ಟು
ಪಂಚಲಿಂಗನ ಜಾತ್ರೆಗೊಬ್ಬ ಸಿಪಾಯಿ ಬಂದು
ಒಳ್ಳೆ ಒಳ್ಳೆ ಹೆಂಗಸರು
ಮರುಳಾಗಿ ನಿಂತರು
ಹೊರಳಿ ನೋಡವಲ್ಲ ಕಣ್ಣು ತಗದು

ಎಂದು ಮನಸ್ಸಿನಲ್ಲಿ ದುಃಖ ಒಬ್ಬಳಿಗಾದರೆ, ಇನ್ನೊಬ್ಬಳಿಗೆ ಜಾತ್ರೆಯಲ್ಲಿ ತನ್ನ ಗಿಣಿಯನ್ನು ಕಾಣುವ ಕಾತರ ಉದ್ದೇಶ ಹೇಳತೀರದು.

ಜಾತರಿಗ್ಹೋಗುದಕ ಕಾತರೀಲಿ ಎದ್ದಾಳ
ಸೀರೆತುಂಬ ಕರಿಗಡಬ: ಕಟಿಗೊಂಡ
ಜಾತಜಾತರಿ ಹುಡಿಕ್ಯಾಳ

ಗಡಿಬಿಡಿಯಿಂದ ಅವರು ಜಾತ್ರೆಯ ಸ್ಥಳವೆಲ್ಲಾ ಶೋಧನೆ ಮಾಡಿದರೂ ಪ್ರಿಯತಮ ಸಿಗುವುದಿಲ್ಲ. ಮುಖಬಾಡಿ ಬತ್ತಿಯಾಗುವುದು. ಜಾತ್ರೆಯಲ್ಲಿ ಸೂಳೆಗಾರಿಕೆ ಸಹ ಉಗ್ಗಿಲ್ಲದೆ ನಡೆಯುತ್ತದೆ. ರಸಿಕರು ಈ ಸೂಳಿಯರೊಂದಿಗೆ ಮಜಾ ಮಾಡುವುದುಂಟು. ಈ ವಿಷಯ ತಿಳಿದ ತಂಗಿಯೊಬ್ಬಳು ತನ್ನ ಅಣ್ಣನ ಬಗ್ಗೆ ತಾಯಿಗೆ ಕೇಳುತ್ತಾಳೆ.

ಯಾಕವ್ವ ನನ ಜೀವ ಚಾಜೇಲಿ ಒಲ್ಲದ
ಜಾತ್ರೀಗಿ ಹ್ವದಣ್ಣ ಬರಲಿಲ್ಲ : ಅಣ್ಣಯ್ಯನ
ಜಾತ್ರಿ ನಮಸ್ಕಾರು ಬಿಡಲಿಲ್ಲಾ

ಜಾತ್ರೆ ಎಂದ ಕೂಡಲೇ ಮುದುಕ ಮುದುಕಿಯರಲ್ಲಿ, ನವತಾರುಣ್ಯದ ಉತ್ಸಾಹ. ಜಾತ್ರೆಗೆ ಹೋಗುವ ಅವರನ್ನು ಕಂಡು ಹಳ್ಳಿಯ ತುಂಟ ಹುಡುಗರು ಅವರೊಂದಿಗೆ, ಹಾಸ್ಯಮಾಡುವರು.

ಮುದುಕ ಮುದುಕಿ ಕೂಡಿ ಜಾತರಿ
ಮುದುಕಿ ಬೇಡ್ಯಾಳ ಕುಲಾಯಿ : ಆ ಮುದುಕ
ಕೂಡಬ್ಯಾಳಿ ಬೇಡಿ ಅಳತಾನ

ಹೀಗೆ ಅವರನ್ನು ಕಾಡಿಸಿ–ಪೀಡಿಸಿ ಆನಂದ ಪಡಿಸುತ್ತಾರೆ ಹುಡುಗರು. ಜಾತ್ರೆಗೆ ಹೋಗಬೇಕಾದರೆ, ಹೊಸಬಟ್ಟೆ ಬರಿಗಳು ಧರಿಸಿಕೊಂಡು ಹೋಗಬೇಕೆಂದು ನಿಯಮ ಈಗಲೂ ಹಳ್ಳಿಗಳಲ್ಲಿ ಕಾಣಬಹುದು.

ಜಾತ್ರೆಗೆ ಹೋಗಲಾಕ ಜರದ ರುಮಾಲಬೇಕ
ಮ್ಯಾಲ ಬಂಗಾರ್ದ ಕೊಡಿ ಬೇಕ : ಶರಣಪ್ಪನ
ತೇರು ಎಳೆದು ಬರಬೇಕೋ
ಎನ್ನುವ ಮನೋಭಾವ ಜನಪರರದು

ಜಾತ್ರೆಯಗೆ ಮುಖ್ಯ ಆಕರ್ಷಣೆ, ಜನರು ಮತ್ತು ರಥ, ರಥದ ಅಲಂಕಾರದ ಕುರಿತು ಜನಪದ ಕವಿಗಳು.

ಬಸವನ ರಥ ಮ್ಯಾಲಕ ಬಹದೂರ
ಗಾಳಿ ಬೀಸಿದರೆ ಬಳಕುವದೋ : ಆ ರಥ
ಎಳೆಯ ಬಿಸಲೀಗೆ ಹೊಳದೀತ.

ಸಂಜೆಯ ಸಮಯದಲ್ಲಿ ತೇರು ಎಳಯುವಾಗ ಸೂರ್ಯ ಕಿರಣಗಳಿಂದ ಚಿನ್ನದಂತೆ ಹೊಳೆಯುವುದು ಸಾಮಾನ್ಯ, ಜನಪದ ಗರ್ತಿಯೊಬ್ಬಳು ಶರಣಬಸಪ್ಪ ತೇರು ಉದ್ದ ಇದೆ ಎನ್ನುವಲ್ಲಿ ಆ ದೊಡ್ಡ ರಥ ಎಳೆಯುವ ದೃಶ್ಯ ಮನಸ್ಸಿಗೆ ಗಾಬರಿಯನ್ನುಂಟು ಮಾಡುತ್ತದೆ.

ಅಪ್ಪನ ತೇರಿಗೆ ಇಪ್ಪತ್ತು ಮಿಣಿ ಹೂಡಿ
ಮನ್ನೆ ಮನ್ನೇರ ಕೈಗಲಸೆ : ಎಳೆದರೋ
ಅಪ್ಪ ಶರಣಪ್ಪನ ಹೊಸತೇರೋ.

ಎಂದು ಗುಲಬರ್ಗಾ ಶರಣಬಸವಪ್ಪನ ತೇರಿನ ಕುರಿತು ಜನಪದ ಹಾಡಿ ಹೊಗಳಿದ್ದಾರೆ.

ಗಿಡ್ಡರು ನಡೆದರೆ ಗಿಣಿಹಿಂಡು ನಡೆದಂಗ
ಉದ್ದನ ಬಾಲಿ ನನ್ನ ತಂಗಿ : ನಡೆದರೆ
ಶರಣಪ್ಪನ ಥೇರ ಎಳೆದಂಗ.

ಶರಣ ಬಸವಪ್ಪನ ತೇರಿನ ಮಾಟ ಬಲು ಪಸಂದ ಎನ್ನುವಲ್ಲಿ.

ಬಾಳೆ ಹಣ್ಣಿನ ಮಾಟ ಬಾದಾಮಿ ಎಲೆತೋಟ
ಬಾಗಲಾಗಾಡು ಮಗನಾಟ ಬಸಪ್ಪನ
ತೇರಿನ ಮಾಟ ಬಲುಮಾಟ
ಶರಣಬಸಪ್ಪನ ತೇರು ಎಲ್ಲರು ಎಳೆದು
ಮುಕ್ತಿ ಪಡೆಯಿರೆಂದು ಜನಪದ ಗರತಿಯ ಆಶಯ.

ಹಸುಗೂಸು ಹುಟ್ಟಲಿ ಕಲ್ಬುರ್ಗಿ ಬೆಳೆಯಲಿ
ರಸಬಾಳಿ ಕಬ್ಬು ದೊರೆಯಲಿ : ಕಲ್ಬುರ್ಗಿ
ಶರಣಬಸಪ್ಪನ ತೇರು ಎಳೆಯಲಿ.

ತೇರನ್ನು ಎಳಯುವ ದಿವಸ ತೇರಿಗೆ ನಾನಾ ವಿಧವಾಗಿ ಸಿಂಗರಿಸುತ್ತಾರೆ. ಹಣ್ಣು ಹಂಪಲುಗಳು ಕಟ್ಟಿರುತ್ತಾರೆ. ಅದರ ಕುರಿತು.

ಆರೂಢ ಸ್ವಾಮಿ ನಿನ್ನ ತೇರಿನ ಕಳಸದ ಮ್ಯಾಲ
ಮಗಿ ಮಾವಿನ ಹಣ್ಣ ಗಿಣಿ ಕಚ್ಚಿ : ಒಯ್ವಾಗ
ಕಾಯಣ್ಣ ಬಾಯಿ ಬಿಡುತ್ತಿದ್ದ.

ಸೌಂದರ್ಯಕ್ಕಾಗಿ ಕಟ್ಟಿದ ಹೂ ಹಣ್ಣನ್ನು ನಿಜವಾದ ಹಣ್ಣೆಂದು ಗಿಣಿ ಕಚ್ಚಿಕೊಂಡು ಹೋಯಿತಂತೆ. ಕೊನೆಗೆ ತೇರು ಎಳೆಯುವಾಗ ಉತ್ತತ್ತಿ ಬಾಳೆಹಣ್ಣು ಅಳ್ಳು ಬೆಂಡುಬತ್ತಾಸ, ಕೊಬ್ಬರಿ, ಮುಂತಾದವುಗಳು ತೇರಿಗೆ ಎಸೆಯುವುದು ಸಾಮಾನ್ಯ.

ಉಚ್ಚಾ ಮಾನ್ಲರಿವಾಗ ಬತ್ತೀಲಿ ನಿಂತಿದ್ದೆ
ಉತ್ತತ್ತಿ ಸೂರೆ ಬಿಡುತ್ತಿದ್ದೆ : ತಿಪ್ಪೆರುದ್ರ
ಬತ್ತೀ ನಾಸು ನಿಂತಿದೆ.

ತೇರು ಎಳಯುವಾಗ ದೇವರನ್ನು, ಬೇಡಿಕೊಂಡು ತಮ್ಮ ಜೀವನದ ಕೊರತೆಯನ್ನು ತುಂಬಿಕೊಳ್ಳುತ್ತಾರೆ. ಆ ಸಮಯದಲ್ಲಿ ತಾಯಿ ಮಗಳಿಗೆ ಹೇಳುವಳು.

ತೇರು ಹರಿದಾವು ತಾನಕ್ಕೆ ನಿಂತಾವು
ತಾಯಿ ಚನ್ನಯ್ಯ ದವನವ : ಬಾಳೆಹಣ್ಣು
ಬೇಡಿಕೊಳ್ಳೆ ಮಗಳೇ ಸೆರೆಗೊಡ್ಡಿ.

ಕೊನೆಗೆ ತೇರು ನಿಲ್ಲಿಸುವ ಸ್ಥಳಕ್ಕೆ ಸಾಗಿಸಿಕೊಂಡು ಹೋಗುವರು. ಹೆಚ್ಚು ಕಡಿಮೆ ಅಂದು ಜಾತ್ರೆ ಮುಗಿದಂತೆಯೇ.

ಜಾತ್ರೆ ಮುಗಿವುದರೊಳಗಾಗಿ ಕಳವು ಮಾಡುವುದು ಚಿಕ್ಕ ಮಕ್ಕಳು ಕಳೆದ್ಹೋಗುವುದು ಸಾಮಾನ್ಯ. ಕೂಸು ಕಳೆದುಕೊಂಡು ಹಂಬಲಿಸುವ ತಾಯಿಯ ಹಾಡು ಹೀಗಿದೆ.

ಕೂಸು ಕಂಡಿರೇ : ಅವ್ವ ನನ್ನ ಬಾಲನ ಕಂಡಿರೇ
ಜನವ ಜಾತ್ರೆಗೊಯ್ತು ನಾನು ಜಾತ್ರೆಹೋದೆ
ಜನಕಿಲ್ಲದ ಕೇಡು ನನಗಾಯಿತವ್ವ,
ಕೂಸು ಕಂಡಿರೇ : ಅವ್ವ ನನ್ನ ಬಾಲನ ಕಂಡಿರೇ

ಎಂದು ದುಃಖಿಸುವಳು. ಕೂಸು ಕಳದರೂ, ಕಳವು ಆದರೂ ಪೋಲಿಸ್ ವ್ಯವಸ್ಥೆ ಬಂದೋಬಸ್ತಾಗಿರುತ್ತದೆ. ಮಕ್ಕಳು ಕಳೆದರೆ, ಧ್ವನಿವರ್ಧಕಗಳಲ್ಲಿ ಪ್ರಸಾರ ಮಾಡುವುದು ಪ್ರತಿ ಜಾತ್ರೆಯಲ್ಲಿ ಇದೆ. ಜನಪದವರು ಜಾತ್ರೆಯ ಸ್ವರೂಪ ಕುರಿತು ಹಾಡು ಹೊಗಳಿದ್ದಾರೆ. ಅವರ ಪ್ರತಿಭೆ ಉತ್ಸವ ಕಂಡ ದೃಷ್ಟಿ ಮೆಚ್ಚುವಂಥದ್ದು, ಹೊಗಳುವಂಥದ್ದು.

ಜಾತ್ರೆಯ ಭೂಷಣಗಳ ಮೇಲಿನ ಪ್ರೀತಿ ಕುರಿತು ಗರತಿ ಗಂಡನಿಗೆ

ಜಾತರಿ ಮುಂದ ಜಮಾ ಮಾಡಿ ನಾ
ಜರದ ಕುಬಸ ಬೇಕ ತೊಡಲಾಕ
ಜರದ ಕುಬಸ ಬೇಕ ತೊಡಲಾಕ
ಬಿಚ್ಚಿ ಉಡಲಾಕ

ಜಾತ್ರಿಗಿ ಹೋದ ಗಂಡ ಮನೆಗೆ ಬಂದು ತಡವಾದರೆ ತಳಮಳಗೊಮಡ ಸೂಸೆ ಅತ್ತೆಗೆ ಕೇಳುತ್ತಾಳೆ.

ಯಾಕವ್ವ ನನ ಜೀವ ಚಾಚೇಲಿವಲ್ಲದ
ಜಾತ್ರಿಗೋದವರು ಬರಲಿಲ್ಲಾ : ಇಂದಿನ
ರಾತ್ರಿ ಹ್ಯಾಂಗಾರೆ ಕಳೆಯಲಿ.

ಹೀಗೆ ಜನಪದ ತ್ರಿಪದಿಗಳಲ್ಲಿ ಜಾತ್ರೆಯ ಉಲ್ಲೇಖ ಅಲ್ಲಲ್ಲಿ ಕಾಣಿಸಿಕೊಂಡಿದ್ದು ಅವು ಮೌಲಿಕವಾಗಿವೆ.

೫:೪: ಒಡಪುಗಳಲ್ಲಿ ಜಾತ್ರೆ :

ಮದುವೆ ಸಮಾರಂಭದಲ್ಲಿ ಒಡಪು ಹೇಳುವ ಸಂಪ್ರದಾಯ ಇನ್ನೂ ಇದೆ. ಸತಿಯಿಂದ ಪತಿಯ ಹೆಸರನ್ನು ಪತಿಯಿಂದ ಸತಿಯ ಹೆಸರನ್ನು ಕೇಳುವ ಪ್ರಸಂಗಗಳು ಬರುತ್ತವೆ. ಮದುಮಕ್ಕಳು ಊರೊಳಗೆ ವಾದ್ಯ ಸಮೇತ ಮೆರವಣಿಗೆ ಹೋಗುವಾಗ ಮನೆಗಳಲ್ಲಿ ಅಕ್ಕಿ ಇಟ್ಟು ಹೆಸರು ಕೇಳುತ್ತಾರೆ. ಮದುವೆಯಲ್ಲಿ ಅಕ್ಕಿ ಕಾಳು ಬಿದ್ದ ಮೇಲೆ, ಬಂಧು–ಬಳಗ, ಆಪ್ತರು ಊಟಕ್ಕೆ ಮನೆಗೆ ಆಹ್ವಾನಿಸಿ, ಊಟವಾದ ನಂತರ ಹೀಗೆ ಹಲವು ಸಂದರ್ಭಗಳಲ್ಲಿ ಹೆಸರನ್ನು ಕೆಳುವ ಪರಿಪಾಠವಿದೆ. ಹೆಸರು ಕೇಳುಗರಿಗೆ ವಧುವರರು ನೇರವಾಗಿ ಹೆಸರು ಹೇಳಿದರೆ ತೃಪ್ತಿಯಾಗುವುದಿಲ್ಲ. ಹೆಸರು ಹೇಳುವ ಮೊದಲು ಗುಣ ಸೌಂದರ್ಯ, ನಡೆ–ನುಡಿ ಮುಂತಾದ ವರ್ಣನೆಯನ್ನೊಳಗೊಂಡ ಒಂದು 'ಮಿನಿಗವನವನ್ನು' ಪೀಠಿಕೆಯಾಗಿ ಹೇಳಿದ ನಂತರ ಹೆಸರು ಹೇಳಬೇಕೆಂಬುದು ಕೇಳುವವರ ಬಯಕೆಯಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮೊದಲೇ ಕಂಠಪಾಠಮಾಡಿಕೊಂಡು ಪೀಠಿಕಾ ರೂಪದ ಮಿನಿಗವನನ್ನು ಹೇಳಿ ಅದರೊಂದಿಗೆ ಗಂಡನ, ಹೆಂಡತಿಯ ಹೆಸರನ್ನು ಹೇಳಬೇಕು. ಆ ಮಿನಿಗವನವನ್ನು ಪೀಠಿಕೆಯಾಗಿ ಹೇಳಿದ ನಂತರ ಹೆಸರು ಹೇಳಬೇಕೆಂಬುದು ಕೇಳುವವರ ಬಯಕೆಯಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಮೊದಲೇ ಕಂಠಪಾಠಮಾಡಿಕೊಂಡು ಪೀಠಿಕಾ ರೂಪದ ಮಿನಿಗವನವನ್ನು ಹೇಳಿ ಅದರೊಂದಿಗೆ ಗಂಡನ, ಹೆಂಡತಿಯ ಹೆಸರನ್ನು ಹೇಳಬೇಕು. ಆ ಮಿನಿಗವನ ಭಾಗವೇ 'ಒಡಪು' ಎಂದು ಕರೆಯಲಾಗುತ್ತದೆ.

"ಜಾತ್ರೆಯಲ್ಲಿ ವೀರಭದ್ರ ಮೇಲು
ರಾತ್ರಿಯಲ್ಲಿ ಶಿವರಾತ್ರಿ ಮೇಲು
ನನಗೆ ಮಾತ್ರ . . . . . ಮೇಲು"

ಹೀಗೆ ಒಡಪು ಪದ್ಯದ ರೀತಿಯಲ್ಲಿದ್ದು, ಜನರ ನಾಲಿಗೆಯಿಂದ ನಾಲಿಗೆಗೆ ಹರಿದು ಬಂದಿರುತ್ತದೆ. ಈ ಒಡಪುಗಳು ಬಂಧು ಬಳಗ ಆಪ್ತರಿಗೆ ಮನರಂಜನೆ ನೀಡುವುದಲ್ಲದೆ ಹೊಸ ಜೋಡಿಗಳಲ್ಲಿ (ಮದು ಮಕ್ಕಳಲ್ಲಿ) ಪರಸ್ಪರ ಪ್ರೀತಿ ಹುಟ್ಟಿಸುತ್ತದೆ. ಮತ್ತು ಹೆಚ್ಚಿಸುತ್ತದೆ. ಪೌರಾಣಿಕ ವಸ್ತು, ಪಾತ್ರ ಪ್ರಸಂಗಗಳು, ಹಾಸ್ಯ, ಶೃಂಗಾರ ಮತ್ತು ಜಾತ್ರೆ ಉತ್ಸವ ಮುಂತಾದ ಪ್ರಸಂಗಗಳು ಒಡಪುಗಳಲ್ಲಂತೂ ಯಥೇಚ್ಛವಾಗಿ ಕಂಡುಬರುತ್ತವೆ. ಜಾತ್ರೆಗೆ ಸಂಬಂಧಿಸಿದ ಒಡಪುಗಳು ಇವುಗಳಾಗಿವೆ, ಮದುವೆ

ಸೋಬಾನದಲ್ಲಿ ಗಂಡ ಹೆಂಡಿರು ಹೆಸರು ಕೇಳಿ ಹೇಳಿ ತಮ್ಮ ಪ್ರೀತಿಯನ್ನು ಪ್ರದರ್ಶಿಸಿಕೊಳ್ಳುವ ಬಗೆ ಒಡಪಿನಲ್ಲಿದೆ. ಮದುವೆಯ ಹೆಣ್ಣು ತನ್ನ ಪತಿಯನ್ನು ಕುರಿತು ಈ ರೀತಿ ಹೇಳುತ್ತಾಳೆ.

"ಪಟೆ ಪಟೆ ಮೋಟಾರ
ಪಾರಿವಾಳ ಅಂಗಿ
ಪಾತರಗಿತ್ತಿ . . . . ಕರಕೊಂಡ
ಜಾತರಿಗೋಗತಾರ"

ಗಂಡನ ವಾಹನ, ಆತ ಧರಿಸಿದ ಅಂಗಿಯ ಬಣ್ಣ ತಿಳಿಸುತ್ತ ತಾನು ಮಾತ್ರ ಚುರುಕು ಸ್ವಭಾದವಳು ಎನ್ನುವ ಬದಲಾಗಿ 'ಪಾತರಗಿತ್ತಿ' ಕರಕೊಂಡು ಜಾತ್ರೆಗೆ ಹೋಗುತ್ತಾರೆ ಎನ್ನುವ ಒಡಪಿನಲ್ಲಿ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡು ಹೇಳುವ ಒಡಪು ಇದಾಗಿದೆ.

ಆಗ ಮದುವಣಿಗ ಹೀಗೆ ಹೇಳುತ್ತಾನೆ.

"ಮನ್ಯಾಗ ಕಾಡಂಗಿಲ್ಲ
ಜಾತ್ರ್ಯಾಗ ಬಿಡಾಂಗಿಲ್ಲ"

ಒಂದು ಒಡಪು ಅಂತ್ಯ ಪ್ರಾಸದಿಂದ ಕೂಡಿ ಹಾಸ್ಯ ರಸವನ್ನು ಹುಟ್ಟಿಸುವುದು ಕಾಣಬಹುದು. ಹೆಂಡತಿಯಾದವಳು ಮನೆಯಲ್ಲಿರುವಾಗ ಯಾವುದೇ ವಸ್ತುವಿನ ಹೆಸರೇ ಎತ್ತುವುದಿಲ್ಲ. ಆದರೆ ಜಾತ್ರೆಗೆ ಜೋಡಿ ಆಗಿ ಹೋದ ಮೇಲೆ ಕಾಡಿಸಿಯಾದ್ರು ಆ ವಸ್ತು, ಈ ವಸ್ತು ಖರೀದಿ ಮಾಡಿಸುವಳು ಎಂಬ ಈ ಒಡಪು ಗಂಡನ ಆರ್ಥಿಕ ಸ್ಥಿತಿಯನ್ನು ಸೂಚಿಸುತ್ತದೆ.

ದಾಂಪತ್ಯ ಪ್ರೇಮವನನು ಸಾರುವ ಒಡಪುಗಳು ಇವು :

ಬಸವಣ್ಣನ ಜಾತ್ರೆ ನಮ್ಮೂರ ಮಗ್ಗಲಾಗ
ಅವನ ಮುಖ ಅತ್ತಲಾಗ
ನನ್ನ ಮುಖ ಇತ್ತಲಾಗ
ಕತ್ತಲಾಗ ಬಂದು ಕಾಲ ಹಿಡಿತಾನ

"ಜರತಾರ ತರತಾರ
ಜಾತ್ರಿಗಿ ಹೋಗ್ತಾರ
ರಾತ್ರಿಗೆ ಬರ್ತಾರ
ಮೈಯಲ್ಲ ಹೊಡಿತಾರೆ . . . ರು"

ಶಿವಭಕ್ತನಿಗೆ ಲಿಂಗಬೇಕು
ಧರ್ಮಕ್ಕೆ ದಯವು ಬೇಕು
ಪ್ರೇಮಕ್ಕೆ . . . . ಬೇಕು
. . . . . ಜಾತ್ರೆಗೆ ಐಕ್ಯತೆ ಬೇಕು"

"ಜಾತ್ರೆಗೆ ಕರಕೊಂಡಹೊಗ್ತಾರ
ಪ್ಯಾರ ಮಾಡ್ತಾರ
ರಾತ್ರಿಯಲ್ಲಿ ಮಿಸಿಕ್ಯಾಡಿ
ಕೈ ಬಿಡ್ತಾರ . . . .

ಮೇಲೆ ಹೇಳಿರುವಂತಹ ಒಡಪುಗಳಲ್ಲಿ ಸಾಮಾನ್ಯವಾಗಿ ಕೊನೆಯಕ್ಷರ ಪ್ರಾಸ ಹಾಗೂ ಅನುಪ್ರಾಸಗಳನ್ನು ಕಾಣಬಹುದು. ಇಲ್ಲಿ ಕಾವ್ಯದಂತೆ ಧ್ವನಿ ಕಾಣಲಾಗದು. ಆದರೆ ವಾಚ್ಯತೆಯನ್ನು ಕಾಣಬಹುದು. ಆದರೂ ಒಂದು ರೀತಿಯ ಕಾವ್ಯವೇ ಎನ್ನಬೇಕಾಗುತ್ತದೆ. ಒಡಪಿನ ವಾಕ್ಯಗಳನ್ನು (ಚುಟುಕು) ಹೇಳುತ್ತಿದ್ದರೆ ಒಂದು ರೀತಿಯ ಸಂತೋಷ ಮನಸ್ಸಿಗುಂಟಾಗುವುದರಲ್ಲಿ ಅನುಮಾನವೇ ಇಲ್ಲ. ಹೀಗಾಗಿಯೇ ಒಡಪುಗಳು ಎಲ್ಲರಿಗೂ ಪ್ರಿಯವಾಗಿವೆ.

ನಮ್ಮ ದೇಶ ಜನಸಂಖ್ಯೆಯಿಂದ ತುಂಬಿ ತುಳುಕಾಡುತ್ತಿದೆ. ಅನೇಕ ಸಮಸ್ಯೆಗಳು ಹುಟ್ಟಿಕೊಂಡಿವೆ. ಹೀಗಾಗಿ 'ಮನೆಗೊಂದು ಮಗು ಸಾಕು' ಎನ್ನುವ ಘೋಷಣೆ ಸರ್ಕಾರದ್ದಾಗಿದೆ. ಆದ್ದರಿಂದಲೇ ಈ ಒಡಪು ಹುಟ್ಟಿಕೊಂಡಿರಬೇಕು.

"ಊರಿಗೊಂದು ಗುಡಿ ಚಂದ
ಮನೆಗೊಂದು ಮಗು ಚಂದ
ವರ್ಷಕ್ಕೊಂದು ಬಸವಣ್ಣನ ಜಾತ್ರೆ ಬಲು ಅಂದ
. . . . ನನಗೆ ಪಸಂದ"

ಬಸವಣ್ಣನವರು ಮಾಡಿದ ಸಾಮಾಜಿಕ ಕ್ರಾಂತಿ, ದೇಶದ ಸ್ವಾತಂತ್ರಕ್ಕಾಗಿ ಹೋರಾಡಿದ ಮಹಾತ್ಮಗಾಂಧಿ ಎಂದು ಗ್ರಾಮೀಣರಿಗೆ ತಿಳಿಸಿಕೊಟ್ಟ ಒಡಪು ಇದಾಗಿದೆ. ಹೀಗೆ ಸ್ವತಂತ್ರ ಭಾರತದ ಬೆಳವಣಿಗೆಗೆ ಕಾರಣರಾದವರ ಬಗ್ಗೆ ಬೆಳಕು ಚೆಲ್ಲಿಸುವ ಪ್ರಯತ್ನ ಗ್ರಾಮೀಣ ಮಹಿಳೆ ಮಾಡಿದ್ದಾಳೆ.

"ಬಸವಣ್ಣ ಮಾಡಿದ್ದು ಸತ್ಯದ ಕ್ರಾಂತಿ
ಹೂಗಳಿಗೆ ಸೌಂದರ್ಯದ ಕ್ರಾಂತಿ
ಗಾಂಧಿ ಮಾಡಿದ್ದು ಸ್ವಾತಂತ್ರ್ಯದ ಕ್ರಾಂತಿ
ವೀರಭದ್ರನ ಜಾತ್ರೆಯಲ್ಲಿ
. . . . ಇದ್ದರು ಕಳ್ಳರ ಬ್ರಾಂತಿ"

ಹದಿಹರೆಯದ ಯುವಕ ಯುವತಿಯರು ತುಂಟಾಟಕ್ಕಾಗಿ ಮದುವೆಯಾಗದವರನ್ನೂ ಹೆಸರು ಕೇಳುವುದುಂಟು. ಅಂತಹ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಂಡು ಹುಡುಗಿಯೊಬ್ಬಳು ಹೇಳುವ ಒಡಪು :

"ಪ್ರೀತಿ ಮಾಡ್ತಾರ
ರಾತ್ರಿಗೆ ಕಾಯ್ತಾರ
ಜಾತ್ರೆಗೆ ಹೋಗಬೇಕಂದ್ರ
ಮಂದಿ ಮಂದಿ ಅಂತಾರ . . . . .

ಸತಿಯಾದವಳು ಪತಿಯ ಹೆರನ್ನು ಹೊಗಳಿ ಹೇಳುವುದು ವಾಡಿಕೆ. ಆದರೆ ಪತಿಯಾದವನು ಸತಿಯ ಹೆಸರನ್ನು ತೆಗಳಿ ಹೇಳುವುದು ಸಾಮಾನ್ಯ.

"ಜಾತ್ರಿ ಅಂತಾಳ, ರೊಕ್ಕ ಕೇಳ್ತಾಳ, ಅಡಗಿ ಮಾಡಂದ್ರ
ಅಳಕೋತ ಕೂಡುತ್ತಾಳೆ"

"ಗಣಪನ ಜಾತ್ರೀಗಿ ಕರಕಿ, ಬಾವಿ ಮ್ಯಾಲ ಗಿರಕಿ, ನನಗಿಂತ . . . ಬೆರಕಿ"

ಜಾತ್ರೆಗೆ ವಿವಿಧ ಕಡೆಗಳಿಂದ ಜನ ಬಂದು ಸೇರುತ್ತಾರೆ. ಹತ್ತಾರು ಅನುಭವಗಳು ಮಾತುಗಳು ಕೇಳಬೇಕೆಂಬ ಆಸೆ ಆಪ್ತರದಾಗಿರುತ್ತದೆ. ಹೀಗಾಗಿ ಜಾತ್ರೆಯಲ್ಲಿ ಆದ ಅನುಭವದ ಮಾತುಗಳು ಹೇಳಲು ಒಂದು ದಿನ ಸಾಲುವುದಿಲ್ಲ. ಮೂರು ದಿನ ಬೇಕಾಗುತ್ತದೆ. ಎನ್ನುವ ಒಡಪು ಅರ್ಥಪೂರ್ಣವಾಗಿದೆ. ಇದು ಸಮಯ ಪ್ರಜ್ಞೆಯನ್ನು ಸೂಚಿಸುತ್ತದೆ.

"ಗಾಂಧೀಜಿಯವರು ಉಡುವುದು ಮೂರು ಮಳದ ಪಂಚೆ
ನಾವು ನಡೆಯುವುದು ಅತ್ತೆ ಮಾವಗಂಜಿ
ಜಾತ್ರೆಯಲಿ ವಿನಾಯಿತಿ ಅಂತ ಹೇಳುವೇನು
. . . . ಮೂರ ಸಂಜೆ"

ಯಾವುದೇ ಜಾತ್ರೆ ನಡೆಯಲಿ ಅದು ಶ್ರೀಸಾಮಾನ್ಯರಿಂದ ಶ್ರೀಮಂತರವರೆಗೂ ಒಂದೆಡೆ ಕೂಡಿಸಿ ಪರಸ್ಪರ ಬೇಧ-ಭಾವ ಹೋಗಲಾಡಿಸುತ್ತದೆ. ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುತ್ತದೆ. ಆಯಾ ಹಳ್ಳಿ, ಸುತ್ತಮುತ್ತಲಿನ ಪ್ರದೇಶಗಳಿದ್ದ ಒಳ ವ್ಯಾಜ್ಯಗಳನ್ನು ಮುಕ್ತಗೊಳಿಸಿ ಸಾಮಾಜಿಕ ಒಪ್ಪಂದವನ್ನು ಮಾಡುವ ಒಡಪು:

"ಹರಿಶ್ಚಂದ್ರರು ತನ್ನ ಹೆಂಡಿರು
ಮಕ್ಕಳನ್ನು ಮಾರಿದ್ದು ಸತ್ಯಕ್ಕಾಗಿ
ಎಲ್ಲಮ್ಮ ಜಾತ್ರೆ ನಡೆಸುವುದು ಹಳ್ಳಿಯ ಹಿತಕ್ಕಾಗಿ
ನನರಾಯ . . . . ದೊರೆತಿದ್ದು ನನ್ನ ಪುಣ್ಯಕ್ಕಾಗಿ

ಎಂದು ತನ್ನ ಪತಿಯ ಹೆಸರು ಸೇರಿಸಿ ಹೇಳುತ್ತಾರೆ.

ಜೋಳದ ನುಚ್ಚು ಆರೋಗ್ಯಕ್ಕೆ ತುಂಬ ಹಿತ. ಅದರಲ್ಲಿ ಎಲ್ಲ ಪ್ರೋಟಿನ್ ಅಂಶಗಳಿರುತ್ತವೆ. ನುಚ್ಚು ಉಣ್ಣುವವರಲ್ಲಿ ಶಕ್ತಿ ಹೆಚ್ಚಾಗಿ ಜಂಭಕ್ಕೆ ಒಳಗಾಗುತ್ತಾರೆಂಬ ವೈಜ್ಞಾನಿಕ ಮನೋಭಾವವನ್ನು ಮೂಡಿಸುತ್ತದೆ. ಜಾತ್ರೆ ನೋಡುವತನಕ ಹೆಣ್ಣು ಮಕ್ಕಳು ಹೇಗಿರುತ್ತಾರೆ ಎಂಬ ಒಡಪು ಇದಾಗಿದೆ.

"ಜೋಳದ ನುಚ್ಚು
ಜಂಭ ಕೊಚ್ಚು
. . . . . ಇವಳಿಗೆ ಹಿಡಿದಿದೆ ಜಾತ್ರೆ ಹುಚ್ಚು"

ಸಾಂಸ್ಕೃತಿಕ ಸಮಾವೇಶದ ಪ್ರತೀಕ ಜಾತ್ರೆ, ಅಲ್ಲಿ ಜಾತ್ರೆಗೆ ಬಂದ ಪ್ರತಿಯೊಬ್ಬ ಭಕ್ತರು ಜಾತಿ–ಮತ ಭೇದವಿಲ್ಲದೆ ಉತ್ಸವದ ಕೇಂದ್ರ ಬಿಂದು ಆದ ದೇವರಿಗೆ ಶ್ರದ್ಧೆ ಭಕ್ತಿಗಳಿಂದ ಪೂಜೆಯನ್ನು ಸಲ್ಲಿಸುತ್ತಾರೆ. ದೇವರನ್ನು ಪ್ರಾರ್ಥಿಸುತ್ತಾರೆಂದು ಈ ಒಡಪು ತಿಳಿಸುತ್ತದೆ.

"ಶಿವಭಕ್ತರು ಮಾಡುವುದು ಶಿವಧ್ಯಾನ
ಹರಿಭಕ್ತರು ಮಾಡುವುದು ಹರಿಧ್ಯಾನ
. . . . ಮಾಡುವುದು ನನ್ನ ಧ್ಯಾನ
ಜಾತ್ರೆಯಲಿ ನಡೆವದು ದೇವರ ಧ್ಯಾನ"

ಸುಗ್ಗಿ ಮುಗಿಸಿ ಹಿಗ್ಗಿನಿಂದ ರೈತರು ಕಣಜ ತುಂಬಿ ದೇವರ ದರ್ಶನ ಪಡೆಯಲು ಜಾತ್ರೆಗಳು ಅವಕಾಶ ಒದಗಿಸಿಕೊಡುತ್ತವೆ. ಆ ವರ್ಷದ ಬೇಸರವೆಲ್ಲ ಕಳೆದು ಶಾಂತಿ ಸಮಾಧಾನ ತಂದುಕೊಡುವಲ್ಲಿ ಜಾತ್ರೆಗಳು ಯಶಸ್ವಿಯಾಗಿವೆ. ಸಿನೀಮಾ, ಆಟಗಳು, ಕುಸ್ತಿ, ಸರ್ಕಸ್ಸು, ನರ್ತನ ಕೂಟಗಳು, ವಾದ್ಯಗೋಷ್ಠಿಗಳು, ಪ್ರಾರ್ಥನೆ ಆರಾಧನೆ ಮುಂತಾದವುಗಳು ಜಾತ್ರೆಯಲ್ಲಿ ಮನಸ್ಸಿಗೆ ಸಮಾಧಾನ ಹುಟ್ಟಿಸುತ್ತವೆ.

"ನಿತ್ಯದಲ್ಲಿ ಮಾಡಬೇಕು
. . . . ನಮನ
ಪುಣ್ಯಕ್ಕೆ ಬೇಕು ದಾನ
ಬಸವಣ್ಣನ ಜಾತ್ರೆಗೆ ಹೋಗಿದ್ರ ಸಮಾದಾನ"

ಒಂದೊಂದು ಜಾತ್ರೆಯಲ್ಲಿ ತನ್ನದೆ ಆದ ವಿಶಿಷ್ಟ ಆಚರಣೆಗಳಿರುತ್ತವೆ. ಈ ಪ್ರದೇಶದ ಯಾವುದೇ ವೀರಭದ್ರನ ಜಾತ್ರೆ ಜರುಗಲಿ ಅಲ್ಲಿ ಅಗ್ನಿಕೊಂಡ ವಿಶೇಷವಾಗಿರುತ್ತದೆ.

"ನೀಲಿ ಬಣ್ಣದ ಹೊಂಡ
ವೀರಭದ್ರೇಶ್ವರನ ಜಾತ್ರೆಯಲ್ಲಿ ನಡೆಯುವುದು
ಅಗ್ನಿಕೊಂಡ
. . . . ಭಾಳ ಭಂಡ"

ಹೋಗೆ ವೀರಭದ್ರ ಜಾತ್ರೆಯ ವಿಶಿಷ್ಟ ಪದ್ಧತಿಯ ಪರಿಚಯ ಕೊಡುತ್ತಾ ಕೊನೆಗೆ ತನ್ನ ಗಂಡನ ಹೆಸರು ಸೇರಿಸಿ ಒಡಪು ಹೇಳುವುದು ರಂಜನೀಯವಾಗಿದೆ. ಕೆಲವು ಗ್ರಾಮ ದೇವತೆಯ ಜಾತ್ರೆಗಳು ವಾರ ತಿಥಿಯನ್ನು ಅವಲಂಬಿಸಿರುತ್ತವೆ. ಬೀದರಿನ ಬೆನಕನ ಹಳ್ಳಿಯ ಎಲ್ಲಮ್ಮನ ಜಾತ್ರೆ ಪ್ರತಿ ಮಂಗಳವಾತ ಜರುಗುತ್ತದೆಂದು ಈ ಒಡಪು ತಿಳಿಸುತ್ತದೆ.

"ವೀರಶೈವರು ಹಾಕುವುದು ಶಿವದಾರ
ಬ್ರಾಹ್ಮಣರು ಹಾಕುವುದು ಜನಿವಾರ
ಬೆನಕನಹಳ್ಳಿ ಜಾತ್ರೆ ನಡೆಯುವುದು ಮಂಗಳವಾರ
. . . . ನನ್ನ . . . . ನನಗೆ ಸರ್ದಾರ"

ಜಾತ್ರೆ ಮಾಡಲು ಹಣ ಬೇಕು. ಇಲ್ಲವಾದರೆ ಸಾಲ ಪಡೆದು ಹೋಗಬೇಕೆಂಬ ಮನೋಭಾವ ನಮ್ಮ ಜನಪದರು ಬೆಳೆಸಿಕೊಂಡು ಬಂದಿದ್ದಾರೆ. ಜಾತ್ರೆ ಮಾಡುವುದರಿಂದ ದೇವರು ತಮ್ಮ ತಮ್ಮ ಮನೆಯಲ್ಲಿ ಮಂಗಲಕರವಾದ ಚಟುವಟಕೆಗಳು ನಡೆಯಲು ಅನುವಾಗುತ್ತಾನೆ. ಇಲ್ಲವಾದರೆ ಬೆಚ್ಚಿ ಸಿಡಿದೇಳುತ್ತಾನೆಂಬ ನಂಬಿಕೆ ಜನಪದರದು.

"ಹಣವಿಲ್ಲ ಅಂತಾರ
ಸುಮ್ಮ ಆಗ್ತಾರ
ಸಾಲ ಮಾಡಿ
ಜಾತ್ರೆಗೆ ಹೋಗ್ತಾರ . . . ."

ಹಣದ ಕೊರತೆ ಪ್ರತಿಬಿಂಬಿಸುವ ಒಡಪು ಇದು :

"ಅಂಬಲಿ ಮಾಡಿನ್ರಿ ಅಂದ್ರ
ಅನ್ನ ಮಾಡಿಲ್ಲವೇನು ಅಂತಾರ
ಜಾತ್ರೆ ಅಂದ್ರ
ಜಾರಿ ಹೋಗ್ತಾರ. . ."

ಜನಪದ ಅಧ್ಯಯನ ಮಾಡುವಾಗ ಶೀಲ–ಅಶ್ಲೀಲಗಳ ಬಗ್ಗೆ ನೇರವಾಗಿ ಹೇಳಬೇಕು. ಇಲ್ಲವಾದರೆ ಅದರ ಸ್ವಾರಸ್ಯವೇ ಹೋಗುತ್ತದೆ. ಜನಪದರು ತಮ್ಮ ಬದುಕಿನಲ್ಲಿ ಯಾವ ಸಂಕೋಚ ಅಂಜಿಕೆಗಳಿಲ್ಲದೆ ಸಹಜವಾಗಿ ಬಳಸುವ ಗ್ರಾಮೀಣ ಲೈಂಗಿಕ ಒಡಮುಗಳು ಧೈರ್ಯಕ್ಕೆ ಎಡೆಮಾಡಿಕೊಡುತ್ತವೆ.

"ಜಾತ್ರೆಯಲ್ಲಾ ಜನರು
ವನವೆಲ್ಲಾ ಹಸಿರು
ಹೊಸದಾಗಿ ಬಸಿರು
ಮಾಡ್ದೋರು . . . . ರು"

ಎಂದು ಗಂಡನ ಹೆಸರು ಸೇರಿಸಿ ಒಡಪು ಹೇಳುವುದು ಹೆಣ್ಣಿಗೆ ಯಾವ ಸಂಕೋಚವೂ ಇಲ್ಲ. ಹೀಗೆ ಒಡಪುಗಳು ದೇವರು–ದಿಂಡಿರು, ಗುರುಗಳು, ಮಠಗಳು, ತಿಂಡಿ–ತಿನಿಸುಗಳು ಮತ್ತು ಜಾತ್ರೆ ಉತ್ಸವಗಳು, ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಒಡಪುಗಳು ಬಹಳಷ್ಟಿವೆ. ಸತಿಯ ಹೆಸರು ಪತಿ, ಪತಿಯ ಹೆಸರು ಸತಿ ಹೇಳುವ ಮೂಲಕ ಇತರ ವಿಷಯಗಳ ಮಾಹಿತಿ ನೀಡುತ್ತವೆ.

೫:೫: ಜನಪದ ಗೀತೆಗಳಲ್ಲಿ ಜಾತ್ರೆ :

ಜನಪದ ಸಾಹಿತ್ಯ ಒಂದು ರೂಪವೇ ಜನಪದ ಗೀತೆ. ಓದು ಬರಹ ಬಾರದ ಗ್ರಾಮೀಣ ಜನರು ಹಾಡುವ ಹಾಡುಗಳನ್ನು 'ಜನಪದ ಗೀತೆ'ಗಳೆಂದು ಕರೆಯುತ್ತಾರೆ. ಇವು ನಾಲಿಗೆಯಿಂದ ನಾಲಿಗೆಯ ಮೂಲಕ ಬೆಳೆದುಬಂದಿರುತ್ತವೆ. ರಚಿಸಿದವರು ಯಾರು ಎಂಬುದು ತಿಳಿದುಬರುವುದಿಲ್ಲ. ಧಾಟಿ ಮತ್ತು ಲಯ ಗೀತೆಯ ಮೇಟಿಯಾಗಿರುತ್ತವೆ. ಆಯಾ ಭಾಗದ ಭೌಗೋಳಿಕ, ಐತಿಹಾಸಿಕ , ಸಾಮಾಜಿಕ ಮತ್ತು ದಾರ್ಮಿಕ ಜೀವನದ ಹಿನ್ನೆಲೆಯನ್ನು ಜನಪದ ಗೀತೆಗಳು ಒಳಗೊಂಡಿರುತ್ತವೆ. ಜನಪದ ಗೀತೆಗ ತಕ್ಕಂತೆ ಜನಪದ ವಾದ್ಯಗಳು ಬಳಸಿಕೊಂಡು ಹಾಡುತ್ತಾರೆ. ಈ ಗೀತೆಗಳನ್ನು ಮೂರು ಪ್ರಕಾರಗಳಾಗಿ ಮಾಡಬಹುದು. ೧) ಮಕ್ಕಳ ಜನಪದ ಗೀತೆಗಳು ೨) ಗಂಡಸರ ಜನಪದ ಗೀತೆಗಳು ೩) ಹೆಂಗಸರ ಜನಪದ ಗೀತೆಗಳು.

ಜನಪದ ಗೀತೆಗಳು ಬೇಸರವನ್ನು ಕಳೆದು ಮನಸ್ಸಿಗೆ ನೆಮ್ಮದಿಯನ್ನು ಕೊಡುತ್ತವೆ. ಸನ್ಮಾರ್ಗವನ್ನು ಕಲ್ಪಿಸಿಕೊಡುತ್ತವೆ. ಪ್ರತಿಯೊಬ್ಬರು ಯಾವುದಾದರೂ ದೇವತೆಯ ಕುರಿತು ಹಾಡನ್ನು ಹಾಡಿಕೊಂಡು ಸಂತೊಷಪಡುವುದನ್ನು ನಾವು ಕಾಣುತ್ತೇವೆ. ದೇವರ ಹಾಡುಗಳಲ್ಲಿ ಹೊಗಳಿಕೆ, ಸ್ತೋತ್ರ, ಪಠಣ ಆರಾಧನೆ ಜಾತ್ರೆ ಪ್ರಸ್ತಾಪ ಬರುತ್ತದೆ.

ಗಂಡ ಹೆಂಡತಿಗೆ ಜಾತ್ರೆಯ ಪ್ರಸ್ತಾಪ ಮಾಡಿ ಆಕೆಗೆ ಸಂತೋಷವನ್ನು ನಿಡುತ್ತಾನೆ. ಜಾತ್ರೆಯಲ್ಲಿಯ ಲಡ್ಡು, ಮಿಠಾಯಿ ತಿಂದ ಅನುಭವದ ಮಾತುಗಳನ್ನು ಹೇಳಿ ಆಕೆಯ ನಾಲಿಗೆಯಲ್ಲಿ ನೀರು ಹುಟ್ಟಿಸುವ ಪ್ರಯತ್ನ ಮಾಡುತ್ತಾನೆ.

"ದುಂದು ಮಾಡಿ ದುಮ್ಮನ ಜಾತ್ರೀಗೆ
ಹೋಗನ್ನಡಿ
ಬಂದೀ ಮುರಿಸಿ ಲಡ್ಡು ಮಿಠಾಯಿ
ತರಸೀನ್ ನಡೀ
ಕಂಡೀ ನೋಡಿ ಕಳ್ಳಿ ಸಾಲಾಗೆ
ಮಲಗೋನ್ ನಡಿ

ಎಚ್ಚರಿ ಕಾದಾಗ ಎದ್ದು ನಾನು
ತಿಂತೀನ್ ನಡಿ
ತಿಂದು ಉಳಿದ್ರೆ ನಿನಗಿಷ್ಟು
ಕೊಡ್ತೆನ್ ನಡಿ
ನಂಬ ಬಾರದಕ್ಕ ಈಗಿನ್
ಗಂಡುಸುರನ
ಎಲ್ಲಾ ಕಸುಗಂಡ್ ಕೊಟ್ಟನವ್ವ
ತುಂಬೂರಿನ
ಬಾರಿಸ್ ಕಣ್ತಾ ಹೋಗೆಂದ
ಜಾಣಾ ಜಾಣಾ (ಮತಿಘಟ್ಟ:೧೯೭೫:೧೯೮)"

ಮದುವೆಯಾದ ಮೇಲೆ ಗಂಡನ ಮನೆಗೆ ಹೆಂಡತಿಯಾಗಿ ಬಂದವಳು ಕೆಲಸ ಮಾಡಲೇಬೇಕು. ಅತ್ತೆ ಮಾವ, ಗಂಡ ಮೈದೂನರ ಮುಂತಾದವರಿಗೆ ಸ್ನಾನಕ್ಕೆ ನೀರಿಟ್ಟು, ಅಡಿಗ ಮಾಡಿ, ಊಟ ಬಡಿಸಿ ಮನೆಯ ಸುತ್ತ ಮುತ್ತಲಿನ ಹೆಣ್ಣುಮಕ್ಕಳು ಕೂಡಿ ಅರಿವೆ ಒಗೆಯಲು ಭಾವಿಗೂ ಹಳ್ಳಕ್ಕೂ, ಕೆರೆಗೂ ಹೊಗುವ ದೃಶ್ಯ ನಿತ್ಯ ಹಳ್ಳಿಗಳಲ್ಲಿ ನೋಡಬಹುದಾಗಿದೆ. ಬಟ್ಟೆ ಒಗೆಯುವಾಗ ಕಲ್ಲಿಗೆ ಬಟ್ಟೆ ಬಡೆಯಬೇಕಾಗುತ್ತದೆ. ಕೈಗಳು ನೋವಿನಿಂದ ನರಳುತ್ತವೆ. ಅಂಥ ಸಂದರ್ಭದಲ್ಲಿ ತನ್ನ ಕೈಗಾದ ನೋವನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಹಾಡುವುದುಂಟು.

"ಬಾರೆ ತಂಗೀ ನೀ ಹೋಗೋಣ ಬಾರೆ ತಂಗೀ ನೀ
ವಾರಿಜಮುಖಿ ಜಾತ್ರೆಗೆ ಹೋಗುಣ ಬಾರೆ
ಅತ್ತೆ ಬೈತಾಳೆ ಕತ್ತೆ ಅಂತಾಳೆ : ಶೌ:ಶೌ:
ಸಮಯದ ಕಡಿಮೆ ನೀ ಬಾರೆ ಬೇಗ ತಂಗಿ
ರೊಟ್ಟಿ ಮಾಡಿ ಬುತ್ತಿ ಕಟ್ಟುಗೊಂಡ
ಅಪ್ಪನ ಜಾತ್ರೀಗಿ ಹೋಗೋಣ ಬಾರೆ ತಂಗಿ
ಅತ್ತೆ ಮಾವಗ ಕೋಳೋಣ ಬಾರೆ ತಂಗಿ
ಬೇಗ ಬಾರೆ ತಂಗಿ: ಶೌ:ಶೌ

ಹೀಗೆ ಬಟ್ಟೆ ಒಗೆದು ಜಾತ್ರೆಗೆ ಹೋಗಲು ತವಕಪಡುವ ಚಿತ್ರಣ ಗೀತೆಯಲ್ಲಿದೆ.

ಜಾತ್ರೆ ಸದಾ ಜನರಿಂದ ತುಂಬಿರುತ್ತದೆ. ಅಂಥದರಲ್ಲಿ ಮಕ್ಕಳನ್ನು ಹೊತ್ತ ತಂದೆ ತಾಯಂದಿರು ನೂಕು-ನುಗ್ಗಲುಗೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ಕಳ್ಳತನ ನಡೆಯುವುದು, ಚಿಕ್ಕಮಕ್ಕಳು ಕಳೆದು ಹೋಗುವುದು, ಜಾತ್ರೆಯಲ್ಲಿ ನಡೆಯುವುದು ಸಾಮಾನ್ಯವಾಗಿದೆ. ಕೂಸನ್ನು ಕಳೆದುಕೊಂಡು ಹಂಬಲಿಸುವ ಗೀತೆ ಹೃದಯಸ್ಪರ್ಶಿಯಾಗಿದೆ.

"ಕೂಸ ಕಂಡಿರೇ : ಅವ್ವ ನನ್ನ ಬಾಲ ಕಂಡಿರೇ
ಜನವ ಜಾತ್ರೆಗ್ಹೋಯ್ತು ನಾನು ಜಾತ್ರೆಗೋದೆ
ಜನಕಿಲ್ಲದ ಕೇಡು ನನಗ್ಹಾಯಿತವ್ವ
ಕೂಡ ಕಂಡಿರೇ : ಅವ್ವ ನನ್ನ ಬಾಲನ ಕಂಡಿರೇ"
(ಶಿವಕುಮಾರ:೧೯೮೮:೯೭

ಜಾತ್ರೆಗ ಹೋಗುವಾಗ ಹಣ ಮತ್ತು ಬುತ್ತಿಯ ವ್ಯವಸ್ಥೆಯ ಮಾಡಿಕೊಂಡು ಹೋದರೆ ನಾಲ್ಕು ದಿನ ಹಾಯಾಗಿ ಕಾಲ ಕಳೆಯಬಹುದು. ಬುತ್ತಿ ಅಂದರೆ ಕೇವಲ ರೊಟ್ಟಿ ಬ್ಯಾಳಿ ಅಲ್ಲ. ಸಿಹಿ ಪದಾರ್ಥಗಳು ಮಾಡಬೇಕು. ಇದರಿಂದ ನಾಲಿಗೆ ರುಚಿಯಾಗುತ್ತದೆ. ಗಿಲಗಂಜಿ (ಕರ್ಜಿಕಾಯಿ) ಮಾಡಿ ಬುತ್ತಿ ಕಟ್ಟುವುದರಿಂದ ಹಾಳಾಗಿ (ಕೆಟ್ಟು) ಹೋಗುವುದಿಲ್ಲವೆಂಬ ಗಂಡ ಹಾಡುವ ಗೀತೆ ಇದು.

"ಜಾತ್ರೀಗಿ ಹೋಗೋಣಾಂತ ಮಾಡ ಗಿಲಗಂಜಿ
ನೀ ಎಳ್ಳಹಚ್ಚಿ ಬುತ್ತಿ ಕಟ್ಟು ಸಜ್ಜು ರೊಟ್ಟಿ
ಹುಳಿಬಾನದ ಗಂಟು ಅದು ಬ್ಯಾರೀ
ನಾಳೆ ಮೊದಲಿಗಿ ಮಾಡೂದು ನ್ಯಾರಿ(ಸಿಂಪಿ:೧೯೮೧:ಅರಿಕೆಪುಟ)"

ಜಾತ್ರೆ ಅಥವಾ ಪ್ರವಾಸ ಮಾಡುವಾಗ ಗಿಲಗಂಜಿ, ಸಜ್ಜಿರೊಟ್ಟಿ ಹುಳಿಬಾನದ ಬುತ್ತಿ ಕಟ್ಟಿಕೊಂಡು ಹೋದರೆ ನಾಲ್ಕೈದು ದಿನ ಊಟ ಮಾಡಬಹುದೆಂಬ ಸಂಪ್ರದಾಯ ಇನ್ನೂ ಇದೆ.

ಕೊಂಡ ಹಾಯುವಾಗ ಕೈಯ್ಯಮುಗಿವುದು, ದಕ್ಷಿಣೆ ಕೊಡುವುದು ನಡದೇ ಇರುತ್ತದೆ. ನಂತರ ಪೂಜಾರಿಯಿಂದ ಭಂಡಾರ ಪಡೆಯಲು ತವಕ ಪಡೆಯುವ ಪ್ರಯತ್ನ ಹೆಣ್ಣೊಬ್ಬಳು ಮಾಡುತ್ತಿದ್ದಾಳೆ.

"ಚಂಡಯ್ಯನ ಕುಯ್ದು ರುಂಡ ಮಾಡಿ ಪೂಜಾರಣ್ಣ
ಭಂಡಾರದ ಭರಣಿ ಬರಿಗೈಲಿ ಹಿಡಕೊಂಡು
ಬೇಗನೆ ಕೆಂಡಾವ ಹೋಗು ಬಾರೋ

ಕೆಂಡಾನ ಹೋಗಾಕ ಬಂದೇನು ಬಂಡ್ಯದಲ್ಲಿ
ಮತ್ತೇಳು ಬಂಡಿ ಹೋಗುತ್ತೀನಿ

ಭಂಡಾರ ನಾ ಕೊಟ್ಟೆ ದಕ್ಷಿಣೆ ನಾ ಕೊಟ್ಟೆ
ಅವ್ವಗೆ ಮೊದಲಾಗಿ ಕೊಡುತೀನಿ ಪೂಜಾರಣ್ಣ
ಬೇಗ ಕೊಂಡಾವ ಹೋಗುಬಾರೋ
ಕೊಂಡಾವ ಹೋಗಾರ ಇಡಿಗಾಯ ಒಡಸಣ್ಣ
ಕಾಯೊಡೆದು ಕೈಯ್ಯ ಮುಗಿರಣ್ಣ ಆಕೆ ಈಗ
ದ್ಯಾಮವ್ವ ನೆಲಿಗೊಂಡು" (ಮತಿಘಟ್ಟ:೧೯೭೫:೩೫೪)

ಕಾಶೀ ಯಾತ್ರೆಗೆ ಹೋಗುವಾಗ ಮನೆಯಲ್ಲಿರುವ ಗುರು ಹಿರಿಯರು, ತಂದೆ ತಾಯಿಗೆ ವಂದಿಸಬೇಕೆಂದು ಈ ಗೀತೆ ಸಾರುತ್ತದೆ ಹೀಗೆ ಮಾಡುವುದರಿಂದ ಪಾಪಕರ್ಮಗಳೆಲ್ಲವು ಮುಕ್ತವಾಗಿ ಮುಕ್ತಿ ದೊರೆಯುತ್ತದೆಂಬ ನಂಬಿಕೆ ಜನಪದರರದು.

"ಉಪ್ಪರಿಗೆ ಒಳಗೋಗಿ ಹೆತ್ತಮ್ಮನ ಕರದಾನೇ
ಹೆತ್ತಮ್ಮನ ಪಾದಕ್ಕೇರಗಿ ಭಿನ್ನಯಿಸಿದ
ಕಾಶ್ಯಾತ್ರಿಗೋಗೀ ಬರುತೀನಿ (ಮತಿಘಟ್ಟ:೧೯೭೫:೪೪೦)

ಗಂಡ ಜಾತ್ರೆಗೆ ಹೋಗಿ ಮನೆಗೆ ಬರುವುದು ತಡವಾದರೆ ಹೆಂಡತಿಗೆ ನಿದ್ದೆಯೇ ಇಲ್ಲ. ಆಗ ತನ್ನ ಮನದ ಇಂಗಿತವನ್ನು ಅತ್ತೆ ಮುಂದೆ ಇಡುತ್ತಾಳೆ.

"ಯಾಕವ್ವ ನನಜೀವ ಜಾಚೇಲಿವಲ್ಲದ
ಜಾತ್ರೆಗೋದವರು ಬರಲಿಲ್ಲ. ಇಂದಿನ
ರಾತ್ರಿ ಹ್ಯಾಂಗಾರ ಕಳೆಯಲಿ"

ಮಳೆ ಬೆಳೆ ಸಮೃದ್ಧವಾಗಿ ಬರಲೆಂದೆ ಜಾತ್ರೋತ್ಸವಗಳನ್ನು ನಡೆಸುತ್ತಾರೆ.

"ಬಿತ್ತಿ ಬಂದಣ್ಣ ಮುತ್ತಿನ ಕಂಭ ಸೇರಿ
ಬಿತ್ತಿ ಬಂದೆ ಶಿವನ ಮಳೆಯಿಲ್ಲ – ಅಂದಾಗ
ಅಪ್ಪನ ಜಾತ್ರೆ ನಡೆದಾದೆ"

ಅಪ್ಪನ ಜಾತ್ರೆ ನಡೆಸುವಾಗ ಆಕಾಶದಲ್ಲಿ ಗುಡುಗು ಮಿಂಚು ಅಪ್ಪಳಿಸಿ ಪರ್ವತ ಮ್ಯಾಲಿಂದ ಮಳೆ ಹರಿದು ಬಂತೆನ್ನುವುದರಲ್ಲಿ ಜನಪದರ ಭಕ್ತಿಗೆ ಮಾರು ಹೋಗಲೇಬೇಕಾಗುತ್ತದೆ.

"ಕಂಚು ಮಿಂಚೀತು ಕಾಳಸ್ತ್ರ ಗುಡುಗಿತು
ಶಿವಗಂಗ್ಯಾಗಿಂದ ಹನಿಬಿದ್ದು ಪರ್ವತದ
ಗಿರಿಮ್ಯಾಲೆ ಕೂಡಿಹರಿಯಿತು.

ಜನಪದ ಗೀತೆಗಳನ್ನು ಹಾಡುವಾಗ ತಮ್ಮದೆ ಆದ ಭಾವನಾಲೋಕದಲ್ಲಿ ವಿಹರಿಸುತ್ತಾ ಕಂಚಿನ ಕಂಠದಿಂದ ಹಾಡಿ ದೇವರನ್ನು ಮೆಚ್ಚಿಸಲು ಪ್ರಯತ್ನಿಸುತ್ತಾರೆ. ಕೆಲವು ಜನಪದ ಗೀತೆಗಳು ಆಧ್ಯಾತ್ಮದ ಭಾವದಿಂಧ ಕೂಡಿದರೆ ಅವುಗಳೆಲ್ಲ ಭಜನೆ ಪದಗಳೆಂದು ಹೆಸರು ಪಡೆದುಕೊಳ್ಳುತ್ತವೆ.

ಪ್ರತಿ ವರ್ಷ ನವರಾತ್ರಿಯಂದು ಬೀದರ ಒಳಕೋಟೆಯ 'ಭವಾನಿ' ಜಾತ್ರೆ ಜರುಗಿ ಮೆರವಣಿಗೆ ಬೀದರ ಕೋಟೆಯಿಂದ (ಬೀದರ)ನಗರದ ಶಾಹಗಂಜ

ಹನುಮಾನ ಮಂದಿರದವರೆಗೆ ಮಾಡುತ್ತಾರೆ. ಹಾದಿ–ಬೀದಿಯಲ್ಲಿರುವ ಮನೆಯ ಮುತ್ತೈದೆಯರು ಆರತಿ ಬೆಳಗಿ ದೇವಿಯ ದರ್ಶನ ಪಡೆದು ಹಾಡು ಹೇಳುವುರು.

"ಮಂಗಳಾರುತಿಯೆತ್ತಿರೇ ಮಾದೇವಿಗೆ
ಮಂಗಳಾರುತಿಯೆತ್ತಿರೇ ಜಾತ್ರೆಯ ಮಾದೇವಿಗೆ
ಅಮ್ಮ ನಮ್ಮ ತಾಯಿಗೆ"

ಇದು ಆರತಿ ಬೆಳಗುವ ಗೀತೆಯಂತಿದೆ.

ಜನಪದರು ವಿವಿಧ ದೇವರು ದಿಂಡರಿಗೆ ನಮಿಸಿ, ಜಾತ್ರೋತ್ಸವ ಆಚರಿಸಿ ಬಂದರೆ ಮಾತ್ರ ಅವರಿಗೆ ಆತ್ಮಾನಂದ.

* * *

ಅಧ್ಯಾಯ–೬

ಹೈದ್ರಾಬಾದ ಕರ್ನಾಟಕದ ಪ್ರದರ್ಶನ ಕಲೆ–ಜಾತ್ರೆಗಳು :

ಪ್ರೇಕ್ಷಕರ ಸಮ್ಮುಖದಲ್ಲಿ ಹತ್ತಾರು (ಕಲಾತಂಡದ) ಜನರೆಲ್ಲ ಸೇರಿ ಸಂಗೀತ, ನೃತ್ಯ ಮತ್ತು ಅಭಿನಯದ ಮೂಲಕ ಹಾಡಿ–ಪಾಡಿ, ಕುಣಿದು–ಕುಪ್ಪಳಿಸುವ ವಿಧಾನವೇ 'ಪ್ರದರ್ಶನ ಕಲೆ', ಭಜನೆ, ಡೊಳ್ಳು, ಪುರವಂತಿಕೆ, ನಂದಿಕೋಲು, ಕೋಲಾಟ ಹಲಗೆ ಮುಂತಾದ ಕಲೆಗಳು ಪ್ರದರ್ಶನದ ವ್ಯಾಪ್ತಿಗೆ ಒಳಪಡುತ್ತವೆ. ಅವು ಮನೋರಂಜನೆಯಲ್ಲದೆ, ಮನಸ್ಸಿಗೆ ನೆಮ್ಮದಿಯನ್ನು ಕೊಡುತ್ತವೆ. ಸಾರ್ವಜನಿಕರ ಮನಸ್ಸನ್ನು ಕೌಟುಂಬಿಕ ಕಷ್ಟ ದುಃಖಗಳಿಂದ ದೂರಮಾಡಿ, ಅದನ್ನು ಸುಲಭಗೊಳಿಸಿ, ಶಾಂತಿ ಸಮಾಧಾನ ಸಂತೃಪ್ತಿಯನ್ನು ತಂದುಕೊಡುತ್ತವೆ. ಹೀಗಾಗಿಯೇ 'ಪ್ರದರ್ಶನ ಕಲೆಗಳು' ಜಾತ್ರೋತ್ಸವಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿವೆ.

ಜಾತ್ರೆಗಳೆಂದ ಬಳಿಕ ಹತ್ತಾರು ಕಡೆಗಳಿಂದ ಜನರು ಬಂದು ಸೇರುತ್ತಾರೆ. ಜಾತ್ರೆಗಳು ಎರಡು ಮೂರು, ಏಳು: ಹದಿನೈದು ದಿನ ಮತ್ತು ತಿಂಗಳವರೆಗೆ ಜರುಗುತ್ತವೆ. ಅಲ್ಲಿ ಸೇರಿರುವ ಭಕ್ತರು ಮನರಂಜನೆ, ನೋಡಲು ಒಳ್ಳೆ ವಿಚಾರಗಳನ್ನು ಕೇಳಲು ಹಾತೊರೆಯುತ್ತಾರೆ. ಹೀಗಾಗಿಯೇ ಜಾತ್ರೆ ಸಮಿತಿಯವರು ಕಲಾ ತಂಡದವರಿಗೆ ಆಹ್ವಾನಿಸುತ್ತಾರೆ. ವಿದ್ವಾಂಸರಿಂದ ವಿಚಾರ ಸಂಕಿರಣ–ಸಂವಾದ ನಡೆಸುವರು. ಜಾತ್ರೆಗೆ ಬಂದ ಭಕ್ತರಲ್ಲಿರುವ ಮೂಢ ನಂಬಿಕೆಗಳು ಅಡಗಿಸಲು ಶೀಲ, ಧರ್ಮ, ಸಹಬಾಳ್ವೆ, ನ್ಯಾಯ ಅವರಲ್ಲಿ ಹುಟ್ಟಿಸಲು ಕಲಾ ತಂಡದವರಿಂದ ಹಾಡುಗಳನ್ನು ಹಾಡಿಸುತ್ತಾರೆ, ವಿದ್ವಾಂಸರಿಂದ ನೀತಿಯ ಬೋಧನೆ ಮಾಡಿಸುತ್ತಾರೆ. ಈ ಸಂಪ್ರದಾಯ ಪುರಾತನ ಕಾಲದಿಂದಲೂ ಬೆಳೆದು ಬಂದಿದೆ.

ಹೈದ್ರಾಬಾದ ಕರ್ನಾಟಕ ಪ್ರದೇಶದ ಜಾತ್ರೆಗಳಲ್ಲಿ ಪ್ರದರ್ಶಿಸಲ್ಪಡುವ ಪ್ರದರ್ಶನ ಕಲೆಗಳು ಮೂರು ಉದ್ದೇಶಗಳಿಂದ ನೆರವೇರುತ್ತವೆ. ಒಂದು ಮನೋರಂಜನೆ, ಇನ್ನೊಂದು ಉಪಜೀವನ (ವೃತ್ತಿ) ಮತ್ತು ಆರಾಧನೆ ಹಿನ್ನೆಲೆಯಾಗುತ್ತದೆ.

ಈ ನಾಡಿನಲ್ಲಿ ಯಾವುದೇ ಜಾತ್ರೆ ಜರುಗಲಿ ಅಲ್ಲಿ ಒಂದಾದರೂ ಪ್ರದರ್ಶನ ಕಲೆ ಇದ್ದೇ ಇರುತ್ತದೆ. ಬೀದರ ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳ ಜಾತ್ರೆಗಳಲ್ಲಿ ಪ್ರದರ್ಶನ ಕಲೆಗಳ ಕುರಿತಂತೆ ವಿಶೇಷವಾಗಿ ಗಮನಿಸಲಾಗಿ ಆಯಾ ಜಾತ್ರೆಗಳಲ್ಲಿ ಪ್ರತಿನಿಧಿಸುವಂತಹ ಪ್ರಮುಖ ಜನಪದ ಪ್ರದರ್ಶನ ಕಲೆಗಳು ಇವೆ.

೬:೧: ಭಜನಾ ಮೇಳ :

ತಾಳ, ದಮಡಿ, ಹಾರ್ಮೋನಿಯಂ ಮತ್ತು ತಲಬಾ ವಾದ್ಯಗಳು ಭಜನಾ ಮೇಳದಲ್ಲಿರುತ್ತವೆ. ಮತ ಮಂದಿರ ದೇವರ ಗುಡಿಗಳಲ್ಲಿ ಪ್ರತಿ ಸೋಮವಾರ, ಶನಿವಾರ ವಿಶೇಷವಾಗಿ ಶ್ರಾವಣ ಮತ್ತು ಹಬ್ಬ ಹರಿದಿನಗಳಂದು ಭಜನೆಯನ್ನು ಮಾಡುತ್ತಾರೆ.

ಭಜನಾ ಮೇಳದಲ್ಲಿರುವ ಕಲಾವಿದರು ಸಾಮಾನ್ಯ ಉಡುಪುಗಳನ್ನು ಧರಿಸುತ್ತಾರೆ ಹಣೆಗೆ ಭಸ್ಮವನ್ನು (ವಿಭೂತಿ) ಬಳೆದುಕೊಳ್ಳುವರು. ಶರಣರ ವಚನಗಳು, ತತ್ವ ಪದಗಳು ಜಾನಪದ ಹಾಡುಗಳನ್ನು ಹಾಡುವರು. ಈ ಮೇಳದಲ್ಲಿ ನಾಯಕನೊಬ್ಬನೇ ತಾಳ ಹಾಕಿ ರಾಗ ಎತ್ತುತ್ತಿದ್ದಂತೆ ಹಿಮ್ಮೇಳದ ದಮಡಿ ವಾದಕನು ರಾಗಕ್ಕೆ ತಾಳ ನೀಡುತ್ತಾನೆ. ದಮಡಿ–ವಾದಕ ಹಾರ್ಮೋನಿಯಂ ವಾದಕ ಹಾಗೂ ಒಟ್ಟು ತಾಳುಗಳ ವಾದಕರು ಹೀಗೆ ನಾಲ್ಕಾರು ಜನರು ಈ ಮೇಳದಲ್ಲಿರುತ್ತಾರೆ. ಹಿಮ್ಮೇಳದ ಯಾವನೊಬ್ಬನು ನಾಯಕನಿಗೆ ಸ್ಫೂರ್ತಿಯೆಂಬಂತೆ ಒಬ್ಬರಿಂದೊಬ್ಬರು ರಾಗಾಲಾಪನೆ ಮಾಡುವರು.

ಭಜನಾ ಹಾಡುಗಳನ್ನು ಪ್ರಾರಂಭ ಮಾಡುವಾಗ ಹಾಗೂ ಮುಕ್ತಾಯ ಮಾಡುವಾಗ 'ಜಯ ಜಯ ನಮ: ಪಾರ್ವತಿ ಪತೇ' ಎಂದು ಮುಖಂಡನಾದವನು ಹೇಳಿದರೆ ಉಳಿದವರು ಹಾಗೆ ನುಡಿವರು. ಕಲಬುರ್ಗಿ ಶರಣಬಸವೇಶ್ವರ, ಹುಮನಾಬಾದ ವೀರಭದ್ರೇಶ್ವರ, ಬೀದರಿನ ಪಾಪನಾಶಿನಿ, ಕೊಪ್ಪಳದ ಗವಿ ಸಿದ್ದೇಶ್ವರನ ಜಾತ್ರೆಯಲ್ಲಿ ವಿಶೇಷವಾಗಿ ಭಜನಾ ಮೇಳಗಳು ಭಾಗವಹಿಸಿ ತಮ್ಮ ಕಲೆಯ ಹಿರಮೆ–ಗರಿಮೆಯನ್ನು ತೋರಿಸುತ್ತಾರೆ.

೬:೨: ಹಲಗೆ ಮೇಳ :

ಹಲಗೆ ಒಂದು ಚರ್ಮವಾದ್ಯ. ಈ ಮೇಳದಲ್ಲಿ ನಾಲ್ಕರಿಂದ ಐದು ಜನ ಕಲಾವಿದರಿರುತ್ತಾರೆ. ಇಬ್ಬರು ಹಲಗೆ ಬಾರಿಸುತ್ತಾರೆ. ಒಬ್ಬ 'ಟಕಾರಿಸುತಿ' ಊದಿದರೆ ಇನ್ನೊಬ್ಬ ಶಹನಾಯಿ ನುಡಿಸುತ್ತಾನೆ. ಮತ್ತೊಬ್ಬ ಬಾರಿಸುವನು.

ಬೀದರಿನ ಮಡಿವಾಳೇಶ್ವರ ಜಾತ್ರೆ, ವಿಠ್ಠಲನ ಜಾತ್ರೆ, ಹುಮನಾಬಾದ ವೀರಭದ್ರೇಶ್ವರ ಜಾತ್ರೆಯ ಮೆರವಣಿಗೆಯಲ್ಲಿ ಹಲಗೆ ಮೇಳಗಳು ಭಾಗವಹಿಸುತ್ತವೆ. ಈ ವಾದ್ಯವನ್ನು ನುಡಿಸುವರು ಕೆಳವರ್ಗದ ಜನರೇ ಆಗಿರುತ್ತಾರೆ.

೬:೩: ಡೊಳ್ಳಿನ ಕುಣಿತ :

ಹಲವು ದೇವೀ ಆರಾಧನೆಯ ಜನಪದ ಕಲೆಗಳಲ್ಲಿ 'ಡೊಳ್ಳು ಕುಣಿತ' ಒಂದು. ಡೊಳ್ಳು ಕುಣಿತವನನು ಚೆನ್ನಾಗಿ ಮೈಗೂಡಿಸಿಕೊಂಡು ಪರಿಣತೆಯನ್ನು

ಸಾದಿಸಿರುವವರೆಂದರೆ, ಕುರುಬ ಜನಾಂದವರು ಡೊಳ್ಳು ಕುಣಿತದಲ್ಲಿ ೧೨ ಎಇಂದ ೪೦ ಜನರಿರುವುದು ವಾಡಿಕೆ. ಗೋಲಾಕಾರವಾಗಿ ನಿಂತು ಡೊಳ್ಳು ಭಾರಿಸಲು ಪ್ರಾರಂಭಿಸುತ್ತಾರೆ. ಕ್ರಮೇಣ ಶಬ್ದ ಹೆಚ್ಚಾದಂತೆ, ಕಿವಿ ಗಡಚಿಕ್ಕುತ್ತದೆ. ಶಬ್ದ ಹೆಚ್ಚಾದಂತೆ ಮತ್ತೇ ನಿಧಾನಿಸಿ ಬೇರೊಂದು ರೀತಿಯಲ್ಲಿ ಭಾರಿಸಲು ಪ್ರಾರಂಭಿಸುತ್ತಾರೆ. ಕುಣಿತದ ಮುಖ್ಯ ಹಾಡುಗಾರ ಡೊಳ್ಳು ಭಾರಿಸುತ್ತ ಹಾಡಿನ ಚರಣ ಹೇಳಿದರೆ ಹಿಮ್ಮೇಳದವರು ಅನನ್ನು ಪುನರುಚ್ಚರಿಸುತ್ತಾರೆ. ಹಾಡುಗಳಲ್ಲಿ ಮಾರ್ಕಂಡೆಯ ಪಾಂಡವರು, ಬಸವಣ್ಣ, ಬೀರಲಿಂಗೇಶ್ವರ ಮತ್ತು ಮೈಲಾರಲಿಂಗೇಶ್ವರರ ಪ್ರಸಂಗಗಳು ಸೇರಿರುತ್ತವೆ. ಕನದಾಸರ ಹಾಡಿನಂತೆ,

'ದೇವಿ ನಮ್ಮ ದೇವರು ಬಂದರು ಬನ್ನಿರೇ
ದೇವಿ ನಮ್ಮ ದೇವರು ಬಂದರು ಬನ್ನಿರೇ' (ಬೆಟಗೇರಿ ಮತ್ತು ಬೆಂಗೇರಿ
(೧೯೮೪:೮೫)

ಎಂದು ಹಾಡುತ್ತಾ ಡೊಳ್ಳು ಭಾರಿಸುವ ಪರಿಪಾಠ ಭಾಲ್ಕಿ ತಾಲ್ಲೂಕಿನ ಖಾನಾಪೂರದ ಮೈಲಾರಲಿಂಗೇಶ್ವರ ಜಾತ್ರೆಯಲ್ಲಿದೆ. ಡೊಳ್ಳು ಹಿಡಿದಾಂಗs ಬಿಟ್ಟಾಂಗs' ಡುಬ್ಬದುರಿ ಎಂದು ಬಾರಿಸುವಾಗ ಚಿಕ್ಕ ಮಕ್ಕಳಂತೂ ಡೊಳ್ಳಿನ ಶಬ್ದದಂತೆ ಅಳುಕಿಸುತ್ತಾರೆ.

ತಲೆ ತಲಾಂತರಗಳಿಂದ ದೈವೀ ಆರಾಧನೆಯ ಸಾಧನವಾಗಿ ಬೆಳೆದುಬಂದ ಈ ಡೊಳ್ಳು ಕಲೆ ಇತ್ತೀಚೆಗೆ ಮನರಂಜನೆಯ ಮಾಧ್ಯಮವಾಗಿ ಜಾತ್ರೋತ್ಸವಗಳಲ್ಲಿ ಮನ್ನಣೆ ಗಳಿಸಿದೆ.

೬:೪: ನಂದಿಕೋಲ ಕುಣಿತ :

ಬೀದರ ಜಿಲ್ಲೆಯ ಬಸವಕಲ್ಯಾಣದ ಬಸವಣ್ಣನ ಜಾತ್ರೆಯಲ್ಲಿ ನಂದಿಕೋಲು ಕುಣಿತ ವಿಶೇಷವಾಗಿರುತ್ತದೆ. ಉತ್ಸಾಹಿ ಯುವಕರು ನಂದಿಕೋಲನ್ನು ಹಿಡಿದುಕೊಂಡು ಧಡ್. ಧಕ್ಕ, ಧಕ್ಕು, ಧಡ್ಕೆ, ಧಡ್ಕೆ ಎಂಬ ತಮಟೆಯ ನಾದಕ್ಕೆ ಲಯಬದ್ಧವಾಗಿ ಹೆಜ್ಜೆ ಹಾಕುತ್ತ ಆಗೊಮ್ಮೆ ಈಗೊಮ್ಮೆ ಕಂಬವನ್ನು ಮೇಲಕೆತ್ತಿ ಕುಲುಕಿ ಝುಲಕ್-ಝುಲಕ್ ಸದ್ದು ಕೇಳಿಸುವಂತೆ ಮಾಡುತ್ತಾರೆ. ಆ ಸಮಯದಲ್ಲಿ ಸಂಬಾಳ ನುಡಿಸುವ ಕಲಾವಿದರು ಆಕಾಶಕ್ಕೆ ಧ್ವನಿ ಮುಟ್ಟುವಂತೆ ಸಂಬಾಳ ಬಡಿಯುತ್ತಾರೆ. ಶೈವ ಸಂಪ್ರದಾಯಸ್ಥರಲ್ಲಿ ಹೆಚ್ಚು ಜನಪ್ರಿಯವಾದ ಕಲೆ ಇದಾಗಿದೆ. ಈ ಕಲೆಯ ಹುಟ್ಟಿನ ಬಗ್ಗೆ ಪೌರಾಣಿಕ ಹಿನ್ನೆಲೆಯಿದೆ. ನಂದಿಕೋಲು, ಜಾತ್ರೆ, ಉತ್ಸವಗಳಲ್ಲಿ ಮಾತ್ರ ಹೊರಬಂದು ಮುಂದಿನ ಜಾತ್ರೆಯವರೆಗೆ ಅದೇ ಮಠದ ಒಳಗೆ ಧೂಳು ಹೊದ್ದುಕೊಂಡು ಮೂಲೆಯಲ್ಲಿ ಕೂತಿರುತ್ತದೆ.

೬:೫: ಪುರವಂತರ ಕುಣಿತ :

ಪುರವಂತರ ಕುಣಿತ ಆರಾಧನೆ ಕಲೆಗಳಲ್ಲಿ ಒಂದು. ಭೂತೇರು, ಗೊರವರು ಚೌಡಿಕೆ ಮೇಳದವರು, ಡೊಳ್ಳು ಮೇಳದವರು ಈ ಮುಂತಾದ ಕಲೆಗಳು ದೇವತಾರಾಧನೆಯ ಹಿನ್ನೆಲೆಯಲ್ಲಿಯೇ ಹುಟ್ಟಿಕೊಂಡಂತೆ ಪುರವಂತಿಕೆಯೂ ಒಂದು. ವೀರಭದ್ರ ದೇವರ ಹಿನ್ನೆಲೆಯಲ್ಲಿ ಹುಟ್ಟಿದ ಈ ಕಲೆಯನ್ನು ದಕ್ಷಿಣ ಕರ್ನಾಟಕದಲ್ಲಿ 'ವೀರಗಾಸೆ' ಎಂದು ಕರೆಯುತ್ತಾರೆ. ಈ ನಾಡಿನಲ್ಲಿ ಪುರವಂತರೆಂದು ಕರೆಯುವುದುಂಟು. ಈ ಆರಾಧನೆ ಕಲೆಯನ್ನು ಮೈಗೂಡಿಸಿಕೊಂಡು ಬಂದವರು ಪುರವಂತರೆಂದು ಅಡ್ಡ ಹೆಸರು ಇಟ್ಟಿಕೊಂಡಿರುತ್ತಾರೆ. ಬಡಿಗ-ಪಂಚಾಳ ವರ್ಗದ ಜನ ಈ ಪುರವಂತಿಕೆಯನ್ನು ಅನುವಂಶಿಕವಾಗಿ ಮೈಗೂಡಿಸಿಕೊಂಡು ಬಂದಿರುತ್ತಾರೆ. ತಿಂಥಿಣಿ ಮೌನೇಶ್ವರ, ಹುಮನಾಬಾದ ವೀರಭದ್ರೇಶ್ವ ಜಾತ್ರೆಯಲ್ಲಿ ಪುರವಂತಿಕೆ ಕುಣಿತ ಅದ್ಭುತವಾಗಿರುತ್ತದೆ.

೬:೬: ಬುಡಬುಡಿಕೆ :

ಬುಡ-ಬುಡ ಶಬ್ದ ಮಾಡುವ ಚರ್ಮವಾದ್ಯದಿಂದ ಬುಡಬುಡಿಕೆ ಎಂಬ ಹೆಸರು ಬಂದಿದೆ. ಬಲಗೈಯಿಂದ ಡಮುರಗ ಬುಡಬುಡ ಶಬ್ದ ಮಾಡುತ್ತ ಎಡಗೈ ಮೇಲೆ ದಾನ ಕೊಟ್ಟವರ ಹಳೆಯ ಬಟ್ಟೆಗಳನ್ನು ಹೊದ್ದುಕೊಂಡು ಮನೆ ಮನೆಗೆ ಭಿಕ್ಷಕ್ಕೆ ಬರುವ ಬುಡಬುಡಿಕೆಯರು ತಲೆಗೊಂದು ರುಮಾಲು ಸುತ್ತಿರುತ್ತಾರ. ಇವರು ಅಂಗಿ ಕೋಟು ಪಂಚೆಯನ್ನು ಧರಿಸುತ್ತಾರೆ.

ಬುಡಬುಡಕೆ ಕಲಾವಿದರು ಪ್ರತಿದಿನ ಮುಂಜಾನೆ ಸ್ನಾನಮಾಡದೆ ಮುಖ ತೊಳೆದು ಅಗರಬತ್ತಿ ಹಚ್ಚಿ ದೇವರನ್ನು ಪ್ರಾರ್ಥಿಸಿ ಹಳ್ಳಿಗೆ ಪಯಣ ಮಾಡುತ್ತಾರೆ. ಭಿಕ್ಷೆ ಬೇಡುವ ಮನೆಯ ಬಾಗಿಲಿಗೆ ಹೋಗಿ 'ಒಳ್ಳೆದಾಗತಪ್ಪ' 'ಒಳ್ಳೆದಾಗತವ್ವ' ಎಂದು ಶುಭವನ್ನು ಹೇಳುತ್ತ ಶಕುನ ನುಡಿಯುತ್ತಾರೆ. ಅವರು ನುಡಿದದ್ದೆಲ್ಲಾ ಸತ್ಯವೇ ಎನ್ನುವ ನಂಬಿಕೆ ಜನಪದರದಾಗಿದೆ. ಇಷ್ಟೇ ಅಲ್ಲ ಬುಡಬುಡಿಕೆ ಹೇಳುವುದೆಲ್ಲಾ ನಿಜವಾಗಿರುತ್ತದೆಂದು ನಂಬಿ ಭಿಕ್ಷೆ ನೀಡುವಮನೆಯವರು ಬಟ್ಟೆ, ಅನ್ನ, ರೊಟ್ಟಿ, ಜೋಳ, ಗೋದಿ ಇತರೆ ಕಾಳುಗಳನ್ನು ನೀಡಿ ಕಳಿಸುವ ಸಂಪ್ರದಾಯ ಇದೆ. ಒಟ್ಟಿನಲ್ಲಿ ಬುಡಬುಡಿಕೆಯವರು ಚತುರ ಮಾತುಗಾರ, ಹೇಗಾದರೂ ಮಾಡಿ ಜೋಳಿಗೆ ತುಂಬಿಕೊಂಡು ಮುಂದಿನ ಮನೆಗೆ ಹೊಗಬೇಕೆಂಬ ಪ್ರಯತ್ನದಲ್ಲಿರುತ್ತಾರೆ. ಶುಭಾಶುಭಗಳನ್ನು ಬಹಳ ಜಾಣ್ಮೆಯಿಂದ ಹೇಳುತ್ತಾರೆ. ಅಶುಭ ಎಂದು ಹೇಳಿ ಅದಕ್ಕೆ ತಾನೇ ಪರಿಹಾರ ಸೂಚಿಸಿ ಮುಂದಿನ ಮನೆಗೆ ಹೋಗುವ ಪರಿಪಾಠ ಇದೆ. ಅಲ್ಲದೆ ಹಬ್ಬ-ಹರಿದಿನಗಳ ಜಾತ್ರೋತ್ಸವಗಳ ಲಾಭವೂ ಸಹ ಪಡೆದುಕೊಳ್ಳುವರು.

ಭಕ್ತರು ಕೊಟ್ಟ ಕಾಣಿಕೆ ಸ್ವೀಕರಿಸುವರು. ಶುಭ-ಅಶುಭ ನುಡಿವರು. ಈ ಬುಡ-ಬುಡಿಕೆ ಸಂಪ್ರದಾಯದವರು ಹುಮನಾಬಾದ ವೀರಭದ್ರೇಶ್ವರ ಜಾತ್ರೆಯಲ್ಲಿ ಕಂಡು ಬರುತ್ತಾರೆ.

೬:೭: ಡೊಂಬರು :

ಗಳೆಯ ಮೇಲೆ ಲಾಗ ಕಸರತ್ತುಗಳನ್ನು ತೋರಿಸುತ್ತಾ ಜೀವನವನ್ನು ನಡೆಸುವವರಿಗೆ ಡೊಂಬರೆಂಬ ಹೆಸರಿದೆ. ಇವರು ಅಲೆಮಾರಿ ಜನರು. ಊರಿಂದೂರಿಗೆ ತಿರುಗಿ ಕಸರತ್ತಿನ ಆಟವಾಡಿ ಜನರಿಂದ ಹಣ ರೊಟ್ಟಿ ಬ್ಯಾಳಿ ಅನ್ನ ಪಡೆದುಕೊಂಡು ಜೀವನ ನಡೆಸುತ್ತಾರೆ. ಡೊಂಬರು ಯಾವುದೇ ಹಳ್ಳಿನಗರದ ಕೇಂದ್ರಸ್ಥಳ ಇಲ್ಲವೆ ನಡುಬೀದಿಯಲ್ಲಿ ಆಟ ಆರಂಭಿಸುತ್ತಾರೆ. ಇವರ ಮೇಳ ೫-೬ ಜನ ಮತ್ತು ಚಿಕ್ಕ ಮಕ್ಕಳೊಂದಿಗೆ ಇರುತ್ತದೆ. ಡೊಂಬರ ಹೆಂಗಸು ಅಥವಾ ಗಂಡಸಾಗಲಿ ಡೋಲು ಬಾರಿಸುತ್ತಾ ಜನರ ಮನಸ್ಸು ಸೆಳೆಯುತ್ತಾರೆ. ಶಕ್ತಿಯುತ ವ್ಯಾಯಾಮ ಕಸರತ್ತು ಇವರ ಆಟದ ವೈಶಿಷ್ಟ್ಯ. ಹಗ್ಗದ ಮೇಲೆ ನಡೆಯುವುದು. ಲಾಗ ಹಾಕುವುದು. ಪಲ್ಟಿ ಹೊಡಿಯುವುದು. ಚಿಕ್ಕ ಮಗುವಿನ ಹೊಕ್ಕಳು ಭಾಗದಲ್ಲಿ ಗಳೆ ಹಾಕಿ ಮೇಲಕ್ಕೆ ಎತ್ತುವುದು ಕಬ್ಬಿಣದ ಚಿಕ್ಕ ರಿಂಗಿನೊಳಗಿಂದ ಎರಡು ದೇಹಗಳು ಹೊರಬರುವುದು. ಚಕ್ರಬಾಣ ನಿರ್ಮಿಸುವುದು. ನಡು-ನಡುವೆ ಸಿನೆಮಾ ಇಲ್ಲವೆ ಜನಪದ ಹಾಡುಗಳು ಹಾಡುವುದು ಮಾಡುತ್ತಾರೆ. ಇಂಥ ಕಸರತ್ತು ನೋಡಲು ಹಾಡುಗಳು ಕೇಳಲು ಕುತೂಹಲಕಾರಿಯಾಗಿರುತ್ತವೆ. ಆಟ ಮುಕ್ತಾಯಗೊಂಡ ಮೇಲೆ ತಟ್ಟೆ ಹಿಡಿದು ಜಾತ್ರೆಗೆ ಬಂದ ಭಕ್ತರಿಂದ ಕಾಣಿಕೆ ಹಣ ಸಂಗ್ರಹಿಸುವರು. ಬೀದರಿನ ವಿಠ್ಠಲನ ಜಾತ್ರೆ, ಕಲಬುರ್ಗಿ ಶರಣಬಸವೇಶ್ವರ ಜಾತ್ರೆಯಲ್ಲಿ ಈ ಪ್ರದರ್ಶನ ಕಲೆ ಎದ್ದು ಕಾಣುತ್ತದೆ.

೬:೮: ಹಾವಾಡಿಗರು :

ಹಾವುಗಳನ್ನು ಆಡಿಸುವ ಅಲೆಮಾರಿ ಭಿಕ್ಷುಕರಿಗೆ 'ಹಾವಾಡಿಗರೆಂದು' ಕರೆಯುತ್ತಾರೆ. ಇವರು ಕಾಡಾರಣ್ಯ ಇಲ್ಲವೆ ಹುತ್ತಗಳಿಂದ ಹಾವುಗಳನ್ನು ಹಿಡಿದು ತಂದು ವಿಷದ ಹಲ್ಲುಗಳನ್ನು ಕಿತ್ತು ತಮ್ಮ ಆಟದ ಸಾಧನವನ್ನಾಗಿ ಬಳಸಿಕೊಳ್ಳುತ್ತಾರೆ. ಹಾವಾಡಿಗರು ಹಾವುಗಳನ್ನು ಆಡಿಸುವುದರ ಜೊತೆಗೆ ಯಕ್ಷಿಣಿ ವಿದ್ಯೆಯನ್ನು ಹೊಂದಿರುತ್ತಾರೆ. ಈ ವಿದ್ಯೆ ವಂಶಪರಂಪರೆಯಾಗಿ ಬಂದಿರುತ್ತದೆ. ಹಾವಾಡಿಗರ ಮೇಳದಲ್ಲಿ ಅವರ ಕುಟುಂಬದ ೪-೫ಜನ ಸೇರಿರುತ್ತಾರೆ. ಒಬ್ಬನು ಡೋಲು ಬಾರಿಸಿದರೆ ಇನ್ನೊಬ್ಬ ಪುಂಗಿ ಊದುತ್ತಿರುತ್ತಾರೆ. ಉಳಿದವರು ಯಕ್ಷಿಣಿ ವಿದ್ಯೆಯಲ್ಲಿ ತೊಡಗಿರುತ್ತಾರೆ. ಮಣ್ಣಿಗೆ ಸಕ್ಕರೆ ಮಾಡುವುದು, ಹಗ್ಗಕ್ಕೆ ಹಾವಾಗಿಸುವುದು. ಮುಂಗುಲಿ ಹಾವಿಗೆ ಜಗಳ ಹಚ್ಚುವುದು. ಮಾಡುತ್ತಿರುತ್ತಾರೆ.

ನಡು-ನಡುವೆ ಹಾಸ್ಯ ಕುರಿತಾದ ಮಾತುಗಳು ಆಡುವುದು, ಹಾಡುವುದು ಮಾಡಿ ಜನರಿಗೆ ಖುಷಿಕೊಟ್ಟು ಜಾತ್ರೆಯ ಭಕ್ತರಿಂದ ದಾನ ಪಡೆದುಕೊಳ್ಳುತ್ತಾರೆ. ಉತ್ಸವದಲ್ಲಿ ಭಾಗವಹಿಸಿದ ಮಕ್ಕಳಂತು ಹಾವಾಡಿಗಾರರ ಸುತ್ತುವರಿದು ಹಾವುಗಳನ್ನು ಕಣ್ಣು ತುಂಬ ನೋಡಿ ವಿಸ್ಮಯಗೊಳ್ಳುತ್ತಾರೆ. ಕಲ್ಬುರ್ಗಿ ಶರಣಬಸವೇಶ್ವರ ಮತ್ತು ಬೀದರಿನ ಪಾಪನಾಶಿನಿ ಜಾತ್ರೆಯಲ್ಲಿ ಹೆಚ್ಚಾಗಿ ಈ ಕಲೆ ಪ್ರದರ್ಶನಗೊಳ್ಳುತ್ತದೆ.

೬:೯: ಸುಡುಗಾಡುಸಿದ್ದರು :

ಸ್ಮಶಾನದಲ್ಲಿ ವಿದ್ಯೆಯ ಸಿದ್ಧಿಯನ್ನು ಪಡೆದಿರುವುದರಿಂದ ಇವರಿಗೆ ಸುಡುಗಾಡಸಿದ್ಧರೆಂದು ಹೆಸರು ಬಂದಿದೆ. ಮಂತ್ರ ಮಾಟ ಕಲಿಯಲು ಸುಡುಗಾಡೆ ಒಳ್ಳೆಯ ಸ್ಥಳ ಎಂಬುವುದು ಇವರ ಹೇಳಿಕೆಯಾಗಿದೆ. ಮನರಂಜನೆ ಇವರ ಮೂಲ ಉದ್ದೇಶ.

ಸುಡುಗಾಡ ಸಿದ್ಧರು ನೆಹರುಶರ್ಟು, ತಲೆಗೆ ರುಮಾಲು, ಅದರ ಸುತ್ತ-ಮುತ್ತ ಮಣಿಗಳ ಸರ, ರುಮಾಲಿನ ಮುಂಭಾಗದ ತುದಿಗೆ ನವಿಲುಗರಿ, ಕೊರಳಲ್ಲಿ ರುದ್ರಾಕ್ಷಿಸರ ಬೆರಳುಗಳಿಗೆ ಉಂಗುರು, ಕಾಲಿಗೆ ಕಡಗ, ಬಗಲಿಗೆ ಜೋಳಿಗೆ, ಹಣೆಯಲ್ಲಿ ಕುಂಕುಮ ಅರಸಿನ ಬಳಿದಿರುತ್ತಾರೆ. ಇವು ಸುಡಗಾಡ ಸಿದ್ಧರ ಪೋಷಾಕುಗಳಾಗಿವೆ. ಜೋಳಿಗೆಯಲ್ಲಿ ಗೊಂಬೆ, ಕವಡೆ, ಮುಳ್ಳು, ಮೂಳೆ, ಚಿಂದಿ ಬಟ್ಟೆಗಳಿರುತ್ತವೆ. ಇವು ಯಕ್ಷಿಣಿ ವಿದ್ಯೆಯ ಪ್ರತೀಕ ಎನ್ನಲಾಗಿದೆ. ಹೀಗೆಲ್ಲಾ ಪೋಷಾಕು ಹಾಕಿಕೊಂಡು ಹೆಗಲ ಮೇಲೆ ಒಂದು ಗಳೆಗೆ ಜೋಳಿಗೆ ಸಿಕ್ಕಿಸಿಕೊಂಡು ಮನೆ-ಮನೆಗೆ ಭಿಕ್ಷೆ ಬೇಡುವರು.

ಮಲ್ಲಾಡು ಚೌಡಿ ಎನ್ನುತ್ತ ಜಾದು ಮಾಡಿ ತೋರಿಸುವರು. ಆಗ ಜೋಳಿಗೆಯಿಂದ 'ಜಿಂವಕ' ಎಂಬ ಶಬ್ದ ಕೇಳಿಸುತ್ತದೆ. ಅಷ್ಟೇ ಅಲ್ಲ, ಒಂದು ಗಜ್ಜುಗಕ್ಕೆ ೧೦-೨೦ ಆಗಿ ಮಾಡುತ್ತಾನೆ. ಮಣ್ಣಿಗೆ ಸಕ್ಕರೆ ರೂಪಾಯಿಯನ್ನು ನಾಣ್ಯವನ್ನಾಗಿಸುವುದು. ಹೀಗೆಲ್ಲಾ ಮಾಡಿ ಶ್ರೀಸಾಮನ್ಯರಿಗೆ ಚಕಿತಗೊಳಿಸುತ್ತಾರೆ. ಬಸವಕಲ್ಯಾಣದ ಬಸವಣ್ಣ ಚಾಂಗ್ಲೆರಾ ವೀರಭದ್ರೇಶ್ವರ ಜಾತ್ರೆ ಸಂದರ್ಭಗಳಲ್ಲಿ ಬಿಡಾರ ಹಾಕಿ ತಮ್ಮ ಕಲೆ ಪ್ರದರ್ಶನ ಮಾಡಿ ಕಾಣಿಕೆ ಸ್ವೀಕರಿಸುವ ಸಂಪ್ರದಾಯವಿದೆ.

೬:೧೦: ಬಹುರೂಪಿ :

ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ನಿರ್ಣಾವಾಡಿ ಗ್ರಾಮದಲ್ಲಿ ಈ ಕಲಾವಿದರು ವಾಸವಾಗಿದ್ದಾರೆ. ಉಪಜೀವನ ಮಾಡಲು ವಿವಿಧ ವೇಷಗಳನ್ನು ಹಾಕಿ ತಲೆ ಪ್ರದರ್ಶನ ಮಾಡುವವರಿಗೆ 'ಬಹುರೂಪಿಗಳೆಂದು' ಕರೆಯುತ್ತಾರೆ. ಇವರು ಕಬ್ಬಲಿಗ ಜಾತಿಗೆ ಸೇರಿದವರಾಗಿದ್ದಾರೆ. ಬಹುರೂಪಿಗಳು ಅಲೆಮಾರಿ

ವರ್ಗಕ್ಕೆ ಸೇರಿದವರು. ಸಂಸಾರ ಸಮೇತರಾಗಿ ಊರಿಂದ ಊರಿಗೆ ತಿರುಗಿ ಕಲೆ ಪ್ರದರ್ಶನ ಮಾಡಿ ಕಾಣಿಕೆ ಹಣ ಪಡೆದುಕೊಳ್ಳುತ್ತಾರೆ. ಸಾಮಾನ್ಯವಾಗಿ ಇವರ ಮೇಳದಲ್ಲಿ ಹನ್ನೆರಡರಿಂದ ಹದಿನಾರು ಜನರಿರುತ್ತಾರೆ. ವೇಷ ಪೋಷಾಕುಗಳು ಪಾತ್ರಕ್ಕನುಸಾರವಾಗಿ ಇರುತ್ತವೆ. ಉದಾ: ಶಿವನ ಪಾತ್ರ ಮಾಡಬೇಕಾದರೆ ಹುಲಿ ಚರ್ಮ, ವಿಭೂತಿ, ಪ್ಲಾಸ್ಟಿಕ್ ಹಾವು, ಕೈಯಲ್ಲಿ ತ್ರಿಶೂಲ, ಇತ್ಯಾದಿಗಳ ಸಹಾಯ ಪಡೆದುಕೊಂಡು ಕ್ಯಾಲೆಂಡರ್ ಶಿವನಂತೆ ಕಾಣುತ್ತಾರೆ. ಪೇಟಿ, ತಬಲ, ಎಕ್ಕ, ತಾಳ, ದಮಡಿ, ಮೊದಲಾದ ವಾದ್ಯಗಳನ್ನು ಬಳಸಿಕೊಳ್ಳುತ್ತಾರೆ. ಬಹುರೂಪಿಗಳು ಹೆಚ್ಚಾಗಿ ವೀರಸಿಂಧೂರ ಲಕ್ಷ್ಮಣ, ಗದಾಯುದ್ಧ ಪ್ರಸಂಗ, ಭಸ್ಮಾಸೂರ, ಹರಿಶ್ಚಂದ್ರ, ವಶಿಷ್ಟ ವಿಶ್ವಮಿತ್ರ, ಮುಂತಾದ ಪೌರಾಣಿಕ ಹಾಗೂ ಸಾಮಾಜಿಕ ಕಥೆಗಳಲ್ಲಿ ಬರುವ ಪಾತ್ರಗಳ ರೂಪತಾಳಿ ತಮ್ಮ ಕಲೆ ಪ್ರದರ್ಶಿಸುತ್ತಾರೆ.

ಬೀದಿ ನಾಟಕದಂತೆ, ಜಾತ್ರೆ ಜರುಗುವ ಕೇಂದ್ರ ಸ್ಥಳಗಳಲ್ಲಿ ಬಹುರೂಪಿ ಕಲೆ ಪ್ರದರ್ಶನ ಮಾಡುವರು. ಇತ್ತೀಚೆಗೆ ಈ ಕಲೆ ಹುಮನಾಬಾದ, ವೀರಭದ್ರೇಶ್ವರ ಜಾತ್ರೆಯ ಸಮಯದಲ್ಲಿ ಪ್ರದರ್ಶನಗೊಳ್ಳುತ್ತದೆ.

೬:೧೧: ಭೂತೇರು :

ಕೈಯಲ್ಲಿ 'ಧೂಪ'[1] (ದೀವಟಿಗೆ) ಹಿಡಿದುಕೊಂಡು ಹಾಡುವ ಗಾಯಕರೇ ಧೂಪೇರು. ಕಾಲಬದಲಾದಂತೆ 'ಧೂಪೇರ' ಪದ ಮಾಯವಾಗಿ 'ಭೂತೇರ' ಆಗಿರಬಹುದು. ಭೂತೇರು ಎಲ್ಲಮ್ಮ ದೇವಿಯ ಭಕ್ತರು. ದಿನ ನಿತ್ಯ ಇಲ್ಲವೇ ವಿಶೇಷ ವಾರಗಳಾದ ಶುಕ್ರವಾರ ಮಂಗಳವಾರ ಊರುರು ಕೇರಿ ಕೇರಿ ತಿರುಗಿ ಹಾಡಿ ಕುಣಿದು ಭಿಕ್ಷೆ ಬೇಡಿ ಉಪಜೀವನ ನಡೆಸುತ್ತಾರೆ. ಇವರ ಮೇಳ ಕನಿಷ್ಟ ೫ ಜನ ಕಲಾವಿದರಿಂದ ಕೂಡಿರುತ್ತದೆ. ಗಂಡಸರೇ ಅಥವಾ ಹೆಂಗಸರೇ ಇರಬೇಕೆಂಬ ಯಾವ ನಿರ್ಭಂದನೆಯು ಇಲ್ಲ. ಐದು ಜನ ಭೂತೇರಲ್ಲಿ ಒಬ್ಬರು ಕರಡಿಗೆ ಬಟ್ಟೆ ಧರಿಸುತ್ತಾರೆ. ಉಳಿದವರ ಕೊರಳಲ್ಲಿ ಎಲ್ಲಮ್ಮ ತಾಯಿಯ ಪದಕ ಹಾಗೂ ಕವಡೆ ಹಾರ ಇರುತ್ತದೆ. ಕರಡಿಗೆ ಬಟ್ಟೆ ಧರಿಸಿದವರು ಕೈಯಲ್ಲಿ ದೀವಟಿಗೆ ಹಿಡಿದಿರುತ್ತಾರೆ. ಉಳಿದವರು ತುಂತುಣಿ. ಡೋಲಕ್, ತಾಳ ದಪ್ಪು ನುಡಿಸುತ್ತಿರುತ್ತಾರೆ. ಇವರ ಉಡುಪಿ ಸಾಮಾನ್ಯವಾಗಿರುತ್ತದೆ. ಹಣೆಗೆ ಅರಸಿನ ಕುಂಕುಮ ಬಳಿದಿರುತ್ತಾರೆ. ಹೆಚ್ಚಾಗಿ ಇವರ ಹಾಡುಗಳು ಎಲ್ಲಮ್ಮ ದೇವತೆ ಕುರಿತಾಗಿರುತ್ತದೆ.

'ಅಂಗಯ್ಯ ಹರಡಿಗೆ
ಮುಂಗಯ್ಯ ದೀವಟಿಗೆ
ರಾಮು ರಾಮ್ಯ. . . . .
ಬಂಜೆಂಬ ಶಬ್ದ

ಬಿಡಬೇಡಂತಾರ
ರಾಮು ರಾಮ್ಮು. . . .
ಎಲ್ಲಿ ಕಾಣೆ ಎಲ್ಲಿ ಕಾಣೆ
ಎಲ್ಲಮ್ಮನಂಥಕ್ಕಿ.'

ಇಂಥ ಹಾಡುಗಳು ಕೇಳುಗರ ಮನಸೂರೆಗೊಳಿಸುತ್ತವೆ. ಕಾಲಲ್ಲಿ ಗೆಜ್ಜೆ, ಕೈಯಲ್ಲಿ ದೀವಟಿಗೆ ತಲೆಯ ಮೇಲೆ ತುಂಬಿದೆ ಕೊಡ ಇಟ್ಟುಕೊಂಡು ಗತ್ತಿಗೆ ತಕ್ಕಂತೆ ಕುಣಿಯುವಾಗ ಕಣ್ಣುಗಳಿಗೆ ಮಹದಾನಂದವಾಗುತ್ತದೆ. ೫ ಜನ ಭೂತೇರ ಮೇಳದಲ್ಲಿ ಒಂದು ಹಿಮ್ಮೆಳ, ಇನ್ನೊಂದು ಮುಮ್ಮೇಳ ಮಾಡಿಕೊಂಡಿರುತ್ತಾರೆ. ಮುಮ್ಮೇಳದವರೇ ಮೇಲಿನಂತೆ ಹಾಡು ಹೇಳುವರು. ಹಿಮ್ಮೇಳದವರಿಂದ ಹಾಡು ಪುನರಾವರ್ತನೆಯಾಗುವುದು.

ಈ ಭೂತೇರು ಸಂಪೂರ್ಣವಾಗಿ ಎಲ್ಲಮ್ಮ ದೇವಿಯ ಸಂಪ್ರದಾಯಕ್ಕೆ ತಮ್ಮನ್ನು ತಾವೆ ಅರ್ಪಿಸಿಕೊಂಡಿರುತ್ತಾರೆ. ದಾನದಿಂದ ಬಂದ ಹಣ, ದವಸಧಾನ್ಯಗಳು ತಮಗೆ ಎಷ್ಟು ಬೇಕೋ ಅಷ್ಟು ತಮ್ಮ ಉಪಜೀವನಕ್ಕಾಗಿ ಬಳಸಿಕೊಂಡು ಉಳಿದೆಲ್ಲಾ ದೇವಿಯ ಹೆಸರಿಗೆ ಮುಡುಪಾಗಿಡುತ್ತಾರೆ. ಭೂತೇರಾದವರಿಗೆ ಮದುವೆಯಾಗಲು ಯಾವ ನಿರ್ಭಂದನೆಗಳು ಇಲ್ಲ. ಇವರು ಬೀದರ ನಗರದ ಚೌಬಾರ ಕಾಲೋನಿ, ಮೈಲೂರ ಮುಂತಾದ ನಗರ ಊರುಗಳಲ್ಲಿ ವಾಸವಾಗಿದ್ದಾರೆ. ಬೀದರ ನಗರದಲ್ಲಿ ನೆಲೆಸಿರುವ ಶರಣಪ್ಪ ಭೂತೇರ ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ರಾಜ್ಯೋತ್ಸವದ ಪ್ರಶಸ್ತಿಗಳು ದೊರೆತಿವೆ. ಬೆನಕನಳ್ಳಿ ಎಲ್ಲಮ್ಮ ವಾರದ ಜಾತ್ರೆ ಬೀದರಿನ ಒಳಕೋಟೆ ಭವಾನಿ ದಸರಾ ಮೆರವಣಿಗೆಯಲ್ಲಿ ಭೂತೇರ ಕಲೆ ಅದ್ಭುತವಾಗಿ ಪ್ರದರ್ಶನಗೊಳ್ಳುತ್ತದೆ.

೬:೧೨: ಕೋತಿ ಕುಣಿತ :

ಕೋತಿ ಕುಣಿಸುವ ಕಲಾವಿದರು ಅಲೆಮಾರಿ ವರ್ಗಕ್ಕೆ ಸೇರಿದವರಾಗಿದ್ದಾರೆ. ಸಾಧಾರ್ಣ ಉಡುಪು ಇವರು ಧರಿಸಿರುತ್ತಾರೆ. ಒಂದು ಕೈಯ್ಯಲ್ಲಿ ಬಡಗಿ ಇನ್ನೊಂದು ಕೈಯಲ್ಲಿ ಕೋತಿಯ ಕೊರಳಿನ ಹಗ್ಗ ಇರುತ್ತದೆ. ಕೋತಿಯ ತಲೆಗೆ ಕುಲಾಯಿ ಕಟ್ಟಿರುತ್ತಾರೆ. ಮನೆ-ಮನೆಗೆ ಬಂದು ಈ ಕೆಳಗಿನಂತೆ ಆಟವಾಡಿಸಿ ಹಣ, ಬಟ್ಟೆ, ದಾನವಾಗಿ ಪಡೆದುಕೊಂಡು ಹೋಗುವ ವೃತ್ತಿ ಇವರದಾಗಿದೆ/

ಪಲ್ಟಿ ಹೊಡೆ ಅಂದ್ರೆ, ಪಲ್ಟಿ ಹೊಡೆಯುವುದು
ಲಾಗ ಹಾಕು ಅಂದ್ರೆ, ಲಾಗ ಹಾಕುವುದು
ಅವರ ಹೆಗಲ ಮೇಲೆ ಕುಳಿತುಕೋ ಅಂದ್ರೆ, ಕುಳಿತುಕೊಳ್ಳುವುದು
ಅವರ ತಲೆಯಲ್ಲಿರುವ ಹೇನುಗಳನ್ನು ತೆಗೆದು ತಿನ್ನು ಅಂದ್ರೆ, ತಿನ್ನುವುದು.

ಹೀಗೆಲ್ಲಾ ಮಾಡಿ ತೋರಿಸುವಾಗ ಪ್ರತಿಯೊಬ್ಬರು ನಗದೆ ಸುಮ್ಮನಿರಲಾರರು. ಕೋತಿಯ ಆಟ ಮುಗಿದ ಬಳಿಕ ಕೋತಿಯು ತಾನೇ ತಟ್ಟೆ ಹಿಡಿದುಕೊಂಡು ಹಣ ಸಂಗ್ರಹಿಸುತ್ತದೆ. ಕಲ್ಬುರ್ಗಿ ಶರಣಬಸವಪ್ಪನ ಜಾತ್ರೆಯಲ್ಲಿ, ಈ ಕಲಾವಿದರು ಭಾಗವಹಿಸಿ ಕೋತಿ ಕುಣಿತ ಕಲೆ ಪ್ರದರ್ಶಿಸುವರು.

೬:೧೩: ಕರಡಿ ಕುಣಿತ :

ಕರಡಿ ಕುಣಿತ ಎಂದಾಕ್ಷಣ ಬೇಂದ್ರೆ ಅವರ 'ಕರಡಿ ಕುಣಿತ' ಕವನದ ನೆನಪು ಬರುತ್ತದೆ. ಕರಡಿ ಕುಣಿಸುವ ವ್ಯಕ್ತಿ ಕೈಗೆ ಕಡಗ ಹಾಕಿಕೊಂಡು ಹೆಗಲ ಮೇಲೆ ಕರಿ ಕಂಬಳಿಯನ್ನು ಹೊದ್ದು, ಗಂಡು ಕಚ್ಚೆ ಕಾಕಿ. ಕೊರಳಿಗೆ ಕರಿಯ ದಾರ ಕಟ್ಟಿಕೊಂಡು ಕರಡಿ ಹಾಗೆ ಕಾಣಿಸಿಕೊಂಡಿರುತ್ತಾನೆ.

ಕಾಡಿನಲ್ಲಿರುವ ಮರಿ ಕರಡಿಯನ್ನು ಹಿಡಿದು ಮೂಗುದಾರ ಹಾಕಿ ಮನೆಯಲ್ಲಿಯೇ ಕುಣಿತದ ತರಬೇತಿ ಕೊಟ್ಟು ಜನರ ಮುಂದೆ ಕುಣಿಸಿ ಅವರಿಂದ ಹಣ ಪಡೆದೆ ಜೀವನ ನಡೆಸುತ್ತಾರೆ. ಕರಡಿ ಕೈಯಲ್ಲಿ ಬಡಿಗೆ ಹಿಡಿದುಕೊಂಡು ಮುದುಕನಡಿಗೆ ತೋರಿಸುತ್ತದೆ. ಯುವ ಹುಡುಗರ ಹಾಗೆ ಕಣ್ಣು ಹೊಡೆಯುತ್ತದೆ. ಹಿಂದಿನ ಕಾಲುಗಳ ಮೇಲೆ ನಿಂತು ಮುಂಗಾಲುಗಳನ್ನು ಮೇಲೆ ಮಾಡಿ ಕುಣಿಯುತ್ತದೆ. ಸುತ್ತ-ಮುತ್ತ ನೆರೆದ ಜನರಿಗೆ ಎರಡು ಕೈಯಿಗಳಿಂದ ನಮಸ್ಕಾರ ಮಾಡುತ್ತದೆ. ಕರಡಿ ಬಲಶಾಲಿ ಪ್ರಾಣಿಯಾದುದರಿಂದ ಅದರ ಮೇಲೆ ಮಕ್ಕಳಿಗೆ ಕೂಡಿಸಿದರೆ, ಅದರ ಕೂದಲನ್ನು ಮಗುವಿನ ಕೊರಳಿಗೆ ಇಲ್ಲವೆ ಉಡುದಾರಕ್ಕೆ ಕಟ್ಟಿದರೆ, ಹೆದರಿಕೆ ಮಾಯವಾಗಿ ಅರಣ್ಯ ಸೇರುತ್ತದೆಂಬ ನಂಬಿಕೆಯಿದೆ. ವೀರಭದ್ರೇಶ್ವರ ಜಾತ್ರೆಯಲ್ಲಿ ಈ ಕುಣಿತವಿರುತ್ತದೆ.

೬:೧೪: ಜಾತಗಾರರು :

ನಾಟಕ ಮೊದಲಾದವುಗಳಲ್ಲಿ ಅಭಿನಯಿಸುವ ವೃತ್ತಿಕಲಾವಿದರಿಗೆ 'ಜಾತಗಾರ'ರೆಂದು ಕರೆಯುತ್ತಾರೆ. ಢೋಲಕ, ತಬಲಾ, ಪೇಟಿ ಮುಂತಾದ ವಾದ್ಯಗಳಿಂದ ಕೂಡಿದ ಒಂದೇ ಕುಟುಂಬಕ್ಕೆ ಸೇರಿದ ೩-೪ ಜನ ಸೇರಿ ತಮಗೆ ಇಷ್ಟವಾದ ಪಾತ್ರಗಳನ್ನು ಹಾಕಿರುತ್ತಾರೆ. ಹೆಣ್ಣು ಪಾತ್ರಗಳನ್ನು ಗಂಡೇ ಅಭಿನಯಿಸುವುದು ಕಂಡು ಬರುತ್ತದೆ. ಇವರ ಕಲೆ ಗಂಭೀರವಾದುದಲ್ಲ. ಹಾಡು ಸಂಭಾಷಣೆಗಳಿಂದ ಕೂಡಿರುತ್ತದೆ. 'ಕುಣಿತವೇ' ಅಧಿಕವಾಗಿರುತ್ತದೆ. ಭಾಲ್ಕಿ ತಾಲ್ಲೂಕಿನ ಖಾನಾಪೂರ (ಮೈಲಾರ ಮಲ್ಲಣ್ಣನ) ಜಾತ್ರೆಯಲ್ಲಿ ಜಾತಗಾರರು ಕಂಡು ಬರುತ್ತಾರೆ.

೬:೧೫: ಬಾಳಸಂತೂರ :

ಬಾಳಸಂತೂರ ಹೆಸರು ಹೇಗೆ ಬಂತೆಂಬ ಪ್ರಶ್ನೆಗೆ ನಿಖರವಾದ ದಾಖಲೆಗಳಿಲ್ಲ. ಬಾಳಸಂತೂರ ಕಲೆ ಪರಂಪರಗತವಾಗಿ ಬೆಳೆದುಕೊಂಡು ಬಂದಿದ್ದಕ್ಕೆ ದಂತ ಕಥೆಗಳಿವೆ. ಇವರು ಕಬ್ಬಲಿಗ ಜಾತಿಗೆ ಸೇರಿದವರಾಗಿದ್ದಾರೆ. ದಿನಬೆಳಗಾದರೆ, ಹಣೆಗೆ ಕುಂಕುಮ ಹಚ್ಚಿಕೊಂಡು, ಬಲಿಗೆ ಜೋಳಿಗೆ ಹಾಕಿಕೊಂಡು ಮನೆಯಿಂದ ಮನೆಗೆ ಭಿಕ್ಷೆ ಬೇಡುತ್ತಾರೆ. ಭಿಕ್ಷೆ ಬೇಡುವಾಗ ಬಲಗೈ ಹೆಬ್ಬರಳಿಗೆ ಗಗ್ಗರ ಹಾಕಿಕೊಂಡು ಗತ್ತು ಕೂಡಿಸಿಕೊಂಡು ಹಾಡು ಹೇಳುವರು. ಇವರು ಹಾಡುವ ಹಾಡುಗಳು ಪೌರಾಣಿಕ ಮತ್ತು ಸಾಮಾಜಿಕ ಅಂಶಗಳನ್ನು ಒಳಗೊಂಡಿರುತ್ತವೆ.

ಉದಾಹರಣೆಗೆ ಒಂದು ಹಾಡು.

'ಬಂಜೆಪಲ್ಲೆ ಊರಾಗ
ಗಂಡನ ಹೆಸರು ಲಿಂಗನಗೌಡ
ಮಗ ಹನುಮಂತ ಹಾನ್
ಮಗಳು ನರಸಮ್ಮ
ತಾಯಿ ಎಲ್ಲಮ್ಮ
ತಾಯಿ ಎಲ್ಲಮ್ಮ
ಸಿಂದಿ ಮಾರತಾಳ
ಬಂಜೆಪಲ್ಲೆ ಊರಾಗ
ಈಗ ವಡ್ಡರು ಬಂದಾರ
ಕೆರಿ ಅಲ್ಲಿ ಕಟ್ಟತಾರ
ಬಂಜೆಪಲ್ಲೆ ಊರಾಗ'

ಹೀಗೆ ಹಾಡು ಮುಂದುವರಿಯುತ್ತದೆ. ಅಷ್ಟರಲ್ಲಿ ಆಯಾ ಮನೆಯ ಒಡತಿ ಹಿರಿಯರು ರೊಟ್ಟಿ ಅನ್ನ, ಪಲ್ಲೆ, ಇಲ್ಲವೆ ಜೋಳ, ಗೋಧಿ, ಹಿಟ್ಟು, ಬಟ್ಟೆ ದಾನವಾಗಿ ಕೊಡುವರು. ನಂತರ ಬಾಳಸಂತ ಕಲಾವದರು ಮುಂದಿನ ಮನೆಗ ಹೋಗಿ ಹಿಂದಿನಂತೆ ಹಾಡು ಹೇಳುವರು. ಹೀಗೆ ಸಮಯವಾಗುವವರೆಗೆ ದಾನ ಬೇಡಿಕೊಂಡು ಮನೆಗೆ ಹೋಗಿ ಹೊಟ್ಟೆ ತುಂಬಿಕೊಳ್ಳುವರು. ಇದು ಬಾಳಸಂತ್ಯರ ವೃತ್ತಿಗಾಯಕರ ಜೀವನ. ಬಾಳಸಂತರಿಗೆ ಭಿಕ್ಷೆ ನೀಡುವುದರಿಂದ ಮಕ್ಕಳಾಗದವರಿಗೆ ಮಕ್ಕಳಾಗುತ್ತವೆಂಬ ಜನಪದ ನಂಬುಗೆ ಹಳ್ಳಿಯವರಲ್ಲಿದೆ. ಚಿಕ್ಕಮಕ್ಕಳು ರೋಗ–ರುಜಿನಗಳಿಂದ ಬಳಲುತ್ತಿದ್ದರೆ ಆ ಮಕ್ಕಳ ಮೇಲಿನ ಬಟ್ಟೆ ಈ ಸಂತರಿಗೆ ಕೊಟ್ಟರೆ, ಮಕ್ಕಳು ಜ್ವರ ಕಡಿಮೆಯಾಗುತ್ತದೆಂಬ ಭಾವನೆಯು ಉಂಟು. ಬಾಳಸಂತರು ಬೀದರ ಜಿಲ್ಲೆಯ ಪಾಪನಾಶಿನಿ, ಎಲ್ಲಮ್ಮ, ಬಸವಣ್ಣ, ಮುಂತಾದ ಜಾತ್ರೆಗಳಲ್ಲಿ ಕಂಡುಬರುತ್ತಾರೆ.

೬:೧೬: ಬುರ್ ಬುರ್ ಪೋಚಮ್ಮ :

ಡೋಲಕದ ಮೇಲೆ ಬುರ್–ಬುರ್ ಎನ್ನುವ ಶಬ್ದ ಹೊರಬರುವಂತೆ, ಬಾರಿಸುತ್ತ ಮನೆಯಿಂದ ಮನೆಗೆ ಭಿಕ್ಷೆ ಬೇಡುತ್ತ, ಉಪಜೀವನ ನಡೆಸುವ ಇವರಿಗೆ ಬುರ್–ಬುರ್ ಪೋಚಮ್ಮ ಎಂಬ ಹೆಸರು ಬಂದಿದೆ. ಪೋಚಮ್ಮ ಈ ಕಲಾವಿದರ ಧರ್ಮದೇವತೆಯಾಗಿದ್ದಾಳೆ. ಇವರು ಪ್ರತಿನಿತ್ಯ ಸೂರ್ಯೋದಯದ ಹೊತ್ತಿಗೆ ನಗರ ಇಲ್ಲವೆ ಹಳ್ಳಿಯ ಮನೆ ಮನೆಗೆ ಹೋಗಿ ಭಿಕ್ಷೆ ಬೇಡುವರು. ದಾನ ಕೊಟ್ಟ ಹರಕು ಬರಕು ಬಟ್ಟೆ ಧರಿಸಿ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಕೈಯಲ್ಲಿ ಡೋಲಕ ಹಿಡಿದು ಬುರ್–ಬುರ್ ಶಬ್ದ ಮಾಡುತ್ತ ಕುಣಿಯುತ್ತ ಹಾಡು ಹೇಳುವುದು.

ಎ ಎಮ್ಮೋ ದಾನ ತಾರಮ್ಮ
ಬಾರಮ್ಮೋ ಬಾ ತಾಯಿ
ಕಲ್ಲಮ್ಮ, ಮಲ್ಲಮ್ಮ
ಬೇಗ ಬಾರಮ್ಮಾ ಹಿಟ್ಟು
ತಾರಮ್ಮ.

ಹಡದವ್ವ ಮಕ್ಕಳು–ಮರುಗಳ್ ತಣ್ಣಗಿರಲವ್ವ ಎನ್ನುವ ಚುಟುಕು ಹಾಡುಗಳು ಇವರದಾಗಿವೆ. ಅಶುಕವಿಯಂತೆ ಅಲ್ಲಿಂದಲೇ ಹಾಡು ಕಟ್ಟಿ ಹೇಳುತ್ತಾರೆ. ಇಬ್ಬರಿಂದ ಐದು ಜನರ ಮೇಳ ಇವರದಾಗಿರುತ್ತದೆ. ಡೋಲಕ್ಕೆ ಬಾರಿಸುವ ಕಲಾವಿದನೆ ಹಾಡು ಹೇಳುವನು. ಇನ್ನುಳಿದ ಕಲಾವಿದರು ಆ ಹಾಡನ್ನೇ ಪುನರಾವರ್ತನೆಮಾಡಿ ಕುಣಿದು ಕುಪ್ಪಳಿಸುವರು. ಕಾಣಿಕೆ ಸ್ವೀಕರಿಸಿ ಮುಂದಿನ ಮನೆ ಇಲ್ಲವೆ ಅಂಗಡಿಗೆ ಸಾಗುವರು. ಶಿವರಾತ್ರಿಯಲ್ಲಿ ಜರುಗುವ ಬಿದರಿನ ಪಾಪನಾಶಿನಿ ಜಾತ್ರೆಯಲ್ಲಿ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಅಂಗಡಿಗಳ ಮುಂದೆ ತಾವೇ ಇವರ ಕಲೆ ನೋಡಿ ಆನಂದಿಸಬಹುದಾಗಿದೆ. ಕೆಲವು ಸಲ ಬಾರಕೋಲನಿಂದ ತಮ್ಮನ್ನೇ ತಾವೇ ಬಡಿದುಕೊಂಡು ರಕ್ತ ಬರುವವರೆಗೆ ಹೊಡೆದುಕೊಳ್ಳುತ್ತಾರೆ. ಇವರ ಮೈಮೇಲಿನ ರಕ್ತ ಕಂಡು ಹಾದಿ ಬೀದಿಯಲ್ಲಿ ಹೋಗುವ ಜನರು ಕಾಣಿಕೆ ಕೊಟ್ಟು ಮುನ್ನುಗ್ಗುತ್ತಾರೆ. ಆ ಹಣವೇ ಈ ಕಲಾವದಿರ ಉಸಿರಾಗಿರುತ್ತದೆ. ಬೀದರಿನ ಪಾಪನಾಶಿನಿ ಜಾತ್ರೆಯಲ್ಲಿ ಈ ಕಲೆ ಅದ್ಭುತವಾಗಿ ಜನರನ್ನು ರಂಜಿಸುತ್ತದೆ.

೬:೧೭: ಕೋಲಾಟ :

ಕೋಲುಗಳನ್ನು ಹೊಡೆಯ್ಯುತ್ತ ಸೇರಿ ಆಡುವ ಆಟವೇ ಕೋಲಾಟ. ಇದು ದೈವೀ ಆರಾಧನೆಯ ಜನಪದ ಕಲೆ, ಹಾಡು ಮತ್ತು ಸಂಗೀತಗಳನ್ನೊಳಗೊಂಡ ಆಕರ್ಷಕ ನೃತ್ಯ ಕೂಟ, ಬೀದರ ನಗರದಲ್ಲಿ ಜರುಗುವ ವಿಠ್ಠಲನ ಜಾತ್ರೆಯ ಮೆರವಣಿಗೆಯಲ್ಲಿ ಕೋಲಾಡುವ ಪರಿಪಾಠವಿದೆ. ಮೇರವಣಿಗೆಯಲ್ಲಿ ಪಾಲ್ಗೊಂಡ

ಭಕ್ತಾದಿಗಳಿಗೆ ಮನರಂಜನೆ ಕೊಡುವುದರ ಜೊತೆಗೆ ದೇವರ ಹೆಸರಿನಲ್ಲಿ ಕೋಲಾಟವಾಡಿ ಕೃತಾರ್ಥರಾದೇವು ಎಂಬ ನಂಬಿಕೆಯಿಂದ ಕೋಲು ಹಾಕುವ ವಿಶಿಷ್ಟ ಸಂಪ್ರದಾಯ ಈ ಜಾತ್ರೆಯಲ್ಲಿದೆ. ಕೋಲಿಗೆ ತಕ್ಕ ಹೆಜ್ಜೆ ಹಾಕು, ಕಾಲಿಗೆ ತಕ್ಕಂತೆ ಗೆಜ್ಜೆ ಕಟ್ಟು ಎಂಬ ಮಾತು ಕೋಲಾಟ ಕುರಿತ ಗಾದೆ ಇದೆ. ಕೋಲಾಟದಲ್ಲಿ ೮ ಇಲ್ಲವೇ ೨೪ ಜನರಿರುತ್ತಾರೆ. ಗಂಡಸರಾದವರು ಹೆಣ್ಣಿನ ವೇಷ ಹಾಕಿ, ಮುಖಕ್ಕೆ ಬಣ್ಣ ಬಳೆದುಕೊಂಡು ತಲೆಗೆ ಕಿರೀಟ ಹಾಕಿಕೊಂಡು ಕೋಲಾಟ ಪ್ರಾರಂಭಿಸುತ್ತಾರೆ. ವಿಠ್ಠಲನ ಮೆರವಣಿಗೆ ಮುಂದೆ–ಮುಂದೆ ಸಾಗಿದಂತೆ ಕೋಲಾಟ ಆಡುವವರು ಮುಂದೆ ಮುಂದೆ ಸಾಗುತ್ತ ಕೋಲಾಟವಾಡಿ ಭಕ್ತರ ಮನರಂಜಿಸುವರು. 'ರಾಧಾ ರಾಧವೋ ರಮಣನ ನಿಲವೋ' ಎನ್ನುವ ಹಾಡು ಹಾಡುವಾಗ ಕೋಲು ಆಡುವವರ ಕೈಕಾಲು ನೋಡುವಂತಿರುತ್ತದೆ. ಹಾಡಿಗೆ ತಕ್ಕ ಸಂಗೀತ ಮತ್ತು ಕುಣಿತವಿರುತ್ತದೆ. ರಸ್ತೆಯ ಇಕ್ಕೆಲ ಭಾಗದಲ್ಲಿ 'ಜನ ಮರಳೋ ಜಾತ್ರೆ ಮರಳೋ' ಎಂಬಂತೆ ಜನ ನಿಂತಿರುತ್ತಾರೆ. ಲಯ ವೈವಿಧ್ಯದಿಂದ ನಾದ ಕುಣಿತ ಗತ್ತು ಈ ಜಾತ್ರೆಯ ಕೋಲಾಟದಲ್ಲಿ ಕಂಡುಬರುತ್ತದೆ.

ಆಕರಗಳು :

ಬೆಟ್ಟಗೇರಿ ಕೃಷ್ಣಶರ್ಮ ಮತ್ತು ಬೆಂಗೇರಿ ಹುಚ್ಚರಾಯ (ಸಂ) ೧೯೮೪ 'ಕನಕದಾಸರ ಹಾಡುಗಳು' ಸಮಾಜ ಪುಸ್ತಕಾಲಯ ಧಾರವಾಡ

ಟಿಪ್ಪಣಿಗಳು :

೧. **ಧೂಪ :** ಭೂತೇರಾದವರು ಕೈಯಲ್ಲಿ ಬಟ್ಟೆಯಿಂದ ಮಾಡಿದ ದೀವಟಿಗ (ದೀಪ) ಹಿಡಿದಿರುತ್ತಾರೆ. ಅದರ ಮೇಲೆ ಸಿಎಣ್ಣಿ(ಸ್ಯೆ ಎಣ್ಣಿ) ಮೇಲಿಂದ ಮೇಲೆ ಹಾಕುತ್ತಾ ಇರುತ್ತಾರೆ. ಅದಕ್ಕೆ 'ಧೂಪ' ಎನ್ನುವರು, 'ಗುಗ್ಗುಳ' ಎಂತಲೂ ಕರೆಯುತ್ತಾರೆ.

* * *

ಅಧ್ಯಾಯ–೭

ಸಮಾರೋಪ :

ಹೈದ್ರಾಬಾದ ಕರ್ನಾಟಕದ ಜಾತ್ರೆಗಳು–ಒಂದು ಸಾಂಸ್ಕೃತಿಕ ಅಧ್ಯಯನ ವಿಷಯಕ್ಕೆ ಸಂಬಂಧಿಸಿದಂತೆ, ನಡೆಸಿದ ಅಭ್ಯಾಸ ಮತ್ತು ಸಮೀಕ್ಷೆ ಅಡಿಯಲ್ಲಿ ಈ ಕೆಳಕಂಡ ಅಂಶಗಳನ್ನು ಗುರುತಿಸಬಹುದು.

ಹೈದ್ರಾಬಾದ ಕರ್ನಾಟಕದ (ಬೀದರ, ಗುಲ್ಬರ್ಗಾ ಮತ್ತು ರಾಯಚೂರು ಜಿಲ್ಲೆಗಳು)೧೯೪೮ರ ಹಿಂದೆ ಹೈದ್ರಾಬಾದ ನಿಜಾಂ ಅರಸನ ಆಡಳಿತಕ್ಕೆ ಒಳಪಟ್ಟಿದ್ದರಿಂದ, ಉರ್ದು ಭಾಷೆ ಆತನ ಆಡಳಿತದ ಭಾಷೆಯಾಗಿರುವುದಲ್ಲದೆ, ಕಡ್ಡಾಯ ಶಿಕ್ಷಣ ಆಗಿರುವುದರಿಂದ, ಎಲ್ಲರೂ ಉರ್ದು ಭಾಷೆಯಲ್ಲಿಯೇ ಅಭ್ಯಾಸ ಮಾಡಬೇಕಾಗುತ್ತಿತ್ತು. ಪೂರ್ವಕ್ಕೆ ಆಂಧ್ರಪ್ರದೇಶ ಪಶ್ಚಿಮಕ್ಕೆ ಮಹಾರಾಷ್ಟ್ರ ಈ ಪ್ರದೇಶದ ಗಡಿಗಳಾಗಿರುವುದರಿಂದ ಉರ್ದು ಭಾಷೆಯ ನಂತರ ಮರಾಠಿ ಮತ್ತು ತೆಲಗು ಭಾಷೆಯು ಎರಡನೆಯ ಸ್ಥಾನದಲ್ಲಿತ್ತು. ಒಟ್ಟಿನಲ್ಲಿ ಮೂರು ಭಾಷೆಗಳು ಕನ್ನಡದ ಮೇಲೆ ದಾಳಿ ಮಾಡಹತ್ತಿದ್ದವು. ಕನ್ನಡ ಭಾಷೆ ನೆಲ ಕಚ್ಚಿತ್ತು. ಮೂರನೆಯ ದರ್ಜೆಯ ಸ್ಥಾನದಲ್ಲಿದ್ದಿತು. ಹೀಗಾಗಿ ಅಂದಿನಿಂದ ಇಂದಿನವರೆಗೂ ಕನ್ನಡ, ಮುಸ್ಲಿಂ, ತೆಲುಗು ಮತ್ತು ಮರಾಠಿ ಮನೆತನಗಳು ಈ ಪ್ರದೇಶದಲ್ಲಿರುವುದರಿಂದ ಮನೆಯ ಭಾಷೆ ಮತ್ತು ವ್ಯವಹಾರಿಕ ಭಾಷೆಗಳು ಉರ್ದು, ಮರಾಠಿ ಮತ್ತು ತೆಲುಗು ಆಗಿರುವುದುರಿಂದ ಈ ನಾಡಿನಲ್ಲಿ ಸಮ್ಮಿಶ್ರ ಸಂಸ್ಕೃತಿ ಎದ್ದು ಕಾಣುತ್ತದೆ.

ಪ್ರಾಣಿಯಾಗಿದ್ದ ಮನುಷ್ಯ ಇಂದು ಮಾನವನಾಗಿದ್ದಾನೆ. ಕಾಡಿನಲ್ಲಿ ಸಿಗುವ ಹಣ್ಣು ಹಂಪಲುಗಳನ್ನು ತಿಂದು ಬದುಕಿದ. ಬೇಟೆ ಕಲಿತು ಪ್ರಾಣಿಯ ಮಾಂಸ ತಿನ್ನಲು ಸುರು ಮಾಡಿದ. ಹೀಗೆ ಹಲವಾರು ಹಂತಗಳನ್ನು ದಾಟಿ ಒಕ್ಕಲುತನದಲ್ಲಿ ತೊಡಗಿದ. ಒಂದು ಸ್ಥಳದಲ್ಲಿಯೇ ಬಿಡಾರ ಹಾಕಿದ. ಗುಡಿಸಲು ತಲೆ ಎತ್ತಿದ್ದವು. ಕೊಪ್ಪಗಳು ನಿರ್ಮಾಣವಾದವು. ಹಳ್ಳಿಗಳು ಪಟ್ಟಣಗಳು ಹುಟ್ಟಿಕೊಂಡವು.

ಪ್ರಥಮದಲ್ಲಿ ಪರಿಸರವೇ ಮಾನವರಿಗೆ ದೇವರು. ಮರ–ಗಿಡ, ಬೆಟ್ಟಗುಡ್ಡ, ಭೂಮಿ–ಆಕಾಶ, ಚಂದ್ರ–ಸೂರ್ಯ, ಮುಂತಾದುವುಗಳನ್ನು ಪೂಜಿಸುತ್ತಿದ್ದರು. ಬರುಬರುತ್ತಾ ದೇವರ ಕಲ್ಪನೆಯಾಯಿತು. ಬಿಸಿಲು–ಚಳಿ, ಗಾಳಿ, ಭೋರೆಂಬ

ಮಳೆ, ಗುಡುಗು–ಸಿಡಿಲು ಭೂಕಂಪ ಭಯ ಹುಟ್ಟಿಸಿದ್ದವು. ಇವುಗಳಿಂದ ರೋಗ ರುಜಿನಗಳಿಗೆ ಒಳಗಾದರು. ಇವುಗಳಲ್ಲಿ ಯಾವುದೋ ಒಂದು ಅದ್ಭುತ ಶಕ್ತಿ ಇದೆ ಎಂದು ಮನಗಂಡರು. ಒಂದೊಂದು ರೋಗಕ್ಕೆ ಒಂದೊಂದು ಶಕ್ತಿಯೇ ಕಾರಣವೆಂದು ಕಲ್ಪಿಸಿಕೊಂಡರು. ಹಾಗೆಯೇ ಆ ಶಕ್ತಿಗೆ (ದೇವರಿಗೆ) ಒಂದು ರೂಪ (ಹೆಸರು) ಕೊಟ್ಟರು. ದೇವಾಲಯ ಕಟ್ಟಿಸಿದರು. ಹೀಗೆ ಹುಟ್ಟಿಕೊಂಡ ದೇವಾಲಯಗಳಲ್ಲಿ ಜನಸಾಮೂಹಿಕವಾಗಿ ಪೂಜಿಸತೊಡಗಿದರು. ಆರಾಧಿಸತೊಡಗಿದರು. ಆ ಸಾಮೂಹಿಕ ಆರಾಧನೆಯೇ ಮುಂದೆ ಜಾತ್ರೆಗೆ ಮೂಲವಾಯಿತು.

ಯಾವ ದೇವ–ದೇವತೆಗಳು ದಂತಕಥೆ, ಪುರಾಣ ಪ್ರಚನಗಳಲ್ಲಿ ಕಾಣಿಸಿಕೊಳ್ಳುತ್ತವೋ ಆ ದೇವರುಗಳನ್ನು ಪೌರಾಣಿಕ ದೇವರೆಂದು ಅಥವಾ ಗ್ರಾಮದೇವರೆಂದು ಕರೆಯುವುದು ಸೂಕ್ತವೆನಿಸುತ್ತದೆ. ಏಕೆಂದರೆ ಯಾವುದೇ ನಿರ್ಧಿಷ್ಟವಾದ ದಾಖಲೆಗಳಿರುವುದಿಲ್ಲ. ಸೂಕ್ತವಾದ (ಲಿಖಿತ) ಆಧಾರ ಯಾವ ದೇವರುಗಳ ಕುರಿತಾಗಿರುವುದು, ಆ ದೇವರನ್ನು ಐತಿಹಾಸಿಕ ಅಥವಾ ಸಾಮಾಜಿಕ ದೇವರೆಂದು ಪರಿಗಣಿಸಬಹುದು.

ಪೌರಾಣಿಕ ದೇವರುಗಳು (ಗ್ರಾಮ ದೇವರುಗಳು) ಮಾರಿ, ಮಾಪೂರ ತಾಯಿ, ಮೈಲಾರಲಿಂಗ, ವೀರಭದ್ರೇಶ್ವರ, ಪಾಪನಾಶಿನಿ, ದತ್ತಾತ್ರೇಯ, ಬೆನಕನಹಳ್ಳಿ ಎಲ್ಲಮ್ಮ, ಚೌಡೇಶ್ವರಿ, ಹುಲಗೆಮ್ಮ, ಕರೆಮ್ಮ, ಕೊರಣೇಶ್ವರ, ವಿಠಲ ಮುಂತಾದ ದೇವರುಗಳು.

ಐತಿಹಾಸಿಕ ದೇವರುಗಳು ಕೊಪ್ಪಳದ ಗವಿಸಿದ್ದೇಶ್ವರ, ಅಮರೇಶ್ವರ, ಬಸವಣ್ಣ, ಅಲ್ಲಮಪ್ರಭು, ಕರಿಯಪ್ಪ ಶಿವಯೋಗಿ, ಹಜರತ ಖಲಿಫುತರ ರಹಿಮಾನ ಉರುಸ್, ಶ್ರೀ ಶಿವಲಿಂಗೇಶ್ವರ, ಕ್ರೈಸ್ತರ ವಾರ್ಷಿಕ ಜಾತ್ರೆ, ಕೋರಿಸಿದ್ದೇಶ್ವರ, ಮೌನೇಶ್ವರ ಸಿದ್ಧಲಿಂಗ ಶಿವಯೋಗಿ, ಖಾಜಾಬಂದಾನವಾಜ, ಚನ್ನಬಸವೇಶ್ವರ ಶಿವಯೋಗಿ, ನಾರದಗಡ್ಡೆ, ಶರಣ ಬಸವೇಶ್ವರ, ಭದ್ರೇಶ್ವರ, ಕ್ಷೇಮಲಿಂಗೇಶ್ವರ, ಗುರುನಾನಕದೇವ, ಬಲವಂತಶರಣ, ಬಕ್ಕಪ್ರಭು ಮಾಣಿಕೇಶ್ವರ, ಮಡಿವಾಳೇಶ್ವರ, ಚಂದಾಹುಸೇನ ಈ ಮುಂತಾದ ಹೆಸರುಗಳು. ಇಂಥ ದೇವರುಗಳ ಉತ್ಸವವೇ ಐತಿಹಾಸಿಕ ಜಾತ್ರೆ, ಪೂಜೆ, ಪ್ರಾರ್ಥನೆ, ಅಭಿಷೇಕ, ನೈವೇದ್ಯ, ಆರತಿ, ತೇರು, ಉರುಳುಸೇವೆ, ಮುಂತಾದ ಆಚರಣಗೆಳು ಅಲ್ಲಿರುತ್ತವೆ.

ಜಗತ್ತಿನಲ್ಲಿರುವ ಪ್ರತಿಯೊಬ್ಬ ಮಾನವನ ಪ್ರತಿಯೊಂದು ಕಾರ್ಯಕಲಾಪಗಳು ದೇವರಿಂದಲೇ ಅವನ ಪ್ರೇರಣೆಯಂತೆಯೇ ನಡೆಯುತ್ತವೆಂದು ನಂಬಿಕೊಂಡಿದ್ದಾನೆ. ಇಂಥ ನಂಬಿಕೆಗಳು ಪ್ರತಿಯೊಂದು ಮತ–ಧರ್ಮಾನುಯಾಯಿಗಳಲ್ಲಿಯೂ ಇದ್ದೇ ಇರುತ್ತವೆ. ತನ್ನ ಜೀವನದಲ್ಲಿ ಹೆಣ್ಣು–ಮಣ್ಣು ಮತ್ತು ಹೊನ್ನು ಯಾವುದಕ್ಕೂ ಕೊರತೆ ಇರಬಾರದು. ಸಂತೋಷ, ಆಯುಷ್ಯ ಕೀರ್ತಿ ಯುಕ್ತಿ, ಮುಕ್ತಿ,

ಮುಂತಾದವುಗಳು ಲಭಿಸಬೇಕು. ಪಾಪಕ್ಕೆ ಪರಿಹಾರ (ಕ್ಷಮೆ) ಮುಂತಾಗಿ ದೊರಕಿಸಿಕೊಳ್ಳಬೇಕು – ಎಂಬಂಥ ಆಸೆಗಳೇ (ಸ್ವಾರ್ಥವೇ) ಪ್ರಾರ್ಥನೆ–ಆರಾಧನೆ ಮತ್ತು ಜಾತ್ರೆಯ ಮುಖ್ಯ ಉದ್ದೇಶವಾಗಿರುತ್ತದೆ.

ಜಾತ್ರೆಯ ಮೂಲಕ ದೇವರನ್ನು ವಂದಿಸುವುದು. ಸ್ತುತಿಸುವುದು. ಭಜನೆ ಮಾಡಿ ಹೊಗಳುವುದು. ಹೂವು–ಹಣ್ಣುಗಳನ್ನರ್ಪಿಸುವುದು. ಸ್ನಾನ–ಪಾನ ಮಾಡಿಸುವುದು. ಕಾಣಿಕೆ ಕೊಡುವುದು, ಉಪವಾಸ ಮಾಡುವುದು, ಕುಂಭಮೇಳ ಏರ್ಪಡಿಸುವುದು, ಎಡೆಯೊಪ್ಪಿಸುವುದು. ಅಭಿಷೇಕ ಮಾಡಿಸುವುದು. ದರ್ಮದ ಪ್ರತೀಕವಾಗಿ ಘಟಸ್ಥಲ ಧ್ವಜ ಹಾರಿಸುವುದು. ವಟುಗಳಿಗೆ ಅಯ್ಯಾಚಾರ ಮಾಡುವುದು. ಆತ್ಮಾಭಿಮಾನ ಮತ್ತು ಘನತೆ ಗೌರವಗಳ ಪ್ರತೀಕವಾಗಿ ನಂದೀಧ್ವಜ ಹಿಡಿದುಕೊಂಡು ಕುಣಿಯುವುದು. ತೇರು ದೇಹದ ಪ್ರತೀಕ, ದೇವರು ಕುಳಿತಿರುವ ತೇರು ಎಳೆದರೆ ಪಾಪಕರ್ಮಗಳು ನಾಶವಾಗುತ್ತವೆಂದು, ತೇರು ಜಗ್ಗುವುದು. ಮಳೆ–ಬೆಳೆ ಸಕಾಲದಲ್ಲಿ ಬಾರದೆ ಇದ್ದಲ್ಲಿ, ಉಟಗಿ, ಉರುಳಸೇವೆ ಮಾಡುವುದು. ತನ್ನ ನಾಲಿಗೆ ರುಚಿಗೋಸ್ಕರ ದೇವರ ಹೆಸರಿನಲ್ಲಿ ಗಾವು (ಮೇಕೆ ಬಲಿ) ಕೊಡುವುದು. ಭೂತೇರಾಗುವುದು ಮೂಢ ನಂಬಿಕೆಯ ಹಿನ್ನೆಲೆಯಲ್ಲಿ ಗುದಪೂಜೆ ಮಾಡುವುದು; ದಿಂಡಿ ನೆರವೇರಿಸುವುದು. ಮೂಗುತಿ ಇಡುವುದು. ದೇವಾಲಯ ಕಟ್ಟಿಸುತ್ತೇನೆಂದು ಹರಕೆ ಮಾಡುವುದು. ಮುಂತಾದವುಗಳೆಲ್ಲ ಪ್ರಾರ್ಥನೆ–ಆರಾಧನೆ–ಜಾತ್ರೆಯ ಚೌಕಟ್ಟಿಗೆ ಸೇರುತ್ತವೆ. ಕೋಳಿ ಅಂಕ, ಡೊಳ್ಳು ಬಾರಿಸುವುದು, ಕೋಲಾಟವಾಡುವುದು, ಬಡಿಗೆ ಆಟ ಇತ್ಯಾದಿಗಳ ಮನರಂಜನೆ ಜೊತೆಗೆ ದೈವಾರಾಧನೆಯ ಪ್ರತೀಕ ಕಲೆಗಳಾಗಿವೆ. ಪುಸ್ತಕ ಮಾರಾಟ ಮಳಿಗೆಗಳು, ಪ್ರವಚನ ಕೀರ್ತನೆಗಳು, ಧರ್ಮಗ್ರಂಥಗಳ ಪಠಣ ಇವು ಮುಕ್ತಿದಾಯಕ ಮಾರ್ಗದ ವಿಷಯಗಳು.

ಕೆಲವೊಂದು ಜನಗಳ ಜಾತ್ರೆಯ ಜೊತೆಯಲ್ಲಿ ದನಗಳ ಜಾತ್ರೆ ಕೂಡ ಜರುಗುತ್ತದೆ. ದೂರದೂರಿಂದ ಬರುವ ಜನರ ಸೌಲಭ್ಯಕ್ಕಾಗಿ, ಸಮಯದ ಉಳಿತಾಯಕ್ಕಾಗಿ ದನಗಳ ಜಾತ್ರೆ ನಡೆಸುತ್ತಾರೆ. ಹತ್ತಾರು ಬಗೆಯ ಅಂಗಡಿ ಮುಂಗಟ್ಟುಗಳು ಜಾತ್ರೆಯಲ್ಲಿರುತ್ತವೆ. ತಮಗೆ ಬೇಕಾದ ವಸ್ತುಗಳು ಖರೀದಿಸಲು ಜಾತ್ರೆ ಅನುಕೂಲ ಮಾಡಿಕೊಡುತ್ತದೆ. ಬಂಧು ಬಳಗದವರನ್ನು ಭೆಟ್ಟಿಯಾಗಲು, ಮೇಲು–ಕೀಳೆನ್ನದೆ ಸಾಮೂಹಿಕವಾಗಿ ಸೇರಲು, ಜಾತ್ರೆಗಳು ಮಹತ್ವದ ಸ್ಥಾನ ಪಡೆದುಕೊಂಡಿವೆ.

ಈ ಎಲ್ಲ ಆಚರಣೆ ಮತ್ತು ವ್ಯವಸ್ಥೆಗಳು ಹಿನ್ನೆಲೆ ಒಂದೇ ಮಾತಿನಲ್ಲಿ ಹೇಳುವುದಾದರೆ 'ಅತಿ ಆಸೆ'ಯೆಂದೇ ಹೇಳಬೇಕು. ಅತಿ ಆಸೆಯೆಂದರೆ ಒಬ್ಬಾತನು ತನ್ನ ನಿಜವಾದ ಯೋಗ್ಯತೆಗಿಂತಲೂ ಅತಿಯಾಗಿ ಹೆಚ್ಚಾಗಿ ಪಡೆಯಲು, ಅನುಭವಿಸಲು, ಹವಣಿಸುವುದು ಎಂದರ್ಥ.

ಪ್ರತಿಯೊಂದು ಜನಾಂಗ, ಸಮಾಜ, ದೇಶ–ವಿದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಜಾತ್ರೆಗಳು ಜರುಗುತ್ತಿದ್ದವು, ಎನ್ನುವುದಕ್ಕೆ ಶಿಷ್ಟ ಮತ್ತು ಜನಪದ ಕಾವ್ಯ ಕೃತಿಗಳು ಸಾಕ್ಷಿಯಾಗಿವೆ. ಜನಪದ ಸಾಹಿತ್ಯದ ರೂಪಗಳಾದ ಹಾಡು, ಗಾದೆ, ಒಡಪು ಮತ್ತು ತ್ರಿಪದಿ ಮುಂತಾದ ಪ್ರಕಾರಗಳಲ್ಲಿ ಜಾತ್ರೆಯ ಪ್ರಸ್ತಾಪ ಬರುತ್ತದೆ.

ವರ್ಗ : ಸಂಘರ್ಷಗಳು ಮರೆತು ರಾಷ್ಟ್ರೀಯ ಭಾವೈಕ್ಯತೆಯ ಹಿನ್ನೆಲೆಯಲ್ಲಿ ಜಾತ್ರೆಗಳು ಜರುಗುತ್ತವೆ. ಹತ್ತಾರು ಕಡೆಗಳಿಂದ ಜನರು ಬಂದು ಸೇರುತ್ತಾರೆ. ಶೀಲ, ಧರ್ಮ, ಸಹಬಾಳ್ವೆಯಿಂದ ಜೀವನ ನಡೆಸಲು, ನೀತಿಯ ಮಾತುಗಳು ಕೇಳಲು ಮನರಂಜನೆಯಲ್ಲಿ ಪಾಲ್ಗೊಳ್ಳಲು ಹಾತೊರೆಯುತ್ತಾರೆ. ಹೀಗಾಗಿಯೇ ಪ್ರಾಚೀನ ಕಾಲದಿಂದಲೂ ಭಜನೆ, ಡೊಳ್ಳು, ಹಲಗೆ, ಕೋಲಾಟ, ನಂದಿಕೋಲು, ಪುರವಂತಿಕೆ ಮತ್ತು ಭೂತೇರು ಮುಂತಾದ ಜನಪದ ಪ್ರದರ್ಶಕ ಕಲೆಗಳು, ಜಾತ್ರೆಗಳಲ್ಲಿ ಮಹತ್ವದ ಸ್ಥಾನ ಇನ್ನು ಉಳಿಸಿಕೊಂಡಿವೆ.

ಜಾತ್ರೆಗಳು ಸಾಮಾಜಿಕ ಭಾವೈಕ್ಯದ ಸಾಂಕೇತಿಕವಾಗಿ ಶಾಶ್ವತವಾಗಿ ವರಿಸಲು ಕೆಲವೊಂದು ಸುಧಾರಣೆಗಳನ್ನು ಜಾರಿಗೆ ತರುವುದು ಅವಶ್ಯವಾಗಿದೆ.

೧. ಪಶುಪ್ರಾಣಿಗಳ ಬಲಿಯು ಕೇವಲ ನರಮಾನವನ ನಾಲಿಗೆ ರುಚಿಗೋಸ್ಕರ ಹೊರತು ಮತ್ತೊಂದಿಲ್ಲ. ಯಾವ ಜಾತ್ರೆಯಲ್ಲಿ ಪ್ರಾಣಿ ಹಿಂಸೆಯು ನಡೆಯುತ್ತದೆಯೋ ಅದು ಅಲ್ಲಿ ನಿಲ್ಲುವಂತೆ ಜನರಲ್ಲಿ ತಿಳುವಳಿಕೆ ಹುಟ್ಟಿಸುವುದು.

೨. ಜಾತ್ರೋತ್ಸವಗಳಲ್ಲಿ ಜನಸಾಮಾನ್ಯರೇ ಹೆಚ್ಚಾಗಿರುತ್ತಾರೆ. ಇವರ ಬುದ್ಧಿಮಟ್ಟ ಹೆಚ್ಚು–ಕಡಿಮೆಯಾಗಿರುತ್ತದೆ. ಆದ್ದರಿಂದ ಅವರೆಲ್ಲರಿಗೂ ಒಂದೇ ವಿಧವಾ ಉಪದೇಶ ಮಾಡುವುದು ಸರಿಯಲ್ಲ. ಶ್ರೀಸಾಮಾನ್ಯರಿಗೆ ಹಾಡುಗಳ ಮೂಲಕ ಉಪದೇಶ ಮುಖ್ಯವಾದರೆ ಕೆಲವರಿಗೆ ಉಪನ್ಯಾಸದ ಉಪದೇಶ ಪ್ರಮುಖವಾಗುತ್ತದೆ. ಅವರಲ್ಲಿರುವ ಹತ್ತಾರು ಬಗೆಯ ಸಾಮಾಜಿಕ ದೋಷಗಳನ್ನು ತಿಳಿಸಬೇಕು. ಆರೋಗ್ಯದ ರೀತಿ ನೀತಿಗಳನ್ನು ಗೊತ್ತು ಮಾಡಬೇಕು. ಮನೆಯ ಸ್ವಚ್ಛತೆ, ಗ್ರಾಮ ಸ್ವಚ್ಛತೆ, ಜನಸಂಖ್ಯೆ ನಿಯಂತ್ರಣ, ಸಾಂಕ್ರಾಮಿಕ ರೋಗ ಹೆಚ್ಚಿದಾಗ ನಡೆದುಕೊಳ್ಳಬೇಕಾದ ರೀತಿ–ರಿವಾಜುಗಳನ್ನೆಲ್ಲಾ ತಿಳಿಸಬೇಕು.

೩. ಕುಸ್ತಿ ಕಸರತ್ತು ಮೊದಲಾದ ದೇಹಶಕ್ತಿಯನ್ನು ಹೆಚ್ಚಿಸುವ ಅನೇಕ ವಿಧವಾದ ಆಟಗಳನ್ನು ಜಾತ್ರೆಯ ಸಮಯದಲ್ಲಿಟ್ಟು ಅವುಗಳಿಗೆ ಯೋಗ್ಯವಾದ ನಗದು ಹಣ, ಪ್ರಶಸ್ತಿ–ಪತ್ರ ಬಹುಮಾನಗಳನ್ನು ಕೊಟ್ಟು, ಜನರ ಶಾರೀರಿಕ ಶಕ್ತಿ ಬೆಳೆಯುವಂತೆ ಮಾಡಬೇಕು. ಜಾತ್ರೆ ಯಶಸ್ವಿಯಾಗಿ ನೆರವೇರಬೇಕಾದರೆ ಮುಖ್ಯವಾಗಿ ಉತ್ಸವ ಜರುಗುವ ಸ್ಥಳಗಲ್ಲಿ ನೀರು ನೆರಳಿನ ಸೌಕರ್ಯ, ವಿದ್ಯುತ್ ದೀಪದ ವ್ಯವಸ್ಥೆ ಮತ್ತು ಜಾನುವಾರುಗಳಿಗೆ ಆಹಾರ ವ್ಯವಸ್ಥೆ ಇರಬೇಕು.

೪. ಜನಸಾಮಾನ್ಯರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಜಾತ್ರೋತ್ಸವಗಳು ಸಹಾಯಕವಾಗಬೇಕು. ಜಾತ್ರೆಯಲ್ಲಿ ಮಾರಾಟಕ್ಕೆ ಸುತ್ತ-ಮುತ್ತಲಿನ ಅನೇಕ ಪದಾರ್ಥಗಳು ಬರುತ್ತಿವೆಯಷ್ಟೇ. ಅವುಗಳನ್ನೆಲ್ಲಾ ಬೇರೆ ಬೇರೆ ಸಾಲು-ಅಂಗಡಿಗಳನ್ನಾಗಿ ವ್ಯವಸ್ಥೆಯಿಂದ ಇಡಿಸಬೇಕು.

೫. ಅಚ್ಚುಕಟ್ಟಾಗಿಯೂ ಸ್ವಚ್ಛತೆಗೆ ಲೋಪಬರದಂತೆಯೂ ಅಂಗಡಿ ಸಾಲುಗಳಿರಬೇಕು. ಹಳ್ಳಿಗಳ ಅಭಿವೃದ್ಧಿ ಕುರಿತು ಜಾತ್ರೆಗಳಲ್ಲಿ ಪ್ರಚಾರ ನಡೆಸಬೇಕು. ಮಣ್ಣಿನ ಪಾತ್ರೆ, ಬಿದರಿನ ಸಾಮಾನು ಬಿದರಿ ಕಲೆ, ಕರಕುಶಲ ವಸ್ತುಗಳು, ತರಿಸಿ ಮಾರಾಟಕ್ಕೆ ಇಡಿಸಬೇಕು. ಈ ಕಲೆಯಲ್ಲಿ ಯಾರು ಯಾವುದು ಚನ್ನಾಗಿ ಮಾಡಿರುತ್ತಾರೊ ಅವರಿಗೆ ಆ ಕಲೆಯಲ್ಲಿ ಬಹುಮಾನ ಕೊಟ್ಟು ಪ್ರೋತ್ಸಾಹಿಸಬೇಕು. ಅದೇ ಪ್ರಕಾರ ವ್ಯವಸಾಯದಲ್ಲಿ ಯಾರು ಯಾವ ಕಲೆ ಯಾವ ಬೆಳೆಯನ್ನು ಚನ್ನಾಗಿ ಬೆಳೆದು ಪ್ರದರ್ಶನಕ್ಕೆ ತಂದಿರುತ್ತಾರೆಯೋ ಅವರಿಗೂ ಬಹುಮಾನಗಳನ್ನು ಕೊಡಬೇಕು.

೬. ಒಕ್ಕಲಿಗರು ಅನೇಕ ಪ್ರಕಾರದ ಕಾಯಿ ಪಲ್ಲೆಗಳನ್ನು ಬೆಳೆಯುತ್ತಿರುತ್ತಾರೆ. ಅವುಗಳಲ್ಲಿ ಉತ್ತಮವಾಗಿ ಬೆಳೆದು ತಂದವರನ್ನು ಹುರಿದುಂಬಿಸಬೇಕು. ರಸಗೊಬ್ಬರದ ಪರಿಜ್ಞಾನ ನೀಡಬೇಕು. ಹೆಚ್ಚಾನು ಹೆಚ್ಚು ಕಾಯಿಪಲ್ಲೆ ಬೆಳೆಗಳನ್ನು ಬೆಳೆಯುವಂತೆ ಸಲಹೆ-ಸೂಚನೆ ನೀಡಬೇಕು. ಪರಿಸರ ಮಾಲಿನ್ಯ ಹೋಗಲಾಡಿಸಲು ಬಯಲು ಪ್ರದೇಶ ಇಲ್ಲವೆ ಹೊಲದ ಕಟ್ಟೆಯ ಮೇಲೆ ಮತ್ತು ಮನೆಯ ಮುಂದೆ ಗಿಡ ಮರಗಳು ಬೆಳೆಸುವಂತೆ, ಅರಣ್ಯ ಇಲಾಖೆಯ ಸಹಾಯ ಪಡೆದು ಸಸಿಗಳು ಉಚಿತವಾಗಿ ಕೊಡಬೇಕು.

೭. ಕೆಲವೊಂದು ಜಾತ್ರೆಗಳು ಜರುಗುವಾಗ ದನದ ಜಾತ್ರೆ ಜರುಗುತ್ತದೆ. ಅಂತಹ ಸಂದರ್ಭದಲ್ಲಿ ದೂರದಿಂದ ಒಳ್ಳೆಯ ಆಕಳು ಕರು, ಎಮ್ಮೆ, ಎತ್ತುಗಳನ್ನು ಸಾಕಿ ಪುಷ್ಟವಾಗಿ ಬೆಳೆಸಿ ಜಾತ್ರೆಗೆ ತರುವ ಮುಂಚೆಯೇ ಸುತ್ತ-ಮುತ್ತಲಿನ ಜನರಿಗೆ ತಿಳಿಸಬೇಕು. ಕರಪತ್ರ ಹಂಚಬೇಕು. ಪತ್ರಿಕೆಗಳಲ್ಲಿ ಜಾಹೀರಾತು ಕೊಡಬೇಕು. ಹೀಗೆ ತಂದಿರುವವರಲ್ಲಿ ಚನ್ನಾಗಿ ಸಾಕಿದವರಿಗೆ ಬಹುಮಾನ ಕೊಟ್ಟು ಇಲ್ಲವೆ ಸನ್ಮಾನ ಮಾಡಿ ಪಶುಪ್ರಾಣಿಗಳ ಜೋಪಾನ ಸರಿಯಾದ ರೀತಿಯಲ್ಲಿ ಮಾಡಲು ಹೇಳಿ ಸಹಕರಿಸಬೇಕು.

೮. ನಮ್ಮ ದೇಶದಲ್ಲಿ ಜನಸಂಖ್ಯೆ ಸ್ಫೋಟಕದಂತೆ ಬೆಳೆಯುತ್ತಿದೆ. ನೂರಾರು ಸಮಸ್ಯೆಗಳು ಹುಟ್ಟುತ್ತಿವೆ. ಉದಾ: ಅಪರಾಧ, ನಿರುದ್ಯೋಗ, ಬಡತನ, ವ್ಯಭಿಚಾರ, ಮುಂ . . . ಇಂಥ ಸಮಸ್ಯೆಗಳಿಂದ ಸಮಾಜ ಹಾಳಾಗುತ್ತಿದೆ. ನಂಬಿಕೆ, ಪ್ರೀತಿ, ಪ್ರೇಮ, ಮಸಣ ಸೇರುತ್ತಿದೆ ಇದಕ್ಕೆಲ್ಲ ಕಾರಣ ಜನಸಂಖ್ಯೆಯೇ. ಹೀಗಾಗಿ ಪ್ರತಿಯೊಬ್ಬ ಭಾರತೀಯ ನಾಗರಿಕ ಒಂದು ಮಗು ಹಡೆದು ಕುಟುಂಬ ಯೋಜನೆ ಮಾಡಿಸಿಕೊಳ್ಳಬೇಕೆಂಬ ಕಳಕಳಿಯ ಮನವಿ ಜಾತ್ರೆ ಸಂದರ್ಭದಲ್ಲಿ ಮಾಡಿ ದೇಶದ ಅಭಿಮಾನ ಹುಟ್ಟಿಸಬೇಕು.

೯. ಒಂದೊಂದು ಜಾತ್ರೆಯಲ್ಲಿ ಒಂದೊಂದು ಮತದವರೇ ಹೆಚ್ಚಾಗಿ ಸೇರುತ್ತಾರೆ. ಅದು ಇಂಥ ಮತದವರ ಜಾತ್ರೆ ಎನ್ನುವ ಪದ ಯಾರ ಬಾಯಿಯಿಂದಲೂ ಬರಬಾರದು. ಯಾವುದೇ ಜಾತಿಯ, ದೇವರ ಜಾತ್ರೆ ಇರಲಿ, ಅಲ್ಲಿ ಎಲ್ಲ ಪಂಥದವರು ಸೇರಿ ಕೆಲಸ ಮಾಡುವುದರಿಂದ ಪರಸ್ಪರರಲ್ಲಿ ಪ್ರೇಮಾದರಗಳು ಹೆಚ್ಚುತ್ತವೆ. ಮತ ವೈಷಮ್ಯಗಳು ಅಳಿಯುತ್ತವೆ. ಸಂಘಟನೆಯೂ ಹೆಚ್ಚುತ್ತದೆ.

೧೦. ಕೆಲವೊಂದು ಜಾತ್ರೆಗಳಲ್ಲಿ ಸುರಿಮಳೆಯಂತೆ ಹಣ ಖರ್ಚು ಮಾಡಿ ಜಾತ್ರೆ ನಡೆಸುತ್ತಾರೆ. ಲೆಕ್ಕ ಮೀರಿ ಧ್ವನಿವರ್ಧಕ, ವಿದ್ಯುತ್ ದ್ವೀಪ ಹಾಕುತ್ತಾರೆ. ತುಪ್ಪ ಹಾಲಿನ ಅಭಿಷೇಕ ಮಾಡಿಸುತ್ತಾರೆ. ಮದ್ದು ಸುಡುವ ದುಂದುಗಾರಿಕೆ ಕೆಲವು ಜಾತ್ರೆಗಳಲ್ಲಿ ನಡೆಯುತ್ತಿದೆ. ಅದು ಸಂಪೂರ್ಣ ನಿಲ್ಲಬೇಕು. ಅನೇಕ ವಿಧವಾದ ಜಾನಪದ ಕಲಾ ಕೋವಿದರಿಗೆ ಪ್ರೋತ್ಸಾಹಿಸಲು ಸ್ಪರ್ಧೆಯನ್ನು ಏರ್ಪಡಿಸಬೇಕು. ಉತ್ತಮ ಕಲಾವಿದರಿಗೆ ಉತ್ತೇಜನ ಕೊಡಬೇಕು. ಇದರಿಂದ ಅವರಲ್ಲಿರುವ ಕಲೆ ಉಳಿಯುತ್ತದೆ.

ಜಾತ್ರೆ ಜರುಗುವಾಗ ನೀರಿನ ಪೂರೈಕೆ ಸರಿಯಾಗಿರುವುದಿಲ್ಲ. ಅಲ್ಲಲ್ಲಿಯೇ ಮೂತ್ರ ವಿಸರ್ಜನೆ, ಚಿಕ್ಕ ಚಿಕ್ಕ ಮಕ್ಕಳ ಕಕ್ಕಸದಿಂದ ಹೊಲಸು ಹೆಚ್ಚು. ಆರೋಗ್ಯಕರವಾದ ಏರ್ಪಾಡುಗಳಿರುವುದು ಕಡಿಮೆ, ಹೀಗಾಗಿ ಜಾತ್ರೆಯ ನಂತರ ಜಾತ್ರೆಗೆ ಬಂದು ಹೋದವರಿಗೆ ಮತ್ತು ಸ್ಥಳೀಯ ಜನರಲ್ಲಿ ಅನೇಕ ರೋಗಗಳುಂಟಾಗುತ್ತವೆ.

ಜಾತ್ರೆಗೆ ಬಂದವರು ರೋಗಪೀಡಿತರಾಗುತ್ತಾರೆ. ಇದನ್ನು ತಪ್ಪಿಸಲು ಸ್ಥಳಿಯ ಆರೋಗ್ಯ ಇಲಾಖೆಯ ಸಹಾಯಕ ಪಡೆದು ಮುನ್ನೆಚ್ಚರಿಕೆ ಕ್ರಮ ಜರುಗಿಸುವುದು ಒಳ್ಳೆಯದು.

ಸುರ ಸುಂದರಿ ಹೆಣ್ಣು ಹುಡುಗಿಯರು ಜಾತ್ರೆಯಲ್ಲಿ ಕಂಡು ಬಂದರೆ ಕಾಮುಕರು ಅತ್ಯಾಚಾರ ನಡೆಸುತ್ತಾರೆ. ಇಲ್ಲವೆ ಆಶ್ಚರ್ಯವಾಗಿ ಹಾರಿಸಿಕೊಂಡು ಓಡಿ ಹೋಗುತ್ತಾರೆ. ಕಳವು ಅಲ್ಲಲ್ಲಿ ನಡೆಯುತ್ತಲೆ ಇರುತ್ತದೆ. ಇಂತಹವುಗಳನ್ನೆಲ್ಲ ನಡೆಯದಂತೆ ನೋಡಿಕೊಳ್ಳಲು ಜಾತ್ರೆಯ ವ್ಯವಸ್ಥಾಪಕ ಮಂಡಳಿಯವರು ಸಾಕಷ್ಟು ಸ್ವಯಂ ಸೇವಕರನ್ನು ನೇಮಿಸಿಕೊಳ್ಳಬೇಕು. ಇಲ್ಲವೇ ಪೋಲಿಸ್ ಇಲಾಖೆಯ ಸಹಾಯ ಪಡೆದುಕೊಳ್ಳಬೇಕು.

ಜನಸೇವೆಯೇ ನಿಜವಾದ ದೇವರ ಸೇವೆ ಎಂದವರಿಗೆ ಜಾತ್ರೆಯ ಕಾಲವು ಸುಸಮಯ. ದೇಶ ಸೇವಕರಿಗಿಂತಲೂ ಜಾತ್ರೆಗಳ ಸುಧಾರಣೆಯ ಕಾರ್ಯವೂ ಬಹು ಅಗತ್ಯವೂ ಮುಖ್ಯವೂ, ಆದುದೆಂದು ಹೇಳಬೇಕಾದುದೇ ಇಲ್ಲ. ಜಾತ್ರೆಗಳು ನವೆಂಬರ್ ತಿಂಗಳಿಂದ ಮೇ ತಿಂಗಳ ಕೊನೆಯ ವಾರದವರೆಗೆ ಜರುಗುವುದೇ ಹೆಚ್ಚು. ಆ ಸಮಯ ಜನರಿಗೆ ಎಲ್ಲ ರೀತಿಗಳಿಂದಲೂ ಅನುಕೂಲವೆಂದೇ ಜಾತ್ರೆಗಳನ್ನು ಏರ್ಪಡಿಸುತ್ತಾರೆ. ಸಹಸ್ರಾರು ಜನರು ಜಾತ್ರೆಗಳಲ್ಲಿ ಕೂಡುವ ಪ್ರಸಂಗ ಬರುತ್ತದೆ.

ಇವರೆಲ್ಲರೂ ಸ್ವಸಂತೋಷದಿಂದ ಎಷ್ಟೋ ಶ್ರಮವಹಿಸಿ ಸಾಲ ಮಾಡಿಕೊಂಡು ಜಾತ್ರೆಗೆ ಬರುತ್ತಾರೆ. ಕೆಲವರು ಅನುಕೂಲಸ್ಥರು ಇರಬಹುದು. ಅವರವರ ಊಟೋಪಚಾರಗಳಿಗಾಗಿ ನಾವೇನೂ ಖಾಂಡ ಏರ್ಪಾಡು ಮಾಡಬೇಕಾಗಿಲ್ಲ. ಏಕೆಂದರೆ ಜಾತ್ರೆಗೆ ಬಂದವರಲ್ಲಿ ಹಣವಂತೂ ಇದ್ದೆ ಇರುತ್ತದೆ. ಕೆಲವರಂತೂ ೨-೩ ದಿನಗಳಾಗುವಷ್ಟು ಬುತ್ತಿಯನ್ನು ತಂದಿರುತ್ತಾರೆ.

ಇಂತಹ ಜನ ತಮ್ಮ ತಮ್ಮ ವೆಚ್ಚದಿಂದಲೇ ಜಾತ್ರೆಗೆ ಬಂದು ಎಷ್ಟೋ ಹಣ ವ್ಯಯ ಮಾಡುತ್ತಾರೆ. ಬೇರೆ ಬೇರೆ ಸ್ಥಳಗಳಿಂದ, ಹಳ್ಳಿಗಳಿಂದ, ಹೆಂಗಸರನ್ನು ಮತ್ತು ಗಂಡಸರನ್ನು ನಾವು ಒಂದು ಪವಿತ್ರ ಸ್ಥಳಕ್ಕೆ ಕರೆಯಿಸಲಿಕ್ಕಾಗುವುದೇ? ಕರೆಯಿಸುವುದಾದರೆ ಎಷ್ಟು ಹಣ ವೆಚ್ಚವಾಗಬಹುದು. ಎಷ್ಟು ಶ್ರಮ ಪಡಬೇಕಾಗಬಹುದು. ಅಂದ ಮೇಲೆ ತಾವಾಗಿಯೇ ಬಂದ ಜನರಿಗೆ ಅವರವರ ಹಿತದ ನಾಲ್ಕಾರು ಮಾತುಗಳನ್ನು ತಿಳಿಸುವುದು, ಸೇವಕರ ಕರ್ತವ್ಯವಲ್ಲವೇ? ಅನೇಕ ಜನರು ತಪ್ಪು ತಿಳಿವಳಿಕೆಗಳಿಂದಲೇ ಉದಾ: ಪಶುಬಲಿ, ಬೆತ್ತಲೆಸೇವೆ, ಬಸವಿ ಬಿಡುವ ಪದ್ಧತಿ, ಪವಿತ್ರ ತೀರ್ಥವೆಂದು ಹೊಲಸು ನೀರಿನಲ್ಲಿ ಸ್ನಾನ ಮಾಡುವುದು, ಕುಡಿಯುವುದು, ಊಟಕ್ಕೆ ಸಿಗದ ಇಂದಿನ ಕಾಲದಲ್ಲಿ ತುಪ್ಪ ಹಾಲಿನ ಅಭಿಷೇಕ ಮಾಡಿಸುವುದು. ಹುಟ್ಟಿದವರಿಗೆ ದೇವರು ಹುಲ್ಲು ಮೇಯಿಸಲಾರ, ಎಂಬಂತೆ ಸಾಕಷ್ಟು ಮಕ್ಕಳು ಹಡೆದು ಬೀದಿ ಬಸವನಂತೆ ಮಕ್ಕಳಿಗೆ ಬಿಡುವುದು, ಬೇಗ ಶ್ರೀಮಂತನಾಗಬೇಕೆಂದು ಮಟಕಾ, ಜೂಜಾಟ, ಆಡುವುದು, ಕುಡಿದು ತಿಂದು ಹಾಳಾಗುವುದು, ವ್ಯವಸಾಯ ಮೂಗು ಮುರಿಯುವ ಕೆಲಸವೆಂದು ಬಗೆದು ನಗರದಲ್ಲಿ ಅಲೆದಾಡುವುದು. ಸರ್ಕಾರಿ ನೌಕರಿಗಾಗಿ ಬೀದಿ ಬೀದಿಯಲ್ಲಿ ತಿರುಗುವುದು, ಇಂಥ ನೂರಾರು ತಪ್ಪು ತಿಳಿವಳಿಕೆಗಳಿಂದಲೇ ಕಷ್ಟಗಳಿಗೊಳಗಾಗುತ್ತಿದ್ದಾರಲ್ಲದೆ ನಮ್ಮ ಜನ?

ಜಾತ್ರೆಗೆ ಬಂದ ಜನರ ಆರ್ಥಿಕ, ಸಾಮಾಜಿಕ, ಶಾರೀರಿಕ ಮತ್ತು ಸಾಂಸ್ಕೃತಿಕ ಉನ್ನತಿಗಾಗಿ ಎಷ್ಟೋ ಸಂಗತಿಗಳನ್ನು ಜಾತ್ರೆಯ ಕಾಲದಲ್ಲಿ ತಿಳಿಸುವುದು, ಪ್ರಯೋಜನಕಾರಿಯಾಗುವುದಿಲ್ಲವೆ?, ಜಾತ್ರೆಗೆ ಬಂದ ಪ್ರತಿ ವ್ಯಕ್ತಿಯೂ ಏನಾದರೂ ಹೊಸ ಸಂಗತಿಯನ್ನು ತಿಳಿದುಕೊಂಡು, ಹೋಗಿ, ತನ್ನ ನಡಾವಳಿಕೆಯಲ್ಲಿ ತರುವಂತೆ ಮಾಡುವುದು. ದೇಶ ಸೇವಕರ ಮುಖ್ಯ ಕೆಲಸವಾಗಿಲ್ಲವೇ? ಅಖಂಡವಾಗಿ ಕೆಲವು ವರ್ಷ ಜಾತ್ರೆಗಳಲ್ಲಿ ಇಂಥ ಪ್ರಚಾರ ಮತ್ತು ತಿಳಿವಳಿಕೆ ನೀಡಿದ್ದಾದರೆ ಹಳ್ಳಿಯ ಜನರಲ್ಲಿ ಎಷ್ಟೋ ವಿಚಾರ ಕ್ರಾಂತಿಯಾಗದೆ ಇರದು. ಈ ನಿಟ್ಟಿನಲ್ಲಿ ಜಾತ್ರೆಗಳು ಜರುಗಿದರೆ. ಅವುಗಳಿಗೊಂದು ಮಹತ್ವ ಬರುತ್ತದೆ.

* * *

16. ಕ್ಯಾತನಹಳ್ಳಿ ರಾಮಣ್ಣ (ಸಂ)	1976	'ಬೀದರ್ ಜಿಲ್ಲೆಯ ಜನಪದ ಗೀತೆಗಳು'	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ
17. ಕುಲಕರ್ಣಿ ಎಲ್.ಆರ್. (ಲೇ)	1969	'ಮಹಮೂದ ಗವಾನ'	ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ,ಧಾರವಾಡ
18. ಕುಷ್ಟಗಿ ವಸಂತ(ಲೇ)	1984	'ಮಾನ್ಯಖೇಡ'	ಐ.ಬಿ.ಹೆಚ್. ಪ್ರಕಾಶನ ಬೆಂಗಳೂರು.
19. ಕೃಷ್ಣಮೂರ್ತಿ ಬೆಟಗೇರಿ (ಲೇ)	1966	'ನಮ್ಮ ಸಂಸ್ಕೃತಿ ಪರಂಪರೆ'	ಸಮಾಜ ಪುಸ್ತಕಾಲಯ ಧಾರವಾಡ
20. ಕೃಷ್ಣ ಎಂ.ಎಚ್.(ಲೇ)	1950	'ಕನ್ನಡ ನಾಡಿನ ಚರಿತ್ರೆ'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
21. ಕೃಷ್ಣಮೂರ್ತಿ ಮತಿಘಟ್ಟ (ಸಂ)	1982	'ಗೃಹಿಣೀ ಗೀತೆಗಳು' (ಸಂಪುಟ-2)	ನಂ.244, 4ನೇ ಮುಖ್ಯರಸ್ತೆ ಕೆಂಪೇಗೌಡನಗರ, ಬೆಂಗಳೂರು
22. ಕೃಷ್ಣಕುಮಾರ ಸಿ.ಪಿ. (ಅನು)	1980	'ರಾಜಾಸ್ಥಾನದ ಜನಪದ'	ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯ ಹೊಸದೆಹಲಿ
23. ಕೃಷ್ಣಮೂರ್ತಿ ಮತಿಘಟ್ಟ (ಸಂ)	1975	'ಗೀತೆಗಳು'(ಸಂಪುಟ-1)	ಗುರುಮೂರ್ತಿ ಪ್ರಕಾಶನ, ಬೆಂಗಳೂರು
24. ಕೃಷ್ಣಮೂರ್ತಿ ಕೆ.ಆರ್. (ಸಂ)	ಪ್ರಕಟಿಸಿಲ್ಲ	'ಮೂಢನಂಬಿಕೆಗಳನ್ನು ಕೈ ಬಿಡಬೇಡಿ'	ಜನಪದ ಪ್ರಕಾಶನ ಬೆಂಗಳೂರು
25. ಕೃಷ್ಣಭಟ್ಟ ಪಿ. (ಸಂ)	1980	'ಶಾಸನಗಳು ಮತ್ತು ವೀರಗಲ್ಲುಗಳು'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
26. ಕಂಬಾರ ಚಂದ್ರಶೇಖರ (ಲೇ)	1965	'ಉತ್ತರ ಕರ್ನಾಟಕ ಜನಪದ ರಂಗಭೂಮಿ'	ಮನ್ವಂತರ ಪ್ರಕಾಶನ ಧಾರವಾಡ
27. ಕಂಬಾರ ಚಂದ್ರಶೇಖರ (ಸಂ)	1972	'ಬಯಲಾಟಗಳು'	ಬೆಂಗಳೂರು ವಿಶ್ವವಿದ್ಯಾನಿಲಯ ಬೆಂಗಳೂರು
28. ಖಂಡೋಬಾ ಪಿ.ಕೆ.(ಲೇ)	1990	'ತಾಂಡ ಸಂಸ್ಕೃತಿ'	ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ
29. ಖಂಡೋಬಾ ಪಿ.ಕೆ.(ಲೇ)	1993	'ಜಾನಪದ ಮುನ್ನೋಟ'	ಸಂಗೀತಾ ಪಬ್ಲಿಕೇಷನ್ಸ್ ಗುಲಬರ್ಗಾ
30. ಖಂಡೋಬಾ ಪಿ.ಕೆ.(ಲೇ)	1991	'ಕರ್ನಾಟಕ ಲಂಬಾಣಿಗಳು' ಒಂದು ಸಾಂಸ್ಕೃತಿಕ ಅಧ್ಯಯನ	ದಿ: ತೇಜಸಿಂಗ ರಾಠೋಡ ಮೆಮೋರಿಯಲ್ ಟ್ರಸ್ಟ್ ಗುಲಬರ್ಗಾ
31. ಖಂಡೋಬಾ ಪಿ.ಕೆ.(ಲೇ)	1988	'ಲಂಬಾಣಿ ಸಂಸ್ಕೃತಿ'	ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ್ ಗುಲಬರ್ಗಾ
32. ಗದ್ದಗಿಮಠ ಬಿ.ಎಸ್.(ಲೇ)	1963	'ಕನ್ನಡ ಜನಪದ ಗೀತೆಗಳು'	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
33. ಗುಂಜಾಳ ಎಸ್.ಆರ್. ಮತ್ತು ಹಿರೇಮಠ ಗವೀಶ(ಸಂ)	1993	'ಗುಲಬರ್ಗಾ ವಿಭಾಗದ ಲೇಖಕರು'	ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ

34. ಗೊ.ರು.ಚನ್ನಬಸಪ್ಪ ಮತ್ತು ಬೈರಮಂಗಲ ರಾಮೇಗೌಡ ಹಾಗೂ ಇತರರು(ಲೇ)	1993	'ಜಾನಪದ ದರ್ಶನ'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
35. ಗೊ.ರು.ಚನ್ನಬಸಪ್ಪ.(ಸಂ)	1977	'ಕರ್ನಾಟಕ ಜನಪದ	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
36. ಗೌಡ ಕೆ. ಚೆನ್ನಪ್ಪ (ಲೇ)	1985	'ಜಾಲಾಟ	ಚಿಂತನ ಪ್ರಕಾಶನ ಉಜಿರೆ, ದಕ್ಷಿಣ ಕನ್ನಡ
37. ಫಾಣೇಕರ್ ಬಾಲಚಂದ್ರ ವೆಂಕಟೇಶ (ಲೇ)	1984	'ಶ್ರೀಪಾದ ಚರಿತಾಮೃತ'	ವಾಸುದೇವ ಪೂಜಾರ ಪ್ರಕಾಶನ, ಕುರವಪುರ ರಾಯಚೂರು
38. ಚನ್ನಮಲ್ಲಪ್ಪ ಹಲಸಂಗಿ (ಸಂ)ಲಿಂಗಪ್ಪ ರೇವಪ್ಪ ಇತರರು	1977	'ಗರತಿಯ ಹಾಡು'	ಸಮಾಜ ಪುಸ್ತಕಾಲಯ ಧಾರವಾಡ
39. ಚಿದಾನಂದಮೂರ್ತಿ ಎಂ. (ಲೇ)	1987	'ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ'	ಸಾಹಿತಿಗಳ ಕಲಾವಿದರ ಬಳಗ ಬೆಂಗಳೂರು
40. ಚಿದಾನಂದಮೂರ್ತಿ ಎಂ. (ಲೇ)	1966	'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
41. ಚಿಕ್ಕಲಿಂಗದಳ್ಳಿ ಮಲ್ಲಪ್ಪ ಬಣಕಾರ(ಸಂ)	1984	'ಶಿವರಾತ್ರಿ ಮಹಾತ್ಮೆ'	ಎಂ.ವಿ. ಅರಳಿ ಪ್ರಕಾಶನ ಗದಗ
42. ಜವರೇಗೌಡ ದೇ(ಸಂ)	1967	'ಸುವರ್ಣ ಸಂಚಯ'	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮೈಸೂರು
43. ಜವರೇಗೌಡ (ಲೇ)	1986	'ಜಾನಪದ ವಾಹಿನಿ'	ಡಿವಿಕೆ ಮೂರ್ತಿ ಪ್ರಕಾಶನ, ಮೈಸೂರು
44. ಜೀರಗಿ ಕಟ್ಟಿಬಸಪ್ಪ (ಲೇ)	1973	'ಕರ್ನಾಟಕ ಯಾತ್ರೆ'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
45. ಡಿ.ಹೆಚ್.ರೇಖಾ(ಲೇ)	1975	'ಯುವ ಭಾರತಿ'	ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ
46. ತಪಸ್ವೀಕುಮಾರ ನಂ. (ಲೇ)	1982	'ಕನ್ನಡ ಜಾನಪದ' ಗೀತೆಗಳು ಒಂದು ಸಾಂಸ್ಕೃತಿಕ ಅಧ್ಯಯನ'	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
47. ತಪಸ್ವೀಕುಮಾರ ನಂ. (ಲೇ)	1970	'ಜನಪದ ಸಂಸ್ಕೃತಿ'	ಪ್ರಬುದ್ಧ ಪ್ರಕಾಶನ ಮೈಸೂರು
48. ತಿಪ್ಪೇರುದ್ರಸ್ವಾಮಿ ಎಚ್. (ಲೇ)	1968	'ಕರ್ನಾಟಕ ಸಂಸ್ಕೃತಿ ಸಮೀಕ್ಷೆ'	ಡಿವಿಕೆ ಮೂರ್ತಿ ಪ್ರಕಾಶನ ಮೈಸೂರು
49. ದಾಮ್ಲ ಚಂದ್ರಶೇಖರ.	1990	'ಜಾತ್ರೆ ಮತ್ತು ಇತರ' ಸಂಶೋಧನಾತ್ಮಕ ಪ್ರಬಂಧಗಳು'	ನೆಹರು ಮೆಮೋರಿಯಲ್ ಕಾಲೇಜು ಸುಳ್ಯ
50. ದೇವೀರಪ್ಪ ಎಚ್ (ಸಂ)	1950	'ಸಿಂಗಿರಾಜ ಪುರಾಣ'	ಮೈಸೂರು ವಿಶ್ವ ವಿದ್ಯಾಲಯ

51. ನಾವಡ ಎ.ವಿ.(ಲೇ)	1993	'ಜಾನಪದ ಸಮಾಲೋಕನ'	ಪ್ರಬುದ್ಧ ಪ್ರಕಾಶನ ಮೈಸೂರು
52. ನಾಯಕ ಬಿ.ಟಿ.ಲಲಿತಾ (ಲೇ)	1986	'ದೇವದುರ್ಗ ತಾಲ್ಲೂಕು ದರ್ಶನ'	ಐ.ಬಿ.ಹೆಚ್ ಪ್ರಕಾಶನ ಬೆಂಗಳೂರು
53. ನಾಗಭೂಷಣ ಗೀತಾ (ಲೇ)	1985	'ಮಾಮರತಾಯಿಯ ಮಕ್ಕಳು'	ಐ.ಬಿ.ಹೆಚ್ ಪ್ರಕಾಶನ ಬೆಂಗಳೂರು
54. ನಾಯಕ ಎನ್.ಆರ್. (ಲೇ)	1983	'ಕರ್ನಾಟಕದ ಶಕ್ತಿ ದೇವತೆಗಳು'	ಐ.ಬಿ.ಹೆಚ್ ಪ್ರಕಾಶನ ಬೆಂಗಳೂರು
55. ನಾಗರಾಜಯ್ಯ ಹಂಪ (ಲೇ)	ಪ್ರಕಟಿಸಿಲ್ಲ	'ಕರ್ನಾಟಕದ ಜಾತ್ರೆಗಳು'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
56. ನಾಯಕ ಹಾ.ಮಾ. (ಲೇ)	1971	'ಜಾನಪದ ಸ್ವರೂಪ	ತ.ವೆಂ. ಸ್ಮಾರಕ ಗ್ರಂಥಮಾಲೆ ಮೈಸೂರು
57. ನಾಗೇಶ ಎಚ್.ವಿ. (ಲೇ)	1984	'ಗ್ರಾಮ ವ್ಯಾಸಂಗ'	ಚಂದ್ರನಾಥ ಪ್ರಕಾಶನ ಧಾರವಾಡ
58. ನಂದಿ ಕೆ.ಎಸ್. ರಾಜ (ಲೇ)	1987	'ಜೇವರಗಿ ತಾಲ್ಲೂಕು ದರ್ಶನ'	ಐ.ಬಿ.ಹೆಚ್ ಪ್ರಕಾಶನ ಬೆಂಗಳೂರು
59. ಪರಮಶಿವಯ್ಯ ಜೀ.ಶಂ (ಅನು)		'ತಮಿಳುನಾಡಿನ ಜಾನಪದ'	ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ, ಹೊಸದೆಹಲಿ
60. ಪರಮಶಿವಯ್ಯ ಜೀ.ಶಂ	1967	'ಜನಪದ ಸಾಹಿತ್ಯ ಸಮೀಕ್ಷೆ'	ಮೋಹನ ಪ್ರಕಾಶನ ಮೈಸೂರು
61. ಪರಮಶಿವಯ್ಯ ಜೀ.ಶಂ (ಸಂ)	1979	'ನಾಗವಲ್ಲಿ'	ಶ್ರೀ ನಾಗೇಗೌಡ ಗೌರವ ಗ್ರಂಥ ಸಮಿತಿ ಬೆಂಗಳೂರು
62. ಪರಮಶಿವಯ್ಯ ಜೀ.ಶಂ	1971	'ಜನಪದ ಕಾವ್ಯ ಕಥೆಗಳು'	ಸುರಾಜಿ ಪ್ರಕಾಶನ ಮೈಸೂರು
63. ಪರಮಶಿವಯ್ಯ ಜೀ.ಶಂ (ಲೇ)	1979	'ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು'	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
64. ಪಾಟೀಲ್ ಬಸವರಾಜ (ಸಂ)	1986	'ಕಲುಬುರ್ಗಿಯ ಶ್ರೀ ಶರಣಬಸವೇಶ್ವರ'	ರವಿ ಪ್ರಕಾಶನ ಗುಲಬರ್ಗಾ
65. ಪಾಟೀಲ್ ಬಸವರಾಜ ಪೋಲೀಸ್(ಸಂ)	1985	'ಜಾನಪದ ಭಾರತಿ'	ವಿದ್ಯಾಸಾಗರ ಪ್ರಕಾಶನ ಗುಲಬರ್ಗಾ
66. ಪುಟ್ಟಪ್ಪ ಕೆ.ವಿ.(ಸಂ)	1979	'ಕನ್ನಡ ಒಗಟುಗಳ ಸಮೀಕ್ಷೆ'	ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ
67. ಪೋತೆ ಎಚ್.ಟಿ.(ಲೇ)	1993	'ಹೈದ್ರಾಬಾದ ಕರ್ನಾಟಕದ' ಜನಪದ ಪ್ರದರ್ಶನ ಕಲೆಗಳು (ಸಂಶೋಧನಾಮಹಾಪ್ರಬಂಧ)	ಗುಲಬರ್ಗಾ ವಿಶ್ವವಿದ್ಯಾಲಯ ಗುಲ್ಬರ್ಗಾ
68. ಪಂಡಿತ ವಿಶಾಲಾಕ್ಷಾಂಬಾಯಿ (ಲೇ)	1993	'ಶಿವಲೀಲಾಮೃತ'	ತೋಂಟದಾರ್ಯ ಬುಕ್‌ಡಿಪೋ ಗದಗ
69. ಬಿಳಿಮಲೆ ಪುರುಷೋತ್ತಮ	1990	'ಕರಾವಳಿ ಜಾನಪದ'	ಮಂಗಳಗಂಗೋತ್ರಿ

(ಸಂ)			ದಕ್ಷಿಣಕನ್ನಡ ಜಿಲ್ಲೆ
70. ಬಿ.ಪುಟ್ಟಸ್ವಾಮಯ್ಯ (ಸಂ)	1972	'ಜಾನಪದ ರಂಗಭೂಮಿ'	ಮೈಸೂರು ರಾಜ್ಯ ಸಂಗೀತ ನಾಟಕ ಅಕಾಡೆಮಿ, ಬೆಂಗಳೂರು
71. ಮಲ್ಲಾಪುರ ಪಿ.ವಿ(ಲೇ)	1993	'ಜನಪದ ಕಾವ್ಯದಲ್ಲಿ ಜೀವನ ಧರ್ಮ'	ಕರ್ನಾಟಕ ವಿಶ್ವವಿದ್ಯಾಲಯ
72. ಮಾಳವಾಡ ಸ.ಸ.(ಲೇ)	1970	'ಸಾಹಿತ್ಯ ಸಂಗಮ'	ಜಯ ಪ್ರಕಾಶನ ಧಾರವಾಡ
73. ಮಾಳವಾಡ ಸ.ಸ.(ಸಂ)	1967	'ಹೊನ್ನ ಬಿತ್ತೇವು ಹೊಲಕೆಲ್ಲ'	ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನ, ತರೀಕೆರೆ
74. ಮುಗಳಿ ರಂ.ಶ್ರೀ.(ಲೇ)	1976	'ಕರ್ನಾಟಕ ಸಾಂಸ್ಕೃತಿಕ ಪರಂಪರೆ'	ಸಮಾಜ ಪುಸ್ತಕಾಲಯ ಧಾರವಾಡ
75. ಮೂಗಿ ಶಂಕರ ಡಿ.(ಲೇ)	1985	'ಬಸವಕಲ್ಯಾಣ ತಾಲ್ಲೂಕು ದರ್ಶನ'	ಸಮಾಜ ಪುಸ್ತಕಾಲಯ ಧಾರವಾಡ
76. ಮೋಳ್ಳಿ ಶಶಿಕಲಾ (ಸಂ)	1989	'ಜಾಜದ ಹಾಡುಗಳು'	ಅರವಿಂದ ಪ್ರಕಾಶನ ಧಾರವಾಡ
77. ಮಂದಾಕಿನಿ (ಲೇ)	1987	'ಸಿಂಧನೂರು ತಾಲ್ಲೂಕು ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
78. ಯಶೋಧರಾ ಹೆಚ್.ಬಿ.	1984	'ಕೆಂಪಣ್ಣ ವಿರಚಿತ ಯಕ್ಷಗಾನ ಕರೀಭಂಟನ ಕಥೆ'	ಸಹ್ಯಾದ್ರಿ ಪ್ರಕಾಶನ ಮೈಸೂರು
79. ಯಲ್ಲಟ್ಟಿ ಬ.ಗಿ.(ಸಂ)	1985	'ಶ್ರೀ ಕಾಡಸಿದ್ದೇಶ್ವರ ವಚನ ಸಂಗ್ರಹ'	ಪ್ರಕಾಶಕರು ಬಸವ ಸಮಿತಿ, ಬನಹಟ್ಟಿ
80. ಯಾಳವಾರ ಸೋಮನಾಥ (ಲೇ)	1986	'ಹುಮನಾಬಾದ ತಾಲ್ಲೂಕು ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
81. ರಮೇಶ ಬಿ.ಗೋ(ಲೇ)	1984	'ಹಬ್ಬಗಳು –ಜಾತ್ರೆಗಳು'	ಹಂಸಧ್ವನಿ ಪ್ರಕಾಶನ ಬಸವ ಸಮಿತಿ, ಬನಹಟ್ಟಿ
82. ರಾಜೇಂದ್ರ ಡಿ.ಕೆ.(ಲೇ)	1980	'ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ'	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
83. ರಾಮಚಂದ್ರರಾವ ಎಸ್.ಕೆ. (ಸಂ)	1983	'ಕನ್ನಡ ನಾಡಿನ ಧಾರ್ಮಿಕ ಪರಂಪರೆ'	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು
84. ರಾಮೇಶ್ವರ ಎ.ಕೆ. (ಲೇ)	1986	'ಚಿಂಚೋಳಿ ತಾಲ್ಲೂಕು ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
85. ರಾಮಚಂದ್ರರಾವ ಎಸ್.ಕೆ. (ಲೇ)	1981	'ಭಾರತೀಯ ದೇವಾಲಯಗಳ ಜಾನಪದ ಮೂಲ'	ಐಬಿಹೆಚ್ ಪ್ರಕಾಶನ ಬೆಂಗಳೂರು
86. ರಾಮೇಶ್ವರ ಎ.ಕೆ. (ಲೇ)	1985	'ಶ್ರೀ ಕಡಕೋಳ ಮಡಿವಾಳೇಶ್ವರರು'	ಶರಣ ಪ್ರಕಾಶನ ಕಲಬುರ್ಗಿ;
87. ರಾಜಪುರೋಹಿತ	1980	'ಖಾಜಾ ಬಂದಾನವಾಜ'	ಐಬಿಹೆಚ್ ಪ್ರಕಾಶನ

ಜಯತೀರ್ಥ(ಲೇ)			ಬೆಂಗಳೂರು
88. ರಾಮೇಶ್ವರ ಎ.ಕೆ.(ಲೇ)	1979	'ಹಬ್ಬಗಳು'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
89. ರಾಜೇಂದ್ರ ಡಿ.ಕೆ.(ಲೇ)	1970	'ಜನಪದ ಸಮೀಕ್ಷೆ'	ಗೀತಾ ಬುಕ್ ಹೌಸ್ ಮೈಸೂರು
90. ರಾಮಪ್ರಸಾದ ಎಸ್.ಎಸ್.	1986	'ವಿಶ್ವ ಕನ್ನಡ ಸಂಪುಟಗಳು' (1,2,3, ಮತ್ತು 4)	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
91. ಲಠ್ಠೆ ಎಂ.ಎಸ್.(ಸಂ)	1981	'ಉತ್ತರ ಕರ್ನಾಟಕದ ಜನಪದ ನಂಬಿಕೆಗಳು'	ಪ್ರಶಾಂತ ಪ್ರಕಾಶನ ಮೈಸೂರು
92. ಲಠ್ಠೆ ಎಂ.ಎಸ್.(ಸಂ)	1986	'ಕಡಕೋಳ ಮಡಿವಾಳೇಶ್ವರ ನಿಜಲೀಲಾಮೃತ ವಚನಗಳು'	ಪ್ರಶಾಂತ ಪ್ರಕಾಶನ ಹುಬ್ಬಳ್ಳಿ
93. ಲಠ್ಠೆ ಎಂ.ಎಸ್. ಮತ್ತು ರೆಡ್ಡಿ ಕಾಶಿನಾಥ (ಸಂ)	1987	'ನಿಜಲಿಂಗ ಭದ್ರೇಶ್ವರ ಅನುಭವ ಪದಗಳು'	ಶ್ರೀ ಭದ್ರೇಶ್ವರ ಪ್ರಕಾಶನ ಇಟಗಾ
94. ಲಠ್ಠೆ ಎಂ.ಎಸ್.(ಲೇ)	1985	'ಕಲಬುರ್ಗಿಯ ಗದ್ದುಗೆ ಮಠ'	ಗದ್ದುಗೆ ಮಠ ಕಲುಬುರ್ಗಿ
95. ಲಂಗೋಟಿ ಸಿದ್ದಣ್ಣ(ಲೇ)	1987	'ಶ್ರೀ ಚನ್ನಬಸವ ಗದ್ದುಗೆ ಮಠ'	ಪ್ರಶಾಂತ ಪ್ರಕಾಶನ ಮೈಸೂರು
96. ಲಿಂಗಯ್ಯ ಡಿ(ಸಂ)	1973	'ಬಯಲು ಸೀಮೆಯ ಜನಪದ ಗೀತೆಗಳು'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
97. ಲಿಂಗಯ್ಯ ಡಿ(ಲೇ)	1984	'ಕರ್ನಾಟಕದ ಗ್ರಾಮ ದೇವತೆಗಳು'	ಐಬಿಹೆಚ್ ಪ್ರಕಾಶನ ಬೆಂಗಳೂರು
98. ಲಿಂಗಣ್ಣ ಸಿಂಪಿ(ಲೇ)	1981	'ಹಡಿಗೆ ಜಾತ್ರೆ'	ಅರವಿಂದ ಗ್ರಂಥಾಲಯ ಚಡಚಣ
99. ವಸಂತಿ ಚಂದ್ರ(ಲೇ)	1985	'ಭಾರತ ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
100. ವಾಲೀಕಾರ ಚೆನ್ನಣ್ಣ (ಲೇ)	1986	'ಜನಪದ ವೃತ್ತಿ ಕಲಾವಿದರು'	ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ
101. ವಿದ್ಯಾಲಂಕಾರ ಎಸ್.ಕೆ. ರಾಮಚಂದ್ರರಾವ್(ಸಂ)	1980	'ಭಾರತದ ದೇವಾಲಯ' ನೆಲೆ–ಹಿನ್ನೆಲೆ'	ಐಬಿಹೆಚ್ ಪ್ರಕಾಶನ ಬೆಂಗಳೂರು
102. ವಿಸಾಜಿ ಜಿ.ಬಿ.(ಲೇ)	1987	'ಭಾಲ್ಕಿ ತಾಲ್ಲೂಕು ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
103. ವಿಸಾಜಿ ಜಿ.ಬಿ.(ಸಂ)	1990	'ಶ್ರೀ ಚನ್ನಬಸವ ಪಟ್ಟ ದೇವರು ಭಾಲ್ಕಿ'	ಹಿರೇಮಠ ಭಾಲ್ಕಿ ಬೆಂಗಳೂರು
104. ವೆಂಕಟರಮಣಯ್ಯ ಟಿ.ಪಿ	1969	'ಕನ್ನಡ ಗಾದೆಗಳ ಕೋಶ'	ಸಮಾಜ ಪುಸ್ತಕಾಲಯ ಧಾರವಾಡ
105. ಶಮಚಾರ್ಯ ಬಿ (ಲೇ)	1986	'ಯಲಬುರ್ಗಾ ತಾಲ್ಲೂಕು ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
106. ಶಿವರುದ್ರಪ್ಪ ಜಿ.ಎಸ್. (ಲೇ)	1965	'ಸೌಂದರ್ಯ ಸಮೀಕ್ಷೆ'	ತು.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು
107. ಶಂಕರನಾರಾಯಣ ತೀ.	1982	'ಕಾಡುಗೊಲ್ಲದ	ಪ್ರಸಾರಾಂಗ ಮೈಸೂರು

(ಸಂ)		ಸಂಪ್ರದಾಯಗಳು ಮತ್ತು ನಂಬಿಕೆಗಳು'	ವಿಶ್ವವಿದ್ಯಾಲಯ
108. ಸಬರದ ಬಸವರಾಜ (ಲೇ)	1982	'ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ'	ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ
109. ಸಿ.ಎಸ್.ಶಿವಕುಮಾರಸ್ವಾಮಿ (ಲೇ)	1986	'ಕರ್ನಾಟಕದ ಜಾತ್ರೆಗಳು'	ಮೈಸೂರು ವಿಶ್ವವಿದ್ಯಾಲಯ
110. ಸಂಧ್ಯಾರೆಡ್ಡಿ ಕೆ.ಆರ್. (ಲೇ)	1982	'ಕನ್ನಡ ಜನಪದ ಕಥೆಗಳು'	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
111. ಸುಂದರಂ ಅರ್ವೀಯಸ್ (ಅನು)	1987	'ಆಂಧ್ರ ಪ್ರದೇಶದ ಜಾನಪದ'	ನ್ಯಾಷನಲ್ ಬುಕ್‌ಟ್ರಸ್ಟ್ ಇಂಡಿಯಾ ಹೊಸದೆಹಲಿ
112. ಸ್ವಾಮಿ ಎಸ್.ಬಿ. (ಲೇ)	1982	'ಹಬ್ಬ ಹರಿದಿನಗಳು'	ನವೀನ ಪ್ರಕಾಶನ ಬೆಂಗಳೂರು
113. ಸ್ವಾಮಿ ಬಿ.ಎಸ್. (ಲೇ)	1993	'ಜಾನಪದ ಸೌರಭ'	ಗೋರಕನಾಥ ಪ್ರಕಾಶನ ಬೆಂಗಳೂರು
114. ಹಕಾರಿ ದೇವೇಂದ್ರ ಕುಮಾರ(ಲೇ)	1982	'ಜಾನಪದೀಯ'	ವಾಗ್ದೇವಿ ಪ್ರಕಾಶನ ಮೈಸೂರು.
115. ಹಕಾರಿ ದೇವೇಂದ್ರ. ಕುಮಾರ(ಲೇ)	1983	'ಜಾನಪದ ಸಮ್ಮುಖ'	ಗೋರಕನಾಥ ಪ್ರಕಾಶನ ಬೆಂಗಳೂರು
116. ಹಿರಿಯಣ್ಣ ಅಂಬಳಿಕೆ (ಲೇ)	1987	'ಜಾನಪದ ವೀಕ್ಷಣೆ'	ಪ್ರಜ್ವಲ ಪ್ರಕಾಶನ ಮೈಸೂರು
117. ಹಿರೇಮಠ ಆರ್.ಸಿ.	1971	'ಬಸವ ಪುರಾಣ'	ಮುರಘಾಮಠ, ಧಾರವಾಡ
118. ಹಿರೇಮಠ ಎಸ್.ಬಿ. (ಲೇ)	1993	'ಕರ್ನಾಟಕ ದಲಿತ ಸಂಸ್ಕೃತಿ ಪರಂಪರೆ ಭಾಗ-2 ಜಾತ್ರೆಗಳು'	ಸಮತಾ ಪ್ರಕಾಶನ ಹೊಸಪೇಟೆ
119. ಹುಣಸಗಿ ಪ್ರಕಾಶ(ಲೇ)	1987	'ಗಂಗಾವತಿ ತಾಲ್ಲೂಕು ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
120. ಹೆಬ್ಬಾಳೆ ಜಗನ್ನಾಥ (ಲೇ)	1995	'ವೀರಭದ್ರ'	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು
121. ಹೊಸಮನಿ ಗಿರಿರಾಜ (ಲೇ)	1986	'ಲಿಂಗಸೂಗೂರು ತಾಲ್ಲೂಕು ದರ್ಶನ'	ಐಬಿಹೆಚ್ ಪ್ರಕಾಶನ ಬೆಂಗಳೂರು
122.ಹೆಂಡಿ ಬಿ.ಬಿ. ಮತ್ತು ಬಿರಾದಾರ ಎಂ.ಜಿ. ಇತರರು(ಲೇ)	1983	'ಹರದೇಶಿ-ನಾಗೇಶಿ'	ಕನ್ನಡ ಅಧ್ಯಯನ ವಿಭಾಗ ಗುಲಬರ್ಗಾ ವಿಶ್ವವಿದ್ಯಾಲಯ

123.	B.C. Deva	1980	'Indian Music'	Secretary India Council for Cultural Retatons Azadbharan India Prasta Eastate New Delhi
124.	Benoy Kumar Sarkar	1981	'The folk Element in Hindu culture'	Cosomo publications New Delhi
125.	Gove Philip B.	1916	'Webster's Seventh New Collegiate Dictionary'	Scientific Book Agency Calcutta
126.	Hardy G.H.	1940	'Ramanujan'	Chelsea Publishing Company New Yark
127.	K. Athishankar	1970	'Raichur district Gazetter'	Government Press Government of Karnataka Bangalore
128.	K. Athishankar	1977	'Bider District Gazetter'	Government Press Government of Karnataka Bangalore
129.	Mater Linck Maurice	1922	'Wisdom and Distiny'	Alfred Sutro London
130.	Mater Linck Maurice	1931	'Magic of the stars'	Alfred Sutro London
131.	Ram Awtar VIR Sangeeta	1980	'The Theory of Indian Music'	Pankaj Publication I I I Regard Building New Delhi
132.	Robert A. Georges	1968	'Two Studies Modern Greek folklore	Institute of for Balkan studies California U.S.A
133.	Shankar san Gupta	1976	'Folk lore of Bengal A Projected Study	Indian Publication Culcutta U.S.A

ನಿಘಂಟುಗಳು : ಕನ್ನಡ ವಿಶ್ವಕೋಶಗಳು : ಗೆಜೆಟಿಯರ್ಸ್ : ನಿಯತಕಾಲಿಕೆಗಳು: ಪತ್ರಿಕೆಗಳು :

1.	ಕನ್ನಡ ನಿಘಂಟುಗಳು (ಸಂಪುಟ 1 ರಿಂದ 7)	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
2.	ಕನ್ನಡ ವಿಶ್ವಕೋಶಗಳು (ಸಂಪುಟ 1 ರಿಂದ 12)	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ
3.	ಕನ್ನಡ – ಇಂಗ್ಲೀಷ್ ಡಿಕ್ಷನರಿ	ಎಸೀಯನ್ ಎಜ್ಯುಕೇಶನ್ ಸರ್ವಿಸ್ ಹೊಸದೆಹಲಿ
4.	ಕನ್ನಡ ಜಾನಪದ ವಿಶ್ವಕೋಶ (ಸಂಪುಟ 1 ಮತ್ತು 2)	ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು
5.	ಕರ್ನಾಟಕ ರಾಜ್ಯ ಗೆಝೆಟಿಯರ್ (ಭಾಗ 1,2 ಮತ್ತು 3)	ಕರ್ನಾಟಕ ಸರ್ಕಾರ
6.	ಕವಿರಾಜಮಾರ್ಗ	ವೀರಣ್ಣ ದಂಡೆ, ಸರಸ್ವತಿಪುರಂ ಆಡಳಿತ ಕಚೇರಿ ಹಿಂದುಗಡೆ ಗುಲಬರ್ಗಾ ವಿಶ್ವವಿದ್ಯಾಲಯ
7.	ಕಿರಿಯರ ಕರ್ನಾಟಕ	ಕನ್ನಡ ವಿಶ್ವವಿದ್ಯಾಲಯ, ಹಂಪಿ
8.	ಜನಪದ	ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಂಗಳೂರು
9.	ಜಾನಪದ ಗಂಗೋತ್ರಿ	ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು.
10.	ಜಾನಪದ ಜಗತ್ತು	ಕರ್ನಾಟಕ ಜಾನಪದ ಪರಿಷತ್ತು ಬೆಂಗಳೂರು
11.	ಪರಂಜ್ಯೋತಿ	ಹುಬ್ಬಳ್ಳಿ
12.	ಶಾಂತಿಕಿರಣ	ಹಿರೇಮಠ ಭಾಲ್ಕಿ
13.	ಸಂಕ್ರಮಣ	ಧಾರವಾಡ
14.	ಸಂಶೋಧನೆ	ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ
15.	ಲಿಂಗನುಡಿ	ಬೆಂಗಳೂರು
16.	ಉತ್ತರ ಕರ್ನಾಟಕ	ಕನ್ನಡ ದಿನಪತ್ರಿಕೆ ಬೀದರ, ಅಲ್ಲದೆ ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಕನ್ನಡ ಪ್ರಭ, ಜನದನಿ, ಪರಿಹಾರ ಸುದ್ದಿಮೂಲ, ಸತ್ಯಕಾಮ, ಗ್ರಿನೋಬಲ್ಸ್ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಗೊಂಡ ಲೇಖನಗಳ ಸಹಾಯ ಪಡೆಯಲಾಗಿದೆ.

* * *

೨:೨: ಸ್ವರೂಪ–ಲಕ್ಷಣಗಳು :

ಜಾತ್ರೆ ಎಂಬ ಪದಕ್ಕೆ 'ಪುಣ್ಯಕ್ಷೇತ್ರ' ದರ್ಶನ ಧಾರ್ಮಿಕ ಉದ್ದೇಶದಿಂದ ಮಾಡುವ ಪಯಣ. ಯಾತ್ರೆ ಎನ್ನುವ ಅರ್ಥದ ಜೊತೆಗೆ ಯಾವುದಾದರೊಂದು ದೇವತೆಯ ರಥೋತ್ಸವ ಇಂಥ ಸಂದರ್ಭದಲ್ಲಿ ಸೇರುವ ಜನರ ಗುಂಪು. ಪರಿಸೆ ಎಂಬ ಅರ್ಥವಿದೆ. (ವೆಂಕಟಸುಬ್ಬಯ್ಯ:೧೯೭೭:೩೦೩೭). ಆಂಗ್ಲದ ಫೇರ್ ಶಬ್ದದ ಅರ್ಥವೇ ಕನ್ನಡದಲ್ಲಿ ಜಾತ್ರೆ.(Fair) ಫೇರ್ ಎಂದರೆ ಹಬ್ಬದೂಟದ ದಿನ. ರಜಾದಿನ ಹೀಗೆ ಹಬ್ಬದೂಟ ಮತ್ತು ಜಾತ್ರೆಗೆ ಸಂಬಂಧ ಕಲ್ಪಿಸಲಾಗಿದೆ. ಜನ ಸೇರಿದರೆ ಜಾತ್ರೆ ಎನ್ನುತ್ತಾರೆ. ಜನ ಸೇರುವುದೆಕ್ಕ ಜಾತ್ರೆ ಆಗಲಾರದು. ಅದು ಒಂದು ಸಂತೆಯಾಗಬಹುದು. ಡಾ: ಎಂ.ಎಸ್. ಲಠ್ಠೆಯವರು 'ಯಾನೇನ್ ತ್ರಾಯತ್ ಇರಿತಿ ಯಾತ್ರಾ' ಎಂದಿದ್ದಾರೆ. ಅಂದರೆ ಪುಣ್ಯ ಕ್ಷೇತ್ರ ದರ್ಶನಕ್ಕೆ ಹೋಗುವವರ ರಕ್ಷೆಯೇ ಯಾತ್ರೆಯಾಗಿದೆ. ಈ ಯಾತ್ರೆ ಶಬ್ದದ ತದ್ಭವ ರೂಪವೇ ಜಾತ್ರೆ.

ಪ್ರತಿವರ್ಷ ಸಾಧಾರಣವಾಗಿ ಸುಗ್ಗಿಯ ನಂತರ ದೇವರುಗಳ ಗೌರವಾರ್ಥ ಜಾತ್ರೆ ನಡೆಸುವ ವಾಡಿಕೆಯಿದೆ. ಹಳ್ಳಿ ಪಟ್ಟಣಗಳ ದೇವಾಲಯ, ದರ್ಗಾ ಮತ್ತು ಚರ್ಚ ಮುಂತಾದ ಪವಿತ್ರ ಪೂಜಾಸ್ಥಳಗಳಲ್ಲಿ ಜನರು ಜಾತ್ರೆಗಳನ್ನು ನಡೆಸುತ್ತಾರೆ. ದೇವರ ಮೂರ್ತಿಯನ್ನು ರಥದಲ್ಲಿ ಇಲ್ಲವೆ ಜೀಪು ಲಾರಿಗಳಲ್ಲಿಟ್ಟು ವಾದ್ಯಗಳ ಸಹಿತ ಮೆರವಣಿಗೆಯಲ್ಲಿ ಹೋಗುವರು. ಅದೇ ಸಮಯದಲ್ಲಿ ಬಾಳೆಹಣ್ಣು, ಅಳ್ಳು ಖಾರಿಕು, ಮುಂತಾದವುಗಳು ತೇರು ಇಲ್ಲವೆ ವಾಹನಗಳ ಮೇಲೆ ಎಸೆಯುತ್ತಾ ಮುನ್ನಡೆಯುವರು. ಜಾತ್ರೆಯ ಹೆಸರಿನಲ್ಲಿ ಸ್ಥಳ ಮತ್ತು ದೇವರ ಹೆಸರು ಸೇರಿರುತ್ತದೆ. ಉದಾ: ಬೀದರ ನಗರದಿಂದ ಎರಡು ಕಿ.ಮಿ. ದೂರದಲ್ಲಿರುವ 'ಪಾಪನಾಶಿನಿ' ದೇವಾಲಯದಲ್ಲಿ ಸ್ವಯಂಭು ಲಿಂಗವಿದೆ. ಅಲ್ಲಿ ಪ್ರತಿವರ್ಷ ಶಿವರಾತ್ರಿಯಂದು, ಮೂರು ದಿನಗಳ ಕಾಲ ಜಾತ್ರೆ ನಡೆಯುತ್ತದೆ. ಈ ಜಾತ್ರೆಗೆ 'ಪಾಪನಾಶ' ಲಿಂಗದ ಜಾತ್ರೆ ಇಲ್ಲವೆ 'ಪಾಪನಾಶಿನಿ' ಜಾತ್ರೆ ಎನ್ನುವ ವಾಡಿಕೆಯಿದೆ. ಅದರಂತೆಯೇ ಕಲ್ಬುರ್ಗಿ ಶರಣಬಸವೇಶ್ವರ ಜಾತ್ರೆ, ದೇವರಗಾಣಗಾಪೂರ ದತ್ತಾತ್ರೇಯ ಜಾತ್ರೆ, ಬಸವಕಲ್ಯಾಣದ ಬಸವಣ್ಣನ ಜಾತ್ರೆ, ಮಾನವಿ ಕರೆಮ್ಮ ಜಾತ್ರೆ, ಖಾನಾಪುರದ ಮೈಲಾರಲಿಂಗೇಶ್ವರ ಜಾತ್ರೆ ಹೀಗೆ ದೇವರು ಮತ್ತು ಸ್ಥಳದ ಹೆಸರು ಕೂಡಿಸಿ ಕರೆಯುವ ಪದ್ಧತಿ ಈ ಪ್ರದೇಶದಲ್ಲಿದೆ. ಇದರ ಉದ್ದೇಶ ತಕ್ಷಣ ಜಾತ್ರೆಯ ಹೆಸರು ತಿಳಿಯಲೆಂಬುದೇ ಆಗಿರುತ್ತದೆ.

ಹಬ್ಬಗಳು ಊಟಕ್ಕಾಗಿ, ಜಾತ್ರೆಗಳು ನೋಟಕ್ಕಾಗಿ ಹುಟ್ಟಿಕೊಂಡಿರುತ್ತವೆ. ಏಕೆಂದರೆ ಹತ್ತಾರು ಸ್ಥಳಗಳಿಂದ ಜನರು ಒಂದೆಡೆ ಕಲೆತು ಹರಟೆ ಹೊಡೆಯುವುದು.

ಜ್ಞಾನವೆಂಬುದು ಕೇವಲ ಕೆಲವು ಕೇಂದ್ರಗಳಲ್ಲಿ ಶೇಖರಗೊಂಡು ನಿಂತ ನೀರಾಗದೆ ಅದೊಂದು ಜೀವಂತ ವಾಹಿನಿಯಾಗಿ ಈ ನಾಡಿನ ಪ್ರಜೆಗಳ ಕಡೆಗೆ ನಿರಂತರ ಹರಿದು ಬರುತ್ತಲೇ ಇರಬೇಕು.

ಕನ್ನಡದ ಹೆಮ್ಮೆಯ ಪ್ರಾತಿನಿಧಿಕ ಸಾಂಸ್ಕೃತಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡ ವಿಶೇಷ ಯೋಜನೆಯ ಫಲವಾಗಿ, ನಮ್ಮ ವಿಶ್ವವಿದ್ಯಾಲಯಗಳಿಗೆ ಕನ್ನಡ ನಾಡು-ನುಡಿ-ಚರಿತ್ರೆಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಸಲ್ಲಿಸಲಾದ ಮಹಾಪ್ರಬಂಧಗಳು ಈಗ ಸ್ವಲ್ಪ ಸರಳಗೊಂಡು, ಸಂಕ್ಷಿಪ್ತಗೊಂಡು, ಕನ್ನಡ ಓದುಗರ ಕೈ ಸೇರುತ್ತಿವೆ.

ಕನ್ನಡ ಬದುಕಿನ ಒಂದು ಅರ್ಥಪೂರ್ಣ ಅಂಗವಾಗುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಹೆಮ್ಮೆಯ ಸಾಧನೆಗಳಲ್ಲಿ ಇದೂ ಒಂದು.